ಫಕೀರ್ ಮುಹಮ್ಮದ್ ಕಟ್ಪಾಡಿ ಅವರ ಕತೆಗಳಲ್ಲಿ ಸ್ತ್ರೀಪಾತ್ರ ವಿನ್ಯಾಸಗಳು

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಪ್ರೌಢಪ್ರಬಂಧ)

ಸಂಶೋಧಕರು
ಶ್ವೇತ ಹೆಚ್.ಬಿ.

ಮಾರ್ಗದರ್ಶಕರು
ಡಾ.ರಹಮತ್ ತರೀಕೆರೆ
ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ಫಕೀರ್ ಮುಹಮ್ಮದ್ ಕಟ್ಪಾಡಿ ಅವರ ಕತೆಗಳಲ್ಲಿ ಸ್ತ್ರೀಪಾತ್ರ ವಿನ್ಯಾಸಗಳು

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಪ್ರೌಢಪ್ರಬಂಧ)

ಸಂಶೋಧಕರು
ಶ್ವೇತ ಹೆಚ್.ಬಿ.

ಮಾರ್ಗದರ್ಶಕರು
ಡಾ.ರಹಮತ್ ತರೀಕೆರೆ
ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ಘೋಷಣಾ ಪತ್ರ

ಫಕೀರ್ ಮುಹಮ್ಮದ್ ಕಟ್ಪಾಡಿ ಅವರ ಕತೆಗಳಲ್ಲಿ ಸ್ತ್ರೀ ಪಾತ್ರ ವಿನ್ಯಾಸಗಳು ಎಂಬ ಪ್ರೌಢಪ್ರಬಂಧವನ್ನು **ಡಾ.ರಹಮತ್ ತರೀಕೆರೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿದ್ದೇನೆ. ಈ ಪ್ರೌಢಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

Shwetha .H.B.

ಶ್ವೇತ ಹೆಚ್.ಬಿ.
ಸಂಶೋಧಕಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 22/7/14.

ಮಾರ್ಗದರ್ಶಕರ ದೃಢೀಕರಣ ಪತ್ರ

ಫಕೀರ್ ಮುಹಮ್ಮದ್ ಕಟ್ಪಾಡಿ ಅವರ ಕತೆಗಳಲ್ಲಿ ಸ್ತ್ರೀ ಪಾತ್ರ ವಿನ್ಯಾಸಗಳು ಎಂಬ ಪ್ರೌಢಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಶ್ವೇತ ಹೆಚ್.ಬಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರೌಢಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ರಹಮತ್ ತರೀಕೆರೆ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 22/7/14

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಆಧುನಿಕ ಕನ್ನಡ ಸಾಹಿತ್ಯವು ಕಾವ್ಯ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ ಮುಂತಾದ ಹಲವಾರು ಪ್ರಕಾರಗಳಲ್ಲಿ ಬೆಳೆದಿದೆ. ಈ ಪ್ರಕಾರಗಳಲ್ಲಿ ಕಥಾಪ್ರಕಾರವು ತನ್ನದೇ ಆದ ಸ್ಥಾನವನ್ನು ಹೊಂದಿದೆ. 'ಸಣ್ಣಕತೆ' ಪಾಶ್ಚಾತ್ಯರಿಂದ ಕನ್ನಡಕ್ಕೆ ಬಂದ ಸಾಹಿತ್ಯ ಪ್ರಕಾರವಾಗಿದೆ. ಕನ್ನಡದಲ್ಲಿ ಇದಕ್ಕೆ ಮೊದಲು 'ಕತೆ' ಎಂಬ ಪ್ರಕಾರವಿದ್ದರೂ ಈಗ ಕಾಣುವ 'ಸಣ್ಣಕತೆ' ಎಂಬ ಸ್ವರೂಪದಲ್ಲಿ ಇರಲಿಲ್ಲ. 'ವಡ್ಡಾರಾಧನೆ' 'ಧರ್ಮಾಮೃತ' ಮುಂತಾದ ಕಡೆ ಕತೆಯ ಮಾದರಿಗಳಿವೆ. ಆದರೆ ಈ ಕಥಾ ಮಾದರಿಗಳು ಧರ್ಮಕೇಂದ್ರಿತ ನೆಲೆಯ ಕಥಾ ವಸ್ತುವಿನ ರೂಪದಲ್ಲಿದ್ದವು. ಈ ಮಾದರಿಗಳಿಗೂ ಭಿನ್ನವಾಗಿ ಆಧುನಿಕ ಸಣ್ಣಕತೆ ವಸ್ತುವಿನಲ್ಲಿ ವೈವಿಧ್ಯತೆಯನ್ನು ಕಂಡುಕೊಂಡಿತು. ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಕನ್ನಡ ಲೇಖಕರು ಪಾಶ್ಚಾತ್ಯ ಸಾಹಿತ್ಯದಲ್ಲಿರುವ ಸಣ್ಣಕತೆಗಳನ್ನು ಓದಿ ಪ್ರಭಾವಿತರಾಗಿ ಕನ್ನಡದಲ್ಲಿ ಸಣ್ಣಕತೆ ಬರೆಯಲು ಆರಂಭಿಸಿದಾಗ, ಇದು ಹುಟ್ಟಿತು. ನವೋದಯ ಕಾಲಘಟ್ಟದ ಕತೆಗಾರರಾದ ಪಂಜೆ ಮಂಗೇಶರಾಯರು, ಕೆರೂರು ವಾಸುದೇವಾಚಾರ್ಯ, ಮಾಸ್ತಿ, ಕುವೆಂಪು, ಆನಂದ ಮುಂತಾದವರು ತಮ್ಮ ಕತೆಗಳಲ್ಲಿ ತಮ್ಮ ಸುತ್ತಮುತ್ತ ಕಾಣುವ ಜನಸಾಮಾನ್ಯರ ಬದುಕಿನಿಂದ ವಸ್ತುವನ್ನು ತೆಗೆದುಕೊಂಡು ಕತೆಯನ್ನು ಕಟ್ಟತೊಡಗಿದರು. ಅದೇ ರೀತಿ ಪ್ರಗತಿಶೀಲ ಕತೆಗಾರರಾದ ನಿರಂಜನ, ಕೋ.ಚೆನ್ನಬಸಪ್ಪ, ಚದುರಂಗ ಅವರು, ಸಮಾಜವಾದಿ ನೆಲೆ ಮತ್ತು ಪ್ರತಿಭಟನಾತ್ಮಕ ನೆಲೆಯಿಂದ ವಸ್ತುವನ್ನು ಆಯ್ದುಕೊಂಡು ಕತೆ ಸೃಷ್ಟಿಸಿದರು. ನವ್ಯ ಕಾಲಘಟ್ಟದ ಕತೆಗಾರರಾದ ಅನಂತಮೂರ್ತಿ, ಯಶವಂತ ಚಿತ್ತಾಲ, ರಾಘವೇಂದ್ರ ಖಾಸನೀಸ, ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಅವರು ವ್ಯಕ್ತಿ ಕೇಂದ್ರಿತ ನೆಲೆಯಲ್ಲಿ ಮತ್ತು ವ್ಯಕ್ತಿಯ ಅಸ್ತಿತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಥಾನೆಯ್ಗೆ

ಆರಂಭಿಸಿದರು. ಹಾಗೂ ದಲಿತ ಬಂಡಾಯ ಕತೆಗಾರರಾದ ಕು. ವೀರಭದ್ರಪ್ಪ, ಬೋಳುವಾರು ಮಹಮದ್ ಕುಂಞ್, ಸಾರಾ ಅಬೂಬಕರ್, ದೇವನೂರ ಮಹಾದೇವ, ಇವರು ತಮ್ಮ ಕತೆಗಳಲ್ಲಿ ಬದುಕಿನ ಬೇರೆಬೇರೆ ಸಮಸ್ಯೆಗಳನ್ನು ತಮ್ಮ ಕಥೆಗಳಲ್ಲಿ ತಂದಿದ್ದಾರೆ. ಇಂತಹ ಯಾವ ಪಂಥಕ್ಕೂ ಸೇರದ ಜಯಂತ ಕಾಯ್ಕಣಿ, ವೈದೇಹಿ, ನಾಗವೇಣಿ, ಅಮರೇಶ ನುಗಡೋಣಿ, ಅಬ್ದುಲ್ ರಶೀದ್, ವಿವೇಕ ಶಾನುಭಾಗ ಅವರು ಸಹ ಬರೆಯುತ್ತಿದ್ದಾರೆ. ೮೦ರ ದಶಕದಲ್ಲಿ ದಲಿತ ಬಂಡಾಯ ಕಾಲಘಟ್ಟದಲ್ಲಿ ಹಲವು ಸಂವೇದನೆಗಳು ಕಾಣಿಸಿಕೊಂಡವು. ಅವುಗಳಲ್ಲಿ ದಲಿತ ಸಂವೇದನೆ, ಸ್ತ್ರೀ ಸಂವೇದನೆ, ಗ್ರಾಮೀಣ ಸಂವೇದನೆ, ನಗರ ಸಂವೇದನೆ, ಮುಸ್ಲಿಂ ಸಂವೇದನೆ ಬಹು ಮುಖ್ಯವಾದವು. ಈ ಸಂವೇದನೆಗಳ ಕಾಲಘಟ್ಟದಲ್ಲಿ ಆಯಾ ಜಾತಿ, ಧರ್ಮ, ಲಿಂಗಕ್ಕೆ ಸಂಬಂಧಿಸಿದಂತೆ ಬರಹಗಾರರು ಬರೆಯಲು ತೊಡಗಿದರು. ಕಾವ್ಯ ಪ್ರಕಾರದಲ್ಲಿ ಗುರುತಿಸಬಹುದಾದಂತವರು ಶಿಶುನಾಳ ಶರೀಫರು ಮತ್ತು ನಿಸಾರ್ ಅಹಮದ್. ಹಾಗೆಯೇ ಸಣ್ಣಕತೆ ಪ್ರಕಾರದಲ್ಲಿ ಮುಸ್ಲಿಂ ಸಂವೇದನೆಯನ್ನೆ ಪ್ರಧಾನ ಆಶಯವಾಗಿ ಇಟ್ಟುಕೊಂಡು ಕತೆ ರಚಿಸಿದವರು ಹಲವರಿದ್ದಾರೆ. ಅವರಲ್ಲಿ ಪ್ರಮುಖ ಕತೆಗಾರರೆಂದರೆ ಫಕೀರ್ ಮಹಮದ್ ಕಟ್ಪಾಡಿ. ಇವರು ಮುಸ್ಲಿಂ ಬದುಕಿನ ವಿವಿಧ ಮುಖಗಳನ್ನು ಕೇಂದ್ರವಾಗಿಟ್ಟುಕೊಂಡು ಕತೆಗಳನ್ನು ರಚಿಸಿದ್ದಾರೆ.

೨೦ರ ದಶಕದ ಕರ್ನಾಟಕದಲ್ಲಿ ಹಾಗೂ ಕನ್ನಡ ಸಾಹಿತ್ಯ ಸಂಸ್ಕೃತಿ ಲೋಕದಲ್ಲಿ ಅನೇಕ ಪಲ್ಲಟಗಳು ಜರುಗಿದವು. ಅವುಗಳಲ್ಲಿ ಇದುವರೆವಿಗೂ ಬೇರೆ ಸಮುದಾಯಗಳ ಲೇಖಕರು ಮುಟ್ಟಲಾಗಿರದ ಅನುಭವಲೋಕವು ಕನ್ನಡ ಸಾಹಿತ್ಯ ಲೋಕದೊಳಗೆ ಪ್ರವೇಶ ಪಡೆದಿದ್ದೂ ಒಂದು. ಅನೇಕ ಲೇಖಕರು ತಮ್ಮ ಸಮುದಾಯದ ಅನುಭವವನ್ನು ಸಾಹಿತ್ಯದ ಬೇರೆಬೇರೆ ಪ್ರಕಾರಗಳಲ್ಲಿ ಕಾಣಿಸಲು ಶುರುಮಾಡಿದರು. ಅವರಲ್ಲಿ ಮುಸ್ಲಿಮರು, ದಲಿತರು, ಸ್ತ್ರೀಯರು ಮುಖ್ಯರು. ಮುಸ್ಲಿಂ ಸಮುದಾಯದ ಅನುಭವ ಮತ್ತು ಸಂವೇದನೆಗಳಿಗೆ ಧ್ವನಿ ನೀಡಿದವರು ಬೊಳುವಾರು ಮಹಮ್ಮದ್ ಕುಂಞ್, ಸಾರಾ ಅಬೂಬಕರ್, ಅಬ್ದುಲ್ ರಶೀದ್, ರಮಜಾನ ದರ್ಗಾ, ಬಾನುಮುಶ್ತಾಕ್, ಕೆ. ಶರೀಫಾ, ಫಕೀರ್ ಮುಹಮ್ಮದ್ ಕಟ್ಪಾಡಿ ಅವರು. ಇವರಲ್ಲಿ ಹೆಚ್ಚಿನವರು ತಮ್ಮ ಅಭಿವ್ಯಕ್ತಿಗೆ ಕಥಾಪ್ರಕಾರವನ್ನು ಆರಿಸಿಕೊಂಡರು. ಮುಸ್ಲಿಂ ಸಮುದಾಯದ ಬದುಕನ್ನು ತಮ್ಮ ಕತೆಗಳಲ್ಲಿ ಅನಾವರಣಗೊಳಿಸಿದರು. ವಿಶೇಷವೆಂದರೆ, ಈ ಲೇಖಕರಲ್ಲಿ ಹೆಚ್ಚಿನವರು ದಕ್ಷಿಣ ಕನ್ನಡದಿಂದ ಬಂದವರು. ಬ್ಯಾರಿ ಮುಸ್ಲಿಂ ಸಮುದಾಯಕ್ಕೆ ಸೇರಿದವರು. ಇವರ ಬರೆಹದಿಂದ ಹೊಸ ಬಗೆಯ ಚರ್ಚೆಗಳು ಕನ್ನಡದಲ್ಲಿ ಆರಂಭಗೊಂಡವು. ಈ ಬಗೆಯ ಸಂಚಲನ ಉಂಟುಮಾಡಿದವರಲ್ಲಿ ಫಕೀರ್ ಮುಹಮ್ಮದ್ ಕಟ್ಪಾಡಿಯವರ ಪಾತ್ರವು ಬಹಳ ಮಹತ್ವದ್ದಾಗಿದೆ.

ಅಧ್ಯಯನದ ಉದ್ದೇಶ

ಈ ಅಧ್ಯಯನದ ಉದ್ದೇಶಗಳು ಈ ಕೆಳಕಂಡಂತಿವೆ:

೧. ಕಥಾಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯಕ್ಕೆ ಮುಸ್ಲಿಂ ಸಮುದಾಯದ ಅನುಭವ ಲೋಕ ಮತ್ತು ಸಂವೇದನೆಗಳ ಸೇರ್ಪಡೆಯ ಸ್ವರೂಪವನ್ನು ಅರಿತುಕೊಳ್ಳುವುದು. ಅದರಲ್ಲೂ ಮುಸ್ಲಿಂ ಸಮುದಾಯದಲ್ಲಿ ಪುರುಷ ಪ್ರಧಾನ ಸಮಾಜ ಹಾಗೂ ಧಾರ್ಮಿಕ ಮೂಲಭೂತವಾದ, ಪುರೋಹಿತಶಾಹಿ ದಮನಕ್ಕೆ ಒಳಗಾಗಿರುವ ಮಹಿಳೆಯರ ಬಾಳನ್ನು ಮುಸ್ಲಿಂ ಲೇಖಕರು ಹೇಗೆ ವಿಮರ್ಶಾತ್ಮಕವಾಗಿ ಕಟ್ಟಿಕೊಡುತ್ತಿದ್ದಾರೆ ಎಂಬುದನ್ನು ಶೋಧಿಸುವುದು.

೨. ಕಟ್ಪಾಡಿಯವರ ಬಹುತೇಕ ಕತೆಗಳಲ್ಲಿ ಮುಸ್ಲಿಂ ಲೋಕದ ಅನುಭವಗಳು ವಿಭಿನ್ನ ರೀತಿಯಲ್ಲಿ ಚಿತ್ರಿತಗೊಂಡಿವೆ. ಮುಸ್ಲಿಂ ಸಮುದಾಯದಲ್ಲಿರುವ ವರ್ಗವೈರುಧ್ಯ, ಪುರುಷವಾದದ ದಬ್ಬಾಳಿಕೆ, ಪುರೋಹಿತಶಾಹಿಯ ಅಮಾನುಷತೆ ಈ ಮೂರು ಯಜಮಾನ ಶಕ್ತಿಗಳ ದಬ್ಬಾಳಿಕೆಗಳ ಹಲವಾರು ಆಯಾಮಗಳು ಚಿತ್ರಣಗೊಂಡಿವೆ. ಸಾಮಾಜಿಕವಾದ ಧಾರ್ಮಿಕವಾದ ಅನ್ಯಾಯ, ಅಸಮಾನತೆಗಳು ಕಟ್ಪಾಡಿಯವರ ಕಥೆಗಳಲ್ಲಿ ಯಾವ ಸ್ವರೂಪದಲ್ಲಿ ಚಿತ್ರಿತವಾಗಿವೆ ಎಂಬುದನ್ನು ಶೋಧಿಸುವುದು.

೩. ಸಾಮಾಜಿಕ ಸ್ತರವಿನ್ಯಾಸದಲ್ಲಿ ಶೋಷಣೆ, ಧರ್ಮ ದಬ್ಬಾಳಿಕೆಗೆ ಸಂಬಂಧಿಸಿದಂತೆ ಎರಡು ರೀತಿಯ ವಲಯಗಳನ್ನು ಗುರುತಿಸಬಹುದಾಗಿದೆ. ಒಂದು ಶೋಷಕ, ಮತ್ತೊಂದು ಶೋಷಿತ. ಧಾರ್ಮಿಕ, ಸಾಮಾಜಿಕ, ಆರ್ಥಿಕ ದಬ್ಬಾಳಿಕೆ, ಶೋಷಣೆಗೆ ಒಳಗಾಗುವವರು ಇದ್ದರೆ, ಅವರನ್ನು ಶೋಷಿಸುವವರು ಸಹ ಇದ್ದೇ ಇರುತ್ತಾರೆ. ಈ ಎರಡು ವಲಯಗಳು ಪರಸ್ಪರ ವಿರೋಧದಿಂದ ಕೂಡಿದ್ದರೂ ಅವುಗಳ ನಡುವೆ ಅನೇಕ ಬಗೆಯ ಸಂಬಂಧಗಳಿವೆ. ಈ ಸಂಬಂಧಗಳಲ್ಲಿ ಅನೇಕ ಸಂಘರ್ಷ ರಾಜಿ ಕೊಡುಕೊಳೆ ಇರುತ್ತವೆ. ಈ ವೈರುಧ್ಯಗಳು ಸಮಾಜದ ಎಲ್ಲಾ ಧರ್ಮದ ಎಲ್ಲಾ ಜಾತಿಯ ಒಳಗಡೆಯೂ ಅಂತರ್ಗತವಾಗಿರುತ್ತವೆ. ಇವು ಆ ಸಮಾಜದ ಮನುಷ್ಯ ಸಂಬಂಧಗಳನ್ನು ನಿರ್ಧರಿಸುತ್ತಿರುತ್ತವೆ. ಈ ಮನುಷ್ಯ ಸಂಬಂಧಗಳನ್ನು ಆ ಮೂಲಕ ಸಮಾಜದ ಸ್ವರೂಪವನ್ನು ಸೃಜನಶೀಲರಾದ ಲೇಖಕರು ತಮ್ಮದೇ ಆದ ಬಗೆಯಲ್ಲಿ ಕಟ್ಟಿಕೊಡುವರು. ಈ ಹಿನ್ನೆಲೆಯಲ್ಲಿ ಕಟ್ಪಾಡಿಯವರ ಕತೆಗಳು ಮಹಿಳೆಯರ ಲೋಕವನ್ನು ಹೇಗೆ ಕಟ್ಟಿಕೊಡುತ್ತವೆ ಎಂದು ಗುರುತಿಸುವುದು.

೪. ಕಟ್ಪಾಡಿಯವರ ಕತೆಗಳು ಯಾವ ವಸ್ತುವನ್ನು ಆರಿಸಿಕೊಳ್ಳುತ್ತವೆ, ಕತೆಯು ಜೀವನದ ಬಗ್ಗೆ ಯಾವ ನಿಲುವನ್ನು ತಳೆಯುತ್ತವೆ. ಈ ವಸ್ತು ಮತ್ತು ನಿಲುವನ್ನು ಕತೆಯ ಭಾಷೆ ಶೈಲಿ ಮತ್ತು ನಿರೂಪಣ ಕ್ರಮಗಳು ಹೇಗೆ ನಿರ್ವಹಿಸುತ್ತವೆ ಎಂಬುದನ್ನು ಗುರುತಿಸುವುದು.

೫. ಕಟ್ಪಾಡಿಯವರ ಕತೆಗಳು ಕರಾವಳಿಯ ಮುಸ್ಲಿಂ ಬದುಕಿನ ಅನೇಕ ವಿನ್ಯಾಸಗಳನ್ನು ಚಿತ್ರಿಸುತ್ತವೆ. ಅವುಗಳಲ್ಲಿ ಸ್ತ್ರೀಪಾತ್ರಗಳು ವಿಭಿನ್ನ ನೆಲೆ ಮತ್ತು ವಿಭಿನ್ನ ದೃಷ್ಟಿಕೋನದಿಂದ ಚಿತ್ರಿಸುತ್ತವೆ. ಹಾಗೆ ಕಂಡರೆ ಕಟ್ಪಾಡಿಯವರು ಕತೆಗಳು ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದಂತೆ ಕಂಡುಬಂದರೂ, ಆಳದಲ್ಲಿ ಅವು ಇಡೀ ಸಮಾಜದ ಸ್ತ್ರೀ ಸಂವೇದನೆಯನ್ನು ಚಿತ್ರಿಸುವಂತಹ ವಿಶಿಷ್ಟ ವಿಸ್ತರಣೆಯನ್ನು ಕತೆಗಳು ಹೊಂದಿವೆ.

೬. ಮಹತ್ವದ ವಿಶಿಷ್ಟ ಕತೆಗಳು ಹೆಚ್ಚಿನ ಸಂಶೋಧನೆಗೆ ಒಳಗಾಗಿಲ್ಲದೆ ಇರುವುದು ವಿಪರ್ಯಾಸದ ಸಂಗತಿಯಾಗಿದೆ. ಈ ರೀತಿ ನಿರ್ಲಕ್ಷ್ಯಕ್ಕೆ ಒಳಗಾದ ಉತ್ತಮ ಕಥೆಗಾರರಾದ ಕಟ್ಪಾಡಿಯವರ ಕತೆಗಳ ಬಗ್ಗೆ ಅಧ್ಯಯನ ಮಾಡುವುದು.

ಅಧ್ಯಯನದ ಮಹತ್ವ

ಕರ್ನಾಟಕವು ಭೌಗೋಳಿಕ ವ್ಯಾಪ್ತಿಯಿಂದ ವಿಶಾಲವಾದ ಪ್ರದೇಶವಾಗಿದೆ. ಜತೆಗೆ ಪ್ರಾಂತ್ಯವಾರು ಸಮುದಾಯವಾರು ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದೆ. ಈ ಪ್ರಾಂತ್ಯ ಮತ್ತು ಸಮುದಾಯ ವಿಶಿಷ್ಟವಾದ ಅನುಭವ ಲೋಕವನ್ನು ಆಯಾ ಪ್ರಾಂತ್ಯ ಮತ್ತು ಸಮುದಾಯಗಳಿಂದ ಬಂದ ಬರಹಗಾರರು, ತಮ್ಮ ಸೃಜನಶೀಲ ಅಭಿವ್ಯಕ್ತಿಗೆ ಮೂಲಸಾಮಗ್ರಿ ಮಾಡಿಕೊಂಡಿರುತ್ತಾರೆ. ವೈದೇಹಿಯವರು ಕುಂದಾಪುರದ ಭಾಗದಿಂದ, ಕುಂವೀ ಬಯಲುಸೀಮೆಯಿಂದ, ಅಮರೇಶ ನುಗಡೋಣಿಯವರು ಹೈದರಾಬಾದ್ ಕರ್ನಾಟಕದಿಂದ, ಮೊಗಳ್ಳಿಯವರು ಹಳೇ ಮೈಸೂರಿನಿಂದ, ಬಾಳಾಸಾಹೇಬ ಲೋಕಾಪುರ ಅವರು ಮಹಾರಾಷ್ಟ್ರ ಗಡಿಯ ಸೀಮೆಯಿಂದ ಬಂದ ಕತೆಗಾರರು. ಅದೇ ರೀತಿ ಕಟ್ಪಾಡಿಯವರು ಕರಾವಳಿ ಪ್ರಾಂತ್ಯದಿಂದ ಬಂದವರು. ಈ ಎಲ್ಲ ಲೇಖಕರು ಸಾಹಿತ್ಯದಲ್ಲಿ ತಮ್ಮ ಪ್ರತಿಭೆ ಕಲೆಗಾರಿಕೆಯಿಂದ ಮಾತ್ರವಲ್ಲದೆ, ತಾವು ಚಿತ್ರಿಸುವ ಅನುಭವ ಲೋಕದ ವಿಶಿಷ್ಟತೆಯಿಂದಲೂ ಕನ್ನಡ ಕಥಾಸಾಹಿತ್ಯದಲ್ಲಿ ತಮ್ಮದೇ ಆದಂತಹ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ದಲಿತರು ಬರೆಯಲು ಶುರುಮಾಡಿದಾಗ ದಲಿತಲೋಕ ಕನ್ನಡ ಸಾಹಿತ್ಯಕ್ಕೆ ಪರಿಚಯವಾಯಿತು; ಸ್ತ್ರೀಯರು ಬರೆಯಲು ಪ್ರಾರಂಭಿಸಿದಾಗ ಸ್ತ್ರೀಲೋಕ ಕನ್ನಡ ಸಾಹಿತ್ಯಕ್ಕೆ ಪರಿಚಯವಾಯಿತು; ಅದೇ ರೀತಿ ಮುಸ್ಲಿಮರ ಬರವಣಿಗೆಯಿಂದ ಮುಸ್ಲಿಮ್ ಲೋಕ ಕನ್ನಡ ಸಾಹಿತ್ಯಕ್ಕೆ ಪರಿಚಯವಾಯಿತು; ಸಮುದಾಯ ಪ್ರಜ್ಞೆಯ ಈ ಬರಹಗಾರರ ಬರವಣಿಗೆಗೆ ಯಿಂದ ನಿರ್ದಿಷ್ಟ ಪ್ರಾಂತ್ಯ ಅಥವಾ ಸಮುದಾಯದ ಬಗ್ಗೆ ಓದುಗರ ಸಂವೇದನಶೀಲತೆ ಬದಲಾಗುವುದು. ಕರಾವಳಿ ಪ್ರಾಂತ್ಯದಿಂದ ಬಂದ ಕಟ್ಪಾಡಿಯವರು ಹೀಗೆ ಮುಸ್ಲಿಮ್ ಅನುಭವಲೋಕ ಮತ್ತು ಸಂವೇದನೆಗಳ ಮೂಲಕ ಒಂದು ಬದುಕಿನ ಚಿತ್ರವನ್ನು ಕಟ್ಟಿಕೊಟ್ಟವರು. ಅವರ ಕಥೆಗಳ ಮೂಲಕ ಮುಸ್ಲಿಮ್ ಸಮುದಾಯದಲ್ಲಿ ಸ್ತ್ರೀಯರ ಬದುಕಿನ ಬೇರೆಬೇರೆ

ಮಗ್ಗುಲುಗಳನ್ನು ಅರಿಯುವುದು ಮಾತ್ರವಲ್ಲದೆ, ಒಟ್ಟಾರೆ ಸ್ತ್ರೀವಾದಿ ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ನೋಡುವ ಯತ್ನಗಳಿಗೆ ಹೊಸ ಧಾರೆಯನ್ನು ಸೇರಿಸಿದಂತೆ ಆಗುವುದು. ಪ್ರತಿಭಾವಂತ ಮತ್ತು ಮಾನವತಾವಾದಿ ಲೇಖಕರು ತಮ್ಮ ಪರಿಸರದ, ಸಮುದಾಯದ, ಪ್ರಾಂತ್ಯದ ಜೀವನ ಕ್ರಮವನ್ನು ವಸ್ತುವನ್ನಾಗಿ ಇಟ್ಟುಕೊಂಡು ಕತೆ ಬರೆದರೂ, ಅದು ಒಟ್ಟು ಸಮಾಜದ ಚಿತ್ರಣವಾಗಿ ವಿಸ್ತರಣೆ ಪಡೆಯುತ್ತದೆ. ಈ ಹಿನ್ನೆಲೆಯಲ್ಲಿ ಕಟ್ಪಾಡಿ ಕತೆಗಳ ಅನುಭವ ಲೋಕ ಮತ್ತು ಸಂವೇದನೆ ಕರಾವಳಿಯ ಮುಸ್ಲಿಮ್ ಸಮುದಾಯಕ್ಕೆ ಸಂಬಂಧಿಸಿದೆ.ಆದರೆ ಅದು ತನ್ನ ಪ್ರಾದೇಶಿಕತೆ ಸಾಮುದಾಯಿಕತೆ ಮೀರಿ ಒಟ್ಟು ಮನುಕುಲದಲ್ಲಿ ಮಹಿಳೆಯರ ಹೋರಾಟದ ಕಥನವಾಗುತ್ತದೆ. ಇದು ಕಟ್ಪಾಡಿ ಕತೆಗಳನ್ನು ಸ್ತ್ರೀಪಾತ್ರಗಳ ದೃಷ್ಟಿಯಿಂದ ಅಧ್ಯಯನ ಮಾಡುವುದರ ಮಹತ್ವವಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಈ ಅಧ್ಯಯನದಲ್ಲಿ ಪ್ರಧಾನವಾಗಿ ಫಕೀರ್ ಮುಹಮ್ಮದ್ ಕಟ್ಪಾಡಿಯವರು ರಚಿಸಿದ ಕಥೆಗಳನ್ನು ನೋಡಲಾಗಿದೆ. ಈ ಕತೆಗಳ ಚರ್ಚೆಯಲ್ಲಿ ಪ್ರಾಸಂಗಿಕವಾಗಿ ಅವರ ಕಾದಂಬರಿಗಳನ್ನು ಹಾಗೂ ಸಾರಾ ಅಬೂಬಕರ್ ಮುಂತಾದವರ ಇದೇ ವಸ್ತುವುಳ್ಳ ಕೃತಿಗಳನ್ನು ಬಳಸಿಕೊಂಡಿದೆ. ಈ ಅಧ್ಯಯನದಲ್ಲಿ ಕಟ್ಪಾಡಿಯವರ ಕಥೆಗಳ ಮೇಲೆ ಬಂದಂತಹ ವಿಮರ್ಶ ಕೃತಿಗಳನ್ನು ಲೇಖನಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಲೇಖಕರ ಕತೆಗಳೆ ಮೂಲ ಆಕರಗಳು ಆಗಿರುವುದರಿಂದ ಕೃತಿ ಕೇಂದ್ರಿತವಾಗಿ ಅಧ್ಯಯನ ಮಾಡಲಾಗಿದೆ. ಕಟ್ಪಾಡಿಯವರ ಸ್ತ್ರೀಪರ ಬರವಣಿಗೆಯ ಮೂಲಕ ಸ್ತ್ರೀಪಾತ್ರಗಳನ್ನು ತಮ್ಮ ಕಥೆಗಳಲ್ಲಿ ಹೇಗೆ ಕಟಿಕೊಟ್ಟಿದ್ದಾರೆ ಎಂಬುದನ್ನು ಗುರುತಿಸುವಲ್ಲಿ ಸ್ತ್ರೀವಾದಿ ಅಧ್ಯಯನ ವಿಧಾನವನ್ನು ಬಳಸಲಾಗಿದೆ. ಕಟ್ಪಾಡಿಯವರ ಒಂದು ಕತೆಯೊಡನೆ ಅವರ ಇನ್ನೊಂದು ಕತೆ ಸ್ತ್ರೀಪಾತ್ರ ಚಿತ್ರಿಸುವಲ್ಲಿ ಹೇಗೆ ಭಿನ್ನವಾಗಿದೆ ಎಂಬುದನ್ನು ತೌಲನಿಕವಾಗಿ ನೋಡಲು ಯತ್ನಿಸಲಾಗಿದೆ. ಕಟ್ಪಾಡಿರಯವರ ಕತೆಗಳು ಮಹಿಳೆಯರ ಪಾತ್ರ ಚಿತ್ರಣದಲ್ಲಿ ಅವರ ಕಾದಂಬರಿಗಳ ಜತೆ ಎಲ್ಲಿ ಸಾಮ್ಯ ಮತ್ತು ಭಿನ್ನತೆ ಹೊಂದಿವೆ ಎಂಬುದನ್ನು ಗುರುತಿಸಲು ಆಂತರಿಕ ತೌಲನಿಕ ವಿಧಾನವನ್ನು ಬಳಸಲಾಗಿದೆ. ಕಟ್ಪಾಡಿಯವರ ಕತೆಗಳ ಚರ್ಚೆ ಮಾಡುವಾಗ, ಬೊಳುವಾರು ಮಹಮ್ಮದ್ ಕುಂಞಿ. ಸಾರಾ ಅಬೂಬಕರ್ ಕತೆ, ಕಾದಂಬರಿಗಳನ್ನು ಪ್ರಾಸಂಗಿಕವಾಗಿ ಚರ್ಚಿಸಲಾಗಿದೆ. ಈ ಅಂತರ್ ಪಠ್ಯೀಯ ವಿಧಾನದ ಮೂಲಕ ಮೂಲಕ ಕಟ್ಪಾಡಿಯವರ ಕತೆಗಳ ವಿಶಿಷ್ಟತೆ ಅರಿಯಲು ಯತ್ನಿಸಲಾಗಿದೆ.

ಈ ಅಧ್ಯಯನದಲ್ಲಿ ಕಟ್ಪಾಡಿ ಕತೆಗಳಲ್ಲಿ ಬರುವ ಮಹಿಳಾ ಪಾತ್ರಗಳನ್ನು ಅವುಗಳ ನಡುವಿನ ಸಂಬಂಧ ವಾಚಕಗಳ ಮೂಲಕ (ತಂಗಿ, ನಾದಿನಿ, ಅತ್ತೆ, ಮಗಳು ಇತ್ಯಾದಿ) ವಿಭಾಗಗಳನ್ನು ಮಾಡಿ ಅಧ್ಯಯನ ಮಾಡಬಹುದು; ಜತೆಗೆ ಅವುಗಳ ಪ್ರವೃತ್ತಿ ಮತ್ತು ಗುಣಗಳ ಮೂಲಕ (ತಾಯ್ತನ, ಪ್ರತಿಭಟನೆ, ಶರಣಾಗತಿ, ಸಂಕೀರ್ಣ ಇತ್ಯಾದಿ) ವಿಭಾಗಗಳನ್ನು ಮಾಡಿಕೊಂಡು ಅಧ್ಯಯನ ಮಾಡಬಹುದು. ಆದರೆ ಈ ಎರಡರಲ್ಲಿ ಎರಡನೆಯ ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ. ಇಲ್ಲಿ ಕತೆಯ ವಸ್ತು ಮತ್ತು ತಾಳಿರುವ ಧೋರಣೆಯನ್ನು ಮುಖ್ಯವಾಗಿಟ್ಟುಕೊಂಡು ಸ್ತ್ರೀಪಾತ್ರ ಚಿತ್ರಣ ಮಾಡಲಾಗಿದೆ. ಕಟ್ಪಾಡಿ ಅವರ ಕತೆಗಳಲ್ಲಿ ಬೇರೆ ಬೇರೆ ಕಥನಕ್ರಮಗಳಿವೆ. ಅವುಗಳೆಂದರೆ ನಾಟಕೀಯತೆ, ಸೂಕ್ಷ್ಮ ವಿವರಗಳ ಸಮೃದ್ಧತೆ ಮತ್ತು ವಿಷಾದ ವಿಡಂಬನೆ ಮುಂತಾದವು. ಈ ಕಥನಕ್ರಮದ ಅಂಶಗಳು ಅವರ ಪಾತ್ರಚಿತ್ರಣದಲ್ಲಿ ಹೇಗೆ ಕೆಲಸ ಮಾಡಿವೆ ಎಂಬುದನ್ನು ಇಲ್ಲಿ ಚರ್ಚಿಸುವ ಯತ್ನಮಾಡಲಾಗುವುದು.

ಈ ಅಧ್ಯಯನದ ಶೀರ್ಷಿಕೆಯಲ್ಲಿ 'ವಿನ್ಯಾಸ' ಎಂಬ ಪದವಿದೆ. ವಿನ್ಯಾಸವು– ಆಕಾರ, ರಚನೆ, ರಚನಾಕ್ರಮ, ಜೋಡಣೆ ಹೀಗೆ ಹಲವು ಅರ್ಥಗಳನ್ನು ಒಳಗೊಂಡಿರುವ ಶಬ್ದವಾಗಿದೆ. ಭೂಮಿಯ ಮೇಲಿನ ಪ್ರತಿಯೊಂದು ವಸ್ತು ವಿಷಯಗಳಲ್ಲಿ ಮತ್ತು ಜೀವಿಗಳಲ್ಲಿ ವಿಶಿಷ್ಟ ರೀತಿಯ ವಿನ್ಯಾಸವನ್ನು ಕಾಣಬಹುದು. ಅವುಗಳಲ್ಲಿ ಹೊರವಿನ್ಯಾಸ ಮತ್ತು ಒಳವಿನ್ಯಾಸ ಎಂದು ಗುರುತಿಸಬಹುದು. ಹೊರ ವಿನ್ಯಾಸವು ಭೌತಿಕ ಆಯಾಮಕ್ಕೆ ಸಂಬಂಧಿಸಿದ್ದರೆ, ಒಳ ವಿನ್ಯಾಸವು ಮಾನಸಿಕ ಆಯಾಮಕ್ಕೆ ಸಂಬಂಧಿಸಿರುತ್ತದೆ. ಒಂದು ಸಮಾಜದಲ್ಲಿ, ಒಂದು ಸಮುದಾಯದಲ್ಲಿ, ಅಷ್ಟೇ ಏಕೆ ಒಂದೇ ಕುಟುಂಬದಲ್ಲಿ ವಾಸಿಸುವ ಜನರಲ್ಲಿ ಸಹ, ವಿವಿಧ ರೀತಿಯ ಬಾಳುವ ವಿನ್ಯಾಸವನ್ನು ಗುರುತಿಸಬಹುದಾಗಿದೆ. ಅವರ ಉಡುಗೆ–ತೊಡುಗೆ, ಮಾತಿನ ಶೈಲಿ, ಕ್ರಿಯೆ ಮುಂತಾದ ಅಂಶಗಳು ಭೌತಿಕ ಆಯಾಮಕ್ಕೆ ಸಂಬಂಧಿಸಿದರೆ, ಅವರ ಹಾವ–ಭಾವ, ಸ್ವಭಾವ, ವರ್ತನೆ, ವ್ಯಕ್ತಿತ್ವ ಮುಂತಾದ ಅಂಶಗಳು ಮಾನಸಿಕ ಆಯಾಮಕ್ಕೆ ಅಥವಾ ಆಲೋಚನೆಗೆ ಸಂಬಂಧಿಸಿರುತ್ತವೆ.

ಸಾಹಿತ್ಯದಲ್ಲಿ ವಿನ್ಯಾಸ ಎಂದರೆ ಆಕಾರ, ಆಕೃತಿ, ರೂಪಕ್ಕೆ ಸಂಬಂಧಿಸಿದ್ದು, ಕತೆ ಅಥವಾ ಕಾದಂಬರಿಗಳ ವಿಷಯದಲ್ಲಿ ಹೇಳುವುದಾದರೆ, ಒಬ್ಬ ಲೇಖಕ ಪಾತ್ರಗಳನ್ನು ಒಂದು ಜೀವಿತ ಸಂದರ್ಭದಲ್ಲಿ ಯಥಾವತ್ತಾಗಿ, ಜೀವಂತವಾಗಿ ಚಿತ್ರಿಸುವುದು ನಿಜ ಎನ್ನುವಂತೆ, ಹೌದು ಎನ್ನುವಂತೆ ಚಿತ್ರಿಸುವುದು ಹೊರಗಿನ ದೈಹಿಕ ಆಯಾಮಕ್ಕೆ ಸಂಬಂಧಿಸಿರುತ್ತದೆ. ವಿಶಿಷ್ಟ ಸಂದರ್ಭ ಬಂದಾಗ ಅವು ಹೇಗೆ ವರ್ತಿಸುತ್ತವೆ? ಅವುಗಳ ಕ್ರಿಯೆ ಮತ್ತು ಪ್ರತಿಕ್ರಿಯೆ ಹೇಗಿರುತ್ತದೆ? ಆ ಪಾತ್ರಗಳು ತಮ್ಮ ದೌರ್ಬಲ್ಯ, ಶಕ್ತಿಯನ್ನು ಪ್ರದರ್ಶಿಸುವ ಬಗೆ ಹಾಗೂ ಕೆಲವು ದೃಷ್ಟಿಕೋನಗಳು

ಆ ಪಾತ್ರಗಳಲ್ಲಿ ಹೇಗೆ ಚಿತ್ರಿತವಾಗಿ ಎಂಬುದು ಮಾನಸಿಕ ಆಯಾಮಕ್ಕೆ ಸಂಬಂಧಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಸ್ತ್ರೀಪಾತ್ರ ವಿನ್ಯಾಸ ಎಂದರೆ ಸ್ತ್ರೀಪಾತ್ರಗಳ ಭೌತಿಕ ಆಕೃತಿ ಮತ್ತು ಮಾನಸಿಕ ಸ್ವಭಾವ ಎರಡಕ್ಕೂ ಸಂಬಂಧಿಸಿದ್ದು, ಇವು ಆಯಾ ಪಾತ್ರಗಳಿಗೆ ಅನುಗುಣವಾಗಿ ಭಿನ್ನವಾಗುತ್ತ ಹೋಗುತ್ತವೆ. ಈ ಹಿನ್ನೆಲೆಯಲ್ಲಿ ಅಧ್ಯಯನವು ಕತೆಗಳಲ್ಲಿ ಬರುವ ಸ್ತ್ರೀಯರನ್ನು ಎರಡು ಆಯಾಮಗಳಲ್ಲಿ ಗಮನಿಸುತ್ತದೆ. ಮೊದಲನೆಯದು–ಸ್ತ್ರೀಪಾತ್ರಗಳು ಜೀವನದ ಯಾವ ಸಂದರ್ಭದಲ್ಲಿ ಹೇಗೆ ಬರುತ್ತವೆ ಎಂಬುದನ್ನು ಚಿತ್ರಿಸುವುದು. ಎರಡನೆಯದು– ಸ್ತ್ರೀ ಪಾತ್ರಗಳು ತಮ್ಮ ಮಾತುಕತೆಯ ಮೂಲಕ ಹೊಮ್ಮಿಸುವ ಅರ್ಥಗಳು. ಬದುಕಿನ ದರ್ಶನವನ್ನು ಹುಡುಕುವುದು. ಮೊದಲನೆಯದು ಭೌತಿಕ ವಿವರಗಳಿಗೆ ಸಂಬಂಧಿಸಿದ್ದು. ಎರಡನೆಯದು ದೃಷ್ಟಿಕೋನಕ್ಕೆ ಮಾನಸಿಕ ಆಯಾಮಕ್ಕೆ ಸಂಬಂಧಿಸಿದ್ದಾಗಿದೆ.

ಈ ಹಿನ್ನೆಲೆಯಲ್ಲಿ ಕಟ್ಪಾಡಿಯವರ ಕತೆಗಳಲ್ಲಿ ಬರುವ ಸ್ತ್ರೀ ಪಾತ್ರಗಳಲ್ಲಿ ಒಳ ಮತ್ತು ಹೊರಗುಗಳ ರಚನಾ ವಿನ್ಯಾಸವು ಕೂಡಿಕೊಂಡು ಬರುವುದದನ್ನು ಕಾಣಬಹುದು. ಸ್ತ್ರೀಪಾತ್ರಗಳಲ್ಲಿನ ವೇಷಭೂಷಣ, ಮಾತಿನ ಶೈಲಿ, ಅವರು ಮಾಡುವ ಕ್ರಿಯೆಗಳು, ಅವರಲ್ಲಿರುವ ಕ್ರೌರ್ಯ, ಹೊಂದಾಣಿಕೆ ಪ್ರತಿರೋಧ ಶರಣಾಗತಿ ಮತ್ತು ಮಾನವೀಯತೆ, ಪ್ರೀತಿ, ಪ್ರೇಮ, ತ್ಯಾಗ, ದ್ವೇಷ, ಅಸೂಹೆ, ಸ್ವಭಾವ, ವರ್ತನೆ, ವ್ಯಕ್ತಿತ್ವ, ಹೊಂದಾಣಿಕೆ ಮತ್ತು ಮನಸ್ತಾಪಗಳು ಸಂಘರ್ಷಗಳು ಕೂಡಿಕೊಂಡು ಬರುತ್ತವೆ. ಈ ಹೊರಗಿನ ದೈಹಿಕ ಆಯಾಮಕ್ಕೂ ಒಳಗಿನ ಮಾನಸಿಕ ಆಯಾಮಕ್ಕೂ ಆಂತರಿಕ ಸಂಬಂಧವಿದೆ. ಹೊರಗಿನ ಆಯಾಮವು ಒಳಗಿನ ಆಲೋಚನೆಯನ್ನು ವ್ಯಕ್ತಪಡಿಸುವ ಕನ್ನಡಿಯಾಗಿರುತ್ತದೆ. ಒಳಗಿನ ಆಯಾಮವು ಹೊರ ವರ್ತನೆಗಳಲ್ಲಿ ಪ್ರಕಟವಾಗುತ್ತಿರುತ್ತದೆ.

ಅಧ್ಯಾಯ ಎರಡು

ಫಕೀರ್ ಮುಹಮ್ಮದ್ ಕಟ್ಪಾಡಿ: ಜೀವನ ಹಿನ್ನೆಲೆ

ಅಧ್ಯಾಯ ಎರಡು

ಫಕೀರ್ ಮುಹಮ್ಮದ್ ಕಟ್ಪಾಡಿ: ಜೀವನ ಹಿನ್ನೆಲೆ

ಆಧುನಿಕ ಕನ್ನಡ ಸಾಹಿತ್ಯದ ದಲಿತ ಬಂಡಾಯ ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ಬಂದಂತಹ ಮುಸ್ಲಿಮ್ ಸಂವೇದನೆಯ ಕತೆಗಾರರಲ್ಲಿ ಮುಖ್ಯರಾದವರು ಫಕೀರ್ ಮಹಮ್ಮದ್ ಕಟ್ಪಾಡಿ. ಇವರು ಉಡುಪಿ ಜಿಲ್ಲೆಯ ಬಾರ್ಕೂರಿನಲ್ಲಿ ೧೯೪೮ರ ಜೂನ್ ೨೫ರಂದು ಹುಟ್ಟಿದರು. ತಂದೆ ಖತೀಬ್ ಕೆ ಅಹಮ್ಮದ್, ತಾಯಿ ಅಮೀನಾ. ಪ್ರಾಥಮಿಕ ವಿದ್ಯಾಭ್ಯಾಸ ಕಟ್ಪಾಡಿಯಲ್ಲಿ. ಕಾಲೇಜು ಶಿಕ್ಷಣ ಕುಂದಾಪುರದಲ್ಲಿ ಮಾಡಿದರು. ೧೯೭೮ರಲ್ಲಿ ಫಾತೀಮಾ ಅವರನ್ನು ವಿವಾಹವಾದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ೨೫ ವರ್ಷ ಸೇವೆ ಸಲ್ಲಿಸಿ, ಸದ್ಯ ಬೆಂಗಳೂರಿನಲ್ಲಿ ನಿವೃತ್ತಿ ಜೀವನ ನಡೆಸುತ್ತಿದ್ದಾರೆ.

ಕಥನಕಾರರಿಗೂ ಸಮಾಜದ ಜತೆಗೂ ಇರುವ ಸಂಬಂಧ ಅನನ್ಯವಾದುದು. ಕಥನಕಾರರು ತಾವು ಬೆಳೆದ ಪರಿಸರದ ಜೊತೆಗೆ ತಮ್ಮ ಪ್ರತಿಭೆ, ಸೃಜನಶೀಲತೆಯಿಂದ ಹೊಸ ಬಗೆಯ ಕಥನವನ್ನು ಕಟ್ಟುವರು. ಆ ಮೂಲಕ ತಮ್ಮ ಅನುಭವ ಜಗತ್ತಿಗೂ ಮತ್ತು ಕಲ್ಪನೆಯ ಜಗತ್ತಿಗೂ ಜೀವ ತುಂಬುವರು. ಕಟ್ಪಾಡಿ ಅವರು ಈ ದೃಷ್ಟಿಯಿಂದ ಕನ್ನಡ ಕಥನ ಸಾಹಿತ್ಯದ ಬಹುಮುಖ್ಯ ಲೇಖಕರು. ಇವರು ವಿದ್ಯಾರ್ಥಿ ಜೀವನದಲ್ಲಿ ಬಿ.ಪಿ.ಕಾಳೆ, ಎನ್.ನರಸಿಂಹಯ್ಯ, ಮಾ.ಭಿ.ಶೇಷಗಿರಿ ರಾವ್ ಮುಂತಾದವರ ಪತ್ತೆದಾರಿ ಕಾದಂಬರಿ ಓದುವ ಮೂಲಕ ಕತೆ ಬರೆಯಲು ಆಸಕ್ತಿ ಮೂಡಿಸಿಕೊಂಡವರು. ಜೊತೆಗೆ ತರಾಸು, ಅನಕೃ, ಕೃಷ್ಣಮೂರ್ತಿ ಪುರಾಣಿಕ, ತ್ರಿವೇಣಿ ಅವರ ಕಾದಂಬರಿಗಳು ಕಟ್ಪಾಡಿ ಅವರನ್ನು ಕತೆಗಾರರಾಗಿ ಬೆಳೆಯಲು ಪ್ರೇರಣೆ ಕೊಟ್ಟವು. ಕರಾವಳಿಯ ಬ್ಯಾರಿ ಮುಸ್ಲಿಮರಲ್ಲಿರುವ ತಲಾಖ್ ಮುಂತಾದ ಧರ್ಮಾಚರಣೆಗಳನ್ನು ಕಣ್ಣಾರೆ ಕಂಡು ಅವರು ಕತೆ ಬರೆಯಲು ಪ್ರೇರಣೆ ಪಡೆದರು. ತಮ್ಮ ಬದುಕಿನಲ್ಲಿ ನಡೆದ ಹಲವಾರು ಘಟನೆಗಳನ್ನು ವಿಭಿನ್ನ ರೀತಿಯಲ್ಲಿ ತಮ್ಮ ಕತೆಗಳಲ್ಲಿ ಚಿತ್ರಿಸಿದರು. ತಮ್ಮ ಕತೆಗಳ ಹಿಂದಿನ ಪ್ರಭಾವ ಪ್ರೇರಣೆಯನ್ನು ಸ್ವತಃ ಕಟ್ಪಾಡಿ ಅವರೇ 'ಕಡವು ಮನೆ' ಕೃತಿಯಲ್ಲಿ ಹಾಗೂ ಅಮರೇಶ ನುಗಡೋಣಿ ಅವರು

ಸಂಪಾದಿಸಿರುವ 'ನಾನೇಕೆ ಬರೆಯುತ್ತೇನೆ' ಎಂಬ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ ಅವರ ಅನುಭವ ಜಗತ್ತು ವಿಸ್ತಾರವಾದುದು. ಕಟ್ಪಾಡಿಯ ಕೋಟೆ ಗ್ರಾಮದಲ್ಲಿ ನಾಲ್ಕುನೂರಕ್ಕೂ ಹೆಚ್ಚು ಮನೆಗಳಿದ್ದು, ಅವುಗಳಲ್ಲಿ ಕಟ್ಪಾಡಿ ಅವರ ಮನೆಯೂ ಒಂದು. ಅಲ್ಲಿ ನೆಲೆಸಿರುವವರಲ್ಲಿ ಅತಿ ಹೆಚ್ಚಾಗಿ ಕೆಳಜಾತಿಯವರೇ ಆಗಿದ್ದರೆಂದು ಲೇಖಕರು ಹೇಳುತ್ತಾರೆ. ಹೀಗಾಗಿ ಲೇಖಕರಿಗೆ ಸಾಮಾಜಿಕವಾಗಿ ಬಹುಸಂಖ್ಯಾತರೂ ಶೋಷಿತರೂ ಆದ ಕೆಳಜಾತಿಗಳ ಜೊತೆ ಹೆಚ್ಚು ಸಮಯ ಕಳೆಯುವ ಸನ್ನಿವೇಶ ಬಂದಿತು. ಭಾರತೀಯ ಸಮಾಜದ ಜಾತಿಪದ್ಧತಿಯ ಏಣಿಶ್ರೇಣಿ ವ್ಯವಸ್ಥೆಯನ್ನು ಅರಿಯಲು ನೆರವಾಗಿದೆ. ಹಾಗಾಗಿ ಅವರ ಕತೆಗಳಲ್ಲಿ ಕೆಳಸ್ತರದ ಮತ್ತು ಕೆಳಮಧ್ಯಮ ವರ್ಗದ ಕುಟುಂಬಗಳಲ್ಲಿನ ಅನುಭವಗಳು ಪ್ರಧಾನವಾಗಿ ಚಿತ್ರಿತಗೊಂಡಿವೆ. ಭಾರತದಲ್ಲಿ ಕೆಳ ಮಧ್ಯಮವರ್ಗದ ಬಡತನವು ಕಟ್ಪಾಡಿಯವರನ್ನು ಒಳಗೊಂಡತೆ ಅನೇಕ ಲೇಖಕರು ಕಥೆಗಾರರಾಗುವಲ್ಲಿ ಬಹುಮುಖ್ಯ ಪ್ರೇರಣೆಯಾಗಿದೆ.

ಬಡತನದ ಬೇಗೆಯನ್ನು ಸ್ವತಃ ಅನುಭವಿಸಿದ ಕಟ್ಪಾಡಿ ಅವರು ಆ ಅನುಭವಕ್ಕೆ ಜೀವತುಂಬಿ ಸೃಜನಶೀಲತೆಯಿಂದ ಕೂಡಿದ ಹಲವಾರು ಕತೆಗಳನ್ನು ಬರೆದಿದ್ದಾರೆ. 'ನೋಂಬು', 'ಕಡಲತೀರದಲ್ಲಿ ಬೆಂಕಿ ಬಿದ್ದದ್ದು', 'ಕ್ರಿಯೆ' ಮುಂತಾದ ಕತೆಗಳಲ್ಲಿ ಕಿತ್ತು ತಿನ್ನುವ ಬಡತನದ ಚಿತ್ರಣವಿದೆ. ಕೆಳವರ್ಗದವರೊಡನೆ ಹೆಚ್ಚಾಗಿ ಬೆಳೆಸಿಕೊಂಡ ಒಡನಾಟ, ಕಟ್ಪಾಡಿ ಅವರನ್ನು ಒಬ್ಬ ಮಾನವೀಯ ಸಂವೇದನೆಯುಳ್ಳ ಬರಹಗಾರರನ್ನಾಗಿ ರೂಪಿಸಿತು. ಕರಾವಳಿ ಸೀಮೆಯ ಗ್ರಾಮ ಬದುಕಿನ ವಿವಿಧ ಅನುಭವ ಜಗತ್ತು ಅವರ ಕತೆಗಳ ಹಿಂದಿನ ಶಕ್ತಿ ಮತ್ತು ಪ್ರೇರಣೆಯಾಗಿದೆ.

ಕನ್ನಡ ಕಥನ ಸಾಹಿತ್ಯದಲ್ಲಿ ಮುಸ್ಲಿಮ್ ಬದುಕಿನ ಪರಿಚಯವಾದದ್ದು ಕಟ್ಪಾಡಿ, ಬೊಳುವಾರು, ಸಾರಾ ಮುಂತಾದವರ ಕತೆಗಳ ಮೂಲಕ. ಬಹುಸಂಖ್ಯಾತ ಹಿಂದೂಗಳ ಯಜಮಾನಿಕೆ ಇರುವ ಸಮಾಜದಲ್ಲಿ ಅಲ್ಪಸಂಖ್ಯಾತರು, ಶೋಷಣೆಗೆ ಗುರಿಯಾಗಿರುತ್ತಾರೆ. ಹಿಂದೂ ಮೂಲಭೂತವಾದಿಗಳು ಮುಸ್ಲಿಮರನ್ನು ಯಾವಾಗಲೂ ಅನುಮಾನದಿಂದ ನೋಡುವ ಸನ್ನಿವೇಶ ಸೃಷ್ಟಿಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಸಹಜವಾಗಿ ಅಲ್ಪಸಂಖ್ಯಾತರು ಸಮಾನತೆಯನ್ನು ಪ್ರಜಾಪ್ರಭುತ್ವವನ್ನು ಬಯಸುತ್ತಾರೆ. ಬಹುಸಂಖ್ಯಾತರೊಡನೆ ಹೊಂದಾಣಿಕೆ ಮನೋಭಾವನೆಯನ್ನು ತೋರುತ್ತಾರೆ. ಎಲ್ಲಾ ದೇಶಗಳಲ್ಲಿ ವಾಸಿಸುವ ಧಾರ್ಮಿಕ ಅಲ್ಪಸಂಖ್ಯಾತರ ಸಾಮಾನ್ಯ ಸ್ಥಿತಿ ಇದೇ ಆಗಿರುತ್ತದೆ. ಕಟ್ಪಾಡಿಯವರ ಮನೆ, ಹೆಚ್ಚಿನವರು ಕೆಳಜಾತಿಗಳೆಂದು ಪರಿಗಣಿಸಲ್ಪಟ್ಟ ಹಿಂದೂಗಳು ವಾಸಿಸುತ್ತಿರುವ ಸ್ಥಳದಲ್ಲಿ ಇದ್ದದ್ದರಿಂದ, ಹಿಂದೂಗಳೊಡನೆ ಸೌಹಾರ್ದ ಬದುಕನ್ನು ಬದುಕಲು ಅವರಿಗೆ ಕಷ್ಟವಿಲ್ಲ. ಇಲ್ಲವೇ ಅವರೇ ಸಮಾನತೆಯನ್ನು ಬಯಸುವವರಾಗಿ ಹೊಂದಾಣಿಕೆಯ ಗುಣ ಅವರಿಗೆ ಅನಿವಾರ್ಯ ಆಗಿರಬಹುದು. ಕಟ್ಪಾಡಿ ಅವರಿಗೆ ಈ ಎಲ್ಲ ಧಾರ್ಮಿಕ ಅಂಶಗಳು ತೀವ್ರವಾಗಿ ಕಾಡಿವೆ ಮತ್ತು ಅವು ಅವರ ಕತೆಗಳಲ್ಲಿ ಅಭಿವ್ಯಕ್ತಿಯನ್ನು

ಪಡೆದಿವೆ. "ಧರ್ಮ, ಸಮಾಜ ತನ್ನ ಒಡಲೊಳಗಿನ ಶ್ರೇಷ್ಠತೆಯ ಅಹಂಕಾರವನ್ನು ಯಾರೂ ಪ್ರಶ್ನಿಸದೆ ಸುಮ್ಮನಿದ್ದರೆ ಅಥವಾ ಹೊಗಳಿ ವೈಭವೀಕರಿಸಿದರೆ ಜನ ಪ್ರಸನ್ನರಾಗುತ್ತಾರೆ. ಬಹುಮಾನವನ್ನಿತ್ತು ಸನ್ಮಾನಿಸುತ್ತಾರೆ. ಸಮಾಜ ಒಪ್ಪಿ ಬಾಳುವ ಮೌಲ್ಯಗಳ ಚೌಕಟ್ಟನ್ನು ಮೀರಿದ ಜೀವನ ಸತ್ಯವನ್ನು ಕಾಣಿಸುವ ಪ್ರಯತ್ನವನ್ನು ಮಾಡುವ ಬರಹಗಾರನನ್ನು ಸಮಾಜ ಸಂಶಯದ ದೃಷ್ಟಿಯಿಂದಲೇ ನೋಡುತ್ತದೆ."[೧] ಈ ಬಿಕ್ಕಟ್ಟನ್ನು ಕಟ್ಪಾಡಿ ಅವರು ಅನುಭವಿಸಿದ್ದಾರೆ. ಮುಸ್ಲಿಮ್ ಧರ್ಮದಲ್ಲಿನ ಹಲವರ ಜೀವನಕ್ಕೆ ವಿರುದ್ಧವಾದ ಸಿದ್ಧಾಂತಗಳನ್ನು ಖಂಡಿಸಿ ಮೂಲಭೂತವಾದಿಗಳ ಟೀಕೆಗೂ ಅವರು ಗುರಿಯಾಗಿದ್ದಾರೆ. ಅದರಲ್ಲೂ ಮುಸ್ಲಿಮ್ ಲೋಕದೊಳಗಿರುವ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಮ್ಮ ಕತೆಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಧರ್ಮದ ಮೂಲಭೂತವಾದಿಗಳ ದ್ವೇಷವನ್ನು ಕಟ್ಟಿಕೊಂಡು ಹಲವಾರು ವಿವಾದಗಳಿಗೂ ಒಳಗಾಗಿದ್ದಾರೆ. ಇದು ಒಬ್ಬ ಸೃಜನಶೀಲ ಕತೆಗಾರ ಎದುರಿಸಬಹುದಾದ ಸಾಮಾನ್ಯ ಬಿಕ್ಕಟ್ಟು. ಭಾರತೀಯ ರಾಜಕೀಯ ಇತಿಹಾಸದಲ್ಲಿ ೬೦-೭೦ರ ದಶಕಗಳು ಪ್ರಗತಿಪರ ಚಿಂತನೆಗಳ ದೃಷ್ಟಿಯಿಂದ ಅನೇಕ ತಲ್ಲಣ ಮತ್ತು ಸಂಚಲನಗಳಿಗೆ ಕಾರಣವಾಗಿದ್ದವು. ದೇಶದೆಲ್ಲೆಡೆ ತುರ್ತುಪರಿಸ್ಥಿತಿ ಘೋಷಿತವಾಗಿದ್ದ ಸಂದರ್ಭದಲ್ಲಿ ಕಥೆಗಾರರಾಗಿ ಕಟ್ಪಾಡಿ ಅವರು ಈ ಎಲ್ಲ ಸಂಗತಿಗಳಿಗೂ ಎದೆ ಕೊಡಬೇಕಾಗಿತ್ತು. ಅವರು ಎಲ್ಲಾ ಧರ್ಮಗಳ ಒಳಗಿರುವ ಕೋಮುವಾದ ಮತ್ತು ಮೂಲಭೂತವಾದಗಳನ್ನು ವಿರೋಧಿಸುತ್ತಲೇ, ಮನುಷ್ಯನ ಒಳಗಿರುವ ಒಳ್ಳೆಯತನಗಳ ಮಾನವೀಯ ಮುಖಗಳನ್ನು ಅಭಿವ್ಯಕ್ತಿಸುವ ಕತೆಗಳನ್ನು ಬರೆದರು. ಅಲ್ಲದೆ ಮುಸ್ಲಿಮ್ ಸಮುದಾಯದ ಆಚರಣೆಯಲ್ಲಿರುವ ಜೀವವಿರೋಧಿ ಅಂಶಗಳನ್ನು ಕತೆಗಳಲ್ಲಿ ಬಯಲುಗೊಳಿಸಿದರು. ಮುಸ್ಲಿಮರದ್ದೂ ಒಳಗೊಂಡಂತೆ ಎಲ್ಲ ಸಮುದಾಯಗಳ ಬದುಕಿನ ಅನ್ವೇಷಣೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದರು.

ಕಟ್ಪಾಡಿ ಅವರು ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದಂತಹ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಅವರ ಪ್ರಮುಖ ಕಥಾಸಂಕಲನಗಳೆಂದರೆ –ಗೋರಿ ಕಟ್ಟಿಕೊಂಡವರು(೧೯೮೧), ನೋಂಬು(೧೯೮೮), ದಜ್ಜಾಲ (೨೦೦೧), ಅತ್ತರ್ ಹಾಜಿಕಾ ಮತ್ತು ಇತರ ಕಥೆಗಳು(೨೦೦೬), ಪಚ್ಚೆ ಕುದುರೆ(೨೦೧೨), ಕಡುವು ಮನೆ(ನೀಳ ಕಥೆಗಳು, ೨೦೧೨). ಕಾದಂಬರಿಗಳೆಂದರೆ– ಸರಕುಗಳು(೧೯೮೯) ಹಾಗೂ ಕಚ್ಚಾದ(೧೯೯೬). ಅವರ ಇತರ ಕೃತಿಗಳು ಹೀಗಿವೆ: ಕೇರಳದಲ್ಲಿ ಹದಿನೈದು ದಿನಗಳು(೧೯೮೯), ರಾಷ್ಟ್ರೀಯತೆ ಮತ್ತು ಮುಸ್ಲಿಮರು(೧೯೯೩), ಕಯ್ಯೂರಿನ ರೈತವೀರರು(೧೯೯೨), ಸೂಫಿಸಂತರು(೨೦೧೦), ಸೂಫಿ ಮಹಿಳೆಯರು (೨೦೧೦). ಕಟ್ಪಾಡಿಯವರು ಮಾಡಿರುವ ಅನುವಾದಗಳೆಂದರೆ–ಬೇರೂತಿನಿಂದ ಜರೂಸಲೇಮಿಗೆ(೨೦೧೦), ಸಾದತ್ ಹಸನ್ ಮಂಟೋರವರ 'ದೇಶವಿಭಜನೆಯ ಕಥೆಗಳು'(೨೦೧೦) ಹಾಗೂ ಇಸ್ಮತ್ ಚುಗ್ತಾಯಿ.

ಇವರ ಕತೆಗಳು ಹಿಂದಿ, ಗುಜರಾತಿ, ಮರಾಠಿ, ತಮಿಳು, ಬಂಗಾಳಿ, ಮಲಯಾಳಂ, ಇಂಗ್ಲಿಷ್, ಉರ್ದು, ಕೊಂಕಣಿ, ತೆಲುಗು ಭಾಷೆಗಳಿಗೆ ಅನುವಾದಗೊಂಡಿವೆ. 'ಕಚ್ಚಾದ' ಕಾದಂಬರಿ ಮಲಯಾಳಂ ಭಾಷೆಗೆ ಅನುವಾದ ಗೊಂಡಿದೆ(ಕದೀಸುವಿಂಡೆ ಲೋಗಂ, ಮಾತೃಭೂಮಿ ಪ್ರಕಾಶನ), 'ಸರಕುಗಳು' ಕಾದಂಬರಿ ಮರಾಠಿಗೆ ಅನುವಾದಗೊಂಡಿದೆ.

ಕಟ್ಪಾಡಿ ಅವರಿಗೆ ಸಂದ ಪ್ರಶಸ್ತಿಗಳು: ಕಥಾಪ್ರಶಸ್ತಿ ೧೯೯೧(ನೋಂಬು), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೨೦೦೧(ದಜ್ಜಾಲ); ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ೨೦೦೧; ತುಳುಶ್ರೀ ಪ್ರಶಸ್ತಿ ೨೦೦೪; ಶಿವಮೊಗ್ಗ, ಕರ್ನಾಟಕ ಸಂಘದ ಲಂಕೇಶ ಪ್ರಶಸ್ತಿ ೨೦೧೧. ಚಿಕ್ಕಮಗಳೂರಿನಲ್ಲಿ ೨೦೦೭ರಲ್ಲಿ ನಡೆದ ೪ನೇ ಅಖಿಲ ಭಾರತ ಬ್ಯಾರಿಭಾಷಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಮನ್ನಣೆಗೆ ಶ್ರೀಯುತರು ಪಾತ್ರರಾಗಿದ್ದಾರೆ.

ಅಡಿಟಿಪ್ಪಣಿ

೧. ಅಮರೇಶ ನುಗಡೋಣಿ(ಸಂ), **ನಾನೇಕೆ ಬರೆಯುತ್ತೇನೆ,** ಪು.೧೩೪

ಅಧ್ಯಾಯ ಮೂರು

ಕಟ್ಪಾಡಿಯವರ ಕತೆಗಳ ಪೂರ್ವಾಧ್ಯಯನ ಸಮೀಕ್ಷೆ

ಅಧ್ಯಾಯ ಮೂರು

ಕಟ್ಪಾಡಿಯವರ ಕತೆಗಳ ಪೂರ್ವಾಧ್ಯಯನ ಸಮೀಕ್ಷೆ

ಈ ಸಂಪ್ರಬಂಧದ ಅಧ್ಯಯನಕ್ಕೆ ಬಳಸಿಕೊಂಡ ಫಕೀರ್ ಮುಹಮ್ಮದ್ ಕಟ್ಪಾಡಿ ಅವರ ಸಾಹಿತ್ಯ ಕುರಿತು ಕನ್ನಡದಲ್ಲಿ ವಿಮರ್ಶೆ ರೂಪದಲ್ಲಿ ಅಧ್ಯಯನಗಳು ನಡೆದಿವೆ. ಕಟ್ಪಾಡಿ ಅವರ ಸಾಹಿತ್ಯವನ್ನು ಕುರಿತಂತೆ ಕೆಲವು ವಿಮರ್ಶಕರು ಕತೆಗಾರರ ಕತೆಯ ನಿರೂಪಣ ಶೈಲಿ, ನಿರೂಪಣ ಕ್ರಮ, ಕಥಾ ವಸ್ತು, ಕಥನ ತಂತ್ರ, ಚಿಂತನೆ ಮತ್ತು ಧೋರಣೆಗಳನ್ನು ವಿಮರ್ಶಾತ್ಮಕ ದೃಷ್ಟಿಕೋನದಲ್ಲಿ ವಿಶ್ಲೇಷಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ–

೧. ಕೆ.ಶರೀಫಾ ಅವರ 'ಇಸ್ಲಾಂನ ಮುಗ್ಧ ಸಂವೇದನೆಗಳು', 'ಬಂಡಾಯ ಮುಸ್ಲಿಂ ಸಂವೇದನೆ' (೨೦೦೪)

೨. ಆರ್ಕೆ, ಮಣಿಪಾಲ, 'ವಿಮರ್ಶೆಯ ಸವಾಲು'(೨೦೦೬)

೩. ಎನ್.ಕೆ.ಕೋದಂಡರಾಮ, 'ಮುಸ್ಲಿಂ ಸಂವೇದನೆ' 'ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ'(೨೦೦೮)

೪. ಮ.ನ.ಜವರಯ್ಯ, 'ದಲಿತ ಬಂಡಾಯ ಸಿದ್ಧಾಂತದ ನೆಲೆಗಳು ಹಾಗೂ ಮುಸ್ಲಿಂ ಸಂವೇದನೆ', 'ದಲಿತ ಬಂಡಾಯ ಸಾಹಿತ್ಯ ಸಿದ್ಧಾಂತದ ನೆಲೆಗಳು'(೨೦೦೮)

೫. ಎ. ಮುನಿಶಾಮಪ್ಪ, 'ದಲಿತ ಬಂಡಾಯ ಕಥಾ ಸಾಹಿತ್ಯದಲ್ಲಿ ಸಮಾಜ ಪರಿವರ್ತನೆಯ ಆಶಯ', 'ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ'(೨೦೦೯)

೬. ಕರೀಗೌಡ ಬೀಚನಹಳ್ಳಿ, 'ಮುಸ್ಲಿಂ ಸಂವೇದನೆ', 'ಶತಮಾನಗಳ ಸಣ್ಣಕತೆಗಳ ಸಮೀಕ್ಷೆ' (೨೦೧೧)

೭. ಟಿ.ಪಿ.ಅಶೋಕ, ಫಕೀರ್ ಮಹಮ್ಮದ್ ಕಟ್ಪಾಡಿ ಅವರ 'ಪಚ್ಚಕುದುರೆ' ಮತ್ತು 'ನೋಂಬು' ಕತೆಗಳ ವಿಶ್ಲೇಷಣೆ, ಕಥನಪ್ರೀತಿ (೨೦೧೩)

ಈ ಮೇಲ್ಕಾಣಿಸಿದ ವಿಮರ್ಶಕರು ತಮ್ಮ ವಿಮರ್ಶನ ಲೇಖನ ಹಾಗೂ ಕೃತಿಗಳಲ್ಲಿ ಕಟ್ಪಾಡಿ ಅವರ ಕಥಾಸಾಹಿತ್ಯವನ್ನು ಕುರಿತು ಚಿಂತನೆ ನಡೆಸಿದ್ದಾರೆ.

ಮೊದಲನೆಯದಾಗಿ–ಕೆ.ಶರೀಫಾ ಅವರು 'ಇಸ್ಲಾಂನ ಮುಗ್ಧ ಸಂವೇಧನೆಗಳು' ಎಂಬ ಲೇಖನದಲ್ಲಿ ಕಟ್ಪಾಡಿ ಅವರ ಸಾಹಿತ್ಯ ಕುರಿತಂತೆ ವ್ಯಕ್ತಪಡಿಸಿರುವ ಮುಖ್ಯ ಗ್ರಹಿಕೆಗಳು ಈ ಕೆಳಗಿನಂತಿವೆ:

* ಕಟ್ಪಾಡಿಯವರ ಕತೆಗಳಲ್ಲಿ ಮುಗ್ಧ ಮುಸ್ಲಿಮರ ಸಂವೇದನೆಗಳು ಯಾವ ಕೃತ್ರಿಮತೆಯೂ ಇಲ್ಲದೇ ಅತ್ಯಂತ ಸಾಚಾ ಅನುಭವಗಳಾಗಿ ವ್ಯಕ್ತವಾಗುತ್ತವೆ.
* ಇವರ ಕೃತಿಗಳಲ್ಲಿ ಮಾನವೀಯ ಅಂತಃಕರಣದ ತುಡಿತ ಮಿಡಿಯುತ್ತಿರುತ್ತದೆ.
* ಕಟ್ಪಾಡಿಯವರ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆಗಳು ಅತ್ಯಂತ ಸರಳ, ಸಹಜವಾಗಿ ಹೃದಯ ತಟ್ಟುವ ಶಕ್ತಿ ಹೊಂದಿವೆ.
* ಕಟ್ಪಾಡಿಯವರ ಕತೆಗಳಲ್ಲಿ ಕೇರಳದ ಲೇಖಕ ವೈಕಂ ಮಹಮ್ಮದ್ ಬಶೀರ್‌ರಂತೆ ಮುಸ್ಲಿಂ ಅನುಭವಗಳು ನಿರುದ್ವಿಗ್ನವಾಗಿ ವ್ಯಕ್ತವಾಗುತ್ತವೆ.
* ಮುಸ್ಲಿಮೇತರರು ಸಹ ಮುಸ್ಲಿಂ ಸಮಾಜಕ್ಕೆ ಆಪ್ತವಾಗುತ್ತಾ ಅನನ್ಯ ಬಾಂಧವ್ಯ ಬೆಸೆಯುವಂತೆ ಮಾಡುವ ಕತೆಗಾರಿಕೆ ಕಟ್ಪಾಡಿ ಅವರಿಗೆ ಪ್ರಾಪ್ತವಾಗಿದೆ.
* ಇಸ್ಲಾಮಿನ ಬಗ್ಗೆ ಜನಜನಿತವಾಗಿರುವ ಅನೇಕ ಗುಮಾನಿಗಳನ್ನು ನಿವಾರಿಸುವ ಶಕ್ತಿ ಇವರ ಸಾಹಿತ್ಯದಲ್ಲಿದೆ.
* ಸೌಹಾರ್ದ ಸಂಸ್ಕೃತಿಯಿಂದ ಬೆಳೆದುಬಂದ ಕಟ್ಪಾಡಿಯವರು ಕಟ್ಟಬಯಸಿರುವ ಸಮಾಜಕ್ಕೆ ಜಾತಿ ಗೋಡೆಗಳು ಅಡ್ಡ ಬರುವುದಿಲ್ಲ.
* ಕಟ್ಪಾಡಿ ಕತೆಗಳು ಚಿತ್ರಿಸುವ ಸಂಸ್ಕೃತಿಯು ಇಸ್ಲಾಮೇತರ ಸಂಸ್ಕೃತಿ ಗಳೊಂದಿಗೆ ಕೊಡುಕೊಳೆ ಮಾಡುತ್ತ ಅನೇಕತೆಯಲ್ಲಿ ಏಕತೆಯನ್ನು ಸಾಧಿಸುತ್ತದೆ.
* ಕಟ್ಪಾಡಿಯವರ ಕತೆಗಳು ಕಟ್ಟು ಕತೆಗಳಲ್ಲ. ಅವು ಬದುಕಿನ ವಾಸ್ತವ ಸತ್ಯಗಳಾಗಿ ಅಭಿವ್ಯಕ್ತಿಗೊಂಡಿವೆ.

ಮೇಲ್ಕಾಣಿಸಿದ ಗ್ರಹಿಕೆಗಳಲ್ಲಿ ಶರೀಫಾ ಅವರು ಕಟ್ಪಾಡಿ ಅವರನ್ನು ಆಳದಲ್ಲಿ ಮೆಚ್ಚಿಕೊಂಡಂತೆ ಕಾಣುತ್ತದೆ. ಈ ಮೆಚ್ಚುಗೆ ಇರುವ ಕಾರಣಕ್ಕಾಗಿಯೇ ಎಲ್ಲಿಯೂ ಅವರ ಕತೆಗಳ ಬಗ್ಗೆ ಭಿನ್ನಮತಗಳು ಅವರಲ್ಲಿ ಕಂಡುಬರುವುದಿಲ್ಲ. ಕಟ್ಪಾಡಿ ಅವರ ಕತೆಗಳಲ್ಲಿ ಮುಸ್ಲಿಂ ಅನುಭವಗಳು ಸಮರ್ಥವಾಗಿ ಮಾನವೀಯ ಧೋರಣೆಯಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಶರೀಫಾರು ಒಪ್ಪಿದಂತಿದೆ. ಮುಖ್ಯ ಸಂಗತಿಯೆಂದರೆ, ಅವರು ಕಟ್ಪಾಡಿ ಅವರನ್ನು ಕೇರಳದ ವೈಕಂ ಅವರಿಗೆ ಹೋಲಿಸಿರುವುದು. ಈ ಹೋಲಿಕೆ ಅರ್ಥಪೂರ್ಣವಾಗಿದೆ. ಏಕೆಂದರೆ ವೈಕಂ ಕೂಡ ಮುಸ್ಲಿಂ ಸಮುದಾಯದ ಅನುಭವ ಲೋಕದಿಂದ ತಮ್ಮ ಸಾಹಿತ್ಯವನ್ನು ಸೃಷ್ಟಿ ಮಾಡಿದವರು ಮತ್ತು ಈ ಅನುಭವ

ಲೋಕವು ಸಮಾಜದ ಎಲ್ಲ ಮಾನವರ ಕತೆಯಾಗಿ ವಿಸ್ತರಣೆ ಪಡೆಯುವಂತೆ ಬರೆದವರು. ಕಟ್ಪಾಡಿ ಅವರ ಕಥನ ಶೈಲಿಯ ನಿರುದ್ವಿಗ್ನತೆ ಕೂಡ ವೈಕಂ ಅವರ ಪ್ರಭಾವದಿಂದ ಬಂದಿದ್ದು. ಕನ್ನಡದಲ್ಲಿ ಈ ನಿರುದ್ವಿಗ್ನತೆಯನ್ನು ದೇವನೂರ ಮಹಾದೇವರಲ್ಲಿ ಕಾಣಬಹುದು. ಕಟ್ಪಾಡಿ ಅವರು ಕಟ್ಟಬಯಸಿದ ಸಮಾಜಕ್ಕೆ, ಜಾತಿಗೋಡೆಗಳು ಅಡ್ಡ ಬರುವುದಿಲ್ಲ ಎಂದಿದ್ದಾರೆ. ಇದಕ್ಕೆ ಕಟ್ಪಾಡಿಯವರ 'ತುಷ್ಟೀಕರಣ' ಕತೆ ಉತ್ತಮ ಉದಾಹರಣೆಯಾಗಿದೆ. ಶರೀಫ ಅವರ ಅಭಿಪ್ರಾಯವನ್ನು ಚರ್ಚೆಗೆ ಒಳಪಡಿಸಿ ನೋಡುವುದಾದರೆ, ಕಟ್ಪಾಡಿ ಅವರ ಕತೆಗಳಲ್ಲಿ ಜಾತಿಸಮಸ್ಯೆಯ ಪ್ರಶ್ನೆಗಳು ಬರುವುದಿಲ್ಲ. ಬದಲಿಗೆ ಧರ್ಮದ ಸಮಸ್ಯೆಗಳು ಬರುತ್ತವೆ. ಆದರೆ ಮತಧರ್ಮಗಳು ತಮ್ಮ ಎಲ್ಲೆಯನ್ನು ಮೀರುವುದನ್ನು ಅವರು ಚಿತ್ರಿಸುವರು. ಉದಾಹರಣೆಗೆ 'ಹತ್ಯೆ' ಕತೆಯಲ್ಲಿ ಮುಗ್ಧ ಮಕ್ಕಳು ಧರ್ಮಭೇದ ಎಣಿಸದೇ ಪರಸ್ಪರ ಬೆರೆಯುವುದರ ಮೂಲಕ ಧರ್ಮಗಳಾಚೆಗಿನ ಮಾನವ ಸಂಬಂಧ ಸೃಷ್ಟಿಸುವರು. ಆದರೆ ಅದೇ ಕತೆಯಲ್ಲಿನ ಹಿರಿಯ ತಲೆಮಾರಿನ ಪಾತ್ರಗಳಲ್ಲಿ ಧರ್ಮಭೇದದ ಬೇರುಗಳು ವಿಸ್ತಾರವಾಗಿ ಹರಡಿಕೊಂಡು, ಮನುಷ್ಯ ಸಹಜ ಸಂಬಂಧಗಳಲ್ಲಿ ಬಿರುಕನ್ನು ತಂದಿರುತ್ತದೆ. ಇದು ಮಕ್ಕಳ ಮನಸ್ಸಿನಲ್ಲಿಯೂ ಮತೀಯ ಭೇದದ ಬೀಜವನ್ನು ಬಿತ್ತುವ ಕೆಲಸವನ್ನು ಮಾಡುತ್ತದೆ.

ಶರೀಫಾ ಅವರು ಕಟ್ಪಾಡಿ ಅವರ ಮೂರನೇ ಕಥಾಸಂಕಲನವಾದ 'ದಜ್ಜಾಲ'ದಲ್ಲಿ ಕಟ್ಪಾಡಿ ಅವರ ಹೊಸ ಬೆಳವಣಿಗೆಯ ಘಟ್ಟವನ್ನು ಗುರುತಿಸಿದ್ದಾರೆ. "ಈ ಕತೆಗಳು ನನಗೆ ಅತ್ಯಂತ ಆತ್ಮೀಯವಾದವು. ನನ್ನ ಕಣ್ಣ ಮುಂದೆ ನಡೆದ ಘಟನೆಗಳಿಂದ ನೊಂದ ಸಂದರ್ಭದಲ್ಲಿ ಈ ಕತೆಗಳು ಸಾಂತ್ವನ ನೀಡಿದ ಸಂಗಾತಿಗಳು"(ಪು-೨೫) ಎಂದು ಸ್ವತಃ ಕಟ್ಪಾಡಿಯವರು ಹೇಳಿಕೊಂಡಿದ್ದಾರೆ. ಹಾಗಾಗಿ ಕಟ್ಪಾಡಿ ಅವರ ಕತೆಗಳು ಕಟ್ಟುಕತೆಗಳಲ್ಲ ಅವುಗಳು ವಾಸ್ತವ ಸತ್ಯಗಳೆಂದು ಶರೀಫಾ ಅವರು ಗುರುತಿಸಿದ್ದಾರೆ. ಆದರೆ ಈ ಅಭಿಪ್ರಾಯವನ್ನು ಒಪ್ಪುವುದು ಕಷ್ಟವಾಗುತ್ತದೆ. ಪ್ರತಿಯೊಬ್ಬ ಸೃಜನಶೀಲ ಲೇಖಕರ ಮೇಲೆ ಪ್ರಾದೇಶಿಕತೆಯ ಪ್ರಭಾವವಿರುತ್ತದೆ. ಆದರೆ ಅದೇ ಬಹುಮುಖ್ಯವಾಗುವುದಿಲ್ಲ. ಶರೀಫಾ ಅವರು ಕಟ್ಪಾಡಿ ಅವರ ಕತೆಗಳೂ ನೈಜವಾದ ಘಟನೆಗಳು, ವಾಸ್ತವವಾದವುಗಳು ಎಂಬುದನ್ನು ಒಪ್ಪಿಕೊಂಡಂತಿದೆ. ಆದರೆ ಯಾವುದೇ ಸೃಜನಶೀಲ ಸಾಹಿತ್ಯವು ವಾಸ್ತವ ಘಟನೆಯಾದರೂ ಅದನ್ನು ಭಾಷಿಕ ನಿರೂಪಣೆಯಲ್ಲಿ ಮರುಹುಟ್ಟು ಪಡೆದಾಗ ಅದು ಲೇಖಕರ ಕಲ್ಪನೆಯನ್ನು ಒಳಗೊಂಡು ವಿವಿಧ ಆಯಾಮಗಳನ್ನು ಪಡೆಯುತ್ತದೆ. ಆಗ ಅದರ ಮೂಲರೂಪವು ಬದಲಾಗಿ ಅದೊಂದು ಸೃಜನಶೀಲ ಸಾಹಿತ್ಯ ಕೃತಿಯಾಗಿ ರೂಪುಗೊಳ್ಳುತ್ತದೆ. ದಲಿತ ಸಂವೇದನೆ, ಮುಸ್ಲಿಂ ಸಂವೇದನೆ ಮತ್ತು ಮಹಿಳಾ ಸಂವೇದನೆಯನ್ನು ಒಳಗೊಂಡ ಕತೆಗಳಲ್ಲಿ ವಸ್ತು ನೈಜ ಅಥವಾ ವಾಸ್ತವದಂತೆ ಕಂಡರೂ, ಅವು ಭಾಷಿಕ ನಿರೂಪಣೆಯಿಂದ ಸೃಜನಶೀಲತೆಯುಳ್ಳ ಕೃತಿಗಳಾಗಿ ರೂಪಾಂತರ ಪಡೆಯುತ್ತವೆ.

'ಕೋಮುವಾದಿ ಧೋರಣೆಗಳಿಂದ ಆತಂಕಗೊಂಡ ತಳಮಳಗೊಂಡ ಜನತೆಗೆ ಕಾಡಿನ ಬೆಂಕಿ ನಂದಿಸಲು ಸುರಿದ ಮಳೆ ಹನಿಗಳಂತೆ ಕಟ್ಪಾಡಿ ಅವರ ಕತೆಗಳು' ಎಂದು ಶರೀಫಾ ವರ್ಣಿಸುತ್ತಾರೆ. ಇಲ್ಲಿ 'ಬೆಂಕಿ–ನೀರಿನ' ಉಪಮೆಯನ್ನು ಬಳಸಿರುವುದು ಅರ್ಥಪೂರ್ಣವಾಗಿದೆ. ಇದಕ್ಕೆ ಪೂರಕವಾದ ತಲ್ಲಣಗಳು ಕಟ್ಪಾಡಿಯವರ 'ಕೋಮು' ಕತೆಯಲ್ಲಿ ದಾಖಲಾಗಿವೆ. ಕನ್ನಡ ಸಾಹಿತ್ಯದಲ್ಲಿ ಇಂತಹ ಬದುಕುಗಳನ್ನು ಸಾಂಸ್ಕೃತಿಕವಾಗಿ ದಾಖಲಿಸಿದ ಮತ್ತು ಎರಡು ಸಮಾಜದ ನಡುವಿನ ಸಂಶಯ, ಬಿರುಕುಗಳನ್ನು ಮುಚ್ಚುವ ಪ್ರಯತ್ನ ಮಾಡಿ ಕಟ್ಪಾಡಿ ಕಥನದ ಬಗ್ಗೆ ಶರೀಫಾ ಅವರು ಮೆಚ್ಚುಕೊಂಡಿದ್ದಾರೆ. ಶರೀಫಾರ ಈ ಲೇಖನದಲ್ಲಿ ಕಟ್ಪಾಡಿ ಅವರ ಕತೆಗಳ ರಚನೆ, ತಂತ್ರ, ನಿರೂಪಣ ಕ್ರಮಗಳಿಗೆ ಹೆಚ್ಚಿನ ಒತ್ತು ಇದೆ. ಈ ಮೂಲಕ ಸ್ತ್ರೀಪರ ಕಾಳಜಿಯ ಗೈರುಹಾಜರಿಯು ಸಹ ಎದ್ದು ತೋರುತ್ತದೆ.

ಎರಡನೆಯದಾಗಿ–ಆರ್ಕೆ ಮಣಿಪಾಲ ಅವರು 'ವಿಮರ್ಶೆಯ ಸವಾಲು' ಎಂಬ ಕೃತಿಯಲ್ಲಿ ಕಟ್ಪಾಡಿ ಅವರ ಕತೆಗಳನ್ನು ಕುರಿತಂತೆ ಪ್ರಕಟಿಸಿರುವ ಗ್ರಹಿಕೆಗಳು ಈ ಕೆಳಗಿನಂತಿವೆ.

* ಕಟ್ಪಾಡಿಯವರ ಕತೆಗಳಲ್ಲಿ ತನ್ನ ವರ್ಗದ ಸಾಮಾಜಿಕ ಲೋಪದೋಷಗಳು ಅಭಿವ್ಯಕ್ತಗೊಂಡಿವೆ.
* 'ಒಂದು ಹಗಲು ಒಂದು ರಾತ್ರಿ' ಕತೆಯ ನಾಯಕಿ ಜಡ್ಡುಗಟ್ಟಿದ ಮುಸಲ್ಮಾನ ಸಂಪ್ರದಾಯವನ್ನು ಧಿಕ್ಕರಿಸಿರುವುದರ ಬಗ್ಗೆ ವಿಮರ್ಶಕರಿಗೆ ಸಹಮತವಿದೆ.
* 'ಅಕ್ಕನ ಮದುವೆ ಮತ್ತು ಆಡು' ಕತೆಯಲ್ಲಿ ಹುಡುಗನೊಬ್ಬನ ಸಂವೇದನೆ ಪರಿಣಾಮಕಾರಿಯಾಗಿ ವ್ಯಕ್ತಗೊಂಡಿದೆ ಮತ್ತು ಆಡು ಬಲಿಯಾಗುವುದು ಹೆಣ್ಣಿನ ಬಲಿಗೆ ಸಾಂಕೇತಿಕವಾಗಿದೆ.
* ಕಟ್ಪಾಡಿ ಅವರ ಕತೆಗಳಲ್ಲಿ ಪೋಸು ಭಾಷಣಗಳಿಲ್ಲದೆ ನಯವಾಗಿ ಅನುಭವಗಳನ್ನು ವ್ಯಕ್ತಮಾಡುವ ಗುಣವಿದೆ.
* ಬಂಡಾಯದ ಸಂದರ್ಭದಲ್ಲಿ ಬಂದ ಕತೆಯಾಗಿ 'ನೋಂಬು' ಮಹತ್ವಪೂರ್ಣತೆಯನ್ನು ಪಡೆದಿದೆ.
* 'ನೋಂಬು' 'ಮುಸುಕು' ಮತ್ತು 'ಅಪ್ಪ' ಮುಂತಾದ ಕತೆಗಳ ಸಂವೇದನೆಯ ಕೇಂದ್ರ ಮುಗ್ಧ ಮಕ್ಕಳ ಮೂಲಕ ಪ್ರಕಟಗೊಂಡಿದೆ. .
* ಕಟ್ಪಾಡಿ ಅವರ ಕತೆಗಳಲ್ಲಿ ಹೆಣ್ಣಿನ ಶೋಷಣೆ ತೀವ್ರವಾಗಿ ಚಿತ್ರಿತವಾಗಿದೆ.
* ಮುಸ್ಲಿಮರಲ್ಲಿರುವ ಸಂಪ್ರದಾಯ ಜಡತೆ ಮತ್ತು ನಿರಕ್ಷರತೆಯ ಜೊತೆಗೆ ಪುರುಷ ಪ್ರಧಾನ ದಬ್ಬಾಳಿಕೆ ಇವರ ಕಥೆಗಳಲ್ಲಿ ವ್ಯಕ್ತವಾಗಿದೆ.

ಮೇಲಿನ ಗ್ರಹಿಕೆಗಳಲ್ಲಿ ಆರ್ಕೆಯವರು ಕಟ್ಪಾಡಿ ಅವರ ಕತೆಗಳಲ್ಲಿ ಪ್ರಕಟವಾಗಿರುವ ಜೀವನ ಧೋರಣೆಗಳಿಗೆ ಸಹಮತ ಸೂಚಿಸಿರುವಂತಿದೆ. 'ಒಂದು ಹಗಲು ಒಂದು ರಾತ್ರಿ' ಕತೆಯ

ನಾಯಕಿ ಒಂದು ದಿನದ ಮಟ್ಟಿಗೆ ತನ್ನ ಜೊತೆಗಿರಲು ಬಂದ ಮನೆಯ ಆಳಿನೊಡನೆ ಜೀವನವಿಡೀ ಬದುಕಲು ಬಯಸಿ, ಆ ಆಳಿಗೆ ಸ್ವತಃ ಧೈರ್ಯವನ್ನೂ ತುಂಬುತ್ತಾಳೆ. ಸ್ಥಾಪಿತವಾದ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಮಹಿಳೆಯ ಸಾಹಸವು ಕಟ್ಪಾಡಿ ಅವರ ಕತೆಯಲ್ಲಿ ವಿಶಿಷ್ಟವಾಗಿ ಮೂಡಿ ಬಂದಿದೆ. ಈ ಕತೆಯನ್ನು ನೋಡುವಾಗ ಸಾರಾ ಅವರ 'ಚಂದ್ರಗಿರಿ ತೀರದಲ್ಲಿ' ಕಾದಂಬರಿ ನೆನಪಾಗುತ್ತದೆ. ಕಥಾ ನಾಯಕಿ ನಾದಿರಾ ವ್ಯವಸ್ಥೆಯ ವಿರುದ್ಧ ಮಸೀದಿಯ ತೊಟ್ಟಿಗೇ ಬಿದ್ದು ಪ್ರಾಣ ಕಳೆದುಕೊಳ್ಳುವ ಮೂಲಕ ಪ್ರತಿಭಟನೆ ವ್ಯಕ್ತಪಡಿಸಿದರೆ, ಕಟ್ಪಾಡಿ ಅವರ 'ಒಂದು ಹಗಲು ಒಂದು ರಾತ್ರಿ' ಕತೆಯಲ್ಲಿ ಮನೆಯ ಆಳನ್ನೇ ಜೀವನ ಸಂಗತಿಯಾಗಿ ಸ್ವೀಕರಿಸುವ ನಿರ್ಧಾರಕ್ಕೆ ಬರುವ ನಾಯಕಿ ಪಾತ್ರವು ವಿಶಿಷ್ಟವಾಗಿ ಮೂಡಿ ಬಂದಿದೆ. 'ಅಕ್ಕನ ಮದುವೆ ಮತ್ತು ಆಡು' ಎಂಬ ಕತೆಯಲ್ಲಿ ಮದುವೆಯ ಮೇಜವಾನಿಗಾಗಿ ಕಟ್ಟಿಹಾಕಿದ ಆಡು ಪದೇ ಪದೇ ತಪ್ಪಿಸಿಕೊಳ್ಳುವುದು ಹಾಗೂ ತಂಗಿಯನ್ನು ವರನಿಗೆ ತೋರಿಸಿ ಅಕ್ಕ ಮದುವೆಯಾಗಬೇಕಾಗಿ ಬಂದಾಗ ಆಕೆಯ ಚಡಪಡಿಕೆ ಇವು ಸಮಾನಾಂತರ ಘಟನೆಗಳಾಗಿದ್ದು ಕೊನೆಯಲ್ಲಿ ಆಡು ಬಲಿಯಾಗುವುದು ಹೆಣ್ಣಿನ ಬಲಿಗೆ ಒಂದು ಸಹಜವಾದ ಸಂಕೇತವಾಗುವುದು'(ಪು.೨೫) 'ಸಾವಿರ ಸುಳ್ಳನ್ನು ಹೇಳಿ ಒಂದು ಮದುವೆ ಮಾಡಿ' ಎಂಬ ಗಾದೆ ಮಾತಿನಂತೆ ಇಲ್ಲಿ ತಂದೆ ತಾಯಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವುದಕ್ಕಾಗಿ ತಂಗಿಯನ್ನು ವರನಿಗೆ ತೋರಿಸಿ ಅಕ್ಕನನ್ನು ಮದುವೆ ಮಾಡಲು ಮುಂದಾಗುತ್ತಾರೆ. ಆಕೆಗೆ ಆಗುವ ಮನದ ನೋವು ತಳಮಳವನ್ನು, ಆಡು ಬಲಿಯಾಗವುದನ್ನು ಹೆಣ್ಣಿನ ಬಲಿಗೆ ಒಂದು ಸಹಜವಾದ ಸಂಕೇತವಾಗುವಾಗುವುದು. ಕಟ್ಪಾಡಿ ಅವರ ಈ ಕಥನವು ವಿಶಿಷ್ಟವಾದದ್ದು ಎಂದು ಆರ್ಕೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಅಪ್ಪ', 'ನೋಂಬು', 'ಮುಸುಕು' ಮತ್ತು 'ಅಕ್ಕನ ಮದುವೆ ಮತ್ತು ಆಡು' ಈ ಕತೆಗಳಲ್ಲಿ ಸಂವೇದನಾ ಕೇಂದ್ರ ಮುಗ್ಧ ಮಕ್ಕಳೇ ಆಗಿದ್ದಾರೆ. ಹೆಣ್ಣಿನ ಶೋಷಣೆಯ ಕವಲುಗಳು, ಸಂಪ್ರದಾಯ ಜಡತೆ, ನಿರಕ್ಷರತೆ ಹಾಗೂ ಪುರುಷಪ್ರಧಾನ ಸಮಾಜವು ಇವರ ಕತೆಗಳಲ್ಲಿ ಎಳೆಎಳೆಯಾಗಿ ಬಿಚ್ಚಿಕೊಂಡಿರುವ ಬಗೆಯಲ್ಲಿ ವಿಶಿಷ್ಟತೆಯನ್ನು ಆರ್ಕೆ ಅವರು ಕಂಡುಕೊಂಡಿದ್ದಾರೆ. ಕಟ್ಪಾಡಿ ಅವರ ಹಲವು ಕತೆಗಳಲ್ಲಿ ಈ ಲೇಖನ ಅಂಶಗಳು ಅಧಿಕವಾಗಿ ವ್ಯಕ್ತಗೊಂಡಿವೆ. ಮನಸ್ಸಿನ ಸೂಕ್ಷ್ಮ ವ್ಯಾಪಾರಗಳಲ್ಲಿ ಭಾಷೆಯು ಹಿಡಿದಿಡುವ ಕಟ್ಪಾಡಿ ಅವರ ಕತೆಗಾರಿಕೆಯ ಶೈಲಿಯನ್ನು ಆರ್ಕೆ ತೀವ್ರವಾಗಿ ಮೆಚ್ಚಿಕೊಂಡಿದ್ದಾರೆ. ಅವರು ಕಟ್ಪಾಡಿ ಅವರ ಕತೆಗಳಲ್ಲಿ ಮುಗ್ಧ ಮಕ್ಕಳಲ್ಲಿ ಸಂವೇದನೆಯನ್ನು ತೋರುವ ಕಥನ ತಂತ್ರ, ಕಥನ ಶೈಲಿ, ಕಥನ ಕ್ರಮ, ಕೃತಿಯ ಸೂಕ್ಷ್ಮತೆ ಮತ್ತು ಮಹಿಳಾಪರ ಚಿಂತನೆಯ ಬಗ್ಗೆ ಚಿಂತನೆ ಮಾಡಿದ್ದಾರೆ.

ಮೂರನೆಯದಾಗಿ–ಎನ್.ಕೆ.ಕೋದಂಡರಾಮ ಅವರು 'ಮುಸ್ಲಿಂ ಸಂವೇದನೆ' ಎಂಬ ಲೇಖನದಲ್ಲಿ ಕಟ್ಪಾಡಿ ಅವರ ಕತೆಗಳನ್ನು ಕುರಿತಂತೆ ಪ್ರಕಟಿಸಿರುವ ಗ್ರಹಿಕೆಗಳನ್ನು ಹೀಗೆ ಪಟ್ಟಿಮಾಡಬಹುದು:

* ಸೃಜನಶೀಲ ಲೇಖಕ ತನ್ನ ಆವರಣದ ಸಾಂಸ್ಕೃತಿಕ ಲೋಕವನ್ನು ಎಚ್ಚರದಿಂದ ಗಮನಿಸುವಿಕೆ ಅಭಿವ್ಯಕ್ತವಾಗುವುದು.
* 'ನೋಂಬು' ಕತೆಯ ಮೂಲಕ ಮುಸ್ಲಿಂ ಸಂಸ್ಕೃತಿಯ ಹಲವಾರು ಮೂಲಭೂತ ಘಟಕಗಳು ಪ್ರಕಟವಾಗುವುದು.
* 'ದ್ವೀಪ', 'ಕ್ರೌರ್ಯ', 'ವೈಯಕ್ತಿಕ' ಈ ಕತೆಗಳು ವೇದಿಕೆ ಮೇಲಿನ ಭಾಷಣಕಾರನ ಧಾಟಿಯಲ್ಲಿ ವ್ಯಕ್ತವಾಗುವುದು.
* ಕಟ್ಪಾಡಿ ಅವರ ಕತೆಗಳಲ್ಲಿ ಪ್ರತಿಭಟನೆಯು ಕೇವಲ ಬಂಡಾಯದ ಘಟಕವಾಗಿ ತೋರಿದೆ. ಕಟ್ಪಾಡಿ ಅವರ ಕತೆಗಳಲ್ಲಿ ಮುಸ್ಲಿಂ ಬರವಣಿಗೆ ಸಾಗಬೇಕಾದ ದಾರಿ ತೋರಿದೆ.
* 'ಅಪ್ಪ', 'ಕ್ರೌರ್ಯ' ಕತೆಗಳಲ್ಲಿ ಮಹಿಳೆಯರ ಅಸಹಾಯಕ ಸ್ಥಿತಿಯು ಅಭಿವ್ಯಕ್ತವಾಗುವುದು.
* ಹಿಂದೂ ಸಮಾಜಕ್ಕಿಂತ ಮುಸ್ಲಿಂ ಸಮಾಜದ ಹಲವಾರು ಸಂಕೀರ್ಣ ಘಟಕದ ಕ್ರೌರ್ಯದಲ್ಲಿನ ಬದುಕು ಸ್ಪಷ್ಟವಾಗುವುದು.
* ಮುಸ್ಲಿಂ ಅಲ್ಪಸಂಖ್ಯಾತ ವರ್ಗವು ಬಹುಸಂಖ್ಯಾತ ವರ್ಗಕ್ಕೆ ಪ್ರತಿಕ್ರಿಯಿಸುವಾಗ ಬಹಳ ಸೂಕ್ಷ್ಮವಾದ ವರ್ತನೆ ತೋರುವುದು.
* 'ಹತ್ಯೆ' ಕತೆಯಲ್ಲಿ ಹಿಂದೂ ಮತ್ತು ಮುಸ್ಲಿಂ ಸಂವೇದನೆಗಳು ಪರಸ್ಪರ ಬೆರೆಯುವುದನ್ನು ಸಂಭ್ರಮದಿಂದ ಕಾಣಿಸುವುದು.
* ಒಂದು ಮತೀಯ ಆವರಣದೊಳಗೆ ಸಾಂಪ್ರದಾಯಿಕ ಬದುಕು ಇರುವ ಮತ್ತು ಭವಿಷ್ಯದಲ್ಲಿ ಅದು ಇರಬೇಕಾದ ರೀತಿಗೆ ಸ್ಪಂದಿಸುವ ಚೈತನ್ಯವನ್ನು ಕಟ್ಪಾಡಿ ವರ್ಗಾಧಾರಿತ ಪರಿಕಲ್ಪನೆಯಲ್ಲಿ ಮುಖಾಮುಖಿಯಾಗಲು ಪ್ರಯತ್ನಿಸುವುದು.
* ಕನ್ನಡದ ಮುಸ್ಲಿಂ ಸಂವೇದನೆ, ಮನುಷ್ಯ ಸಂವೇದನೆಯಾಗಲು ಪ್ರಯತ್ನಿಸುವುದು.

ಮೇಲಿನ ಗ್ರಹಿಕೆಗಳಲ್ಲಿ ಕೋದಂಡರಾಮ್ ಅವರು ಕಟ್ಪಾಡಿ ಅವರ ಕತೆಗಳನ್ನು ಅಷ್ಟಾಗಿ ಇಷ್ಟಪಟ್ಟಂತೆ ತೋರುವುದಿಲ್ಲ. 'ದ್ವೀಪ', 'ಕ್ರೌರ್ಯ', 'ಮತ್ತು ವೈಯಕ್ತಿಕ' ಈ ಕತೆಗಳು ವೇದಿಕೆಯ ಮೇಲಿನ ಭಾಷಣಕಾರರ ದಾಟಿಯಲ್ಲಿ ರಚನೆಗೊಂಡಿವೆ ಎಂಬಲ್ಲಿ ಸಾಕಷ್ಟು ಕಟುವಾದ ಟೀಕೆಯಿದೆ. ಯಾವುದೇ ಒಬ್ಬ ಸೃಜನಶೀಲ ಲೇಖಕ ತನ್ನ ಸಂಸ್ಕೃತಿಯನ್ನು ಕುರಿತು ಬರೆಯುವಾಗ ಎಚ್ಚರದಿಂದ ಇರಬೇಕು: ಹಾಗೆಯೇ ತನ್ನದಲ್ಲದ ಸಂಸ್ಕೃತಿ ಕುರಿತು ಸಾಹಿತ್ಯ ರಚನೆ ಮಾಡುವಾಗಲೂ ಈ ಎಚ್ಚರ ಇರಬೇಕು ಎಂಬುದು ವಿಮರ್ಶಕರ ಅಭಿಪ್ರಾಯವಾಗಿದೆ. ಕೋದಂಡರಾಮ ಅವರು 'ನೋಂಬು' ಕತೆಯನ್ನು ಕುರಿತು ಮಾಡುವ ವಿಶ್ಲೇಷಣೆಯು ಶರೀಫಾ ಅವರ ವಿಶ್ಲೇಷಣೆಯಂತೆಯೇ ಇದೆ. ಮುಖ್ಯವಾದ ಅಂಶವೆಂದರೆ, ದೇವನೂರರ ಬರವಣಿಗೆಯ ಕಲಾತ್ಮಕ ಗುಣಗಳೆಲ್ಲವು

ಕಟ್ಪಾಡಿ ಅವರ ಬರವಣಿಗೆಯಲ್ಲಿ ಇವೆ ಎಂದು ಕೋದಂಡರಾಮ ಅವರು ಗುರುತಿಸಿರುವುದು. ದೇವನೂರರು ತಮ್ಮ ಸಮುದಾಯದಲ್ಲಿರುವ ಶೋಷಣೆಯ ಸ್ಥಿತಿಯನ್ನು ನಿರುದ್ವಿಗ್ನವಾಗಿ ನಿರೂಪಿಸುವಂತೆ, ಕಟ್ಪಾಡಿ ಅವರು ತಮ್ಮ ಸಮುದಾಯದಲ್ಲಿ ಇರುವ ದಾರುಣ ಸ್ಥಿತಿಯನ್ನು ತಣ್ಣಗೆ ಸಮರ್ಥವಾಗಿ ಚಿತ್ರಿಸಿದ್ದಾರೆ ಎಂದು ವಿಮರ್ಶಕರು ಅಭಿಪ್ರಾಯ ಪಡುವುದು ಸರಿಯಾಗಿದೆ. ಈ ನಿರ್ಲಿಪ್ತವೆನಿಸುವ ಶೈಲಿಯನ್ನು 'ಕಡಲ ತೀರದಲ್ಲಿ ಬೆಂಕಿಬಿದ್ದದ್ದು' 'ಮುಸುಕು' ಮುಂತಾದ ಕತೆಗಳಲ್ಲಿ ನೋಡಬಹುದಾಗಿದೆ. ಹಿಂದೂ ಸಮಾಜಕ್ಕಿಂತ ಮುಸ್ಲಿಂ ಸಮಾಜ ಹಲವಾರು ಸಂಕೀರ್ಣ ಘಟಕಗಳಲ್ಲಿ, ಕ್ರೌರ್ಯದಲ್ಲಿ ಬದುಕುತ್ತಿವೆ ಎಂದು ಕೋದಂಡರಾಮ ಅವರು ಹೇಳುತ್ತಾರೆ. ಅವರ ಈ ವ್ಯಾಖ್ಯಾನ ಉಚಿತವಾಗಿದೆ. ಮುಸ್ಲಿಂ ಸಮುದಾಯದಲ್ಲಿ ಮತೀಯ ಆಚರಣೆಗಳ ಮೂಲಕ ಜನರನ್ನು ಶೋಷಣೆ ಮಾಡುವುದನ್ನು ಕಟ್ಪಾಡಿ ಚಿತ್ರಿಸುವುದನ್ನು ಕೋದಂಡರಾಮ್ ಗುರುತಿಸಿದ್ದಾರೆ. ಜತೆಗೆ ಅಧಿಕಾರಸ್ಥರೆದುರು ಅಲ್ಪಸಂಖ್ಯಾತರು ಅಧೀನವಾಗಿ ವರ್ತಿಸುವುದನ್ನು ಅವರು ಗುರುತಿಸಿದ್ದಾರೆ. ವಿಮರ್ಶಕರ ಈ ಗುರುತಿಸುವಿಕೆ ಕಟ್ಪಾಡಿಯವರ 'ಕಡಲತೀರದಲ್ಲಿ ಬೆಂಕಿಬಿದ್ದದ್ದು' ಕತೆಯಲ್ಲಿ ಸ್ಪಷ್ಟವಾಗಿ ಚಿತ್ರಿತವಾಗಿದೆ. ಕಿತ್ತು ತಿನ್ನುವ ಬಡತನದಲ್ಲಿ ಮೌಲ್ವಿಗಳಿಗೆ ಅನ್ನ ಹಾಕಬೇಕಾದ, ಅನಿವಾರ್ಯ ಮತ್ತು ಅಸಹಾಯಕ ಸ್ಥಿತಿಗೆ ಬಡ ಮುಸ್ಲಿಂ ಕುಟುಂಬಗಳು ತಲುಪಿರುವುದು. ಮತಿಯ ಆಚರಣೆಗಳು ಕಡುಬಡವರ ಮೇಲೆ ಏರಿದ ಹೊರೆಯನ್ನು ಧರ್ಮದ ಹೆಸರಿನಲ್ಲಿ ನಡೆಯುವ ಅಚಾತುರ್ಯವು ಈ ಕತೆಯಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿದೆ. ಕಟ್ಪಾಡಿಯವರ ಕತೆಗಳಲ್ಲಿರುವ ಮುಸ್ಲಿಂ ಸಂವೇದನೆಯು ಒಟ್ಟು ಮನುಷ್ಯರ ಸಂವೇದನೆಯಾಗಿದೆ ಎಂಬ ಕೋದಂಡರಾಮ ಅವರ ಅಭಿಪ್ರಾಯವನ್ನು ಒಪ್ಪಬಹುದು. ಇದಕ್ಕೆ ಉತ್ತಮ ಉದಾಹರಣೆ ಎಂದರೆ 'ನೋಂಬು' ಕತೆಯ ಜಮೀಲಾಳ ಪಾತ್ರ. ಜಮೀಲಾಳು ಗಂಡನ ಹಿಂಸೆ ತಾಳಲಾರದೆ ಆತ್ಮಹತ್ಯೆಗೆ ಪ್ರಯತ್ನ ಪಡುವುದು ಇದು ಕೇವಲ ಮುಸ್ಲಿಂ ಸಮುದಾಯದಲ್ಲಿನ ಸ್ತ್ರೀಸಮಸ್ಯೆ ಅಲ್ಲ. ಇಡೀ ಸ್ತ್ರೀಕುಲದ ಸಮಸ್ಯೆಯಾಗಿ ವಿಸ್ತರಣೆ ಪಡೆಯುವುದು.

ನಾಲ್ಕನೆಯದಾಗಿ–ಮ.ನ.ಜವರಯ್ಯ ಅವರು 'ದಲಿತ ಬಂಡಾಯ ಸಿದ್ಧಾಂತದ ನೆಲೆಗಳು ಹಾಗೂ ಮುಸ್ಲಿಂ ಸಂವೇದನೆ' ಎಂಬ ಲೇಖನದಲ್ಲಿ ಕಟ್ಪಾಡಿ ಅವರ ಕತೆಗಳನ್ನು ಕುರಿತಂತೆ ಚರ್ಚಿಸಿದ್ದಾರೆ. ಅವರು ಅಲ್ಲಿ ಪ್ರಕಟಿಸಿರುವ ಮುಖ್ಯ ಗ್ರಹಿಕೆಗಳಿವು.

* ಕಟ್ಪಾಡಿ ಅವರ 'ನೋಂಬು', 'ದಜ್ಜಾಲ', 'ಸರಕುಗಳು' ಮತ್ತು 'ಕಜ್ಜಾದ' ಕೃತಿಗಳ ಕಥಾವಸ್ತುಗಳ ಹಿಂದೆ ದಿಟ್ಟತನದ ಸಂವೇದನೆಯು ಅಭಿವ್ಯಕ್ತಗೊಂಡಿದೆ.
* ಕನ್ನಡ ದಲಿತ ಬಂಡಾಯ ಕಾವ್ಯದಲ್ಲಿ ನಿರ್ಭಯದಿಂದ ಹೆಜ್ಜೆಯಿಡುತ್ತ ನಡೆಯುವುದು ಕಟ್ಪಾಡಿ ಅವರ ಬರವಣಿಗೆಯಲ್ಲಿ ಸಮಸ್ತವಾಗಿ ಪ್ರಕಟವಾಗಿದೆ.
* ಇಸ್ಲಾಂ ಧರ್ಮದ ಸತ್ಯ ಮತ್ತು ಮಿಥ್ಯಗಳನ್ನೆಲ್ಲ ಕಟ್ಪಾಡಿಯವರ ಕಥನ ತಂತ್ರ ಧ್ವನಿಸುತ್ತದೆ.

ಮ.ನ.ಜವರಯ್ಯ ಅವರು ಕಟ್ಪಾಡಿ ಅವರ ಕಥಾ ಸಾಹಿತ್ಯವನ್ನು ಬಹಳ ಮೆಚ್ಚಿಕೊಂಡಿರುವರು. ಕಟ್ಪಾಡಿ ಅವರ ಕತೆಗಳ ಕಥಾವಸ್ತುಗಳ ಹಿಂದಿನ ನಿರ್ಭಯ ಮನೋಭಾವವು ಅವರಿಗೆ ಬಹಳ ಇಷ್ಟವಾಗಿದೆ. ಕನ್ನಡ ದಲಿತ ಬಂಡಾಯ ಕಾವ್ಯಗಳಲ್ಲಿ ಇದೇ ಬಗೆಯ ನಿರ್ಭಯವನ್ನು ಅವರು ತೌಲನಿಕವಾಗಿ ನೆನೆಯತ್ತಾರೆ. ದಲಿತ ಬಂಡಾಯ ಕವಿಗಳು ತಮ್ಮತಮ್ಮ ಸಮುದಾಯದ ಅನುಭವ, ಅಲೋಚನಾ ಕ್ರಮ ಮತ್ತು ಆಶೋತ್ತರಗಳನ್ನು ತಮ್ಮ ಬರಹದಲ್ಲಿ ಬಿಂಬಿಸಿದ್ದಾರೆ. ಅದರಂತೆ ಕಟ್ಪಾಡಿ ಕತೆಗಳು ಕೂಡ ಲೇಖಕರ ಸಮುದಾಯ ಕುರಿತಂತೆ ಇರುವ ತವಕ ತಲ್ಲಣಗಳನ್ನು ಪ್ರತಿನಿಧಿಸುವ ಬಗೆಗೆ ಮ.ನ.ಜ ಅವರಿಗೆ ಮೆಚ್ಚುಗೆ ಇದೆ. ಮ.ನ.ಜ ಅವರು 'ನೋಂಬು' ಕತೆಯಲ್ಲಿ ಮುಗ್ಧ ಮಗುವಿನ ಪ್ರತಿಮೆಯಲ್ಲಿ ಸತ್ಯ ಮತ್ತು ಮಿಥ್ಯೆಗಳ ಧ್ವನಿಸುವಿಕೆಯನ್ನು ಗುರುತಿಸುತ್ತಾರೆ. ಈ ಕತೆಯಲ್ಲಿ ಪುಟ್ಟಹುಡುಗ, ಅದು ಮುಗ್ಧತೆಯ ಪ್ರತೀಕವಾಗಿದ್ದಾನೆ. ಆ ಹುಡುಗನ ಮೂಲಕ ಇಸ್ಲಾಂ ಧರ್ಮದ ಆಚರಣೆಯಲ್ಲಿನ ಸತ್ಯ ಮತ್ತು ಮಿಥ್ಯೆಗಳನ್ನು ಕತೆ ಬಯಲುಗೊಳಿಸುವುದು ಮ.ನ.ಜ ಅವರಿಗೆ ವಿಸ್ಮಯವಾಗಿದೆ. ಆದರೆ ಮನಜ ಅವರು ಕಟ್ಪಾಡಿ ಕತೆಗಳಲ್ಲಿ ಸ್ತ್ರೀಬದುಕಿನ ಚಿತ್ರಣಗಳು ಹೇಗೆ ಬಂದಿವೆ ಎಂದು ಎಲ್ಲಿಯೂ ಚರ್ಚಿಸುವುದಿಲ್ಲ. ಕತೆಗಳ ನಿರೂಪಣ ವಿಧಾನದ ಕಡೆಗೆ ಹೆಚ್ಚಿನ ಗಮನ ನೀಡುವುದರಿಂದ ಹೀಗಾಗಿರಬಹುದು.

ಐದನೆಯದಾಗಿ–ಹೊಸೂರು ಮುನಿಶಾಮಪ್ಪ ಅವರು 'ದಲಿತ ಬಂಡಾಯ ಸಾಹಿತ್ಯದಲ್ಲಿ ಸಮಾಜ ಪರಿವರ್ತನೆಯ ಆಶಯ' ಎಂಬ ಲೇಖನದಲ್ಲಿ ಕಟ್ಪಾಡಿ ಅವರ ಕತೆಗಳನ್ನು ಕುರಿತಂತೆ ಪ್ರಕಟಿಸಿರುವ ಮುಖ್ಯ ಗ್ರಹಿಕೆಗಳಿವು:

* ಬೋಳುವಾರು ಮಹಮ್ಮದ್ ಕುಂಞ ಮತ್ತು ಫಕೀರ್ ಮಹಮ್ಮದ್ ಕಟ್ಪಾಡಿ ಇವರಿಬ್ಬರೂ ಒಂದೇ ಸಮುದಾಯದಿಂದ ಬಂದ ಸಮಕಾಲೀನ ಲೇಖಕರಾಗಿರುವುದರಿಂದ ಇವರ ಸಾಹಿತ್ಯದ ವಸ್ತು ಮತ್ತು ಧೋರಣೆಯಲ್ಲಿ ಸಾಮ್ಯತೆ ಕಂಡುಬರುವುದು.
* ಇಸ್ಲಾಮಿಕ್ ಕಾನೂನಾದ ಷರಿಯತ್ತಿನ ಕ್ರೌರ್ಯ, ಧಾರ್ಮಿಕ ಮುಖಂಡರ ಸರ್ವಾಧಿಕಾರಿ ಪ್ರವೃತ್ತಿ, ಮುಸ್ಲಿಂ ಸಮಾಜದ ಉಳ್ಳವರ ಮತ್ತು ಇಲ್ಲದವರ ನಡುವಿನ ಅಂತರ, ಸಂಘರ್ಷ, ಬಡತನ, ಹಸಿವು, ದಾರಿದ್ರ್ಯ ಮತ್ತು ಶೋಷಣೆಗಳು ಕಟ್ಪಾಡಿ ಕಥಾಸಾಹಿತ್ಯದ ವಸ್ತುಗಳಾಗಿವೆ. ಮುಸ್ಲಿಂ ಧಾರ್ಮಿಕ ಮುಖಂಡರ ನಿರ್ದಯತೆ ಮತ್ತು ಸರ್ವಾಧಿಕಾರಿ ಧೋರಣೆಗಳು ದಿಟ್ಟವಾಗಿ ಇಲ್ಲಿ ನಿರೂಪಿತವಾಗಿವೆ.
* 'ನೋಂಬು' ಕತೆಯಲ್ಲಿ ಬಡತನದ ದಾರುಣತೆ ವ್ಯಕ್ತವಾಗುವುದು. ಅದರಲ್ಲು 'ಕಡಲತೀರದಲ್ಲಿ ಬೆಂಕಿ ಬಿದ್ದದ್ದು' ಕತೆಯಲ್ಲಿ ಬಡತನದ ಬವಣೆ ಚಿತ್ರಿತವಾಗಿದೆ.
* 'ಜುಲೇಖ', 'ಕ್ರೌರ್ಯ', ಮತ್ತು 'ಕಚ್ಚಾದ' ಕಾದಂಬರಿಯಲ್ಲಿ ಮಹಿಳಾ ಪರ ಕಾಳಜಿ ತೋರಿಬರುತ್ತದೆ.

ಮೇಲ್ಕಾಣಿಸಿದ ಗ್ರಹಿಕೆಗಳೆಲ್ಲ ಮುನಿಶಾಮಪ್ಪ ಅವರು ಕಟ್ಪಾಡಿ ಅವರ ಕಥಾಸಾಹಿತ್ಯದ ಬಗ್ಗೆ ಅಭಿಮಾನದಿಂದ ಬರೆದಿದ್ದಾರೆ. ಹೀಗಾಗಿ ಎಲ್ಲಿಯೂ ಅವರಿಗೆ ಕಟ್ಪಾಡಿಯವರ ಕತೆಗಳ ಜತೆ ಭಿನ್ನಮತಗಳು ಕಂಡುಬರುವುದಿಲ್ಲ. ಬೋಳುವಾರು ಅವರು ಮತ್ತು ಕಟ್ಪಾಡಿ ಅವರು ಸಮಕಾಲೀನರಾಗಿದ್ದು, ಅವರ ಕತೆಗಳ ನಡುವಣ ಸಾಮ್ಯತೆಯನ್ನು ಮುನಿಶಾಮಪ್ಪ ಗುರುತಿಸಿರುವುದು ಉಚಿತವಾಗಿದೆ. ಆದರೆ ವಿಮರ್ಶಕರಿಗೆ ಕಟ್ಪಾಡಿಯವರ ಕಥಾವಸ್ತುವಿನ ಕಡೆಗೆ, ಅಲ್ಲಿರುವ ಧಾರ್ಮಿಕ ಕ್ರೌರ್ಯದ ಚರ್ಚೆ ಮಾಡುವುದು ಮುಖ್ಯವಾಗಿದೆ. ಅವರ ಪ್ರಕಾರ ಕತೆಗಳ ದನಿ ಬಡವರ ಪರವಾಗಿದೆ. ಮುನಿಶಾಮಪ್ಪ ಅವರ ಪ್ರಕಾರ ಕಟ್ಪಾಡಿಯವರು ತಮ್ಮ 'ಜುಲೇಖಾ' ಮತ್ತು 'ಕ್ರೌರ್ಯ' ಕತೆಗಳಲ್ಲಿ ಮುಸ್ಲಿಂ ಸ್ತ್ರೀಶೋಷಣೆಯನ್ನು ತೀವ್ರವಾಗಿ ಚಿತ್ರಿಸಿದ್ದಾರೆ. ಪುರುಷರ ಸ್ವಾರ್ಥ ಹಾಗೂ ಮುಸ್ಲಿಂ ಸಂಪ್ರದಾಯಗಳು ಆ ಸಮಾಜದ ಮಹಿಳೆಯರನ್ನು ಶೋಷಣೆಗೆ ಒಳಪಡಿಸುವ ರೀತಿಯನ್ನು 'ಜುಲೇಖಾ' ಕತೆ ವಿವರಿಸಿದರೆ, ಮುಸ್ಲಿಮರ ಧಾರ್ಮಿಕ ಅಂಧಶ್ರದ್ಧೆ ಮತ್ತು ಷರೀಯತ್‌ಗಳು ಮುಸ್ಲಿಂ ಮಹಿಳೆಯರ ಬದುಕಿಗೆ ಹೇಗೆ ಮಾರಕವಾಗಿವೆ ಎಂಬುದನ್ನು ಕ್ರೌರ್ಯ' ಕತೆ ನಿರೂಪಿಸುತ್ತದೆ ಎಂದು ಅವರು ಹೇಳುವರು. ಅವರ ಪ್ರಕಾರ, ಕತೆಗಾರ ತನ್ನ ಸಮುದಾಯದ ಮಹಿಳಾ ಶೋಷಣೆಯನ್ನು ವಿಷಾದದಿಂದ ಚಿತ್ರಿಸುವುದರ ಹಿಂದೆ ಮಹಿಳಾ ವಿಮೋಚನೆಯ ಆಶಯವಿದೆ. ಕಟ್ಪಾಡಿ ಅವರ 'ಕಜ್ಜಾದ' ಕಾದಂಬರಿಯಲ್ಲಿ ಕಥಾ ನಾಯಕಿಯ ಸಾಹಸಿ ಮತ್ತು ಧೈರ್ಯಶಾಲಿಯನ್ನಾಗಿ ಚಿತ್ರಿಸುವುದಕ್ಕೂ ಅವರ ಕತೆಗಳಲ್ಲಿರುವ ಮಹಿಳಾಪರ ಕಾಳಜಿಗೂ ಸಂಬಂಧವಿದೆ.

ಆರನೆಯದಾಗಿ–ಕರಿಗೌಡ ಬೀಚನಹಳ್ಳಿ ಅವರು, 'ಮುಸ್ಲಿಂ ಸಂವೇದನೆ' ಎಂಬ ಲೇಖನದಲ್ಲಿ ಕಟ್ಪಾಡಿ ಅವರ ಕತೆಗಳನ್ನು ಕುರಿತಂತೆ ಪ್ರಕಟಿಸಿರುವ ಮುಖ್ಯ ಗ್ರಹಿಕೆಗಳಿವು.

* ಕಟ್ಪಾಡಿ ಕತೆಗಳಲ್ಲಿ ಕರಾವಳಿಯ ಮುಸ್ಲಿಂ ಜನರ ಬದುಕು ಬವಣೆಯು ಅಭಿವ್ಯಕ್ತಗೊಂಡಿರುವುದು. ಮುಸ್ಲಿಂ ಸಮುದಾಯದ ಆಳವಾದ ತಿಳಿವಳಿಕೆ ಇದರಿಂದ ಸಾಧ್ಯವಾಗುತ್ತದೆ. ಮುಸ್ಲಿಂ ಸಂಸ್ಕೃತಿಯ ವಿವರಗಳು ದಟ್ಟವಾಗಿ ಪ್ರಕಟವಾಗಿವೆ.
* ಕಟ್ಪಾಡಿ ಕತೆಗಳು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿವೆ. ಇಲ್ಲಿ ಪ್ರಾದೇಶಿಕತೆಯ ವಿವರಗಳು ದಟ್ಟವಾಗಿ ಪ್ರಕಟವಾಗುವುವು. ಇಲ್ಲಿ ಇಸ್ಲಾಮಿಕ್ ಸಂಸ್ಕೃತಿಯ ಪಾರಿಭಾಷಿಕ ಶಬ್ದಗಳ ಬಳಕೆ ಅಧಿಕವಾಗಿರುವುದು.
* ಶೋಷಿತಪರ ಕತೆಗಾರರ ದನಿ ಕತೆಗಳೊಳಗೆ ಅಭಿವ್ಯಕ್ತಗೊಂಡಿರುವುದು. ಕಥನ ತಂತ್ರದಲ್ಲಿ ವಿಶಿಷ್ಟತೆ ಎದ್ದುತೋರುವುದು. ಬಂಧ ಮತ್ತು ರಚನೆಯ ದೃಷ್ಟಿಯಿಂದ ಪ್ರತಿಮೆಯ ಮೂಲಕ ಕತೆ ಪ್ರಕಟವಾಗುವುದು.
* ಮಾನವ ಸಮಾಜದ ಹಲವು ಕೊಳಕುಗಳು 'ಹತ್ಯೆ' ಕತೆಯಲ್ಲಿ ಚಿತ್ರಿತವಾಗಿವೆ.

ಕರೀಗೌಡ ಬೀಚನಹಳ್ಳಿ ಅವರು ಕಟ್ಪಾಡಿ ಅವರ ಕಥೆಗಳನ್ನು ವಿಮರ್ಶಾತ್ಮಕವಾಗಿ ಚರ್ಚೆ ಮಾಡಿದ್ದಾರೆ. ಮುಸ್ಲಿಂ ಸಮುದಾಯದ ದುಗುಡ ದುಮ್ಮಾನ, ನೋವುಗಳನ್ನು ಆಳವಾಗಿ ಶೋಧಿಸಿ ನಿಜವಾದ ಮುಸ್ಲಿಂ ವಿವರಗಳನ್ನು ದಟ್ಟವಾಗಿ ಪ್ರಕಟವಾದ ಕಥನ ಕ್ರಮವನ್ನು ಕರೀಗೌಡ ಬೀಚನಹಳ್ಳಿ ಅವರು ಮೆಚ್ಚಿಕೊಂಡಿದ್ದಾರೆ. ಇಸ್ಲಾಮ್ ಧರ್ಮದ ಪಾರಿಭಾಷಿಕ ಪದಗಳ ಬಳಕೆ ಕಟ್ಪಾಡಿ ಅವರಲ್ಲಿ ಅಧಿಕವಾಗಿರುವ ಕಥನ ತಂತ್ರವನ್ನು ಕ್ರಮವಾಗಿ ಕರೀಗೌಡ ಬೀಚನಹಳ್ಳಿ ಅವರು ಗುರುತಿಸುತ್ತಾರೆ. ಮುಸ್ಲಿಂ ಸಮುದಾಯದ ಸಮಸ್ಯೆಗಳಿಗೆ ಕಟ್ಪಾಡಿ ಅವರ ಕತೆಗಳು ಅಭಿವ್ಯಕ್ತಿ ನೀಡಿದರೂ ಆ ಸಮುದಾಯದ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿರುತ್ತದೆ ಎಂಬ ಮಿತಿಯನ್ನು ಬೀಚನಹಳ್ಳಿ ಗುರುತಿಸುವುದು ವಿಶೇಷವಾಗಿದೆ. 'ನೋಂಬು' ಕತೆಯಲ್ಲಿ ಶೋಷಿತರ ಪರವಾದ ಕತೆಗಾರರ ದನಿ ಹಾಗೂ ಮುಗ್ಧ ಮಕ್ಕಳ ಮೂಲಕ ಲೋಕವನ್ನು ಗ್ರಹಿಸುವ ಕಥನತಂತ್ರದ ಬಗ್ಗೆ ಅವರಿಗೆ ಬಹಳ ಮೆಚ್ಚುಗೆಯಿದೆ. ಆದರೆ ಈ ಕತೆಯಲ್ಲಿ ಅದ್ದು ಮತ್ತು ಕಾಸಿಮ್ ಅವರ ಮನೆಯ ಪರಿಸರವೇ ಓದುಗರಿಗೆ ಬಡವ ಶ್ರೀಮಂತ ಎಂಬ ತಾರತಮ್ಯವನ್ನು ತಂದುಕೊಡುವುದನ್ನು ಅವರು ಒಪ್ಪುವುದಿಲ್ಲ. ಬಂಧ ಮತ್ತು ರಚನೆಯ ಹಿನ್ನೆಲೆಯಿಂದ ಪ್ರತಿಮೆಯ ಮೂಲಕ ಕತೆಯನ್ನು ಬೆಳೆಸುವ ಕ್ರಮ ಕಟ್ಪಾಡಿ ಅವರಿಗೆ ಸಿದ್ಧಿಸಿದೆ ಎಂಬುದನ್ನು ಬೀಚನಹಳ್ಳಿ ಅವರು ಗುರುತಿಸುತ್ತಾರೆ.

ಬೀಚನಹಳ್ಳಿ ಅವರ ವಿಮರ್ಶೆಯು ಕತೆಗಳ ತಂತ್ರದ ಕಡೆ ಹೆಚ್ಚು ಹರಿದಿದೆ. ಕಟ್ಪಾಡಿ ಅವರ ಕತೆಗಳು ಮುಸ್ಲಿಂ ಸಮುದಾಯದ ಸಮಸ್ಯೆಗಳಿಗೆ ಅಭಿವ್ಯಕ್ತಿ ನೀಡಿದರೂ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿರುತ್ತವೆ ಎಂಬ ಧೋರಣೆ ಒಪ್ಪುವುದು ಕಷ್ಟವಾಗಿದೆ. ಯಾಕೆಂದರೆ, ಕಟ್ಪಾಡಿ ಒಂದು ನಿರ್ದಿಷ್ಟ ಪ್ರದೇಶದ ಜೀವನಾನುಭವದ ಮೂಲಕ ಕತೆ ಕಟ್ಟಿದರೂ, ಅವು ಇಡೀ ಮನುಕುಲದ ಜೀವನಾನುಭವಕ್ಕೆ ವಿಸ್ತರಣೆ ಪಡೆಯುತ್ತವೆ ಎನ್ನುವುದನ್ನು ಮರೆಯುವಂತಿಲ್ಲ. ಸೃಜನಶೀಲ ಲೇಖಕರ ಮೇಲೆ ಅವರು ಹುಟ್ಟಿಬೆಳೆದ ಪರಿಸರವು ಹೆಚ್ಚಿನದಾಗಿ ಪ್ರಭಾವ ಬೀರುವುದು ಸಹಜ. ಆದರೆ ಕತೆಯ ರಚನೆಯಲ್ಲಿ ಅದೇ ಬಹುಮುಖ್ಯವಾಗಿರುವುದಿಲ್ಲ. ತಮ್ಮ ಚರ್ಚೆಯಲ್ಲಿ ಕತೆಯ ಪ್ರಾದೇಶಿಕತೆ ಮತ್ತು ಕತೆಗಾರರ ದನಿಯ ಕಡೆಗೆ ಗಮನ ಹರಿಸುವಲ್ಲಿ ಬೀಚನಹಳ್ಳಿ, ಅಲ್ಲಿರುವ ಮಹಿಳೆಯರ ಚಿತ್ರಣವನ್ನು ಕಡೆಗಣಿಸಿದಂತಿದೆ. ಜೊತೆಗೆ ಕಟ್ಪಾಡಿ ಅವರ ಕತೆಗಳ ಚಿಂತನೆಯನ್ನು ಹೇಳುವುದಕ್ಕಿಂತ ಅವರ ಕತೆಗಳ ಅಭಿವ್ಯಕ್ತಿ ಕ್ರಮದ ಕಡೆಗೆ ಹೆಚ್ಚಿನ ಒತ್ತು ನೀಡಿದ್ದರಿಂದ ಹೀಗಾಗಿರಬಹುದು.

ಏಳನೆಯದಾಗಿ–ವಿಮರ್ಶಕರಾದ ಟಿ.ಪಿ.ಅಶೋಕ ಅವರು ತಮ್ಮ 'ಕಥನಪ್ರೀತಿ' ಕೃತಿಯಲ್ಲಿ ಕಟ್ಪಾಡಿ ಅವರ 'ಪಚ್ಚಕುದುರೆ' ಮತ್ತು 'ನೋಂಬು' ಕತೆಗಳ ಕುರಿತು ವಿಶ್ಲೇಷಣೆ ಮಾಡುತ್ತಾರೆ. ಅವರ ಪ್ರಕಾರ–

* ಮುಸ್ಲಿಮರ ಬದುಕನ್ನು ಅದರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ನೆಲೆಗಳಲ್ಲಿ ಮಾತ್ರ ಪರಿಭಾವಿಸದೆ ದಿನನಿತ್ಯದ ಬದುಕಿನಲ್ಲಿ ಸಹಜವಾಗಿ ಮೂಡಿಬರುವ ಧರ್ಮಶ್ರದ್ಧೆ ಮತ್ತು ಧಾರ್ಮಿಕ ಶೋಷಣೆಗಳನ್ನು ಸ್ಪರ್ಶಿಸಬಯಸುವ ಮಹತ್ವಕಾಂಕ್ಷೆ ಕಟ್ಪಾಡಿಯವರಲ್ಲಿ ಅಭಿವ್ಯಕ್ತಗೊಂಡಿದೆ.
* ಇಸ್ಲಾಮಿ ಆಧ್ಯಾತ್ಮಿಕತೆಯ ವಿಶಾಲ ನೆಲೆಗಟ್ಟಿನಲ್ಲಿ ಸಾಮಾನ್ಯರ ಬದುಕಿನ ಸ್ವರೂಪವನ್ನು ಅದರ ಸಾಫಲ್ಯ ವೈಫಲ್ಯಗಳನ್ನು ಒರೆಗೆ ಹಚ್ಚುವ ಪ್ರಯತ್ನ ವ್ಯಕ್ತವಾಗಿದೆ. ಕಟ್ಪಾಡಿ ಕತೆಗಳಲ್ಲಿ ಧಾರ್ಮಿಕ ಶ್ರದ್ಧೆಯ ಸಾಚಾ ಮತ್ತು ತೋರಿಕೆಯ ಮುಖಗಳು ಅನಾವರಣಗೊಳ್ಳುತ್ತವೆ.
* ಬಡವ-ಬಲ್ಲಿದ ಮತ್ತು ಗಂಡು-ಹೆಣ್ಣಿನ ನಡುವಣ ಅಸಮಾನತೆಯ ಪ್ರಶ್ನೆಗಳು ಕಟ್ಪಾಡಿಯವರಲ್ಲಿ ಮರೆಮಾಚದೆ ಪ್ರಕಟವಾಗುತ್ತವೆ. ಸ್ತ್ರೀಯ ಶೋಷಣೆ ಮತ್ತು ಶ್ರಮಜೀವಿಗಳ ಬವಣೆಯ ಬದುಕನ್ನು ಕುರಿತಂತಹ ಪ್ರಶ್ನೆಗಳು ಉದ್ಭವಿಸಿವೆ.
* ಮುಸಲ್ಮಾನ ಸಮುದಾಯದ ಜೀವನ ಶೈಲಿಯನ್ನು ವರ್ಣಿಸುವುದರ ಜೊತೆಗೆ ಕತೆಗಳು ಸಾಂಸ್ಕೃತಿಕ ದಾಖಲೆಯಾಗಿ ಮೂಡಿಬಂದಿವೆ. ಒಂದು ಸಮುದಾಯದ ಧಾರ್ಮಿಕ ನಂಬಿಕೆಗಳು, ವ್ರತಾಚರಣೆಗಳು, ಪುರಾಣ-ದಂತಕತೆಗಳ ಜೊತೆಗೆ ಆ ಸಮುದಾಯವನ್ನು ಬಾಧಿಸುವ ಸಮಸ್ಯೆಗಳತ್ತಲೂ ಬೆಳಕು ಬೀರುವುದು ಇಲ್ಲಿನ ವಿಶೇಷತೆ.
* ನಿಜವಾದ ಆಸ್ತಿಕತೆಯು ಇಡೀ ಸಮುದಾಯದ ನೈತಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಬಲ್ಲದು ಎಂಬ ಶ್ರದ್ಧೆ ಇಲ್ಲಿ ಅಭಿವ್ಯಕ್ತವಾಗಿದೆ.
* 'ಪಚ್ಚಕುದುರೆ' ಕತೆಯು ಉತ್ತಮ ಪುರುಷ ನಿರೂಪಕನ ನಿರೂಪಣೆಯಲ್ಲಿ ಹಾಗೂ 'ನೋಂಬು' ಕತೆಯಲ್ಲಿ ಪ್ರಥಮ ಪುರುಷ ನಿರೂಪಣ ಕ್ರಮವು ಅಭಿವ್ಯಕ್ತಗೊಂಡಿದೆ.

ಅಶೋಕ ಅವರು ಕಟ್ಪಾಡಿಯವರ ಕತೆಗಳನ್ನು ವಿಮರ್ಶಾತ್ಮಕವಾಗಿ ನೋಡಿದ್ದಾರೆ. ಮುಸ್ಲಿಮರ ಬದುಕನ್ನು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ನೆಲೆಯಲ್ಲಿ ಮಾತ್ರ ಪರಿಭಾವಿಸದೇ ಧರ್ಮಶ್ರದ್ಧೆ ಮತ್ತು ಧಾರ್ಮಿಕ ಶೋಷಣೆಯ ಅಂಶಗಳನ್ನು ಅವರು ಗುರುತಿಸಿದ್ದಾರೆ. ಅವರ ಕತೆಗಳಲ್ಲಿರುವ ಸಾಮಾನ್ಯರ ಬದುಕಿನ ಸ್ವರೂಪವನ್ನು ಅವರ ಸಾಫಲ್ಯ ವೈಫಲ್ಯಗಳನ್ನು ಒರೆಗೆ ಹಚ್ಚಿ ನೋಡುವುದು ಅರ್ಥಪೂರ್ಣ. ಕತೆಗಳು ಧಾರ್ಮಿಕ ಶ್ರದ್ಧೆಯ ಸಾಚಾ ಮತ್ತು ತೋರಿಕೆಯ ಮುಖಗಳನ್ನು ಬಯಲುಗೊಳಿಸುವುದು ಅವರಿಗೆ ಮುಖ್ಯವೆನಿಸಿದೆ. 'ಪಚ್ಚಕುದುರೆ' ಕತೆಯ ನಾಯಕ ಮೊದಲು ಮೂಢನಂಬಿಕೆ ವಿರೋಧಿಯಾಗಿದ್ದು ನಂತರ ಅದರ ಅಡಿಯಾಳಾಗಿ ನಡೆದುಕೊಳ್ಳುವುದನ್ನು ಅಶೋಕ ಅವರು ಗುರುತಿಸಿದ್ದಾರೆ. ಒಂದು ಧರ್ಮದ ಸಂಸ್ಕೃತಿಯ ದೌರ್ಬಲ್ಯಗಳು, ವಿರೋಧಾಭಾಸಗಳು ಅಂತಿಮವಾಗಿ ಕ್ರೌರ್ಯ, ದಬ್ಬಾಳಿಕೆ, ಶೋಷಣೆಗಳಲ್ಲಿ,

ಕೆಲವೊಮ್ಮೆ ಶಾಂತಿ ಮತ್ತು ರಾಜಿಗಳ ಮೂಲಕ ಸಹ ಕೊನೆಗೊಳ್ಳಬಹುದು ಎಂದು ಅವರು ಗುರುತಿಸುತ್ತಾರೆ. 'ಎಲ್ಲರೂ ಅಲ್ಲಾಹನ ಮಕ್ಕಳೆ' ಎಂದರೂ ಲಿಂಗತಾರತಮ್ಯದ ಮೂಲಕ ಸ್ತ್ರೀಯನ್ನು ಶೋಷಣೆ ಮಾಡುವುದು ಸರಿಯೇ? ಬಡವರು ಬವಣೆಯ ಬದುಕು ಸಾಗಿಸುವುದು ಏಕೆ ಎಂಬ ಪ್ರಶ್ನೆಗಳನ್ನು ಕಟ್ಪಾಡಿ ಕತೆಗಳು ಎತ್ತುವ ಬಗೆ ಅವರಿಗೆ ಇಷ್ಟವಾಗಿದೆ.

ಈ ಮೇಲಿನ ವಿಮರ್ಶಕರ ಅಧ್ಯಯನಗಳಲ್ಲಿ ಶರೀಫಾ, ಕೋದಂಡರಾಮ, ಮ.ನ.ಜವರಯ್ಯ ಮತ್ತು ಕರಿಗೌಡ ಬೀಚನಹಳ್ಳಿ ಅವರು, ಕಟ್ಪಾಡಿ ಕಥಾ ಸಾಹಿತ್ಯದ ನಿರೂಪಣ ಕ್ರಮ, ಕಥಾವಸ್ತು, ಕಥನ ಕ್ರಮ, ಕಥನ ತಂತ್ರ, ಪ್ರಾದೇಶಿಕತೆ, ಜೀವನ ವಿಧಾನ, ಮಾನವೀಯ ಮೌಲ್ಯಗಳು, ಮತಿಯ ಆಚರಣೆ, ಮುಸ್ಲಿಂ ಸಂವೇದನೆ, ಧಾರ್ಮಿಕ ಮೌಢ್ಯ ಮತ್ತು ಕಂದಾಚಾರ ಅಂಶಗಳ ಕುರಿತು ಚರ್ಚಿಸಿದ್ದಾರೆ. ಆದರೆ ಕತೆಗಳಲ್ಲಿ ಬರುವ ಸ್ತ್ರೀಪಾತ್ರಗಳ ಬಗೆಗೆ ವಿಶೇಷ ಚರ್ಚೆ ಮಾಡುವುದಿಲ್ಲ. ಆದರೆ ಆರ್ಕೆ ಮತ್ತು ಮುನಿಶಾಮಪ್ಪ ಅವರು ಕಟ್ಪಾಡಿಯವರ ಕಥಾವಸ್ತು, ಕಥನಕ್ರಮ, ಕಥನ ಶೈಲಿಯ ಬಗ್ಗೆ ಹೆಚ್ಚಿನ ಚರ್ಚೆ ನಡೆಸುವುದರ ಜೊತೆಗೆ, ಅಲ್ಲಿರುವ ಸ್ತ್ರೀಪರ ದನಿಯನ್ನು ಎತ್ತಿ ತೋರಿಸುತ್ತಾರೆ. ಕಟ್ಪಾಡಿಯವರ ಕತೆಗಳಲ್ಲಿರುವ ಮಹಿಳಾ ವಿಮೋಚನೆಯ ಧೋರಣೆಯ ರೀತಿಯನ್ನು ಅವರು ಶ್ರದ್ಧೆಯಿಂದ ಗುರುತಿಸುತ್ತಾರೆ.

ಈ ಮೇಲ್ಕಾಣಿಸಿದ ವಿಮರ್ಶೆಗಳು ಕಟ್ಪಾಡಿ ಅವರ ಸಾಹಿತ್ಯದ ಬಗೆಗೆ ತಾಳಿರುವ ನಿಲುವುಗಳನ್ನು ಬಳಸಿಕೊಳ್ಳುತ್ತ, ಪ್ರಸ್ತುತ ಅಧ್ಯಯನ ಕೈಗೊಳ್ಳಲು ಪ್ರಯತ್ನಿಸಲಾಗಿದೆ. ಈ ಲೇಖನಗಳ ಹೇಳಿಕೆಗಳನ್ನು ಉಲ್ಲೇಖ ಮಾಡಿಕೊಂಡು ಅಧ್ಯಾಯಗಳಲ್ಲಿ ಮತ್ತಷ್ಟು ಚರ್ಚೆಯನ್ನು ಬೆಳೆಸಲು ಯತ್ನಿಸಲಾಗುವುದು. ಈ ಮೇಲಿನ ವಿಮರ್ಶಕರು ಕಟ್ಪಾಡಿ ಅವರ ಕಥಾ ಸಾಹಿತ್ಯದ ಬಗ್ಗೆ ತಳೆದಿರುವ ನಿಲುವುಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗುವುದು. ಕಟ್ಪಾಡಿ ಅವರ ಕಥೆಗಳಲ್ಲಿ ಸ್ತ್ರೀಪಾತ್ರ ಚಿತ್ರಣವೇ ಅಧ್ಯಯನದ ಮೂಲ ಉದ್ದೇಶವಾಗಿದ್ದು, ಇದು ಕಟ್ಪಾಡಿ ಕಥೆಗಳನ್ನು ಕುರಿತಂತೆ ನಡೆದಿರುವ ಚರ್ಚೆಗಳಿಗಿಂತ ಭಿನ್ನವಾಗಿದೆ.

ಅಧ್ಯಾಯ ನಾಲ್ಕು

ಕಟ್ಪಾಡಿ ಅವರ ಕತೆಗಳಲ್ಲಿ ತಾಯ್ತನದ ಪಾತ್ರಗಳ ಸ್ವರೂಪ

ಅಧ್ಯಾಯ ನಾಲ್ಕು

ಕಟ್ಪಾಡಿ ಅವರ ಕತೆಗಳಲ್ಲಿ ತಾಯ್ತನದ ಪಾತ್ರಗಳ ಸ್ವರೂಪ

೪.೧. ತಾಯ್ತನದ ತಾತ್ವಿಕ ಪರಿಕಲ್ಪನೆ

'ತಾಯಿ'ತನ ಎಂಬ ಶಬ್ದಗಳಿಂದು ತಾಯ್ತನ ಎಂಬುದು ಹುಟ್ಟಿದೆ 'ತನ' ಎನ್ನುವುದು ಗುಣ ಸೂಚಕ ವಾಗಿದೆ. ದೊಡ್ಡತನ, ಸಣ್ಣತನ ಪದಗಳಲ್ಲು ಅದು ಇದೆ. ತಾಯ್ತನಕ್ಕೆ ಸಂಸ್ಕೃತದಲ್ಲಿ ಮಾತೃತ್ವ ಎಂದು ಕರೆಯುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ತಾಯಿಯನ್ನು ಕುರಿತಂತೆ ಕಾವ್ಯ, ಕತೆ, ಕಾದಂಬರಿಗಳು ಹುಟ್ಟಿ ಬಂದಿವೆ. ಜನಪದ ಸಾಹಿತ್ಯದಲ್ಲಿಯೂ ತಾಯಿಯನ್ನು ಕುರಿತಂತೆ ಸಾಕಷ್ಟು ಗೀತೆಗಳು, ಲಾವಣಿಗಳು ಮೂಡಿಬಂದಿವೆ. 'ಬೇಂದ್ರೆ ಕಾವ್ಯದಲ್ಲಿ ತಾಯ್ತನ', 'ಕುವೆಂಪು ಕಾವ್ಯಗಳಲ್ಲಿ ತಾಯ್ತನ', 'ಕುವೆಂಪು ಕಾದಂಬರಿಗಳಲ್ಲಿ ತಾಯ್ತನದ ಸ್ವರೂಪ ಮತ್ತು 'ಜನಪದ ಸಾಹಿತ್ಯದಲ್ಲಿ ತಾಯ್ತನದ ಪರಿಕಲ್ಪನೆ' ಹೀಗೆ ಮುಂತಾದ ಶೀರ್ಷಿಕೆಯಲ್ಲಿ, ತಲೆಬರಹಗಳಲ್ಲಿ ತಾಯ್ತನದ ಬಗೆಗೆ ಕನ್ನಡದ ಲೇಖನಗಳು ಬಂದಿವೆ. ಬಹಳ ಮುಖ್ಯವಾಗಿ ಇದರಲ್ಲಿ ಎರಡು ಆಯಾಮಗಳಿವೆ.

೧. ಜೈವಿಕ ತಾಯ್ತನದ ಆಯಾಮ.

೨. ಸಾಮಾಜಿಕ ತಾಯ್ತನದ ಆಯಾಮ.

೧. ಜೈವಿಕ ತಾಯ್ತನದ ಆಯಾಮ: ಇದರಲ್ಲಿ 'ಹೆರುವ,' 'ಪೋಷಿಸುವ', ಮತ್ತು ರಕ್ಷಿಸುವ ಮೂರು ಆಯಾಮಗಳಿವೆ. ಮಕ್ಕಳನ್ನು ಹೆರುವ, ಪೋಷಿಸುವ ಮತ್ತು ರಕ್ಷಿಸುವುದು ಮನುಷ್ಯರನ್ನು ಒಳಗೊಂಡಂತೆ ಸಮಸ್ತ ಜೀವರಾಶಿಗಳಲ್ಲಿದೆ. ಮನುಷ್ಯರಂತೆಯೆ ಪ್ರಾಣಿ–ಪಕ್ಷಿಗಳು ಸಹ ತಮ್ಮ ಮರಿಗಳಿಗೆ ಹಾಲುಣಿಸುವ, ಆಹಾರವನ್ನು ತಂದು ಕೊಡುವುದರ ಜೊತೆಗೆ ಶತ್ರುಗಳಿಂದ ಹೋರಾಟ ಮಾಡಿ ರಕ್ಷಿಸುವ ಕೆಲಸ ಮಾಡುತ್ತವೆ. ಈ ಜೈವಿಕ ಆಯಾಮವು ಹುಟ್ಟಿನಿಂದ

ಬರುವ ಪ್ರವೃತ್ತಿಗೆ ಸಂಬಂಧಿಸಿದ್ದು, ಇದಕ್ಕೆ ಸಾಮಾಜಿಕ ಆಯಾಮ ಕಡಿಮೆ ಇರುತ್ತದೆ. ಏಕೆಂದರೆ ಅದಕ್ಕೆ ಕೌಟುಂಬಿಕ ಆಯಾಮ ಇರುತ್ತೆ. ಸೀಮಿತ ಆಯಾಮ ಮಾತ್ರ ಇರುತ್ತೆ.

೨. ಸಾಮಾಜಿಕ ತಾಯ್ತನದ ಆಯಾಮ: ತಾಯ್ತನದಲ್ಲಿ ಬಹಳ ಮುಖ್ಯವಾದದ್ದು ಸಾಮಾಜಿಕ ತಾಯ್ತನದ ಆಯಾಮ. ಇದರಲ್ಲಿ ಹೆರುವ ಕ್ರಿಯೆಯನ್ನು ಹೊರತುಪಡಿಸಿದಂತೆ ಪೋಷಿಸುವ (Protection) ಮತ್ತು ರಕ್ಷಿಸುವ (Nurturing) ಕ್ರಿಯೆ ಇರುತ್ತದೆ. ಆದುದರಿಂದ ಈ ಆಯಾಮ ಸಾಮಾಜಿಕ ಮಾನಸಿಕ ಮನೋಭಾವ ಮತ್ತು ಆಲೋಚನಾ ಕ್ರಮಕ್ಕೆ ಸಂಬಂಧಿಸಿರುತ್ತದೆ. ಸಾಮಾಜಿಕ ಆಯಾಮಕ್ಕೆ ವಿಶಾಲವಾದ ವ್ಯಾಪ್ತಿ ಇರುತ್ತೆ. ಈ ತಾಯ್ತನ ಮಕ್ಕಳ ಪೋಷಣೆ, ರಕ್ಷಣೆ ಎಂಬ ಸೀಮಿತ ಗಡಿಯನ್ನು ದಾಟಿ ಒಂದು ಸಮಾಜದ ಒಂದು ಸಮುದಾಯದ, ಒಂದು ದೇಶದ, ದಲಿತರು, ದಮನಿತರು ಮತ್ತು ಮಹಿಳೆಯರನ್ನು ರಕ್ಷಿಸುವ ಪೋಷಿಸುವ ಗುಣ ಇರುತ್ತದೆ. ಅಂಬೇಡ್ಕರ್ ಅವರು ಒಯ್ಯ ಚಿಂತಕರಾಗಿ, ಹೋರಾಟಗಾರರಾಗಿ ಇಡೀ ಭಾರತದ ದಲಿತರ ಬಗ್ಗೆ ಮಾಡಿದ ಹೋರಾಟಕ್ಕೆ ಸೀಮಿತವಲ್ಲದ ವಿಶಾಲ ಆಯಾಮವಿದೆ. ಸ್ವತಂತ್ರಕ್ಕಾಗಿ ಹೋರಾಟ ಮಾಡಿ ತಮ್ಮ ದೇಶವನ್ನು ರಕ್ಷಿಸಲು ಹಲವಾರು ಹೋರಾಟಗಾರರಲ್ಲಿ ತಾಯ್ತನ ಕಂಡುಬರುವುದು. ಭಾರತವನ್ನು ರಕ್ಷಿಸಲು ಗಾಂಧೀಜಿ ಬ್ರಿಟಿಷರ ವಿರುದ್ಧ ಹೋರಾಡಿದ್ದಾರೆ. ಇಲ್ಲಿ ಗಾಂಧೀಜಿಗೆ ಸ್ವಾರ್ಥ ಇಲ್ಲ. ತಮ್ಮ ದೇಶವನ್ನು ಪೋಷಿಸುವ, ರಕ್ಷಿಸುವ ಗುಣ ಕಂಡುಬರುತ್ತದೆ. ಇಲ್ಲಿ ತಾಯ್ತನದ ಆಯಾಮ ವಿಶಾಲ ನೆಲೆಯಲ್ಲಿದೆ. ಭಗತಸಿಂಗ್, ಜ್ಯೋತಿಬಾಫುಲೆ, ಇವರೆಲ್ಲ ತಮ್ಮ ದೇಶದ ರಕ್ಷಣೆಗಾಗಿ, ಹೋರಾಟ ಮಾಡಿ ಪ್ರಾಣತೆತ್ತಿದ್ದಾರೆ. ಇಲ್ಲಿಯೂ ಸಹ ವಿಶಾಲ ನೆಲೆಯ ತಾಯ್ತನ ಕಂಡುಬರುತ್ತದೆ. 'ಮದರ್ ತೆರೆಸಾ' ಅನಾಥ ಮಕ್ಕಳ ಸೇವೆಯಲ್ಲಿ ತೊಡಗಿರುವುದು ವಿಶಾಲ ನೆಲೆಯ ತಾಯ್ತನದ ಆಯಾಮ.

ಸಾಮಾಜಿಕ ತಾಯ್ತನದಲ್ಲಿ ಎರಡು ರೀತಿಯ ತಾಯ್ತನವನ್ನು ನೋಡಬಹುದು. ತಮ್ಮದೇ ಸಮುದಾಯಕ್ಕೆ, ಜನಾಂಗಕ್ಕೆ ತಾವೇ ಮಿಡಿಯುವುದು ಒಂದು ರೀತಿಯ ಸೀಮಿತ ನೆಲೆಯ ತಾಯ್ತನ, ಮಹಿಳೆಯರು ಮಹಿಳೆಯರಿಗಾಗಿ, ದಲಿತರು-ದಲಿತರಿಗಾಗಿ, ಭಾರತೀಯರು-ಭಾರತೀಯರಿಗಾಗಿ ಮಿಡಿಯುವುದು. ಹಾಗೆಯೇ ಒಂದು ದೇಶದವರು ಮತ್ತೊಂದು ದೇಶಕ್ಕೆ, ಒಂದು ಸಮುದಾಯದವರು ಮತ್ತೊಂದು ಸಮುದಾಯಕ್ಕೆ ಮಿಡಿಯುವುದು ವಿಶಾಲ ನೆಲೆಯ ತಾಯ್ತನವಾಗುತ್ತೆ ಯಾವುದೇ ದೇಶಗಳಲ್ಲಿ ಸುನಾಮಿ, ಭೂಕಂಪ ಮತ್ತು ಯುದ್ಧಗಳಿಂದ ನೊಂದ ಜನತೆಗೆ ಅನ್ಯದೇಶಗಳು ಮಿಡಿಯುವುದು ವಿಶಾಲ ನೆಲೆಯ ತಾಯ್ತನವಾಗುತ್ತದೆ. ಶಿವರಾಮಕಾರಂತರು ಅನ್ಯ ಸಮುದಾಯದಿಂದ ಬಂದವರಾಗಿದ್ದರೂ 'ಚೋಮನದುಡಿ'ಯಲ್ಲಿ ಭೂರಹಿತ ದಲಿತ ಸಂಕಷ್ಟಗಳಿಗೆ ಮಿಡಿದಿದ್ದಾರೆ.

ದೈನಂದಿನ ಬದುಕಿನಲ್ಲಿ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದ ದೈನಿಕ ಬದುಕಿನ ತಾಯ್ತನವಾಗುತ್ತದೆ. ಕೋಮುಗಲಭೆಗಳು, ಜಾತಿ ಸಂಘಷಗಳು ನಡೆಯುವಾಗ, ದೇಶ ವಿಭಜನೆ ಯಾಗುವಾಗ ತಮ್ಮ ತಮ್ಮ ಜನರನ್ನು ರಕ್ಷಿಸುವ ಉಳಿದವರನ್ನು ಶಿಕ್ಷಿಸುವ ಅಮಾನುಶ ಸಾಮಾನ್ಯವಾಗಿರುತ್ತೆ. ಆದರೆ ಇದೇ ಸಂದರ್ಭದಲ್ಲಿ ಜಾತಿ, ಧರ್ಮ, ಸಮುದಾಯವನ್ನು ಮೀರಿ ಎಲ್ಲಾ ಮನುಷ್ಯರಿಗೂ ಮಿಡಿಯುವ ಗುಣ ಕೂಡ ಇರುತ್ತದೆ. ಸಾಮಾಜಿಕ ತಾಯ್ತನ ಎಂಬುದು ಜನರಲ್ಲಿ ಮೊದಲೇ ಇರುತ್ತದೆ. ಆದರೆ ಕೆಲವು ವಿಶಿಷ್ಟ ಸಂದರ್ಭದಲ್ಲಿ ಹೆಚ್ಚು ಜಾಗೃತವಾಗಿರುತ್ತದೆ.

ಸಾಮಾಜಿಕ ಆಯಾಮದ ತಾಯ್ತನವನ್ನು ಕಡಿಮೆ ಮಾಡುವುದು ನಮ್ಮ ಜಾತಿ, ನಮ್ಮ ಧರ್ಮ, ನಮ್ಮ ದೇಶ, ನಮ್ಮ ಕುಟುಂಬಗಳ ಚೌಕಟ್ಟು ಅವು ನಮ್ಮೊಳಗೆ ಹರಡಲು ಬಿಡದಿರುವ ಸೀಮಿತ ಚೌಕಟ್ಟುಗಳು. ಆ ಸೀಮಿತ ಚೌಕಟ್ಟು ಇರುವವರು ವಿಶಿಷ್ಟ ಪ್ರಸಂಗದಲ್ಲೂ ಅದನ್ನು ಮೀರುವುದಿಲ್ಲ. ಆದರೆ ಕೆಲವರು ಸೀಮಿತ ಚೌಕಟ್ಟಿನಲ್ಲಿ ಬೆಳೆದವರು ಕೆಲವೊಮ್ಮೆ ಆ ವಿಶಿಷ್ಟ ಪ್ರಸಂಗ ಬಂದಾಗ ಆ ಚೌಕಟ್ಟನ್ನು ಮೀರುತ್ತಾರೆ. ಆ ವಿಶಿಷ್ಟ ಸನ್ನಿವೇಶಗಳೆ ಮನುಷ್ಯರಲ್ಲಿ ಸುಪ್ತವಾಗಿರುವ ಸಾಮಾಜಿಕ ತಾಯ್ತನವನ್ನು ಹೊರಬರುವಂತೆ ಮಾಡಬಲ್ಲವು.

ಜಗತ್ತು, ಸಮಾಜ ಅಥವಾ ನಾಗರಿಕತೆ ತನ್ನ ಬೆಳವಣಿಗೆ ಮತ್ತು ವಿಕಾಸದಲ್ಲಿ ಈ ರೀತಿ ಪ್ರಯೋಗ ಶೀಲತೆ ಬಳಸಿಕೊಂಡು ಬಂದಿದೆ. ಇದನ್ನು ಸಾಮಾಜಿಕ ತಾಯ್ತನ ಎನ್ನಬಹುದು. ಮನುಷ್ಯರು–ಮನುಷ್ಯರಿಗೆ ಮಿಡಿಯುವುದು ಅಷ್ಟೆ ಅಲ್ಲ ಮನುಷ್ಯರು ಪ್ರಾಣಿ, ಪಕ್ಷಿ, ಗಿಡ–ಮರಗಳಿಗೂ ಮಿಡಿಯುವುದರಲ್ಲೂ ಸಾಮಾಜಿಕ ತಾಯ್ತನ ಕಂಡುಬರುತ್ತದೆ. ಈ ಬಗೆಯ ಸಾಮಾಜಿಕ ಮತ್ತು ಜೈವಿಕ ತಾಯ್ತನದ ಬೇರೆ ಬೇರೆ ಆಯಾಮಗಳನ್ನು, ಬೇರೆ–ಬೇರೆ ರೂಪಾಂತರಗಳನ್ನು ಬೇರೆ–ಬೇರೆ ಮುಖಗಳನ್ನು ಸಾಹಿತ್ಯ ಕೃತಿಗಳು ಪ್ರಕಟಿಸುತ್ತಾ ಬಂದಿವೆ.

ಫಕೀರ್ ಮುಹಮ್ಮದ್ ಕಟ್ಪಾಡಿ ಅವರ ಕತೆಗಳಲ್ಲಿ ಹಲವಾರು ಬಗೆಯ ಪಾತ್ರಗಳು ಬರುತ್ತವೆ. ಈ ಅಧ್ಯಯನದಲ್ಲಿ ಸ್ತ್ರೀಪಾತ್ರಗಳನ್ನು ಮಾತ್ರ ಕೇಂದ್ರೀಕರಿಸಿ ಚರ್ಚೆ ಮಾಡಲಾಗಿದೆ. ಈ ಸ್ತ್ರೀಪಾತ್ರಗಳಲ್ಲಿ ಮುಖ್ಯವಾದುದು ತಾಯಂದಿರ ಪಾತ್ರಗಳು. ಅವರಲ್ಲಿ ತಾಯ್ತನದ ಗುಣಗಳು ಅನೇಕ ಬಗೆಯಲ್ಲಿ ಪ್ರಕಟವಾಗುತ್ತಿವೆ. ಹಾಗೆ ಕಂಡರೆ ತಾಯ್ತನವು ಜೈವಿಕವಾಗಿ ಮಹಿಳೆಯರಿಗೆ ಸಂಬಂಧಪಟ್ಟದ್ದಾದರೂ ಅದು ಸಾಮಾಜಿಕ ರೂಪದಲ್ಲಿಯೂ ಇರಬಹುದು.

೪.೨. ಜೈವಿಕ ತಾಯ್ತನ

ಮೇಲ್ನೋಟಕ್ಕೆ ಗೋಚರಿಸುವಂತೆ ಜೈವಿಕ ತಾಯ್ತನವು ಕರುಳಬಳ್ಳಿಗೆ ಸಂಬಂಧಿಸಿದ್ದಾಗಿದೆ. ಮಗುವಿಗೆ ಜನ್ಮ ನೀಡುವುದು ಹೆಣ್ಣಿಗೆ ಪ್ರಕೃತಿದತ್ತವೆನಿಸಿರುವ ಜೈವಿಕ ಸೃಷ್ಟಿಶೀಲತೆಯಾಗಿದೆ. ಜೈವಿಕ ತಾಯ್ತನಕ್ಕೆ ಸಂಬಂಧಿಸಿದಂತೆ ಬಡತಾಯಿ ಮತ್ತು ಶ್ರೀಮಂತ ತಾಯಿ ಪಾತ್ರ ಚಿತ್ರಣಗಳು

ಕಟ್ಪಾಡಿ ಅವರ ಕತೆಗಳಲ್ಲಿ ಕಂಡುಬರುತ್ತವೆ. ಈ ಬಡತಾಯಿ ಮತ್ತು ಶ್ರೀಮಂತ ತಾಯಿ ಇಬ್ಬರೂ ಮಕ್ಕಳ ಬಗೆಗೆ ತೋರುವ ಪ್ರೀತಿ, ವಾತ್ಸಲ್ಯ, ಮಮಕಾರ, ಕಾಳಜಿ ಅಪಾರವಾದದ್ದಾಗಿದೆ. ಇದನ್ನು ಕಟ್ಪಾಡಿಯವರು ತಮ್ಮ ಕತೆಗಳಲ್ಲಿ ಬಹಳ ಶ್ರದ್ಧೆಯಿಂದ ನಿರೂಪಿಸುತ್ತಾರೆ. ಈ ಪಾತ್ರಗಳಲ್ಲಿ ಒಂದು ವಿಶೇಷತೆಯೆಂದರೆ, ಬಡತಾಯಂದಿರಿಗೆ ಹಸಿವಿನ ಪ್ರಶ್ನೆ ಜೊತೆಗೆ ಸ್ವಾತಂತ್ರ್ಯ ಮತ್ತು ಅಸ್ತಿತ್ವದ ಪ್ರಶ್ನೆ ಕಂಡುಬರುತ್ತದೆ. ಆದರೆ ಶ್ರೀಮಂತ ತಾಯಂದಿರಲ್ಲಿ ಹಸಿವಿನ ಪ್ರಶ್ನೆ ಹೊರತುಪಡಿಸಿ ಸ್ವಾತಂತ್ರ್ಯ ಮತ್ತು ಅಸ್ತಿತ್ವದ ಪ್ರಶ್ನೆ ತಲೆದೋರುತ್ತದೆ. ಬಡತಾಯಿಯ ತಾಯ್ತನವು ಆರ್ಥಿಕ ಸಂಕಷ್ಟ ಮತ್ತು ಹಸಿವಿನ ಸಮಸ್ಯೆಯಲ್ಲಿ ಪ್ರಕಟವಾಗುತ್ತದೆ. ಈ ಇಕ್ಕಟ್ಟಿನಲ್ಲೂ ಅವರು ತಮ್ಮ ಮಕ್ಕಳ ಬಗೆಗೆ ತೋರುವ ಪ್ರೀತಿ, ಕಾಳಜಿಗೇನು ಬಡತನ ಕಂಡುಬರುವುದಿಲ್ಲ. ತಮ್ಮ ಹೊಟ್ಟೆಬಟ್ಟೆ ಕಟ್ಟಿಯಾದರೂ ಮಕ್ಕಳ ಹಸಿವು ನೀಗಿಸುವ ಮಕ್ಕಳ ಕ್ಷೇಮ ಬಯಸುವ ಹೋರಾಟಗಾರ ತಾಯಂದಿರು ಇಲ್ಲಿ ಬರುತ್ತಾರೆ. ಇಲ್ಲಿನ ಕತೆಗಳಲ್ಲಿ ಕಂಡುಬರುವ ಬಡತಾಯಿಯಂದಿರು ಸಾಮಾನ್ಯವಾಗಿ ವಿಧವೆಯರು. ಇಲ್ಲವೇ ಅವರ ಗಂಡಂದಿರು ಸಾಮಾನ್ಯವಾಗಿ ರೋಗಗ್ರಸ್ತರು. ಈ ಬಡತಾಯಿಯಂದಿರು ಯಾವುದಾದರೂ ಒಂದು ಸಂಕಷ್ಟದಲ್ಲಿ ಸಿಲುಕಿಕೊಂಡಿರುತ್ತಾರೆ. ಕುಟುಂಬ ಹೊಣೆ ಅವರ ಮೇಲಿರುತ್ತದೆ. ಆದರೆ ಶ್ರೀಮಂತ ಕುಟುಂಬದಿಂದ ಬಂದ ತಾಯಂದಿರು ಸತತವಾಗಿ ಮನೆಗೆಲಸದಲ್ಲಿ ನಿರತರಾಗಿದ್ದರೂ, ಬಡತಾಯಂದಿರ ಹಾಗೇ ತಮ್ಮ ಮಕ್ಕಳ ಮತ್ತು ಕುಟುಂಬದ ನಿರ್ವಹಣೆಯಲ್ಲಿ ತೊಡಗಿರುತ್ತಾರೆ. ಅವರಿಗೆ ತಮ್ಮ ಮಕ್ಕಳ ಬಗೆಗೆ ಅಪಾರ ಕಾಳಜಿ ವ್ಯಕ್ತವಾಗುವುದನ್ನು ಕತೆಗಳು ಧ್ವನಿಸುತ್ತವೆ. ಇಲ್ಲಿನ ಕತೆಗಳಲ್ಲಿ ಕಂಡುಬರುವ ಸಿರಿವಂತ ತಾಯಂದಿರಿಗೆ ಹಸಿವಿನ ಚಿಂತೆ ಇರದಿದ್ದರೂ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಮಾನಸಿಕವಾಗಿ ತುಂಬಾ ಬಳಲುತ್ತಾರೆ. ಮಹಿಳೆಯರಿಗೆ ಅವರ ವರ್ಗದ ನೆಲೆ ಯಾವುದೇ ಆಗಿದ್ದರೂ, ಅವರಿಗೆ ಮಹಿಳೆಯರಾಗಿರುವ ಕಾರಣದಿಂದ ಪಡುವ ಕಷ್ಟಗಳಲ್ಲಿ ಬಿಡುಗಡೆಯಿಲ್ಲ ಎಂಬ ಸತ್ಯವನ್ನು ಈ ಕತೆಗಳು ಚಿತ್ರಿಸುತ್ತವೆ.

೪.೨.೧. ಬಡತಾಯಿ ಪಾತ್ರ ಚಿತ್ರಣ: ಕಟ್ಪಾಡಿ ಅವರ ಹಲವು ಕತೆಗಳಲ್ಲಿ ಬಡತಾಯಂದಿರ ಪಾತ್ರಗಳು ಅಧಿಕವಾಗಿ ಕಂಡುಬರುತ್ತವೆ. 'ನೋಂಬು', 'ತೀರ್ಮಾನ', 'ಹತ್ಯೆ', 'ಕಡಲತೀರದಲ್ಲಿ ಬೆಂಕಿಬಿದ್ದದ್ದು', 'ಕ್ರಿಯೆ', 'ವಂತಿಗೆ', 'ಬಂದಿ', 'ಅಜ಼ರ್ ಎಂಬ ಹುಡುಗ' ಮುಂತಾದ ಕತೆಗಳಲ್ಲಿ ಬಡತಾಯಿ ಪಾತ್ರಚಿತ್ರಣಗಳ ಮೂಲಕ ಸಮಾಜದ ಬದುಕಿನ ಚಿತ್ರಣವನ್ನು ಅವರು ಕಟ್ಟಿಕೊಡುತ್ತಾರೆ. 'ಹೆತ್ತತಾಯಿ' ಕತೆ ಅದರ ಹೆಸರೇ ಸೂಚಿಸುವಂತೆ ಅಲ್ಲಿ ಬರುವ ತಾಯಿ ಹೆತ್ತವಳು. ವಾಸ್ತವವಾಗಿ ತಾಯಿಗೆ ಹೆತ್ತ ಎಂಬ ವಿಶೇಷಣ ಸೇರಿಸಲು ಇಲ್ಲಿ ಕಾರಣವಿದೆ. ಅದೇನೆಂದರೆ, ಇಲ್ಲಿ ಹೆರದೆ ಇರುವ ಒಬ್ಬ ತಾಯಿ ಬರುತ್ತಾಳೆ. ನಿಜವಾದ ಬಡ ಹೆತ್ತತಾಯಿ ಹಾಗೂ ಹೆರದೆ ತಾಯಿ ಆಗಲು ಬಯಸುವ ಸಿರಿವಂತ ತಾಯಿ ಇಬ್ಬರ ಚಿತ್ರಣ ಈ ಕತೆಯಲ್ಲಿ

ಮೂಡಿಬಂದಿದೆ. ಹೆರದೆಯೂ ಶ್ರೀಮಂತ ಮಹಿಳೆ ತಾಯಿಯಾಗುವ ಸಾಮಾಜಿಕ ವೈಚಿತ್ರವನ್ನು ಸೂಚಿಸುಲು ಕತೆಗಾರರು 'ಹೆತ್ತ ತಾಯಿ' ಎಂಬ ಶೀರ್ಷಿಕೆಯನ್ನು ಕೊಟ್ಟಿದ್ದಾರೆ. ಈ ಕತೆಯಲ್ಲಿನ ಬಡವಳಾದ ಶರೀಫಾ ವಿಧವೆಯಾಗಿದ್ದು, ಒಂದು ಮಗುವಿನ ತಾಯಿಯಾಗಿರುತ್ತಾಳೆ. ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀ ಪುರುಷನನ್ನು ಅವಲಂಬಿಸಿರುತ್ತಾಳೆ. ಅವನ ಅಧೀನದಲ್ಲೇ ರಕ್ಷಣೆ ಪಡೆಯುತ್ತಾಳೆ. ಗಂಡ ಇದ್ದರೆ ಮಾತ್ರ ಮನೆಯಲ್ಲಿ ಅಸ್ತಿತ್ವ ಇಲ್ಲದಿದ್ದರೆ ಅವರಿಗೆ ತವರೂರೆ ಗತಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಶರೀಫಾ ಗಂಡನನ್ನು ಕಳೆದುಕೊಂಡು ಅನಾಥವಾಗಿರುತ್ತಾಳೆ. ಆದರೆ ಇಲ್ಲಿ ಶರೀಫಾ ತವರು ಮನೆಯ ಅಸ್ತಿತ್ವದಿಂದಲೂ ವಂಚಿತಳಾದವಳು. ಅವಳ ಅಣ್ಣನಿಗೆ ತಂಗಿ ಮೇಲೆ ಪ್ರೀತಿ ಇದ್ದರೂ ತೀವ್ರ ಬಡತನದಲ್ಲಿದ್ದ ಕಾರಣ ಮಧ್ಯವರ್ತಿ ಶಂಸುದ್ದೀನನ ಮಾತಿಗೆ ಮರುಳಾಗುತ್ತಾನೆ. ಅಣ್ಣ ತಂಗಿಯನ್ನು ಬಲಿಪಶುವನ್ನಾಗಿಸುತ್ತಾನೆ. ಸಮಾಜದಲ್ಲಿ ಯಾವ ತಾಯಿಯೇ ಆದರೂ ತನ್ನ ಹೆತ್ತ ಮಕ್ಕಳಿಂದ ದೂರವಿರಲು ಆಗುವುದಿಲ್ಲ. ಅದೇರೀತಿಯಾಗಿ ಈ ಕತೆಯಲ್ಲಿ ಬರುವ ಶರೀಫಾಳಿಗೆ ಆ ಸ್ಥಿತಿಯು ಬರುವುದನ್ನು ಕಾಣುತ್ತೇವೆ. ಇದು ಕೇವಲ ಶರೀಫಾಳಿಗೆ ಮಾತ್ರ ಸಂಬಂಧಿಸಿರದೆ ಬಡತನದ ಸಮುದಾಯದಲ್ಲಿ ಜನಿಸಿದ ಹೆಣ್ಣಿನ ಸ್ಥಿತಿಯಾಗಿದೆ ಎಂಬುದನ್ನು ಈ ಕತೆ ಸೂಚಿಸುತ್ತದೆ.

ಕರಾರಿನ ಮದುವೆಯನ್ನು ಅರಿಯದ ಶರೀಫಾ ತನ್ನ ಹೆತ್ತ ಮಗನನ್ನು ಬಿಟ್ಟು ಹೋಗಲು ಪರಿತಪಿಸುತ್ತಾಳೆ. ಶರೀಫಾ ತನ್ನ ಅಣ್ಣನಿಗೆ 'ನಾನು ಅಲ್ಲಿಯೇ ಇರುತ್ತೇನೆ. ಹೊಟ್ಟೆಗೆ ಅನ್ನ ಸಿಗದಿದ್ದರೂ ಪರವಾಗಿಲ್ಲ. ನನ್ನ ಮಗುವನ್ನು ಬಿಟ್ಟಿರಲಾರೆ' ಎಂದು ಹೇಳುತ್ತಾಳೆ. ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ ಎಷ್ಟೇ ಬಡತನದಲ್ಲಿದ್ದರೂ ಕೂಡ ತನ್ನ ಹೆತ್ತ ಮಕ್ಕಳನ್ನು ಬಿಟ್ಟು ಹೋಗಲು ಇಷ್ಟಪಡುವುದಿಲ್ಲ. ಆ ಬಡತನದಲ್ಲಿಯೇ ಗಂಜಿ ಕುಡಿದಾದರೂ ಬದುಕಬೇಕೆಂಬ ಹಂಬಲವನ್ನು ಇಟ್ಟುಕೊಂಡಿರುತ್ತಾಳೆ. ಹೆತ್ತ ತಾಯಿಯಾದವಳು ಅನಿವಾರ್ಯ ಕಾರಣಗಳಿಂದಾಗಿ ತನ್ನ ಮಗುವಿನಿಂದ ದೂರವಾದರೂ ಅವಳ ಹೃದಯ ಪ್ರತಿ ಕ್ಷಣವೂ ಕೂಡ ತನ್ನ ಮಗುವಿಗಾಗಿ ಹಂಬಲಿಸುತ್ತಿರುತ್ತದೆ ಎಂಬುದನ್ನು ಕತೆ ಚಿತ್ರಿಸುತ್ತದೆ.

ಸಮಾಜ ಬಡಮಹಿಳೆಯನ್ನು ಎಷ್ಟು ನಿಕೃಷ್ಟವಾಗಿ ಬಳಸಿಕೊಳ್ಳುತ್ತದೆ ಎಂಬುದನ್ನು ಈ ಕತೆ ನಿರೂಪಿಸುತ್ತದೆ. ಇಲ್ಲಿ ಪುರುಷ ವ್ಯವಸ್ಥೆ ಅಷ್ಟೇ ಅಲ್ಲದೆ ಹೆಣ್ಣಿನ ಶೋಷಣೆ ಮತ್ತೊಬ್ಬ ಹೆಣ್ಣಿನಿಂದಲೇ ಆಗುವುದನ್ನು ಕತೆ ಚಿತ್ರಿಸುತ್ತದೆ. ಶರೀಫಾಳನ್ನು ಮಗು ಹೆರುವ ಯಂತ್ರವಾಗಿ ಸಿರಿವಂತರು ನೋಡುವುದು ಕಂಡುಬರುತ್ತದೆ. ಶರೀಫಾ ಗರ್ಭಿಣಿ ಎಂದು ತಿಳಿದೊಡನೆ ಆಕೆಯ ಗರ್ಭಕ್ಕೆ ಕಾರಣನಾದ ಪುರುಷನ ನಿಜವಾದ ಹೆಂಡತಿ ಶಾಕಿರಾಗೂ ಮತ್ತು ಆಕೆಯ ಗಂಡನಿಗೂ ಎಲ್ಲಿಲ್ಲದ ಸಂತೋಷ. ಆದರೆ ಶಾಕಿರಾ ಶರೀಫಾಳ ಮೇಲೆ ಗಂಡನು ಪ್ರೀತಿ ತೋರತೊಡಗಿದಾಗ ನನ್ನ ಅಸ್ತಿತ್ವಕ್ಕೆ ಎಲ್ಲಿ ಧಕ್ಕೆ ಬರುವುದೋ ಎಂದು ತಳಮಳ ಅನುಭವಿಸುವಳು. ಗಂಡುಪ್ರಧಾನವಾದ

ಕುಟುಂಬ ವ್ಯವಸ್ಥೆಯಲ್ಲಿ ಸಿಲುಕಿದ ಇಬ್ಬರೂ ತತ್ತರಿಸಿಹೋಗುತ್ತಾರೆ. ಶರೀಫಾಗೆ ಒಂಭತ್ತು ತಿಂಗಳು ತುಂಬುವಾಗ ಮನೆಯಲ್ಲಿ ಎಲ್ಲರಿಗೂ ಹುಟ್ಟುವ ಮಗು ಹೆಣ್ಣೋ ಇಲ್ಲ ಗಂಡೊ ಎಂಬ ಕುತೂಹಲ. ಆದರೆ ಶರೀಫಾಳ ಹೊಟ್ಟೆ ಬೆಳೆದಂತೆ ಆಕೆಯ ಸಮಸ್ಯೆಗಳು ಸಹ ಬೆಳೆಯುತ್ತಾ ಹೋಗುತ್ತವೆ. ಆಕೆಗೆ ಹುಟ್ಟುವ ಮಗು ಹೆಣ್ಣಾಗಿದ್ದರೆ ಆಕೆಗೆ ಅಲ್ಲಿ ಅಸ್ತಿತ್ವ ಇನ್ನೂ ಸ್ವಲ್ಪ ದಿನಗಳ ಕಾಲ ಇರುತ್ತಿತ್ತೇ? ಇಲ್ಲವೆ ಹೆಣ್ಣು ಹುಟ್ಟಿತೆಂದು ಆ ಕ್ಷಣವೇ ತನ್ನ ಗಂಡನಿಂದ ದೂರವಾಗುವ ಪರಿಸ್ಥಿತಿ ಶರೀಫಾಳಿಗೆ ಬರುತ್ತಿತ್ತೇ? ಎಂಬ ಪ್ರಶ್ನೆ ಓದುಗರಿಗೆ ಕಾಡುತ್ತವೆ. ಆದರೆ ಶರೀಫಾಳಿಗೆ ಗಂಡು ಮಗು ಜನಿಸುತ್ತದೆ. ಆಗ ಮನೆಯಲ್ಲಿ ಎಲ್ಲಿಲ್ಲದ ಸಂಭ್ರಮ. ಇಲ್ಲಿ ಗಂಡುಮಗುವಿನ ಜನನಕ್ಕೆ ನಡೆಯುವ ಸಂಭ್ರಮದ ಮೂಲಕ ಲಿಂಗತಾರತಮ್ಯ ಧೋರಣೆ ಸಮಾಜದಲ್ಲಿ ಎಷ್ಟು ಗಾಢವಾಗಿ ಬೇರೂರಿದೆ ಎಂಬುದನ್ನು ಗುರುತಿಸಬಹುದು. ಮಗು ಬೆಳೆದು ದೊಡ್ಡದಾಗುತ್ತಿದ್ದಂತೆ ಹೆರದೆ ತಾಯಿಯಾಗಲು ಬಯಸಿದ ಶ್ರೀಮಂತ ಶಾಕೀರಾ ತನ್ನ ಅಸ್ತಿತ್ವಕ್ಕೆ ಎಲ್ಲಿ ಧಕ್ಕೆ ಬರುವುದೋ ಎಂದು ಮಗುವಿನ ತಾಯಿಯಾದ ಶರೀಫಾಳನ್ನು ಮಗುವಿನಿಂದ ದೂರಮಾಡುತ್ತಾಳೆ. ಶಾಕೀರಾ ಕರಾರಿನ ಅವಧಿಯನ್ನು ಸಾಹೇಬರಿಗೆ ನೆನಪಿಸುತ್ತಾಳೆ. ಇದನ್ನು ಕೇಳಿಸಿಕೊಂಡ ಶರೀಫಾಳಿಗೆ ತನ್ನನ್ನು ಮಗುವನ್ನು ಹೆರುವ ಯಂತ್ರವಾಗಿ ಈ ಮನೆಗೆ ಕರೆತರಲಾಗಿದೆ. ಇಲ್ಲಿ ಯಾವ ರಕ್ತಸಂಬಂಧಕ್ಕೂ ಬೆಲೆ ಇಲ್ಲವೆಂದು ಮನವರಿಕೆಯಾಗುತ್ತದೆ. ಅವಳ ತಲೆಯ ಮೇಲೆ ಕಲ್ಲು ಚಪ್ಪಡಿಯಿಂದ ಯಾರೋ ಬಡಿದಂತಾಗುತ್ತದೆ. ಒಂದು ಹೆಣ್ಣಿಗೆ ಸಮಾಜದಲ್ಲಿ ತನ್ನ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಸ್ವಾತಂತ್ರ್ಯ ಕೂಡ ಇರುವುದಿಲ್ಲ ಎಂಬ ಚಿತ್ರ ಇಲ್ಲಿ ಬರುತ್ತದೆ.

ಶಾಕೀರಾ ಶರೀಫಾಳನ್ನು ಕರಾರಿನ ನಿಯಮದಂತೆ ಹೋಗಬೇಕೆಂದಾಗ ಸಾಹೇಬರು 'ನಮ್ಮ ಮಗು ತಾಯಿ ಇಲ್ಲದ ಮಗುವಿನಂತೆ ಬೆಳೆಯಬೇಕೆಂದು ನಿನ್ನ ಆಸೆ ಅಲ್ಲವೆ?' ಎಂದು ಮೊದಲ ಹೆಂಡತಿಗೆ ಕೇಳುತ್ತಾರೆ. ಆಗ ಶಾಕೀರಾ 'ನಾನೂ ಒಬ್ಬಳು ತಾಯಿ ಅಲ್ಲವೇನು?' ಎಂದು ನೋವಿನ ನಗೆ ಬೀರುತ್ತಾಳೆ. ಈ ಸನ್ನಿವೇಶವು ಸಮಾಜದಲ್ಲಿ ಹೆತ್ತ ತಾಯಿಗೆ ಇರುವಂತಹ ಸ್ಥಾನ, ಮಲತಾಯಿಗೆ ಇರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಸಮಾಜ ತನ್ನನ್ನು ಬಂಜೆಯಾಗಿ ನೋಡುವುದಿರಲಿ, ನನ್ನ ಗಂಡನೇ ಮಗುವಿಗೆ ತಾನು ತೋರಿಸುವ ಮಾತೃವಾತ್ಸಲ್ಯದ ಬಗ್ಗೆ ಅನುಮಾನಿಸುವಂತೆ ತೋರುವುದು ಶಾಕಿರಾಗೆ ನೋವು ತರುತ್ತದೆ. ಆಗ ಆಕೆ 'ಅವಳಿಗೆ ಇನ್ನೊಂದು ಮಗುವಾದರೂ ಇದೆ. ನನಗೆ ಅದೂ ಇಲ್ಲ' ಎಂದು ಹೇಳುತ್ತಾಳೆ. ಇದು ಮಕ್ಕಳಾಗದ ತಾಯಿ ಶಾಕೀರಾಗೆ ಇರುವ ತಾಯ್ತನದ ಹಂಬಲವನ್ನು ಸೂಚಿಸುತ್ತದೆ.

ಹೆತ್ತ ಮಗುವನ್ನು ಹಣಕೊಟ್ಟವರ ಕೈಗೆ ಕೊಟ್ಟು ಶರೀಫಾ ತನ್ನ ಮೊದಲನೇ ಮಗುವನ್ನು ನೋಡುವ ಕಾತರದಿಂದ ಅಣ್ಣನ ಮನೆಗೆ ಹೋಗುತ್ತಾಳೆ. ಆದರೆ ಆಕೆಯ ದುರದೃಷ್ಟವೆಂಬಂತೆ

ಮೊದಲನೆ ಮಗ ಇಷ್ಟು ದಿನ ದೂರವಿದ್ದ ತನ್ನ ಸ್ವಂತ ತಾಯಿಯಾದ ಶರೀಫಾಳನ್ನು ಗುರುತಿಸುವುದಿಲ್ಲ. ಹೆತ್ತ ತಾಯಿ ಆದರೂ ಆಕೆ ಮಗುವಿಗೆ ತೋರಬೇಕಾದ ಮಮತೆ, ವಾತ್ಸಲ್ಯ ಕೊಟ್ಟಿರದ ಕಾರಣ ಆ ಮಗುವಿನೊಂದಿಗೆ ಸಂಬಂಧ ಕಳೆದುಹೋಗಿರುತ್ತದೆ. ಎರಡು ಮಕ್ಕಳನ್ನು ಹೆರುವ ತಾಯಿ ಆಗಿದ್ದರೂ, ತನ್ನ ಬಡತನದ ಕಾರಣದಿಂದ ಶರೀಫಾ ತನ್ನ ಇಬ್ಬರೂ ಮಕ್ಕಳ ಪ್ರೀತಿಯಿಂದ ವಂಚಿತಳಾಗುತ್ತಾಳೆ ಎಂಬುದನ್ನು ಈ ಕತೆ ಧ್ವನಿಸುತ್ತದೆ.

ಈ ಕತೆಯನ್ನು ಓದುವಾಗ ಇನ್ನೊಂದು ಕತೆ ನೆನಪಾಗುತ್ತದೆ. ಸುನಂದಾ ಪ್ರಕಾಶ ಕಡಮೆ ಅವರ 'ಕಂಬಗಳ ಮರೆಯಲ್ಲಿ' ಎಂಬ ಕಥಾ ಸಂಕಲನದಲ್ಲಿ ಬರುವ 'ನಡುಹಗಲಿನ ಮೌನ' ಎಂಬ ಕತೆಯಲ್ಲೂ ಮಗುವಿಗೋಸ್ಕರ ವ್ಯಾವಹಾರಿಕ ಬದುಕಿಗೆ ಇಳಿಯುವ ಸ್ತ್ರೀಯರನ್ನು ಕಾಣಬಹುದು. ಅಲ್ಲಿ ಶ್ರೀಮಂತಳಾದ ಆಶಾ ಎಂಬ ತಾಯಿಗೆ ದುಡ್ಡಿದೆ, ಆದರೆ ಮಗುವನ್ನು ಹೆರುವ ಶಕ್ತಿ ಇರುವುದಿಲ್ಲ. ಆದರೆ ಬಡವಳಾದ ನೀಲಮ್ಮಳಿಗೆ ಮಗುವನ್ನು ಹೆರುವ ಶಕ್ತಿ ಇದೆ, ಆದರೆ ತನ್ನ ಹೊಲವನ್ನು ಉಳಿಸಿಕೊಳ್ಳುವ ಶಕ್ತಿ ಇಲ್ಲ. ಅಲ್ಲಿ ಇಬ್ಬರು ತಮ್ಮ ಕೊರತೆಗಳನ್ನು ಈಡೇರಿಸಿಕೊಳ್ಳಲು ಸಹಾಯಕರಾಗಿರುತ್ತಾರೆ. ಇಂತಹುದೇ ಕಥಾವಸ್ತುವನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದ ಮತ್ತೊಂದು ಕತೆಯಾದ ಮಹಾಶ್ವೇತಾದೇವಿಯವರ 'ಸ್ತನದಾಯಿನಿ'. ಮೇಲಿನ ಎರಡೂ ಕತೆಗಳಲ್ಲಿ ಅಭಿವ್ಯಕ್ತವಾಗಿರುವ ಅಂಶ ಒಂದೇ ಆಗಿದೆ. ದುಡ್ಡಿದ್ದ ಶ್ರೀಮಂತ ವರ್ಗದವರು ದುಡ್ಡಿಲ್ಲದ ಬಡವರನ್ನು ತಮಗೆ ಬೇಕಾದ ಹಾಗೆ ದುಡಿಸಿಕೊಳ್ಳುವ ಅಮಾನುಷ ಪ್ರಕ್ರಿಯೆ.

ಕಟ್ಪಾಡಿ ಅವರ ಕತೆಗಳಲ್ಲಿ ಕಂಡುಬರುವ ಬಡತಾಯಂದಿರ ಪಾತ್ರಗಳ ವಿಶಿಷ್ಟತೆ ಎಂದರೆ ಅವರು ಮಹಾ ದುಡಿಮೆಗಾರರು. ಹೆಚ್ಚಿನವರು ಬೀಡಿಕಟ್ಟುವ ಮಹಿಳೆಯರಾಗಿದ್ದಾರೆ. ಬೀಡಿ ಕಟ್ಟಿದರೆ ಮಾತ್ರ ಒಪ್ಪತ್ತಿನ ಊಟ ಸಿಗುವ, ಬೀಡಿ ಕಟ್ಟದಿದ್ದರೆ ಆ ದಿನಪೂರ್ತಿ ಉಪವಾಸ ಇರಬೇಕಾದ ಪರಿಸ್ಥಿತಿಯಲ್ಲಿ ಇಲ್ಲಿನ ಸ್ತ್ರೀಪಾತ್ರಗಳು ಕಂಡುಬರುತ್ತವೆ. ಕಟ್ಪಾಡಿ ಅವರ ಹೆಚ್ಚಿನ ಕತೆಗಳು ಪ್ರಾರಂಭವಾಗುವುದೇ ಮಹಿಳೆಯರು ಬೀಡಿ ಕಟ್ಟುವ ಕ್ರಿಯೆಯಿಂದ. 'ನೋಂಬು' 'ವಂತಿಗೆ' 'ತೀರ್ಮಾನ' 'ಬಂದಿ' ಮುಂತಾದ ಕತೆಗಳಲ್ಲಿ ಬೀಡಿ ಕಟ್ಟಿ ತಮ್ಮ ಜೀವನ ಸಾಗಿಸೋ ಸ್ತ್ರೀಪಾತ್ರಗಳು ಕಂಡುಬರುತ್ತವೆ. ಕರಾವಳಿಯ ಮುಸ್ಲಿಂ ಸಮಾಜದಲ್ಲಿ ಎಷ್ಟೋ ಕುಟುಂಬಗಳು ಸ್ತ್ರೀಯರಿಂದಲೇ ಸಾಗುತ್ತಿರುತ್ತವೆ ಎಂಬುದನ್ನು ಈ ಕತೆಗಳು ಸೂಚಿಸುತ್ತವೆ. ಕಟ್ಪಾಡಿ ಅವರ ಕತೆಗಳಲ್ಲಿ ಬಿಡುವಿಲ್ಲದೇ ಬೀಡಿಕಟ್ಟುವ ಸ್ತ್ರೀ ಪಾತ್ರಗಳನ್ನು ಮಾನವ ಯಂತ್ರಗಳಿಗೆ ಹೋಲಿಸುವ ಸನ್ನಿವೇಶ ಬರುತ್ತದೆ. "ಉದ್ಯೋಗಂ ಪುರುಷ ಲಕ್ಷಣಂ' ಎಂಬ ಮಾತನ್ನು ಹೇಳಿಕೊಂಡು ಬಂದ ಭಾರತೀಯ ಸಮಾಜದಲ್ಲಿ ದುಡಿಯುವ ಮಹಿಳೆ ಇಪ್ಪತ್ತನೇ ಶತಮಾನದ ಅದ್ಭುತವೇನಲ್ಲ. ಅನಾದಿಕಾಲದಿಂದಲೂ ಪುರುಷರೊಡನೆ ಮಹಿಳೆಯರ ಸಶಕ್ತೀಕರಣದಿಂದಾಗಿ ಪುರುಷರ ಭದ್ರಕೋಟೆಯೆನಿಸಿಕೊಂಡ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆ ಲಗ್ಗೆಯಿಡುತ್ತಿದ್ದಾಳೆ."[7] 'ನೋಂಬು'

ಕತೆಯಲ್ಲಿ ಕಂಡುಬರುವ ಹಲೀಮಳ ಗಂಡ ಹಾಗೂ 'ವಂತಿಗೆ' ಕತೆಯಲ್ಲಿ ಕಂಡುಬರುವ ಉಮ್ಮಾತುಮ್ಮಾಳ ಗಂಡ ಇವರಿಬ್ಬರೂ ಕೆಮ್ಮಿನಿಂದ ನರಳುವವರು. ಇಲ್ಲಿನ ಮಹಿಳೆಯರಿಗೆ ತಮ್ಮ ಮಕ್ಕಳ ಜೊತೆಗೆ ಗಂಡಂದಿರನ್ನು ಸಾಕಲು ಬಿಡುವಿಲ್ಲದ ದುಡಿಮೆಯಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯವಾಗಿದೆ. ಹಾಗೆಯೇ 'ತೀರ್ಮಾನ' ಕತೆಯಲ್ಲಿ ಬರುವ ಅಬ್ಬುವಿನ ತಾಯಿಯು ಗಂಡನಿಲ್ಲದ ವಿಧವೆಯಾಗಿದ್ದು, ತನ್ನ ಮಗನೊಡನೆ ಜೀವನ ಸಾಗಿಸುತ್ತಿರುತ್ತಾಳೆ. ತನ್ನ ಮಗುವನ್ನು ಸಾಕುವ ಸಂಪೂರ್ಣ ಜವಾಬ್ದಾರಿ ಈ ಬಡತಾಯಿಯರದ್ದಾಗಿದೆ. ಹೀಗಾಗಿ ಈ ಮೂವರ ಪರಿಸ್ಥಿತಿಯು ಒಂದೇ ಆಗಿದೆ. ತಮ್ಮ ಕುಟುಂಬವನ್ನು ಸಾಗಿಸುವ ಸಂಪೂರ್ಣ ಹೊಣೆ ಈ ಬಡತಾಯಂದಿರ ಮೇಲೆ ಬಿದ್ದಿರುತ್ತದೆ. ಕತೆಗಳಲ್ಲಿ ಬರುವ ತಾಯಂದಿರಿಗೆ ಮಕ್ಕಳು ಬೀಡಿಕಟ್ಟಲು, ಪೇಟೆಗೆ ಹೋಗಿ ಬೀಡಿ ಕೊಟ್ಟುಬರಲು ನೆರವಾಗುವ ಪಾತ್ರಗಳಾಗಿ ಬರುತ್ತವೆ. ಈ ಬಡತನ ಮತ್ತು ಶ್ರಮ ಸಂಸ್ಕೃತಿಯಲ್ಲಿ ತಾಯಿ ಮಕ್ಕಳ ಸಂಬಂಧದಲ್ಲಿ ಬರುವ ಬಿಕ್ಕಟ್ಟುಗಳನ್ನು ಕತೆ ಚಿತ್ರಿಸುತ್ತದೆ. ಆಟಕ್ಕೆ ಮಗ ಹೋಗಬೇಕು ಎಂಬ ಮನಸ್ಸು ತಾಯಿಗಿದ್ದರೂ ತನಗೆ ಸಹಾಯ ಮಾಡಿ ಹೋಗಲಿ ಎಂಬ ಮನೋಭಾವ ತಾಯಿಯದು. ಆದರೆ ಅವನ ಆಟದ ಹಕ್ಕನ್ನು ಕಿತ್ತುಕೊಳ್ಳುತ್ತಿದ್ದೇನೆ ಎಂಬ ಕೊರಗು ಸಹ ಆಕೆಯದು. ಬಡತನವು ತಾಯ್ತನಕ್ಕೆ ಮಾತ್ರವಲ್ಲ, ಮಕ್ಕಳ ಬಾಲ್ಯಕ್ಕೂ ಸಂಚಕಾರವಾಗಿದೆ. 'ವಂತಿಗೆ' ಕತೆಯಲ್ಲಿಯೂ ಇದೇ ಬಗೆಯ ತಾಯಿಮಕ್ಕಳ ಸಂಬಂಧವಿದೆ. ಈ ಇಕ್ಕಟ್ಟುಗಳಲ್ಲಿ ಬದುಕುವ ತಾಯಂದಿರುವ ತಮ್ಮ ಗಂಡಂದಿರ ಕಷ್ಟಸುಖವನ್ನೂ ನೋಡಿಕೊಳ್ಳಬೇಕು. ಹೀಗೆ ಹಲವು ಹೊಣೆಗಾರಿಕೆಗಳನ್ನು ನಿಭಾಯಿಸುವ ದಿಟ್ಟ ತಾಯಂದಿರು ಇಲ್ಲಿ ಬರುತ್ತಾರೆ. ಆದರೆ ಅವರ ಬಡತನ ಅವರ ತಾಯ್ತನವನ್ನು ಮತ್ತಷ್ಟು ಬೆಳಗಿಸುವ ಕೆಲಸವನ್ನು ಮಾಡುತ್ತದೆ. ಹೃದಯದಲ್ಲಿ ಅವರ ಸಿರಿವಂತಿಕೆಯನ್ನು ಅದು ಬೆಳಗಿಸುವ ಕೆಲಸ ಮಾಡುತ್ತದೆ.

ಮಗು ಉಪವಾಸ ಇರುವುದನ್ನು, ಅಳವುದನ್ನು ಯಾವ ತಾಯಿಯೇ ಆಗಲಿ ಸಹಿಸುವುದಿಲ್ಲ ತಾಯಿ ಮನಸ್ಸು ಮಗನ ಕ್ಷೇಮವನ್ನೇ ಬಯಸುತ್ತದೆ ಎಂಬುದನ್ನು ಈ ಕತೆ ಚಿತ್ರಿಸುತ್ತದೆ. ಮಗನ ಚಿಂತೆಯಲ್ಲಿಯೇ ತಾಯಿ ಮನಸ್ಸು ಇರುವುದು. ನೋಂಬು ಚಿಕ್ಕವರು ಮಾಡುವ ಅಗತ್ಯವಿಲ್ಲ ಎಂಬ ಮಾತಿನ ಹಿಂದೆ ತನ್ನ ಮಗ ಉಪವಾಸ ಇರುವುದು ತಾಯಿಗೆ ಇಷ್ಟವಿಲ್ಲ ಎಂಬ ಸಂಕಟವೂ ಇದೆ. ಮಗು ತನ್ನ ಹಟಮಾಡಿದಾಗ ಆಕೆ ಗದರುವುದೇ ಇಲ್ಲ. ಸಮಾಧಾನ ಮಗ ಅಳುವುದನ್ನು ನೋಡಿ ಸಮಾಧಾನ ಮಾಡುವಲ್ಲಿ ತಾಯ್ತನದ ಹಂಬಲ ಚಿತ್ರಣಗೊಂಡಿದೆ. ತನ್ನ ಮಗ ಉಪವಾಸ ಇರೋದನ್ನು ಸಹಿಸಿಕೊಳ್ಳಲಾಗದೆ ಮನದಲ್ಲೇ ವ್ಯಥೆಪಡುವುದನ್ನು ಈ ಕತೆ ಧ್ವನಿಸುತ್ತದೆ. ಈ ಮೂಲಕ ತಾಯ್ತನದ ಕಾಳಜಿ ಅಭಿವ್ಯಕ್ತಗೊಂಡಿದೆ. ಸಮಾಜದ ತಾಯ್ತನದ ಚಿತ್ರಣವನ್ನು ಇದು ಮೂಡಿಸುತ್ತದೆ. ಸಮಾಜದಲ್ಲಿ ಯಾವುದೇ ತಾಯಿ ಆದರೂ ಸಹ ತನ್ನ

ಮಗನ ಖುಷಿಯನ್ನು ಬಯಸುವಕೆ ಆಗಿರುತ್ತಾಳೆ. ನೋಂಬು ಮಾಡುತ್ತೇನೆ ಎಂದಾಗ ಅವನ ಖುಷಿಗೆ, ಆಸೆಗೆ ಕಲ್ಲು ಹಾಕಿದಂತಾಗುತ್ತದೆ. ನೋಂಬು ಮಾಡುವುದು ಬೇಡ ಎಂದರೆ ಅವನ ಮನಸ್ಸಿಗೆ ಎಲ್ಲಿ ನೋವಾಗುತ್ತದೆಯೋ ಎಂಬ ತಾಯ್ತನದ ಮಿಡಿತ ವ್ಯಕ್ತವಾಗಿರುವುದನ್ನು ಕತೆ ಧ್ವನಿಸುತ್ತದೆ. ಅಬ್ಬುವಿನ ತಾಯಿ 'ಹೇಗಾಯಿತು ಮಗಾ ನೋಂಬು' ಎಂದು ಕೇಳಿದಾಗ ಆತ 'ಅರೆ ನೋಂಬು ಅಂದ್ರೆ ಇದೆ ಏನಮ್ಮ? ಹೀಗೆ ನಾವು ತುಂಬಾಸಲ ಇದ್ದೇವಲ್ಲಾ' ಎನ್ನುತ್ತಾನೆ. 'ನೀನು ಬೀಡಿ ಕಟ್ಟದ ದಿನ ನಾವೆಲ್ಲ ಇದೇ ರೀತಿ ಉಪವಾಸ ಮಾಡುತ್ತೇವಲ್ವಾ?' ಎನ್ನುತ್ತಾನೆ. ಮಗುವಿನ ಈ ಮುಗ್ಧ ಮಾತುಗಳು ಓದುಗರ ಮನಸ್ಸನ್ನು ತಟ್ಟದೇ ಇರಲಾರವು. ಈ ಬಗ್ಗೆ ವಿಮರ್ಶಕಿಯಾದ ಶರೀಫಾ ಅವರು ವಿಶ್ಲೇಷಿಸುತ್ತ "ಬಡವರಿಗೆ ಎಲ್ಲಾ ದಿನಗಳೂ ಉಪವಾಸವೇ ಅದಕ್ಕೆ ಧಾರ್ಮಿಕವಾಗಿ ಆಚರಿಸುವ ರಂಜಾನಿನ ನೋಂಬೇ ಆಗಬೇಕಾಗಿಲ್ಲ ಎಂಬುದನ್ನು ಲೇಖಕರು ಮುಗ್ಧ ಮಗು ಅದ್ದುನ ಮೂಲಕ ಮಾತಾಡಿಸುತ್ತಾ ಅತ್ಯಂತ ಧ್ವನಿಪೂರ್ಣವಾಗಿ ಹೇಳುತ್ತಾರೆ"[೨] ಎಂದು ಹೇಳುತ್ತಾರೆ. ಇಲ್ಲಿ ಗಮನಿಸಬೇಕಾಗಿರುವ ಸಂಗತಿಯೆಂದರೆ, ಇಲ್ಲಿ ಕೇವಲ ವರ್ಗದ ಪ್ರಶ್ನೆ ಮಾತ್ರ ಇಲ್ಲ. ಜೆಂಡರ್ ಪ್ರಶ್ನೆಯೂ ಇದೆ. ಮಹಿಳೆಯಾಗಿರುವ ತಾಯಿಯಾಗಿರುವ ಕಾರಣದಿಂದಲೇ ಒಬ್ಬ ಮಹಿಳೆಯ ಮೇಲೆ ಕುಟುಂಬದ ಬಡತನದ ಹೊರೆ ಹೆಚ್ಚು ಬೀಳುತ್ತದೆ. ಅದನ್ನು ಆಕೆ ನಿಭಾಯಿಸುವ ರೀತಿಯಲ್ಲಿ ಆಕೆಯ ತಾಯ್ತನದ ಸ್ವರೂಪ ವ್ಯಕ್ತವಾಗುವುದು.

'ತೀರ್ಮಾನ' ಕತೆಯಲ್ಲಿ ಬರುವ ಅಬ್ಬುವಿನ ತಾಯಿಯ ತಾಯ್ತನದ ಸ್ವರೂಪ ಇನ್ನೊಂದು ಬಗೆಯದಾಗಿದೆ. ಕತೆ ಆ ಮಹಿಳೆಯನ್ನು ಅಬ್ಬುವಿನ ತಾಯಿ ಎಂದು ಕರೆಯುವದರಲ್ಲೇ ಆಕೆಯ ತಾಯ್ತನದ ಗುಣವನ್ನು ಸೂಚಿಸುತ್ತಿದೆ. ಕತೆಯಲ್ಲಿ ಅಬ್ಬುವಿನ ತಾಯಿ, ಗಂಡನಿಲ್ಲದ ವಿಧವೆಯಾಗಿ ಒಂಟಿ ಜೀವನವನ್ನು ತನ್ನ ಮಗನೊಡನೆ ಸಾಗಿಸುತ್ತಿರುತ್ತಾಳೆ. ಬೀಡಿ ಕಟ್ಟುವವುದರಿಂದಲೇ ಆಕೆ ಮನೆ ಸಾಗುತ್ತಿರುತ್ತದೆ. ಪರ್ಬು ಕ್ರಿಶ್ಚಿಯನ್ ಆಗಿದ್ದು ಆಕೆಯ ಮನೆಗೆ ಬಂದು ಹೋಗುವುದಕ್ಕೆ ತಪ್ಪು ಅರ್ಥ ಕಲ್ಪಿಸಿಕೊಂಡ ಕೆಲವರು, ಆಕೆಯನ್ನು ಮಸೀದಿಗೆ ನ್ಯಾಯ ತೀರ್ಮಾನಕ್ಕಾಗಿ ಕರೆದಿರುತ್ತಾರೆ. ಇದನ್ನು ಅರಿಯದ ಮುಗ್ದ ಬಾಲಕ 'ನಾನು ಅಮ್ಮನೊಡನೆ ಮಸೀದಿಗೆ ಹೋಗುವೆ' ಎಂದು ಗೆಳೆಯರೊಡನೆ ಹೇಳುವಾಗ ಅವರೆಲ್ಲ ನಗುತ್ತಾರೆ. ಆಗ ಅಬ್ಬುವಿಗೆ ಕಸಿವಿಸಿಯಾಗುತ್ತದೆ. ಇದನ್ನು ಕೇಳಿದ ತಾಯಿ "ನಗಲಿ ಬಿಡು..... ನೀನು ಗಂಜಿ ಊಟ ಮಾಡು ತಿಂಡಿಯೇನೂ ಇವತ್ತು ಮಾಡಿಲ್ಲ. ಕಾಫಿ ಮಾತ್ರ ಕೊಡ್ತೇನೆ ಆಯ್ತಾ...?" ಎಂದು ಸೆರಗಿನ ತುದಿಯಿಂದ ಕಣ್ಣೊರೆಸಿಕೊಳ್ಳುತ್ತಾ ಹೇಳುತ್ತಾಳೆ. ತನಗೆ ಅಪಮಾನ ನೋವು ಆಗುತ್ತಿರುವ ಸಂದರ್ಭದಲ್ಲಿಯೂ ತಾಯಿ ತನ್ನ ಮಗನ ಕ್ಷೇಮವನ್ನು ಬಯಸುವುದು ಇಲ್ಲಿ ಮುಖ್ಯ ಸಂಗತಿಯಾಗಿದೆ. ತನಗೆ ಸಮಾಜದಿಂದ ಹಿಂಸೆ ಆಗುತ್ತಿದ್ದರೂ ಹೇಳಿಕೊಳ್ಳಲಾಗದ ಪರಿಸ್ಥಿತಿ ಆಕೆಯದಾಗಿದೆ. ಈ ಮೂಲಕ ಸಮಾಜದಲ್ಲಿ ಒಂಟಿ ಮಹಿಳೆ ಮತ್ತು ಬಡತಾಯಿ ಬದುಕುವುದು

ಎಷ್ಟು ಕಷ್ಟಕರ ಎಂಬುದನ್ನು ಚಿತ್ರಿಸುವುದು ಕತೆಯ ಉದ್ದೇಶ. ಆದರೆ ಈ ಕಷ್ಟ ಇದ್ದರೂ ಅದನ್ನು ಬದಿಗೊತ್ತಿ ಆಕೆ ಮಗನ ಕ್ಷೇಮದ ಬಗ್ಗೇನೆ ಕಾಳಜಿ ತೋರುವ ತಾಯಿ. ಆದ್ದರಿಂದ ಒಂದು ಸಾಂಪ್ರದಾಯಿಕ ಸಮಾಜ ಒಂಟಿಯಾದ ಹೆಣ್ಣಿನ ಮೇಲೆ ಮಾತ್ರ ಅಪಮಾನ ಹಿಂಸೆ ಮಾಡುತ್ತಿಲ್ಲ, ಒಬ್ಬ ಬಡವಳ ಮೇಲೆ ಮಾಡುತ್ತಿದೆ. ಒಬ್ಬ ತಾಯಿಯ ಮೇಲೂ ಈ ಅನ್ಯಾಯ ಎಸಗುತ್ತಿದೆ ಎಂದು ಕತೆ ಸೂಚಿಸುತ್ತದೆ.

'ತೀರ್ಮಾನ' ಕತೆಯಲ್ಲಿ ಚಿಕ್ಕಮಗು ತನ್ನ ತಾಯಿಗೆ "ಅಮ್ಮ.... ಅಕ್ಕಿ ಎಲ್ಲಾ ಖಾಲಿಯಾಗಿದೆ. ಡಬ್ಬಿಯಲ್ಲಿ ಇಲ್ಲ..." ಎಂದು ಹೇಳುತ್ತದೆ. ಆಗ ಅವನ ತಾಯಿ "ಬೀಡಿ ಕಟ್ಟಿದ್ದು ಕೂಡಾ ಅಂಗಡಿಗೆ ಕೊಟ್ಟು ಬಂದಿಲ್ಲ ಮಗ ಮಸೀದಿಗೆ ಹೊಗಬೇಕಲ್ಲಾ ಮಧ್ಯಾಹ್ನದ ಊಟ ರಾತ್ರಿ ಮಾಡೋಣ ಆಯ್ತಾ?" ಎನ್ನುತ್ತಾಳೆ. ಆಗ ಕತೆ ಆಕೆ ಮಗುವಿನ ಬೆನ್ನು ತಡವುತ್ತಾ ಎಂಬ ವಿವರವನ್ನು ತರುತ್ತದೆ. ಮಗುವಿನ ಬೆನ್ನುತಡವುವಿಕೆಯಲ್ಲಿ ಆಕೆಯ ಪ್ರೀತಿ ಸಹಾನುಭೂತಿ ಮಾತ್ರವಲ್ಲ, ಬಡತನವನ್ನು ಹಸಿವನ್ನು ಎದುರಿಸುವ ಅಸಹಾಯಕತೆಯೂ ಇದೆ. ಇಲ್ಲಿ ಬರುವ ಅನೇಕ ಸನ್ನಿವೇಶ ಮತ್ತು ಮಾತುಕತೆಗಳಲ್ಲಿ ಮಕ್ಕಳ ಮುಗ್ಧತೆ ಮತ್ತು ಚಿಂತಾಕ್ರಾಂತರಾದ ತಾಯಿಯಂದಿರು ಮುಖಾಮುಖಿ ಆಗುತ್ತಾರೆ. ಅದೇ ಹೊತ್ತಲ್ಲಿ ಆ ಮಗು ಕೋಳಿಗೆ ಹಾಕಲು ಕಾಳು ಬೇಡುತ್ತದೆ. ಮಗ ಪೀಡಿಸಿದಾಗ ತಾಯಿ "ಇಶ್ಯಪ್ಪಾ..... ಎಂಥಾದ್ದೋ ನಿಂದೊಂದು ರಗಳೆ, ಮಧ್ಯಾಹ್ನದ ಊಟಕ್ಕೆ ಇಲ್ಲಾಂದ್ರೆ ಕೋಳಿಗೆ ಹಾಕ್ಬೇಕಂತೆ..." ಎನ್ನುತ್ತಾಳೆ. ಆದರೆ ಇರುವಷ್ಟು ಕಾಳನ್ನು ಕೊಡುತ್ತಾಳೆ. ಅದನ್ನು ಅವನು ಕೋಳಿಗೆ ಹಾಕುತ್ತ ತನ್ನ ತಾಯ್ತನವನ್ನು ತೋರುತ್ತಾನೆ. ಕತೆಯಲ್ಲಿ ಕೋಳಿಗಳ ಹಸಿವು ಹಾಗೂ ತಾಯಿ ಮಗನ ಹಸಿವು ಎರಡೂ ಮುಖಾಮುಖಿಯಾಗಿವೆ. ದುಡಿಮೆಗಾರ ತಾಯಂದಿರು ಮತ್ತು ಮಕ್ಕಳು ಕಟ್ಪಾಡಿ ಕತೆಗಳ ಮುಖ್ಯ ಪಾತ್ರಗಳಾಗಿವೆ. ಇಲ್ಲಿನ ತಾಯಂದಿರಿಗೆ ಪರೀಕ್ಷೆಯ ಒರೆಗಲ್ಲಾಗಿ ಬಡತನ ಹಸಿವು ಮಾತ್ರವಲ್ಲ, ಧಾರ್ಮಿಕ ಕಂದಾಚಾರವೂ ಬರುತ್ತದೆ. ಹಸಿದ ಮಕ್ಕಳಿಗೆ ಆಹಾರ ಕೊಡುವಲ್ಲಿ ತಾಯಂದಿರು ಮಾಡುವ ಹೋರಾಟವನ್ನು ಕತೆಗಳು ಚಿತ್ರಿಸುತ್ತವೆ.

'ನೋಂಬು' ಮತ್ತು 'ತೀರ್ಮಾನ' ಕತೆಗಳಲ್ಲಿ ಬೀಡಿ ಕಟ್ಟಿ ಜೀವನ ಸಾಗಿಸೋ ತಾಯಂದಿರು ಕಂಡುಬಂದರೆ 'ಕಡಲತೀರದಲ್ಲಿ ಬೆಂಕಿಬಿದ್ದದು' ಕತೆಯಲ್ಲಿ ಇಡೀ ಕುಟುಂಬ ಮೀನುಗಾರಿಕೆ ಅವಲಂಬಿಸಿದೆ. ಈ ಕತೆಯಲ್ಲಿ ಜನರಿಗೆ ಮಳೆ ಬಾರದೆ ಕಡಲತಡಿಯಲ್ಲಿ ಮೀನಿರದೇ ತೀವ್ರ ಸಂಕಷ್ಟಕ್ಕೆ ಒಂದ್ಹೊತ್ತಿನ ಊಟಕ್ಕೂ ಗತಿ ಇಲ್ಲದಂತಹ ಪರಿಸ್ಥಿತಿ ಒದಗಿಬಂದಿರುವ ಸನ್ನಿವೇಶವಿದೆ. ಈ ಕತೆಯಲ್ಲಿ ಮಕ್ಕಳು ಮದ್ರಸಾದಿಂದ ಮರಳಿ ಬಂದು ತಿನ್ನಲು ಏನು ಕಾಣದೆ ಕಿರಿಕಿರಿ ಮಾಡಿದಾಗ ತಾಯಿ ಸಾರಮ್ಮ ಚಡಿಪಡಿಸುತ್ತಾಳೆ. ಮಕ್ಕಳಿಗೆ ಎರಡು ಗಂಜಿ ಮಾಡಿ ಹಾಕೋ ಪುಣ್ಯ ಇಲ್ಲದೋಳು ತನ್ನನ್ನು ಅಲ್ಲಾಹು ಭೂಮಿಮೇಲೆ ಯಾಕಿಟ್ಟಿದ್ದಾನೋ ಎಂದು ನಿಟ್ಟುಸಿರು

ಬಿಡುತ್ತಾಳೆ. ಬಡತನದಲ್ಲಿದ್ದ ತಾಯಿ ತನ್ನ ಮಕ್ಕಳಿಗೆ ಒಂದೊತ್ತಿನ ಗಂಜಿಕೂಡ ಹಾಕಲಾರದ ಪರಿಸ್ಥಿತಿ ಒದಗಿರುವುದನ್ನು ಕತೆ ಚಿತ್ರಿಸುತ್ತದೆ. ಇಲ್ಲಿ ಹೆತ್ತಕರುಳು ತನ್ನ ಮಕ್ಕಳ ಹಸಿವಿಗೆ ಪರಿತಪಿಸುವ ವಿವರಗಳು ಬರುತ್ತವೆ. ಸ್ತ್ರೀ ತನ್ನ ಮಕ್ಕಳ ರಕ್ಷಣೆ, ಪೋಷಣೆ ಮಾಡಬೇಕಾದವಳು ಅವಕ್ಕೆ ಒಪ್ಪೊತ್ತಿನ ಊಟ ಕೊಡಲಾಗದೇ ಉಪವಾಸ ಕೆಡಹುವ ಪರಿಸ್ಥಿತಿ ಬರುತ್ತದೆ. ತಾನು ಬದುಕಿರುವುದೇ ಮಕ್ಕಳಿಗಾಗಿ ಆ ಮಕ್ಕಳಿಗೆ ಊಟ ಇರಲಿ ಗಂಜಿ ಕೂಡ ಕೊಡಲು ಆಗುತ್ತಿಲ್ಲ ಎಂದ ಮೇಲೆ ನಾನು ಬದುಕಿರುವುದು ವ್ಯರ್ಥ ಎಂದು ತಾಯಿ ವ್ಯಥೆಪಡುವುದನ್ನು ಈ ಕತೆ ಚಿತ್ರಿಸುತ್ತದೆ.

ಸಾರಮ್ಮನ ಮಕ್ಕಳಲ್ಲಿ ಚಿಕ್ಕವನಾದ ಮಜೀದ ಉಮ್ಮಾ ಅನ್ನುತ್ತಾ ಅಳಲು ಶುರುಮಾಡುತ್ತಾನೆ. ಮಕ್ಕಳು ಹಸಿವಾದಾಗ ಕಷ್ಟವಾದಾಗ ಅವರಿಗೆ ತಾಯಿಯೇ ನೆನಪಾಗುವಳು. ಆಗ ಈ ತಾಯಂದಿರಿಗೆ ಹೊಸ ಸವಾಲು ಎದುರಾಗುತ್ತದೆ. ಆರ್ಥಿಕವಾಗಿ ಸ್ವತಂತ್ರಳು ಹೊರಗೆ ಹೋಗಿ ದುಡಿಯಲಾರದವಳು ಆಗಿರುವ ಮಹಿಳೆ ತನ್ನ ಪತಿಗೆ ಅವಲಂಬಿತಳಾಗಿರುವ ಕುಟುಂಬವ್ಯವಸ್ಥೆಯಿದು. ಆಕೆ ಗಂಡ ಏನಾದರೂ ತಂದುಕೊಟ್ಟರೆ ಬೇಯಿಸಿ ಹಾಕುವವಳು. ಇಂತಹ ಸನ್ನಿವೇಶದಲ್ಲಿ ಈ ತಾಯಂದಿರ ತಲ್ಲಣ ಶುರುವಾಗುತ್ತದೆ. ಈ ಕತೆಯ ವ್ಯಂಗ್ಯವೆಂದರೆ, ತಾಯಿ ತನ್ನ ಮಕ್ಕಳಿಗೆ ಉಣಿಸಲು ಸಾಧ್ಯವಾಗದಿದ್ದರೂ ಪುರೋಹಿತರಾದ ಮೌಲ್ವಿಯವರಿಗೆ ಊಟ ಹಾಕಬೇಕಾಗುತ್ತದೆ. ಇದು ಅವರ ತಾಯಿತನಕ್ಕೆ ಒಡ್ಡಿದ ಪರೀಕ್ಷೆಯ ಹಾಗೆ ಬರುತ್ತದೆ.

ಕಟ್ಪಾಡಿಯವರ 'ಹತ್ಯೆ' ಕತೆಯಲ್ಲೂ ಬಡತನದ ತೀವ್ರತೆಯಲ್ಲಿರುವ ತಾಯಿ ತನ್ನ ಮಕ್ಕಳ ಅಳಲನ್ನು ನಿರ್ವಹಿಸುವ ಪರಿಯಿದೆ. ಈ ಕತೆಯಲ್ಲಿ ಮಕ್ಕಳೆಲ್ಲ ಬಣ್ಣ ಬಣ್ಣದ ಸುರುಸುರುಬಾಣಗಳನ್ನು ಬಿಟ್ಟು ಕೇಕೆ ಹಾಕುತ್ತಿರುತ್ತಾರೆ. ಆಗ 'ಉಮ್ಮ ನಂಗೆ ಒಂದು ಸುರುಸುರು ಕಡ್ಡಿ ಬೇಕು' ಎಂದು ಪಾತುಮ್ಮ ತನ್ನ ಅಮ್ಮನಿಗೆ ದುಂಬಾಲು ಬೀಳುವಳು. ಆಗ ತಾಯಿ 'ಈಗ ನಾನೆಲ್ಲಿಂದ ತರ್ಲಿ ನಿಂಗೆ? ನಿಮ್ಮ ಬಾಪನಿಗೆ ಹೇಳು ತಂದುಕೊಡ್ಲಿಕ್ಕೆ. ಜ್ವರ ಬಿಟ್ಟರೆ ನಾಳೆ ಪೇಟೆಯಿಂದ ಬರುವಾಗ ತಂದಾರು' ಎಂದು ಉತ್ತರಿಸುವಳು. "ಉಮ್ಮಾ ನಂಗೆ ಬಿಸಿ ಬಿಸಿ ಕಡುಬು ಕೊಡು...." ಎಂದು ಪಾತುಮ್ಮನ ಕೂಗು ಕೇಳಿ ಕರೀಮಾ ಓಡಿ ಬರುತ್ತಾನೆ. ಆಗ ಆಕೆ 'ನಿಲ್ಲು ಸ್ವಲ್ಪ, ಸಬುರ್ ಮಾಡ್ಕೋ.. ಕಡುಬು ಬೇಯಲಿ. ಹಾಗೆಲ್ಲ ತಿನ್ಲಿಕ್ಕೆ ನಿಂಗೆ ಅಂತ ಮಾಡಿದ್ದಲ್ಲ. ಇಂದು ದನಗಳ ಹಬ್ಬ, ಅವುಗಳಿಗೆ ಮಾಡಿದ್ದು' ಎಂದು ಹೇಳುವಳು. 'ನಮ್ಮ ದನಕ್ಕೆ ಹಾಕ್ಲಿಕ್ಕು ಈ ಕಡಬು? ನಮ್ಗಿಲ್ವಾ?' ಎಂದ ಕರೀಮ ನಿರಾಸೆಯಿಂದ "ನಿಲ್ಲು ಮೋನೇ.. ಬೇಯಲಿ ನಿಮಗೂ ಕೊಡುತ್ತೇನೆ. ಈಗ ನೀವೆಲ್ಲ ಕೈತೊಳ್ದು ಬನ್ನಿ. ನಾನು ನಮಾಜು ಮಾಡಿ ಬರ್ತೀನಿ" ಎಂದು ಹೇಳುತ್ತಾಳೆ. ಈ ಬಗೆಯ ಸಣ್ಣಪುಟ್ಟ ವಿವರಗಳ ಮೂಲಕ ಕಟ್ಪಾಡಿಯವರ ಕತೆಗಳು ತಾಯಿ ಮತ್ತು ಎಳೆಯ ಮಕ್ಕಳ ವಾತ್ಸಲ್ಯದ ಸಂಬಂಧವನ್ನು ಚಿತ್ರಿಸುವರು.

ಹೆಣ್ಣಿನಲ್ಲಿ ಹೆಣ್ತನದಂತೆ ತಾಯ್ತನದ ಸ್ವಭಾವ ಜೊತೆಯಾಗಿ ಬಂದಿರುತ್ತದೆ. ಈ ತಾಯ್ತನವು ಪ್ರೀತಿ, ಕರುಣೆ, ವಾತ್ಸಲ್ಯದಿಂದ ಕಾಣುವಂತಹದ್ದಾಗಿರುತ್ತದೆ. ಹೆಣ್ಣು ತನ್ನ ಮಕ್ಕಳಿಗೆ ಪ್ರೀತಿಯನ್ನು ಸಮಾನವಾಗಿ ಹಂಚುತ್ತಾಳೆ. ಕೆಲವೊಮ್ಮ ಪ್ರೀತಿಯ ಹಂಚಿಕೆಯಲ್ಲಿ ಭಿನ್ನಮತವನ್ನು ತೋರುತ್ತಾಳೆ. ಹೆಣ್ಣಾದವಳು ತನ್ನ ಮಗಳಿಗಿಂತ ಮಗನಿಗೆ ಹೆಚ್ಚಿನ ಪ್ರೀತಿ ಕೊಡುತ್ತಾಳೆ. ಹಾಗೆಯೇ ಹಿರಿಯ ಮಕ್ಕಳಿಗಿಂತ ಕಿರಿಯ ಮಕ್ಕಳ ಮೇಲೆ ತಾಯ್ತನದ ಹಂಬಲ ಹೆಚ್ಚಾಗಿರುವುದನ್ನು ಈ ಕತೆ ಚಿತ್ರಿಸುತ್ತದೆ. ಇಲ್ಲಿ ತಾಯ್ತನವು ಸಹ ಲಿಂಗತಾರತಮ್ಯದ ಭಾವ ವ್ಯಕ್ತವಾಗುವುದನ್ನು ಸೂಕ್ಷ್ಮವಾಗಿ ಕತೆ ಕಾಣಿಸುತ್ತದೆ.

ಕಟ್ಪಾಡಿ ಅವರ ಕತೆಗಳ ವೈಶಿಷ್ಟ್ಯ ಏನೆಂದರೆ, ಎಷ್ಟೇ ಬಡತನದಿಂದ ಇದ್ದರೂ ಇಲ್ಲಿನ ತಾಯಂದಿರ ಮಕ್ಕಳ ಬಗೆಗಿನ ಕಾಳಜಿಗೆ ಬಡತನವಿಲ್ಲ. ಅವರು ಸನ್ನಿವೇಶದ ಒತ್ತಡಕ್ಕೆ ಸಿಲುಕಿ ಸಿಡಿಮಿಡಿಗೊಂಡಂತೆ ಕಂಡುಬಂದರೂ ಅಪಾರ ಪ್ರೀತಿಯನ್ನು ತಮ್ಮ ಮಕ್ಕಳಿಗೆ ತೋರಿಸುತ್ತಾರೆ. ತೀವ್ರ ಹಸಿವಿನ ಸಂದರ್ಭದಲ್ಲಿ ಗಂಜಿಯನ್ನು ಕೊಟ್ಟು ತಾವು ಉಪವಾಸವಿರುತ್ತಾರೆ. ಒಂದು ಬಗೆಯಲ್ಲಿ ಜೀವನದ ರಣರಂಗದಲ್ಲಿ ಹೋರಾಟಗಾರರಾಗಿ ಕಾಣುತ್ತಾರೆ.

೪.೨.೨. ಶ್ರೀಮಂತ ತಾಯಿ ಪಾತ್ರ ಚಿತ್ರಣಗಳು: ಕಟ್ಪಾಡಿ ಅವರ 'ನೋಂಬು', 'ಕ್ರೌರ್ಯ', 'ರಾಬಿಯಾ', 'ನೇಣುಗಂಬದ ನೆರಳಲ್ಲಿ' 'ಹೃದಯಗಳು' 'ಜುಲೇಖ' ಮುಂತಾದ ಕತೆಗಳಲ್ಲಿ ಶ್ರೀಮಂತ ತಾಯಂದಿರ ಪಾತ್ರಗಳು ಬರುತ್ತವೆ. ತಾಯಿಯಾಗಿರುವ ಹೆಣ್ಣು ಬಡಕುಟುಂಬದಲ್ಲೇ ಇರಲಿ ಶ್ರೀಮಂತ ಕುಟುಂಬದಲ್ಲಿಯೇ ಇರಲಿ, ಆಕೆ ಮಾತ್ರ ಶಕ್ತಿಯಲ್ಲಿ ಬಡವಳೇ ಆಗಿರುತ್ತಾಳೆ. ಬಡಕುಟುಂಬದ ತಾಯಿ ತನ್ನ ಶ್ರಮದ ಮೂಲಕ ಕುಟುಂಬವನ್ನು ನಿರ್ವಹಿಸುತ್ತಾಳೆ. ಆದರೆ ಶ್ರೀಮಂತ ಸ್ತ್ರೀಗೆ ಈ ಬಗೆಯ ಶ್ರಮವಿಲ್ಲದಿದ್ದರೂ, ಆಕೆ ಮನೆಗೆಲಸದಲ್ಲಿ, ಮನೆಯನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳುವಲ್ಲಿ ಹಾಗೂ ಮಕ್ಕಳನ್ನು ಪೋಷಿಸುವ ಅವಳು ಶ್ರಮ ಮಾಡುತ್ತಾಳೆ. ಹೀಗೆ ಕುಟುಂಬಕ್ಕಾಗಿ ತಮ್ಮ ಸುಖವನ್ನು ತ್ಯಾಗ ಮಾಡಿಕೊಳ್ಳುವ ತಾಯಂದಿರು ಇಲ್ಲಿ ಕಂಡುಬರುತ್ತಾರೆ. 'ನೋಂಬು' ಕತೆಯಲ್ಲಿ ಸಿರಿವಂತರ ಮನೆಯ ಹುಡುಗನಾದ ಕಾಸಿಮನ ತಾಯಿಯು, ತನ್ನ ಮಗನ ಬಡಗೆಳೆಯನನ್ನು ಉಪಚರಿಸುತ್ತಾಳೆ. ಮಗನು "ಅಮ್ಮ ಅದ್ದು ಬಂದಿದ್ದಾನೆ. ಅವನಿಗೂ ರೊಟ್ಟಿ ಕೊಡ್ತಿಯಾ?" ಎಂದು ಕೇಳಿದಾಗ, "ಓ... ಯಾರು ಬೀಡಿ ಕಾದ್ರಿ ಮಗನಾ... ಸರಿ ಅವನೂ ನೀನು ಒಟ್ಟಿಗೆ ತಿನ್ನುವಿರಂತೆ...." ಎನ್ನುತ್ತಾಳೆ. ತಾಯಿಯಾದವಳು ಪ್ರೀತಿ ಹಂಚುವಲ್ಲಿ ತನ್ನ ಮತ್ತ ಇತರರ ಮಕ್ಕಳು ಎಂದು ನೋಡುವುದಿಲ್ಲ. ಅವರ ಶ್ರೀಮಂತಿಕೆ, ಬಡತನ ಕೂಡ ನೋಡುವುದಿಲ್ಲ. ತನ್ನ ಮಕ್ಕಳಂತೆ ಇತರರ ಮಗು ಎಂಬ ಭಾವನೆ ಆಕೆಯಲ್ಲಿರುತ್ತದೆ. ಇದನ್ನು ತಾಯಿತನದ ಸಮಾಜವಾದ ಎಂದು ಕರೆಯಬಹುದು. ಇಲ್ಲಿ

ಸಿರಿವಂತ ಕುಟುಂಬದ ತಾಯಿ ತನ್ನ ಮಗನ ಜತೆಗಾರರಿಗೆ ಕತೆಯನ್ನು ಹೇಳುವ ವಿಶಾಲ ಹೃದಯದವಳಾಗಿ ಕಂಡುಬರುತ್ತಾಳೆ. ತಮ್ಮ ಮನೆಗೆಲಸದ ಒತ್ತಡದ ನಡುವೆಯೂ ಮಕ್ಕಳನ್ನು ಸಂತೋಷಪಡಿಸುತ್ತಾಳೆ. ಹೆಣ್ಣನ್ನು ಭಾರತೀಯ ಕುಟುಂಬ ವ್ಯವಸ್ಥೆ ನೋಡುವುದೇ ದುಡಿಯುವ ಯಂತ್ರದಂತೆ. ಮನೆಯಲ್ಲಿ ದುಡಿದರೆ, ಮಗುವನ್ನು ಹೆತ್ತುಕೊಟ್ಟರೆ ಆಕೆಗೆ ಕುಟುಂಬದಲ್ಲಿ ಅಸ್ತಿತ್ವ. ಕಟ್ಪಾಡಿಯವರ ಕತೆಗಳು ಹೆಣ್ಣು ಜೀವನ ಸಂಗಾತಿಯಾಗಿ ಬರುವುದಕ್ಕಿಂತಲೂ ದುಡಿಯುವ ಯಂತ್ರವಾಗಿ ಬರುವ ವಾಸ್ತವವನ್ನೇ ಹೆಚ್ಚು ಬಿಂಬಿಸುತ್ತವೆ.

ವ್ಯಂಗ್ಯವೆಂದರೆ, ಮಹಿಳೆಯು ಶ್ರೀಮಂತ ಕುಟುಂಬದಲ್ಲಿ ಹೆಚ್ಚು ಬಂಧಿಯಾಗಿರುವುದನ್ನು ಕಟ್ಪಾಡಿ ಕತೆಗಳು ಕಾಣಿಸುವುದು. ಅವರಿಗೆ ಶ್ರೀಮಂತಿಕೆ ಇರುತ್ತದೆ. ಆದರೆ ನೆಮ್ಮದಿ ಇರುವುದಿಲ್ಲ. ಸ್ವಾತಂತ್ರ್ಯ ಇರುವುದಿಲ್ಲ. ಆಕೆಗೆ ಮನೆ ಎಂಬುದು ಸೆರೆಮನೆ. ಶ್ರೀಮಂತ ಕುಟುಂಬದಲ್ಲಿ ಮನೆಗಳು ನೋಡಲು ಸ್ವರ್ಗದಂತೆ ಕಂಡುಬರುತ್ತದೆ. ಅವುಗಳ ಹೆಸರಲ್ಲೂ ಸ್ವರ್ಗದ ಧ್ವನಿಯಿರುತ್ತದೆ. (ಜನ್ನತ್ ಮಹಲ್). 'ನೋಂಬು' ಮತ್ತು 'ಜುಲೇಖ' ಕತೆಗಳಲ್ಲಿ ಸ್ವರ್ಗದಂತೆ ಮನೆಗಳನ್ನು ಕಾಣಬಹುದು. ಆದರೆ ಅವು ಪುರುಷರ ಪಾಲಿಗೆ ಮಾತ್ರ ಸ್ವರ್ಗಗಳು. ಮಹಿಳೆಯರು ಅಲ್ಲಿ ವಸ್ತುಗಳು. ಶ್ರೀಮಂತ ಕುಟುಂಬದಲ್ಲಿ ಹೆಣ್ಣನ್ನು ಒಂದು ವಸ್ತವನ್ನಾಗಿ, ಸರಕನ್ನಾಗಿ ನೋಡುವ ಪುರುಷವಾದಿ ಸಮಾಜ ಕಂಡುಬರುತ್ತದೆ. ಇಲ್ಲಿ ಶ್ರೀಮಂತ ತಾಯಿ ನೆಮ್ಮದಿಯೇ ಇಲ್ಲದ ಜೀವನ ಅನುಭವಿಸುತ್ತಿರುತ್ತಾಳೆ.

ಕಟ್ಪಾಡಿ ಅವರ ಕತೆಗಳಲ್ಲಿ ಬರುವ ಸಿರಿವಂತ ಕುಟುಂಬದ ತಾಯಂದಿರಲ್ಲಿ ಕೆಲವರು ವಿಶಾಲಹೃದಯ, ಸಹನೆ, ತಾಳ್ಮೆ, ಮಮಕಾರ ಉಳ್ಳವರಾಗಿ ಕಂಡುಬಂದರೆ, ಇದೇ ಶ್ರೀಮಂತ ಕುಟುಂಬಗಳಲ್ಲಿ ಕ್ಷುದ್ರಸ್ವಭಾವದ ತಾಯಂದಿರು ಸಹ ಕಂಡುಬರುತ್ತಾರೆ. 'ನೋಂಬು', 'ಕರುಳು' 'ಜುಲ್ಲೇಖ' ಕ್ರೌರ್ಯ ಮುಂತಾದ ಕತೆಗಳಲ್ಲಿ ಸೌಮ್ಯ, ಸಹನೆ, ತಾಳ್ಮೆ ಹಾಗೂ ಮಕ್ಕಳ ಬಗೆಗೆ ಅತಿಯಾದ ಮಮಕಾರ ಹೊಂದಿದ ತಾಯಂದಿರು ಕಂಡುಬರುವರು. 'ರಾಬಿಯಾ' 'ಹೃದಯಗಳು' ಮುಂತಾದ ಕತೆಗಳಲ್ಲಿ ಕ್ಷುದ್ರರಾದ ಮತ್ತು ಮಗುವಿನ ಬಗ್ಗೆ ಮಮಕಾರ ಪ್ರೀತಿ ತೋರ್ಪಡಿಸದ ತಾಯಂದಿರು ಕಂಡುಬರುವರು. 'ನೋಂಬು' ಕತೆಯಲ್ಲಿ ಸಿರಿವಂತ ತಾಯಿ ತನ್ನ ಮಗಳು ಆತ್ಮಹತ್ಯೆಗೆ ಯತ್ನಿಸಿದಾಗ ಒಬ್ಬ ತಾಯಿ ತೀವ್ರ ದುಃಖತಪ್ತಳಾಗುತ್ತಾಳೆ. ತನ್ನ ಮಗಳಿಗೆ ವಿಷದ ಕಾಯನ್ನು ಗೊತ್ತಿಲ್ಲದೆ ತಂದುಕೊಟ್ಟ ಚಿಕ್ಕಹುಡುಗನನ್ನು ದೂಷಿಸುವುದಿಲ್ಲ.

ಬಡಕುಟುಂಬದಲ್ಲಿ ಗಂಡ ಹೆಂಡತಿಯರು ತಮ್ಮ ಭಾವನೆಗಳನ್ನು ಪರಸ್ಪರ ಹಂಚಿಕೊಳ್ಳುತ್ತಾರೆ. ಆದರೆ ಶ್ರೀಮಂತ ಕುಟುಂಬದಲ್ಲಿ ಬರುವ ತಾಯಂದಿರು ಆ ಅವಕಾಶದಿಂದ ವಂಚಿತರಾಗಿರುತ್ತಾರೆ. ಗಂಡನಾದವನು ಮನೆಯಲ್ಲಿ ಅವರನ್ನು ಬಂಧಿಸಿರುತ್ತಾನೆ. ಇಲ್ಲಿ ಸ್ವಾತಂತ್ರ್ಯ ಇರುವುದಿಲ್ಲ. ತಮ್ಮ

ಮನೆಯ ನಾಲ್ಕು ಗೋಡೆಗಳ ಸೆರೆಯಲ್ಲಿಯೇ ಬಂಧಿಯಾಗಿರಬೇಕು. ಇಂತಹ ಕುಟುಂಬಗಳಲ್ಲಿ ಹೆಣ್ಣಾದವಳಿಗೆ ಗಂಡನ ಮನೆಯಲ್ಲಿ ಕಷ್ಟ ಬಂದರೆ, ತವರು ಮನೆಯೇ ಆಸರೆ. 'ನೋಂಬು' ಕತೆಯಲ್ಲಿನ ಜಮೀಲಾ ಮತ್ತು 'ಕ್ರೌರ್ಯ' ಕತೆಯಲ್ಲಿನ ಶಹನಾಜ್ ಇಬ್ಬರು ಸಹ ಗಂಡನಿಂದ ಸಂಕಷ್ಟಕ್ಕೆ ಗುರಿ ಆಗುವವರು. ಜಮೀಲಾಳ ಗಂಡ ಹಣಕ್ಕಾಗಿ ಹಿಂಸೆ ನೀಡಿದರೆ ಶಹನಾಜ್‌ಳ ಗಂಡ ಹೆಂಡತಿ ಇದ್ದು ಎರಡನೇ ಮದುವೆಗೆ ಮುಂದಾಗುತ್ತಾನೆ. ಇದರಿಂದ ಇಬ್ಬರೂ ಹುಡುಗಿಯರು ತತ್ತರಿಸುತ್ತಾರೆ. ಇವರಿಬ್ಬರ ನೋವು ಒಂದೇ ಎಂಬಂತೆ ಕಂಡುಬರುತ್ತದೆ. ಮಕ್ಕಳ ಈ ನೋವು ಅವರ ತಾಯಿಯಂದಿರಿಗೆ ವರ್ಗಾವಣೆಯಾಗುತ್ತದೆ. ಆತ್ಮಹತ್ಯೆಗೆ ಯತ್ನಿಸಿದ ಮಗಳಿಗೆ ಅಳುತ್ತಾ ಅವಳ ತಾಯಿ 'ಅದ್ಯಾಕೆ ಹೀಗೆ ನನ್ನನ್ನು ಸತಾಯಿಸ್ತಾ ಇದ್ದೀ. ನೀನು ನನ್ನ ಹೊಟ್ಟೆಯಲ್ಲಿ ಹುಟ್ಟದಿರುತ್ತಿದ್ರೆ ಹುಟ್ಟಿಲ್ಲಂದು ಬಿಡುತ್ತಿದ್ದೆ ನೀನು ಹುಟ್ಟಿದ್ದೇ ನನ್ನನ್ನು ಸಾಯಿಸ್ಲಿಕ್ಕೆ' ಎಂದು ಆಕ್ರೋಶ ಮಾಡುತ್ತಾಳೆ. ಇಲ್ಲಿ ಕೋಪವಿದ್ದರೂ ಆಳದಲ್ಲಿ ಹೆತ್ತ ತಾಯಿಯ ಸಂಕಟ ಅಭಿವ್ಯಕ್ತಗೊಂಡಿದೆ. ಮಕ್ಕಳಿಗೆ ಆದ ಸಂಕಟವನ್ನು ತಾಳಲಾರದ ತಾಯಿಯ ಅಳಲನ್ನು ಈ ಮಾತು ಧ್ವನಿಸುತ್ತದೆ. ಇಲ್ಲಿ ಜಮೀಲಾಳ ಕಷ್ಟ ಆಕೆಯ ತಾಯಿಯ ನೆಮ್ಮದಿ ಕೆಡಿಸುತ್ತದೆ. ಅಳಿಯನ ಹಿಂಸೆಯನ್ನು ವಿರೋಧಿಸಲು ಮಗಳು ಸಾಯುವ ಯತ್ನ ಮಾಡುವುದು ತಾಯಿಯ ದಾರುಣತೆಯನ್ನು ಹೆಚ್ಚಿಸುತ್ತದೆ. ಬಡವರ ಕಣ್ಣಲ್ಲಿ ಈ ಕುಟುಂಬವು ಸ್ವರ್ಗದ ಶ್ರೀಮಂತಿಕೆಯುಳ್ಳದ್ದು. ಆದರೆ ಅಲ್ಲಿ ನೆಮ್ಮದಿಯಿಲ್ಲ. ಪುರುಷ ಕೇಂದ್ರಿತ ಸಮಾಜದಲ್ಲಿ ಅಧಿಕಾರ ಸಿರಿವಂತ ಸ್ತ್ರೀಗೆ ಮಾತ್ರವಲ್ಲ ಬಡ ಸ್ತ್ರೀಗೂ ಇರುವುದಿಲ್ಲ ಎನ್ನುವುದನ್ನು ಕಟ್ಪಾಡಿ ಕತೆ ಕಾಣಿಸುತ್ತವೆ. 'ಕ್ರೌರ್ಯ' ಕತೆಯಲ್ಲಿ ಮಗಳಾದ ಶಹನಾಜಳ ಸ್ಥಿತಿ ಕಂಡು ಅಲ್ಲಿನ ತಾಯಿ ಸಹ ಹೀಗೆ ದುಃಖಿತಳಾಗುತ್ತಾಳೆ. ಮಗಳು ಇರುವಾಗಲೇ ಇನ್ನೊಂದು ಮದುವೆಗೆ ಅಳಿಯ ನಿರ್ಧರಿಸಿದ್ದಾರೆ ಎಂದು ತಿಳಿದು ಆಕೆ ಕುಸಿದು ಕೂರುತ್ತಾಳೆ. ಅವಳ ಕಣ್ಣಲ್ಲಿ ದೊಳ ದೊಳ ನೀರು ಸುರಿಯುತ್ತವೆ. ತಾಯಿಯ ಕರುಳು ಮಗಳ ದುಃಖಕ್ಕೆ ಮಿಡಿಯುತ್ತದೆ. ಇದು ಕೇವಲ ಒಂದು ಹೆಣ್ಣಿನ ಒಂದು ಕುಟುಂಬದ ಸಮಸ್ಯೆ ಅಲ್ಲ. ಒಟ್ಟು ಸಮಾಜದಲ್ಲಿ ಎಲ್ಲ ಮಹಿಳೆಯರ ಸ್ಥಿತಿ ಕೂಡ. ಸಮಾಜದಲ್ಲಿ ಹೆತ್ತವರಿಗೆ ಹೆಣ್ಣು ಒಂದು ಹೊರೆಯಾಗಿ ಕಂಡುಬಂದರೆ, ಗಂಡನಿಗೆ ಸೂತ್ರದ ಗೊಂಬೆಯನ್ನಾಗಿ ಬಳಸಿಕೊಳ್ಳುತ್ತಿರುವ ನಿಕೃಷ್ಟ ಸ್ಥಿತಿಯಿದೆ. ಇಂತಹ ಸಮಾಜದ ಚಿತ್ರವನ್ನು ಕಟ್ಪಾಡಿ ತಮ್ಮ ಕತೆಗಳ ಮೂಲಕ ಚಿತ್ರಿಸಿದ್ದಾರೆ.

'ಹೃದಯಗಳು' ಎಂಬ ಕತೆಯಲ್ಲಿ ಬರುವ ರುಕಿಯಾ ಅಪ್ರಾಪ್ತವಯಸ್ಸಿನಲ್ಲಿ ವೈಧವ್ಯಕ್ಕೆ ತುತ್ತಾಗುತ್ತಾಳೆ. ಪರಪುರುಷನಿಗೆ ಮೋಹಿತಳಾಗಿ ತನ್ನ ಮಗನನ್ನೂ ಬಿಟ್ಟು ಮನೆಯನ್ನು ತೊರೆಯುತ್ತಾಳೆ. ಇಲ್ಲಿ ತಾಯಿಯಾಗಿರುವ ಈಕೆಗೆ ಮಗನ ಮೇಲಿನ ಮಮತೆಗಿಂತಲೂ ಪುರುಷ

ಪ್ರೀತಿಯೇ ಮುಖ್ಯವಾಗಿರುತ್ತದೆ. ಅಜ್ಜನ ಕಟ್ಟಳೆಗಳು ರುಕಿಯಾಬಿಗೆ ಬಿಕ್ಕಟ್ಟಿಗೆ ಸಿಲುಕುವಂತೆ ಮಾಡಿರುತ್ತವೆ. ಮನಸ್ಸಿನ ತೊಳಲಾಟವನ್ನು ಹೇಳಿಕೊಳ್ಳಲು ಅಸಾಧ್ಯವಾಗಿರುವ ಸನ್ನಿವೇಶವೂ ಅವಳಿಗೆ ಒದಗಿರುವುದನ್ನು ಕತೆ ಚಿತ್ರಿಸುತ್ತದೆ. ಇಲ್ಲಿ ರುಕಿಯಾಬಿಗೆ ಶ್ರೀಮಂತಿಕೆಗಿಂತ ಮಾನಸಿಕ ನೆಮ್ಮದಿ ಮುಖ್ಯವಾಗಿರುತ್ತದೆ. ತನ್ನ ಮಗನ ಮನೆಯಲ್ಲಿ ಐಷರಾಮಿ ಜೀವನ ನಡೆಸಲು ಬೇಕಾದ ಸೌಕರ್ಯಗಳಿದ್ದರೂ, ಆಕೆ ನಿರ್ಗತಿಕನಾದ ಪುರುಷನೊಡನೆ ಜೀವನ ಸಾಗಿಸಲು ಹಂಬಲಿಸುತ್ತಾಳೆ. ಮಾತೃವಾತ್ಸಲ್ಯಕ್ಕಿಂತ ಪುರುಷ ಪ್ರೇಮಕ್ಕೆ ಹೆಚ್ಚು ಮುಖ್ಯವಾಗುವ ಈ ಮಹಿಳೆಯನ್ನು ಕತೆ ಘನತೆಯಿಂದ ಚಿತ್ರಿಸುತ್ತದೆ.

ಅದೇ ರೀತಿ 'ಕರುಳು' ಕತೆಯಲ್ಲಿ ಬರುವ ಒಬ್ಬ ತಾಯಿಯ ಪಾತ್ರ ವಿಧವೆ. ಇಲ್ಲಿ ಬರುವ ಮಹಿಳೆಗೆ ತನ್ನ ತಾಯಿ ಮತ್ತು ಅಣ್ಣನೆ ಮರುಮದುವೆ ಮಾಡಲು ಮುಂದಾಗುತ್ತಾರೆ. ಆಗ ಮರುಮದುವೆ ಇಷ್ಟವಿದ್ದರೂ ಮಗನನ್ನು ಬಿಟ್ಟಿರಲಾಗದ ದ್ವಂದ್ವ ಕಾಣುತ್ತದೆ. ರಸ್ತೆ ಅಪಘಾತದಲ್ಲಿ ಅಸುನೀಗಿದ ಗಂಡನಿಂದ ಶಾಕಿಗೆ ಒಳಗಾದ ಆಕೆ, ರಸ್ತೆ ಬದಿ ಮಗ ಆಡಲು ಹೋದರೆ ಎಲ್ಲಿಲ್ಲದ ಭಯ ಪಡುತ್ತಾಳೆ. ಗಂಡನಂತೆ ರಸ್ತೆಗೆ ಬಲಿಪಶುವಾಗುತ್ತಾನೆ ಎಂಬ ಭಯದಿಂದ ಹುಚ್ಚಿಯಂತೆ ಆಕೆ ಮಗನಿಗೆ ಹೊಡೆಯುತ್ತಾಳೆ. ಈ ಶಿಕ್ಷೆಯಲ್ಲೂ ಪ್ರಕಟವಾಗುವುದು ತಾಯಿಯ ವಾತ್ಸಲ್ಯವೇ. ಮರುಮದುವೆ ಆಗುವ ಆಸೆ ಮತ್ತು ಮದುವೆ ಆದರೆ ಮಗನಿಂದ ದೂರ ಇರುವ ಚಿಂತೆಯಲ್ಲಿ ಆಕೆ ತೊಳಲಾಡುತ್ತಾಳೆ. 'ಹೃದಯಗಳು' ಕತೆಯಲ್ಲಿ ಮಗ ತಾಯಿಯ ಪ್ರೀತಿಗೆ ಹಂಬಲಿಸಿದರೆ, 'ಕರುಳು' ಕತೆಯಲ್ಲಿ ತಾಯಿ ಮಗನ ಪ್ರೀತಿಗೆ ಹಂಬಲಿಸುವಳು. ಕಟ್ಪಾಡಿ ಅವರ ಮತ್ತೊಂದು ಕತೆ 'ರಾಬಿಯಾ'ದಲ್ಲಿ ಬರುವ ತಾಯಿಗೆ ಇಬ್ಬರು ಮಕ್ಕಳಿದ್ದರೂ, ಅವರಿಗೆ ಪ್ರೀತಿ ನೀಡುವಲ್ಲಿ ಆಕೆ ವಿಫಲಳಾಗುತ್ತಾಳೆ.

ಸಮಾಜದಲ್ಲಿ ಯಾವುದೇ ತಾಯಿ ತನ್ನ ಮಗನ ಯೋಗಕ್ಷೇಮ ನೆಮ್ಮದಿಯನ್ನು ಬಯಸುತ್ತಾಳೆ. ಇಂತಹ ತಾಯಂದಿರ ಪಾತ್ರಗಳು ಕಟ್ಪಾಡಿ ಅವರ ಕತೆಗಳಲ್ಲಿ ಬಹಳ ಬರುತ್ತವೆ. 'ಎತ್ತರ', 'ನೇಣುಗಂಬದ ನೆರಳಲಿ' ಈ ಎರಡೂ ಕತೆಗಳಲ್ಲೂ ಸಹ ಮಗನ ನೆಮ್ಮದಿ ಬಯಸುವ ತಾಯಂದಿರ ಪಾತ್ರಗಳಿವೆ. ಇದಕ್ಕಾಗಿ ಬೇರೆ ಹೆಣ್ಣನ್ನು ಬಲಿಪಶು ಮಾಡುವ ಸ್ತ್ರೀ ಪಾತ್ರಗಳಿವೆ. ಇಲ್ಲಿನ ತಾಯಂದಿರಿಗೆ ಗಂಡುಮಕ್ಕಳ ಮೇಲೆ ಪ್ರೀತಿಯಿರುತ್ತದೆ. ಆದರೆ ಅವರು ಪ್ರೀತಿಸಿದ ಹುಡುಗಿಯರ ಬಗ್ಗೆ ಅಸಹನೆ ಇರುತ್ತದೆ. ಇದಕ್ಕೆ ಕಾರಣ ತಾಯಿ ಅಲ್ಲ, ಪುರುಷ ಪ್ರಧಾನ ವ್ಯವಸ್ಥೆ. ಆ ವ್ಯವಸ್ಥೆ ಸೃಷ್ಟಿಸುವ ವರದಕ್ಷಿಣೆ ಎಂಬ ಪೆಡಂಭೂತ. ಈ ವ್ಯವಸ್ಥೆಗೆ ಬಲಿಯಾಗುವುದು ಮುಗ್ಧ ಪ್ರೇಮಿಗಳು. ತನ್ನಿಂದ ಒಂದು ವಿಷಯವನ್ನು ಬಚ್ಚಿಟ್ಟ ವಿಷಯ ತಿಳಿದ ಮಗ 'ಈ ವಿಚಾರವನ್ನು ಏಕೆ ಮುಚ್ಚಿಟ್ಟಿದ್ದೀರಿ?' ಎಂದಾಗ ತಾಯಿ 'ನೀನು ಈವರೆಗೆ ಯಾವ ನೋವನ್ನೂ

ಅನುಭವಿಸಿದವನಲ್ಲ. ನಿನ್ನ ಮನಸ್ಸನ್ನು ನೋಯಿಸಬಾರದೆಂದು ಹೇಳದೆ ಸಂದರ್ಭ ಹುಡುಕುತ್ತಾ ಇದ್ದೆವು' ಎಂದು ಉತ್ತರಿಸುತ್ತಾಳೆ. ಇದೇ ರೀತಿ 'ನೇಣುಗಂಬದ ನೆರಳಲ್ಲಿ' ಕತೆಯಲ್ಲೂ ಮಕ್ಕಳ ಕ್ಷೇಮ ಮುಖ್ಯವಾಗಿರುವ ತಾಯಿ ಪಾತ್ರವಿದೆ. ತನ್ನ ತಂಗಿ ಮತ್ತೊಬ್ಬನನ್ನು ಪ್ರೀತಿಸಿದ್ದ ವಿಷಯ ತಿಳಿಯದೆ ಅಣ್ಣನಾದ ವಿಶ್ವನಾಥ ತಂಗಿಗೆ ಬಲವಂತವಾಗಿ ಬೇರೆಯವರೊಡನೆ ಮದುವೆ ಮಾಡುತ್ತಾನೆ. ಈ ವಿಷಯ ತಿಳಿದೊಡನೆ ಅವನಿಗೆ ಆಕಾಶವೇ ಕಳಚಿಬಿದ್ದಂತೆ ಆಗುತ್ತದೆ. 'ನನ್ನಿಂದ ಈ ವಿಷಯ ಮುಚ್ಚಿಟ್ಟದ್ದು ಏಕೆ?' ಎಂದಾಗ ಅವನ ತಾಯಿ 'ನಿನ್ನ ನೆಮ್ಮದಿಯನ್ನೇಕೆ ಕೆಡಿಸಲಿ ಎಂದು ಈ ವಿಷಯ ತಿಳಿಸಲಿಲ್ಲ' ಎಂದು ಸಮಾಧಾನ ಮಾಡುತ್ತಾಳೆ. ಇಲ್ಲಿ ತಾಯಿಯಾದವಳ ಕಳಕಳಿ ಮುಖ್ಯವಾಗಿದೆ.

ಮಹಿಳೆಯರ ಮನುಷ್ಯ ಸ್ವಭಾವಗಳಿಗೆ ಆರ್ಥಿಕ ಅಥವಾ ವರ್ಗ ನೆಲೆ ಮಾತ್ರ ಕಾರಣವಲ್ಲ. ಒಳ್ಳೆತನ ಮತ್ತು ಕ್ಷುದ್ರತೆ ಎಂಬುದು ವರ್ಗಾತೀತವಾಗಿ ಎಲ್ಲಾ ಮಹಿಳೆಯರಲ್ಲಿ ಇರಬಹುದು ಎಂಬುದನ್ನು ಕಟ್ಪಾಡಿ ಕತೆಗಳು ನಿರೂಪಿಸುತ್ತವೆ. ಈ ಮೂಲಕ ಅವು ಮಹಿಳಾ ಪಾತ್ರಗಳನ್ನು ಏಕಮುಖಿ, ಸರಳೀಕೃತ ಮತ್ತು ಪಡಿಯಚ್ಚಿನ ಪಾತ್ರಗಳನ್ನು ಸೃಷ್ಟಿಸುವುದರಿಂದ ಪಾರಾಗುತ್ತವೆ. ಅವರ ಕತೆಗಳಲ್ಲಿ ತಾಯ್ತನದ ಪಾತ್ರಗಳ ವೈವಿಧ್ಯಮಯ ವಿನ್ಯಾಸವಿದೆ.

೪.೩. ಸಾಮಾಜಿಕ ತಾಯ್ತನ

ಭಾವನಾಜೀವಿಯಾದ ಹೆಣ್ಣಿನಲ್ಲಿ ತಾಯ್ತನ ಮಡುಗಟ್ಟಿರುತ್ತದೆ. ಹೆಣ್ಣು ಭಾವನೆಗಳಿಗೆ ಬೇಗನೆ ಸ್ಪಂದಿಸುವ ಗುಣವುಳ್ಳವಳು. ಆಕೆ ತನ್ನ ಮಕ್ಕಳನ್ನಷ್ಟೇ ಅಲ್ಲದೇ ಬೇರೆಯವರ ಮಕ್ಕಳಿಗೂ ಮಿಡಿಯುವ ವಿಶಾಲ ಮನಸ್ಕಳು. ಆದರೆ ಪುರುಷಕೇಂದ್ರಿತ ಸಮಾಜದಲ್ಲಿ ಇದೇ ಹೆಣ್ಣು ಹುಟ್ಟುತ್ತಲೇ ಕಷ್ಟ ಅನುಭವಿಸುವಂತಹವಳು. ಕುಟುಂಬದ ಕಣ್ಣಾಗಿರುವ ಆಕೆ ತನ್ನ ಕುಟುಂಬ ವರ್ಗಕ್ಕೆ ಮಾತ್ರವಲ್ಲ, ಕಷ್ಟದಲ್ಲಿರುವ ನೆರೆಹೊರೆಯವರಿಗೆ ಕೂಡ ಮಿಡಿಯುವ ತಾಯ್ತನ ಉಳ್ಳವಳು. ಇಂತಹ ತಾಯ್ತನವನ್ನು ಸಾಮಾಜಿಕ ತಾಯ್ತನ ಎಂದು ಕರೆಯಬಹುದು. ಆದರೆ ಈ ಸಾಮಾಜಿಕ ತಾಯ್ತನವು ಕೇವಲ ಮಹಿಳೆಯರಲ್ಲಿ ಇರುವುದಿಲ್ಲ. ಪುರುಷರಲ್ಲಿಯೂ ಕಾಣಬರುತ್ತದೆ. ಇಂತಹ ತಾಯ್ತನದ ಹಲವು ಚಿತ್ರಗಳು ಕಟ್ಪಾಡಿ ಕತೆಗಳಲ್ಲಿವೆ.

೪.೩.೧. ಗಂಡ ಮತ್ತು ಹೆಂಡತಿ ನಡುವಿನ ತಾಯ್ತನ: ಪುರುಷ ಪ್ರಧಾನ ಸಮಾಜದಲ್ಲಿ ಪುರುಷನಿಗೆ ಮನೆಯ ಹೊರಗೆ ಹೋಗಿ ಆರ್ಥಿಕವಾಗಿ ಗಳಿಸುವ ಹೊಣೆಗಾರಿಕೆಗಳನ್ನು ವಹಿಸಲಾಗಿದೆ. ಈ ಕರ್ತವ್ಯವನ್ನು ನಿರ್ವಹಿಸುವುದರಿಂದ ಆತ ಕುಟುಂಬದಲ್ಲಿ ಎಲ್ಲ ಸದಸ್ಯರನ್ನೂ ನಿಯಂತ್ರಿಸುವ ಯಜಮಾನನಾಗಿರುವುದು ಸಾಧ್ಯವಾಗಿದೆ. ಕೆಲವು ಸಂದರ್ಭದಲ್ಲಿ ಕಾರಣಾಂತರಗಳಿಂದ ಈ ಪುರುಷರು ಕುಟುಂಬಕ್ಕೆ ಆರ್ಥಿಕ ಆಧಾರ ಒದಗಿಸುವಲ್ಲಿ ಅಸಮರ್ಥರಾಗುತ್ತಾರೆ. ಆಗ ಅವರ

ಹೆಂಡತಿಯರೆ ತಮ್ಮ ಪಾಲಿನ ಗೃಹಕೃತ್ಯ, ಮಕ್ಕಳ ಪಾಲನೆ-ಪೋಷಣೆಯ ಜೊತೆಗೆ ಆರ್ಥಿಕ ಆದಾಯವನ್ನು ಒದಗಿಸಲು ಬೇರೆ ಕೆಲಸಗಳಲ್ಲಿ ತೊಡಗುವುದುಂಟು. ಆದರೂ ಆಕೆಗೆ ಕುಟುಂಬದಲ್ಲಿ ಉತ್ತಮವಾದ ಸ್ಥಾನಮಾನ ಇರುವುದಿಲ್ಲ. ಪುರುಷನಂತೆ ದುಡಿಮೆ ಮಾಡುವಲ್ಲಿ ಸ್ತ್ರೀ ಮೇಲುಗೈ ಸಾಧಿಸಿದರೂ ಗಂಡಿಗಿರುವ ಪ್ರಾಶಸ್ತ್ಯ ಹೆಣ್ಣಿಗಿರುವುದಿಲ್ಲ. ಗಂಡಿನ ದುಡಿಮೆಗೆ ಒಂದು ರೀತಿಯಲ್ಲಿ ಸೀಮಿತ ಚೌಕಟ್ಟಿರುತ್ತದೆ. ಹೆಣ್ಣಿನ ದುಡಿಮೆ ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಹೀಗಿರುವಾಗಲೂ ಗಂಡನಾದವನು ಹೆಣ್ಣಿನ ದುಡಿಮೆಗೆ ಬೆಲೆ ನೀಡುವುದಿಲ್ಲ. ಆಕೆಯು ದೈಹಿಕವಾಗಿ, ಮಾನಸಿಕವಾಗಿ ನೊಂದಾಗ ಸಾಂತ್ವನ ಹೇಳುವ ಸೌಜನ್ಯ ಕೆಲವರಲ್ಲಿ ಕಂಡುಬಂದರೆ, ಮತ್ತೆ ಕೆಲವರಲ್ಲಿ ಅದರಲ್ಲೂ ಶ್ರೀಮಂತರಲ್ಲಿ ಇದು ಕಂಡುಬರುವುದಿಲ್ಲ. ಇದನ್ನು ಕಟ್ಪಾಡಿ ಅವರ ಹಲವು ಕತೆಗಳು ಕಾಣಿಸುತ್ತವೆ.

ಹೆಣ್ಣಾದವಳು ದಣಿದು ಬಂದ ಗಂಡನನ್ನು ನೋಡಿದೊಡನೆ ತನ್ನ ಕೆಲಸವನ್ನು ಬಿಟ್ಟು ಓಡಿ ಬರುತ್ತಾಳೆ. ಇಲ್ಲವೇ ಆತನ ನೋವನ್ನು ತನ್ನ ನೋವೆಂಬಂತೆ ವ್ಯಥೆ ಪಡುವಂತಹ ಸ್ತ್ರೀಪಾತ್ರ ಚಿತ್ರಣವನ್ನು ಕಟ್ಪಾಡಿ ಅವರು 'ನೋಂಬು', 'ಹತ್ಯೆ', 'ವಂತಿಗೆ', ಮುಂತಾದ ಕತೆಗಳಲ್ಲಿ ನೋಡಬಹುದು. 'ನೋಂಬು' ಕತೆಯಲ್ಲಿ ಬರುವ ಹಲಿಮಾ, 'ಹತ್ಯೆ' ಕತೆಯ ಉಮ್ಮಾ, 'ವಂತಿಗೆ' ಕತೆಯ ಉಮ್ಮಾತುಮ್ಮಾ ಅವರ ಗಂಡಂದಿರು ತೀವ್ರ ಕಾಯಿಲೆಯಿಂದ ನರಳುವ ರೋಗಿಗಳು. ಇಲ್ಲಿ ತಮ್ಮ ಗಂಡಂದಿರ ಬಗೆಗೆ ಅವರ ಹೆಂಡತಿಯರು ತೋರುವ ಕಾಳಜಿಯ ಚಿತ್ರಗಳನ್ನು ಕಟ್ಪಾಡಿ ಅವರು ಮನಕರಗುವಂತೆ ಚಿತ್ರಿಸಿದ್ದಾರೆ. ಹಲಿಮಾ ಬೀಡಿ ಎಲೆಗಳ ಕಟ್ಟನ್ನು ಹೊತ್ತು ಬಂದ ತನ್ನ ಗಂಡನ ದಣಿವನ್ನು ಅರ್ಥೈಸಿಕೊಂಡು ಮನದಲ್ಲೇ ಮರುಕಪಡುತ್ತಾಳೆ. ಗಂಡನ ನೋವನ್ನು ತನ್ನ ನೋವೆಂಬಂತೆ ವ್ಯಥೆಪಡುತ್ತಾಳೆ. ಇದನ್ನು ಕತೆ ಆಕೆ ಬೀಡಿಕಟ್ಟುವ ವೇಗ ನಿಧಾನವಾಗುವ ಸೂಕ್ಷ್ಮ ವಿವರದ ಮೂಲಕ ಕಾಣಿಸುತ್ತದೆ. ಆಕೆ ಬೀಡಿ ಕಟ್ಟದಿದ್ದರೆ ಊಟಕ್ಕೆ ಗತಿ ಇಲ್ಲದಿರುವಂತಹ ಸಂದರ್ಭ ಇಲ್ಲಿರುತ್ತದೆ. ಗಂಡನ ದಣಿವಿನಿಂದ ಹಲಿಮಾ ಮಾನಸಿಕವಾಗಿ ತತ್ತರಿಸಿ ಹೋಗುತ್ತಾಳೆ. ಮಗನ ಮೇಲೆ ಸಿಡಿಮಿಡಿಗೊಳ್ಳುತ್ತಾಳೆ. ಇಲ್ಲಿ ಆಕೆಗೆ ದುಡಿಮೆ, ಮಗನ ಆಟ, ಗಂಡನ ಆರೋಗ್ಯ ಮೂರೂ ಮುಖ್ಯ. ಸ್ತ್ರೀಯರು ತಮ್ಮ ಮನೆ ಗಂಡಸರ ಮೇಲಿನ ಕಾಳಜಿಯಿಂದ ಮಾನಸಿಕ ಒತ್ತಡಕ್ಕೆ ಒಳಗಾಗುವುದನ್ನು ಕತೆಗಳು ಕಾಣಿಸುತ್ತವೆ. ಇಲ್ಲಿ ಹಲಿಮಾ ಗಂಡನ ನೋವಿಗೆ ಕೂತಲ್ಲಿಯೇ ಮರುಕ ವ್ಯಕ್ತಪಡಿಸಿದರೆ, 'ವಂತಿಗೆ' ಕತೆಯ ಉಮ್ಮಾತುಮ್ಮಾ, ಗಂಡ ಒಂದೇ ಸಮನೆ ಕೆಮ್ಮುವುದು ಕಂಡು ಹತ್ತಿರ ಓಡಿ ಬರುತ್ತಾಳೆ. ಅವನ ಕಷ್ಟಕ್ಕೆ ಸ್ಪಂದಿಸುತ್ತಾಳೆ. ದೇವರಲ್ಲಿ ಮೊರೆಯಿಡುತ್ತಾಳೆ. ಗಂಡನ ತೊಳಲಾಟ ನೋಡಲಾರದೆ ದುಃಖದಿಂದ "ಇವರಿಗೇನಾದ್ರೂ ಆದ್ರೆ ನಾನೇನು ಮಾಡ್ಬೇಕು ತಂಪುರಾನೇ!" ಪರಿತಪಿಸುತ್ತಾಳೆ. ಗಂಡನಿಲ್ಲವಾದರೆ ಹೇಗೆ ಬದುಕಲಿ ಎಂಬ ಪ್ರಶ್ನೆ ಆಕೆಯಲ್ಲಿ ಕಾಡುತ್ತದೆ.

ಗಂಡನ ಕಷ್ಟಕ್ಕೆ ಮಿಡಿಯುವ, ಗಂಡನ ಬಗೆಗಿನ ಕಾಳಜಿ ವಹಿಸುವ ಮಡದಿಯ ಪಾತ್ರ ಚಿತ್ರಣವನ್ನು 'ಹತ್ಯೆ' ಕತೆಯಲ್ಲಿಯೂ ಕಾಣಬಹುದು. ಇಲ್ಲಿ ಬರುವ ಗಂಡ ತೀವ್ರ ಜ್ವರದಿಂದ ನರಳುತ್ತಿರುತ್ತಾನೆ. ಆತನ ಬಗ್ಗೆ ಹೆಂಡತಿ ಅತೀವ ಕಾಳಜಿ ವಹಿಸುತ್ತಾಳೆ. ಮಕ್ಕಳು ದನದ ಪೂಜೆಗಾಗಿ ಹಸುವಿನ ಸ್ನಾನ ಮಾಡಿಸಲು ಮುಂದಾಗುತ್ತಾರೆ. ಆಗ ಗಂಡ ಮಕ್ಕಳಿಗೆ ನೆರವಾಗಲು ಮುಂದಾಗುತ್ತಾನೆ. ಆಗ ಹೆಂಡತಿ "ಜ್ವರ ಸೋಲುಪ ಬಿಟ್ಟದೇಂತ ಇನ್ನು ನೀರಿಗೆ ಕೈ ಹಾಕ್ಲಿಕ್ಕೆ ಬರ್ಬೇಡಿ" ಎಂದು ಎಚ್ಚರಿಸುತ್ತಾಳೆ. ಇಲ್ಲಿ ಕೂಡ ಗಂಡನ ಆರೋಗ್ಯದ ಬಗೆಗಿನ ಆಕೆ ತಾಯ್ತನ ವ್ಯಕ್ತವಾಗಿದೆ. ಮಕ್ಕಳು ದನವನ್ನು ಮೇಯಿಸಲಿಕ್ಕೆ ಹೋದವರು ಸಂಜೆ ಆದರೂ ತಿರುಗಿ ಬರದಿದ್ದಾಗ, ಮಕ್ಕಳನ್ನು ಹುಡುಕುತ್ತ ಹೊರಟ ಗಂಡನಿಗೆ ಹೆಂಡತಿ "ನಾನು ನಿಮ್ಜೊತೆಗೆ ಬರ್ತೇನೆ, ಜ್ವರ ಬಂದವ್ರು ನೀವು..... ದಾರಿಯಲ್ಲಿ ತಲೆ ತಿರುಗಿ ಬಿದ್ದು ಬಿಟ್ರೆ?" ಎನ್ನುತ್ತಾಳೆ. ಇಲ್ಲಿ ಮಕ್ಕಳ ಬಗೆಗೆ ತಾಯಿಯಾಗಿ ಹೆಣ್ಣು ತೋರುವ ಕಾಳಜಿಯಷ್ಟೆ ಗಂಡನ ಆರೋಗ್ಯದ ಕಡೆಗೂ ತೋರುವಳು. ಇದೇ ರೀತಿಯ ಸಂವೇದನೆಯನ್ನು ಆರಿಫ್ ರಾಜಾ ಅವರ 'ಹೊಲಿಗೆ ಯಂತ್ರದ ಅಮ್ಮಿಯ ಕವಿತೆಗಳು' ಕವನದಲ್ಲಿ ಕಾಣಬಹುದು.

"ಕಟ್ಟಿಕೊಂಡ ಗಂಡನನ್ನು ಹೊಟ್ಟೆಯ ಮಗುವಿನಂತೆ ಸಾಕಿ
ಹೊಲಿಗೆಯಂತ್ರದ ಕೂಡ ಕಾಲು ಶತಮಾನ ಕಳೆದ
ನನ್ನ ಅಮ್ಮಿಗೆ....."[೩]

ಸಾಲುಗಳು ಗಂಡನನ್ನು ತಾಯಿಯಂತೆ ಪೋಷಿಸುವ ಹೆಣ್ಣಿನ ಚಿತ್ರಣದೊಂದಿಗೆ ಸಂಸಾರದ ಹೊರೆಯನ್ನು ಹೊತ್ತು ತನ್ನ ಜೀವನವನ್ನೆ ಮುಡಿಪಿಟ್ಟ ನಿಸ್ವಾರ್ಥ ಪ್ರೀತಿಯನ್ನು ಕಾಣಬಹುದು.

ಶ್ರೀಮಂತ ಮತ್ತು ಬಡ ಕುಟುಂಬಗಳಲ್ಲಿ ಗಂಡ ಹೆಂಡತಿಯರ ಸಂಬಂಧಗಳ ಚಿತ್ರ ವಿಶಿಷ್ಟವಾಗಿದೆ. ಸಿರಿವಂತ ಕುಟುಂಬದಲ್ಲಿ ಗಂಡನ ನೋವನ್ನು ಹೆಂಡತಿ ಅರ್ಥೈಸಿಕೊಂಡಷ್ಟು, ಹೆಂಡತಿಯ ನೋವನ್ನು ಗಂಡ ಅರ್ಥೈಸಿಕೊಳ್ಳುವುದು ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಬಡಕುಟುಂಬಗಳಲ್ಲಿ ಹೆಣ್ಣಿನ ಕಷ್ಟಕ್ಕೆ ಗಂಡಸರೂ ಮಿಡಿಯುತ್ತಾರೆ. ಹೆಣ್ಣು ಶ್ರೀಮಂತ ಕುಟುಂಬದ್ದಾಗಿರಲಿ, ಬಡಕುಟುಂಬದ್ದಾಗಿರಲಿ, ಗಂಡಸರ ಬಗೆಗೆ ಅಪಾರ ಪ್ರೀತಿ ಪ್ರಕಟಿಸುತ್ತಾರೆ. ಬಡಕುಟುಂಬದಲ್ಲಿ ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ತಾಯ್ತನದ ಭಾವದಲ್ಲಿ ಮಿಡಿಯುವರು. ಇಂತಹ ಪಾತ್ರಚಿತ್ರ 'ಅಜರ್ ಎಂಬ ಹುಡುಗ' ಕತೆಯಲ್ಲಿ ಕಂಡುಬರುತ್ತದೆ. ಶಮೀಮ್‌ಬಾನು ಶಸ್ತ್ರಚಿಕಿತ್ಸೆಯಿಂದ ತೀವ್ರ ನರಳುತ್ತಿರುವುದನ್ನು ಯಾಕೂಬ್‌ಗೆ ಹೇಳದಿದ್ದರೂ ಆತ ಅರ್ಥ ಮಾಡಿಕೊಳ್ಳುತ್ತಾನೆ. "ಮಗನಿಗಾಗಿ ನಾವೆಲ್ಲವನ್ನು ಸಹಿಸಿಕೊಳ್ಳಬೇಕಾಗಿದೆ. ಕಷ್ಟ ಯಾರಿಗೆ ಎದುರಾಗಿಲ್ಲ. ಹೇಳು ಸ್ವತಃ ಪೈಗಂಬರಿಗೆ ಕಷ್ಟ ಬಂದಿದೆ. ನಮ್ಮದೇನು ಮಹಾ..." ಎಂದು ಸಮಾಧಾನ

ಮಾಡುತ್ತಾನೆ. ಹೆಂಡತಿ ಕಾಯಿಲೆಯಿಂದ ನರಳುತ್ತಿದ್ದರೂ ವೈದ್ಯರಿಗೆ ತೋರಿಸಲಾಗದ ಆರ್ಥಿಕ ದುಸ್ಥಿತಿ ಅವನಿಗೆ ಒದಗಿರುತ್ತದೆ. ಆದರೂ ಪ್ರೀತಿಯ ಕೊರತೆ ಅವನು ತೋರುವುದಿಲ್ಲ. ಪರಸ್ಪರ ನೋವನ್ನು ಮತ್ತು ಭಾವನೆಯನ್ನು ಹಂಚಿಕೊಳ್ಳುವ ಮನಸ್ಸು ಇಬ್ಬರಲ್ಲಿಯೂ ಕಂಡುಬರುತ್ತದೆ. ಆದರೆ ಶ್ರೀಮಂತ ಕುಟುಂಬಗಳಲ್ಲಿ ಈ ದೃಶ್ಯ ಇರುವುದಿಲ್ಲ. ಅಲ್ಲಿ ಧರ್ಮದ ಕಟ್ಟಳೆಗಳಿಗೆ ಮನುಷ್ಯ ಸಂಬಂಧಗಳು ಹಾಳಾಗಿರುವುದನ್ನು ಕಟ್ಪಾಡಿ ಕತೆಗಳು ಚಿತ್ರಿಸುತ್ತವೆ. ಅಲ್ಲಿ ಕೌಟುಂಬಿಕ ವ್ಯವಸ್ಥೆಯೇ ಕ್ರೂರವಾಗಿ ಸ್ತ್ರೀಯರನ್ನು ನಡೆಸಿಕೊಳ್ಳುವುದು ಕಾಣುತ್ತದೆ. 'ನೋಂಬು' 'ಜುಲೇಖ' 'ಮುಸುಕು', 'ರಾಬಿಯಾ' ಮುಂತಾದ ಕತೆಗಳಲ್ಲಿ ಸ್ತ್ರೀಯರನ್ನು ಒಂದು ಸರಕನ್ನಾಗಿ ನೋಡುವ ಕುಟುಂಬ ವ್ಯವಸ್ಥೆ ಕಂಡುಬರುತ್ತದೆ. ಇಲ್ಲಿ ಸ್ತ್ರೀಯರು ಗಂಡನಿಗೆ ಅಡಿಯಾಳಾಗಿ ಬದುಕುವ ವ್ಯವಸ್ಥೆಯನ್ನು ಚಿತ್ರಿಸಲಾಗಿದೆ. ಅವಳನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ನಡೆಸಿಕೊಳ್ಳುವುದು ಕಾಣಬರುತ್ತದೆ. ಹೆಣ್ಣನ್ನು ಕೇವಲ ಅಡಿಗೆಮನೆಗೆ ಸೀಮಿತಗೊಳಿಸುವ ಚಿತ್ರಗಳು ಇಲ್ಲಿನವು. ಗಂಡಾದವನು ನಿರಂಕುಶ ಯಜಮಾನನಾಗಿ ಕಾಣುತ್ತಾನೆ. 'ನೋಂಬು' ಕತೆಯಲ್ಲಿ ಕಾಸಿಮನ ತಂದೆ, ತನ್ನ ಹೆಂಡತಿಯ ಭಾವನೆಗಳನ್ನು ಹಂಚಿಕೊಳ್ಳುವುದೇ ಇಲ್ಲ. ಅವಳು ಅಲ್ಲಿ ಕೇವಲ ಗಂಡ ಹೇಳಿದಂತೆ ಕೇಳುವ ಗೊಂಬೆ. 'ರಾಬಿಯಾ' ಕತೆಯಲ್ಲಿ ಕೂಡ ಮಹಿಳೆ ಕೇವಲ ದುಡಿಯುವ ಯಂತ್ರವಾಗಿದ್ದಾಳೆ. ಹೆಣ್ಣಿನ ಸೂಕ್ಷ್ಮ ಭಾವನೆಗೆ ಮಿಡಿಯದ ಪುರುಷನಾಗಿ ಶರೀಫಾ ಕಂಡುಬರುತ್ತಾನೆ. ಒಟ್ಟಾರೆಯಾಗಿ ಹೇಳುವುದಾದರೆ ವರ್ಗಗಳಿಗೂ ಮನುಷ್ಯ ಸಂಬಂಧಗಳಿಗೂ ಇರುವ ಸಂಬಂಧವನ್ನು ಕಟ್ಪಾಡಿ ಅವರ ಕತೆಗಳು ಪರೋಕ್ಷವಾಗಿ ಚಿತ್ರಿಸುತ್ತವೆ. ಬಡಕುಟುಂಬಗಳಲ್ಲಿ ಬರುವ ಪುರುಷರು ಸಾಮಾಜಿಕವಾದ ತಾಯ್ತನವನ್ನು ಹೆಚ್ಚು ಪ್ರಕಟಿಸುತ್ತಾರೆ.

೪.೩.೨. ಅತ್ತಿಗೆ ಮತ್ತು ಮೈದುನನ ನಡುವಿನ ತಾಯ್ತನ: ಕಟ್ಪಾಡಿಯವರ ಕತೆಗಳಲ್ಲಿ ಅತ್ತಿಗೆ ಮೈದುನರ ಸಂಬಂಧಗಳಲ್ಲಿ ಪ್ರಕಟವಾಗುವ ತಾಯ್ತನದ ಭಾವವು ವಿಶೇಷವಾಗಿದೆ. 'ಸಂಗ್ಯಾಬಾಳ್ಯಾ' ನಾಟಕದಲ್ಲಿ ಗಂಗಿ ತನ್ನ ಇಬ್ಬರು ಮೈದುನರಿಗೆ ತಾಯ್ತನದ ಪ್ರೀತಿ ನೀಡುವುದನ್ನು ಕಾಣಬಹುದು. ಹಾಗೆಯೇ ಕಟ್ಪಾಡಿ ಅವರ ಕತೆಗಳಲ್ಲೂ ಸಹ ಅತ್ತಿಗೆ ಆದವಳು ತನ್ನ ಮೈದುನನಿಗೆ ತಾಯ್ತನದ ಪ್ರೀತಿ ತೋರುತ್ತಾಳೆ. 'ರಾಬಿಯಾ' ಕತೆಯಲ್ಲಿ ಇಂತಹದೊಂದು ಭಾವನಾತ್ಮಕ ತಾಯ್ತನ ಕಂಡುಬರುತ್ತದೆ. ಇಲ್ಲಿ ಮೈದುನನಾದ ಗಫೂರ್ ತನ್ನ ಅತ್ತಿಗೆಯಲ್ಲಿ ತಾಯ್ತನದ ಅನುಭವವನ್ನು ಪಡೆಯುತ್ತಾನೆ. ರಾಬಿಯಾ ಕೂಡ ತನ್ನ ಮಕ್ಕಳಿಗೆ ನೀಡುವ ಪ್ರೀತಿಯನ್ನು ಗಫೂರ್‌ಗೆ ವಿಸ್ತರಣೆ ಮಾಡುತ್ತಾಳೆ. ಸೂಕ್ಷ್ಮವಾಗಿ ಗಮನಿಸಿದರೆ ತಾಯಿ-ಮಗನ ಪ್ರೀತಿ ಎನ್ನುವ ರೀತಿಯಲ್ಲಿ ಅವರಿಬ್ಬರ ನಡುವಿನ ವಾತ್ಸಲ್ಯ ಕಂಡುಬರುವುದಿಲ್ಲ. ಮೈದುನ ಆಕೆಯ ಸೆರಗಿನಿಂದ ಕೈಒರೆಸಿಕೊಳ್ಳುವುದಾಗಿರಬಹುದು ಇಲ್ಲವೇ ಆಕೆಗೆ ರೇಗಿಸುವುದು ಗಮನಿಸಿದರೆ, ಇಲ್ಲಿ ತಾಯಿ-ಮಗನ ಸಂಬಂಧಕ್ಕಿಂತ ಭಿನ್ನವಾದ ಪ್ರೀತಿಯು ಕಂಡುಬರುತ್ತದೆ. ಅವರಿಬ್ಬರೂ ಪ್ರಾಯಸ್ಥರಾಗಿರುವುದರಿಂದ ಅವರ

ಸಂಬಂಧಕ್ಕೆ ಸಣ್ಣ ಮಟ್ಟದ ಪ್ರೇಮದ ಆಯಾಮವೂ ಇದೆ. ಆದರೆ ಈ ಪ್ರೀತಿ ಲೈಂಗಿಕ ಆಕರ್ಷಣೆಯೂ ಅಲ್ಲದ, ಶುದ್ಧ ಮಗುವಿನ ಪ್ರೀತಿಯೂ ಅಲ್ಲದ ಒಂದು ಸಂಕೀರ್ಣ ರೂಪದಲ್ಲಿದೆ. ರಾಬಿಯಾ ತಾಯಿಯ ವಾತ್ಸಲ್ಯದಂತಹ ಪ್ರೀತಿಯನ್ನು ಮೈದುನನಿಗೆ ಕೊಟ್ಟರೂ ಅದು ಕೇವಲ ತಾಯಿಯ ವಾತ್ಸಲ್ಯದ ರೀತಿಯಲ್ಲಿಲ್ಲ.

"ರಾಬಿಯಾ ಮತ್ತು ಮೈದುನ ಗಫೂರನ ಸಂಬಂಧ ತಾಯಿ ಮಗನ ಸಂಬಂಧದಂತೆ ಇತ್ತು. ಆದರೂ ಮದುವೆ ಮಾಡಿದರು. ಅಣ್ಣ ಮತ್ತು ಅತ್ತಿಗೆ ಮೊದಲಿನಂತೆ ಬದುಕಿರಲಿ ಎಂಬ ಉದ್ದೇಶದಿಂದ ಈ ಕ್ಷತ್ರಿಯ ಮದುವೆಗೆ ಒಪ್ಪಿದ್ದ ಗಫೂರ್" ಎಂದು ರಂಜಾನ್‌ದರ್ಗಾ ಅವರು 'ಪಚ್ಚಕುದುರೆ' ಕಥಾಸಂಕಲನದ ಮುನ್ನುಡಿಯಲ್ಲಿ ಹೇಳುತ್ತಾರೆ.[೪] ಇದನ್ನು ಒಪ್ಪುವುದು ಕಷ್ಟ. ಅಂತಹ ಲೈಂಗಿಕವಲ್ಲದ ಉದ್ದೇಶ ಮೈದುನನಲ್ಲಿದಿದ್ದರೆ, ಅವನು ಮದುವೆಯಾದ ಎರಡೇ ದಿನದಲ್ಲಿ ತನ್ನ ಮಾಜಿ ಅತ್ತಿಗೆಯೊಡನೆ ಸಂಬಂಧ ಬೆಳೆಸುತ್ತಿರಲಿಲ್ಲ. ಆಕೆ ಗರ್ಭಿಣಿ ಆಗುತ್ತಿರಲಿಲ್ಲ. ಗಫೂರ್ ಅತ್ತಿಗೆಯೊಡನೆ ಮದುವೆಯಾಗಬೇಕಾದ ವಿಚಾರ ಕೇಳಿದೊಡನೆ ಹೌಹಾರುತ್ತಾನೆ. ಮದುವೆಯ ಬಗ್ಗೆ ಏನೇನೋ ಕನಸು ಕಾಣುತ್ತಿದ್ದವನಿಗೆ ಅತ್ತಿಗೆಯನ್ನೇ ಮದುವೆಯಾಗು ಎಂದು ಅಮ್ಮ ಹೇಳಿದಾಗ ಒಂದೆಡೆ ಭಯ, ಏನೋ ಹೊಸ ತರ ಕುತೂಹಲ. ರೋಮಾಂಚನ ಎಲ್ಲ ಒಂದೇ ಬಾರಿಗೆ ವ್ಯಕ್ತವಾಗುತ್ತವೆ. ಹದಿಹರೆಯ ವಯಸ್ಸಿನವರು ಮದುವೆ ಬಗ್ಗೆ ಕನಸು ಕಾಣುವುದು ಸಹಜ. ಆದರೆ ಇಲ್ಲಿ ಗಫೂರ್ ಮದುವೆಯ ಬಗ್ಗೆ ಯೋಚನೆ ಮಾಡುವಾಗ ಅತ್ತಿಗೆ ರೀತಿ ಕಪ್ಪು ಬಣ್ಣದವಳಾದರೂ ಪರವಾಗಿಲ್ಲ ಎನ್ನುವದು, ಅನುಮಾನಕ್ಕೆ ಆಸ್ಪದ ಮಾಡಿಕೊಡುತ್ತದೆ. ಭಯ, ಕುತೂಹಲ, ರೋಮಾಂಚನ ಈ ಮೂರು ಒಟ್ಟೊಟ್ಟಿಗೆ ಅವನಲ್ಲಿ ಆಗುತ್ತವೆ. ಆಗ ಅತ್ತಿಗೆ ಮೈದುನನ ಸಂಬಂಧ ತಾಯಿ–ಮಗನಂತಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆಕೆಗೂ ಅವನ ಮೇಲೆ ಪ್ರೀತಿ ಬೇರೆ ರೀತಿ ಇತ್ತೆಂದು ತಿಳಿದುಬರುತ್ತದೆ. ಮೈದುನ ಆಕೆಯ ಸೆರಗಿಗೆ ಕೈಯೊರೆಸುವಾಗ ಆಕೆ 'ನಿನ್ನದು ಬಹಳ ಅತಿಯಾಯಿತು ನೋಡು, ನಿನಗೆ ಬೇಗ ಮದುವೆ ಮಾಡಬೇಕು' ಎಂದು ಹುಸಿಕೋಪ ನಟಿಸುತ್ತಾಳೆ. ಇಲ್ಲಿ ಆಕೆಗೂ ಗಫೂರನ ಮೇಲಿನ ಪ್ರೀತಿಯಿತ್ತು ಎಂದು ತಿಳಿಯುತ್ತದೆ. ಗಫೂರ್‌ಗೆ ತಾಯಿ ಇದ್ದರೂ ಸಹ ಅತ್ತಿಗೆ ಹತ್ತಿರ ಪ್ರೀತಿ ಪಡೆಯಲು ಮುಂದಾಗುತ್ತಾನೆ. ಗಫೂರ್‌ಗೆ ಹೆತ್ತ ತಾಯಿಗಿಂತ ಬಾಬಿಯ ಜೊತೆಗೆ ಸಲುಗೆ ಜಾಸ್ತಿ ಇಟ್ಟುಕೊಂಡಿರುತ್ತಾನೆ. ಹಾಗಾಗಿ ಅವನು ಅತ್ತಿಗೆಯ ಮರುಮದುವೆಗೆ ಒಪ್ಪಿದ ಉದ್ದೇಶದಲ್ಲಿ ಅವನ ಸ್ವಾರ್ಥ ಅಡಗಿರುವುದನ್ನು ಗುರುತಿಸಬಹುದು. ಇಲ್ಲಿ ರಾಬಿಯಾಳ ತಾಯ್ತನ ಭಾವನಾತ್ಮಕ ತಾಯ್ತನವಾಗುತ್ತದೆ. ಕತೆಯಲ್ಲಿ ಜೈವಿಕ ಮತ್ತು ಭಾವನಾತ್ಮಕ ತಾಯ್ತನ ಎರಡು ಸಹ ಮುಖಾಮುಖಿಯಾಗುತ್ತವೆ. ಮೈದುನನೊಡನೆ ಮದುವೆ ಎಂದು ರಾಬಿಯಾಗೆ ಗೊತ್ತಾದೊಡನೆ ಚಟ್ಟನೆ ಚೀರಿದಂತೆ "ಯಾ ಅಲ್ಲಾಹ್.. ನನಗೆ ಈ ಥರದ ಶಿಕ್ಷೆಯನ್ನು ನನ್ನ ಯಾವ ತಪ್ಪಿಗಾಗಿ

ನೀಡುತ್ತಿದ್ದಿರಿ?" ಎಂದು ಎದೆ ಬಡಿದುಕೊಳ್ಳುತ್ತಾಳೆ. ತಾನು ತಾಯ್ತನ ನೀಡಿದ ತರುಣನಿಗೆ ಲಗ್ನವಾಗುವುದು ಆಕೆಗೆ ಆಘಾತ ಕೊಡುತ್ತದೆ.

ಕಟ್ಪಾಡಿ ಅವರ 'ಬಂದಿ' ಎಂಬ ಕತೆಯಲ್ಲೂ ಸಹ ಅತ್ತಿಗೆ ತನ್ನ ಮೈದುನನಿಗೆ ತಾಯ್ತನದ ಸ್ಥಾನ ತುಂಬಿರುತ್ತಾಳೆ. ಕೋಮುಗಲಭೆಗೆ ತುತ್ತಾಗಿ ಅಣ್ಣ ಅಸುನೀಗಿದಾಗ, ಅತ್ತಿಗೆ ಮತ್ತು ಮಕ್ಕಳ ಜವಾಬ್ದಾರಿ ಮೈದುನ ಯಾಕೂಬ್‌ನ ಮೇಲೆ ಬೀಳುವುದು. ತಾಯಿಯನ್ನು ಕಳೆದುಕೊಂಡ ಯಾಕೂಬ್ ತಾಯಿ ಪ್ರೀತಿಯನ್ನು ಅತ್ತಿಗೆಯಲ್ಲಿ ಪಡೆದುಕೊಳ್ಳುವನು. ಅವನ ಅತ್ತಿಗೆ ಸಹ ಯಾಕೂಬ್‌ನಿಗೆ ತಾಯಿಸ್ಥಾನದಲ್ಲಿ ನಿಂತು ಪ್ರೀತಿ ನೀಡುವುದು ಕಂಡುಬರುತ್ತದೆ.

ತನ್ನ ಅಣ್ಣ ಸಾಯುವಾಗ ಅತ್ತಿಗೆ ಮತ್ತು ಮಕ್ಕಳ ಜವಾಬ್ದಾರಿ ನಿನ್ನ ಕೈಲಿದೆ ಎಂದು ಹೇಳಿದ್ದರಿಂದ ಯಾಕೂಬ್ ಇವರ ಜವಾಬ್ದಾರಿಯನ್ನು ಹೊರುತ್ತಾನೆ. ಅತ್ತಿಗೆ ಮಕ್ಕಳಿಗಾಗಿ ಮಾಡಿದ ತಿಂಡಿಯಲ್ಲಿ ಯಾಕೂಬ್‌ನಿಗೂ ನೀಡುತ್ತಾಳೆ. ಯಾಕೂಬ್ ತನ್ನ ತಿಂಡಿಯನ್ನು ಮಕ್ಕಳಿಗೆ ಕೊಡುವಾಗ ಆಕೆ ಮಕ್ಕಳಿಗೆ ತರಾಟೆಗೆ ತೆಗೆದುಕೊಳ್ಳುತ್ತಾಳೆ. ತಾಯಿಯ ಪ್ರೀತಿ ಕಳೆದುಕೊಂಡ ಯಾಕೂಬ್ ಅತ್ತಿಗೆಯಲ್ಲಿ ತಾಯಿ ಪ್ರೀತಿಯನ್ನು ಪಡೆಯುತ್ತಾನೆ. ಜೈಲಿಗೆ ಹೋದರೂ ಸಹ ಅತ್ತಿಗೆ ಮತ್ತು ಮಕ್ಕಳ ಬಗ್ಗೆ ಚಿಂತೆ ಮಾಡುತ್ತಾನೆ. ಇಲ್ಲಿ ಅಣ್ಣನ ಮಾತನ್ನು ನಿಷ್ಠೆಯಿಂದ ಪಾಲನೆ ಮಾಡುವ ತಮ್ಮನ ಪಾತ್ರವಿದು. ಅತ್ತಿಗೆಯಾದವಳು ಮೈದುನನಿಗೆ ಸಹಾಯ ಮಾಡಲು ಬೀಡಿಕಟ್ಟುತ್ತಾಳೆ. ಇಲ್ಲಿ ಅತ್ತಿಗೆ ಮತ್ತು ಮೈದುನನ ಸಂಬಂಧದಲ್ಲಿ ತಾಯಿ ಮಕ್ಕಳ ರೀತಿಯ ಸಂಬಂಧ ಕಾಣಬಹುದಾಗಿದೆ. ಗಂಡ ಸತ್ತನಂತರ ಮೈದುನನ ಆಸರೆಯಲ್ಲಿ ಜೀವನ ಸಾಗಿಸುತ್ತಿರುವ ಸ್ತ್ರೀಯ ಚಿತ್ರಣವಿಲ್ಲಿದೆ. "ಕೋಮುಹಿಂಸೆಯ ಪ್ರಕರಣಗಳಲ್ಲಿ ಸಂತ್ರಸ್ತರು ದೈಹಿಕ ಹಲ್ಲೆಗೆ ಒಳಗಾಗುವುದರ ಜೊತೆ ತಮ್ಮ ಮನೆ-ಮಾರು, ಆಸ್ತಿ-ಪಾಸ್ತಿ ಉದ್ಯೋಗಗಳನ್ನೇ ಕಳೆದುಕೊಂಡು ಮುಂದೆ ಎಂದೂ ತಮ್ಮ ಉದ್ಯೋಗಳಿಗೆ ಮರಳಲಾರದ ಸ್ಥಿತಿಗೆ ತಲುಪುತ್ತಾರೆ. ಕೋಮು ಹಿಂಸೆ ಮೊದಲೇ ಬಡವರೂ ಅಸಹಾಯಕರೂ ಆಗಿರುವವರನ್ನು ದೈಹಿಕವಾಗಿಯೂ ಮಾನಸಿಕವಾಗಿಯೂ ಜರ್ಜರಿತಗೊಳಿಸಿ ಅನಾಥರನ್ನಾಗಿಸುತ್ತದೆ. ಈ ಜನರನ್ನು ಮತ್ತೆ ಅವರಿದ್ದ ಸಹಜಸ್ಥಿತಿಗೆ ಕರೆತರುವುದು ಹೇಗೆ? ಕಡೆಯಪಕ್ಷ ಅವರ ಊರು ಮನೆ ಮತ್ತು ಉದ್ಯೋಗಗಳನ್ನಾದರೂ ಅವರಿಗೆ ಮರಳಿಸುವುದು ಹೇಗೆ? ಪ್ರಸ್ತಾಪಿತ ಮಸೂದೆಯಲ್ಲಿ ಈ ಸಮಸ್ಯೆಗಳಿಗೆ ಪರಿಹಾರಗಳಿಲ್ಲ ಮಾತ್ರವಲ್ಲ ಕೋಮು ಹಿಂಸೆಯ ಈ ಆಯಾಮಗಳ ಅರಿವುಕೂಡ ಅದಕ್ಕಿಲ್ಲ" ಎಂದು ಚಿಂತಕ ಶಿವ ವಿಶ್ವನಾಥ ಹೇಳುತ್ತಾರೆ. ಕೋಮುಹಿಂಸೆಗೆ ಬಲಿಯಾದವರ ಬಾಳು ಅಸ್ತಿತ್ವಕ್ಕಾಗಿ ಪರಿತಪಿಸುತ್ತಿರುತ್ತದೆ. ಇದನ್ನು ಕಟ್ಪಾಡಿ ಕತೆಗಳು ಮಾನವೀಯ ವಿವರಗಳ ಮೂಲಕ ಕಟ್ಟಿಕೊಡುತ್ತವೆ. 'ಜುಲೇಖಿ' ಕತೆಯಲ್ಲಿ ಬರುವ ಮೈದುನ ಮುನೀರ್ ಕೂಡ ಅತ್ತಿಗೆಗೆ ಮರುಬಾಳು ಕೊಡಲು ಮುಂದಾಗುವಾಗ

ಅವನಲ್ಲಿ ಸ್ವಾರ್ಥವಿದೆ. ಆಸ್ತಿಗಾಗಿ ಆಕೆಯನ್ನು ಕೈಹಿಡಿದು ಮಾನಸಿಕವಾಗಿ, ದೈಹಿಕವಾಗಿ ಹಿಂಸಿಸುತ್ತಾನೆ. ಪ್ರೀತಿ ನೀಡದ ಮತ್ತು ಪಡೆಯದ ವಂಚಕ ಮೈದುನನಾಗಿ ಆತ ಕಂಡುಬರುತ್ತಾನೆ. ಇಲ್ಲಿ ಬರುವ ಅತ್ತಿಗೆಯಂದಿರು ತಮ್ಮ ಮೈದುನರಿಗೆ ತಾಯಿಯ ಸ್ಥಾನ, ಪ್ರೀತಿ, ವಾತ್ಸಲ್ಯ ನೀಡಿದರೂ. ಅದು ಹೆತ್ತಮಕ್ಕಳಿಗೆ ನೀಡುವ, ಪ್ರೀತಿಗಿಂತ ಭಿನ್ನವಾಗಿದೆ ಎಂದು ಕಾಣಬಹುದಾಗಿದೆ. ಕೆಲವು ಕಡೆ ತಾಯಿ ಮಕ್ಕಳ ರೀತಿಯ ನಿರ್ಮಲವಾದ ಸಂಬಂಧಗಳು ಕಂಡುಬಂದರೆ ಮತ್ತೆ ಕೆಲವು ಕಾಮ ಲೇಪಿತವಾದ ಸ್ವಾರ್ಥ ಲೇಪಿತ ಸಂಬಂಧಗಳು ಕಂಡುಬರುತ್ತವೆ. ಎಲ್ಲ ಕಡೆಯಲ್ಲೂ ಅತ್ತಿಗೆಯಾದವಳು ನವತಾಯಿಯಾಗಿ ತಾಯ್ತನ ಪ್ರಕಟಿಸುತ್ತಾಳೆ.

೪.೩.೩. ನೆರೆಹೊರೆಯವರೊಂದಿಗಿನ ತಾಯ್ತನ: ಸಮಾಜದಲ್ಲಿ ಮಹಿಳೆಯರ ಸಂಕಷ್ಟಗಳು ಸಾಮಾನ್ಯವಾಗಿ ಒಂದೇ ತೆರನಾಗಿರುತ್ತವೆ. ಹೀಗಾಗಿ ಅವರಲ್ಲಿ ಪರಸ್ಪರ ಹೊಂದಾಣಿಕೆಯ ಸ್ವಭಾವವು ಕಾಣುವುದು. ಕೆಳವರ್ಗದವಾಗಿರಲಿ, ಮಧ್ಯಮ ವರ್ಗದವರಾಗಿರಲಿ, ಶ್ರೀಮಂತ ಕುಟುಂಬದವರಾಗಿರಲಿ, ಕಟ್ಪಾಡಿ ಕತೆಗಳ ಮಹಿಳೆಯರು ಒಬ್ಬರು ಕಷ್ಟಕ್ಕೆ ಒಬ್ಬರು ಮಿಡಿಯುತ್ತಾರೆ. ಆದರೂ ಶ್ರೀಮಂತರಿಗಿಂತ ಬಡ ಮಹಿಳೆಯರಲ್ಲಿ, ಹೀಗೆ ಮಿಡಿಯುವ ಸಮುದಾಯನಿಷ್ಠ ಮನಸ್ಥಿತಿ ಹೆಚ್ಚಾಗಿ ಕಂಡುಬರುತ್ತದೆ. ಇಂತಹ ಮನಸ್ಥಿತಿಯ ಪಾತ್ರಗಳನ್ನು ಕಟ್ಪಾಡಿ ಅವರು ತಮ್ಮ ಕತೆಗಳಲ್ಲಿ ತಂದಿದ್ದಾರೆ. 'ನೋಂಬು' ಕತೆಯ ಬಡತಾಯಿಯು ನೆರೆಮನೆಯ ಸಿರಿವಂತರ ಮಗಳು ಆತ್ಮಹತ್ಯೆಗೆ ಯತ್ನಿಸುವುದನ್ನು ತಿಳಿದ ಬಳಿಕ ಪಕ್ರಟಿಸುವ ತಾಯ್ತನದ ಮಿಡಿತ ವಿಶೇಷವಾಗಿದೆ. 'ಹೆಣ್ಣುಮಕ್ಕಳು ಎಲ್ಲಿದ್ದರೂ ಒಂದೇ ಮಗಾ... ಎಲ್ಲವನ್ನು ಸಹಿಸಿಕೋಬೇಕು' ಎಂದು ಆಕೆ ಸಂತೈಸುತ್ತಾಳೆ. ಕುರಾನ್ ಓದಲು ಬಾರದ ನೆರೆಹೊರೆಯವರಿಗೆ ರಂಜಾನ್ ತಿಂಗಳಲ್ಲಿ ವಾರಕ್ಕೊಂದೆರಡು ದಿನ ಕುರಾನ್ ಹೇಳಿಕೊಡುವ ಕೆಲಸವನ್ನೂ ಆಕೆ ಮಾಡುವಳು. ಈ ರೀತಿಯ ಮಾನವೀಯ ತುಡಿತ ಕೆಳವರ್ಗದ ಮಹಿಳೆಯರಲ್ಲಿ ಹೆಚ್ಚಾಗಿರುವುದನ್ನು ಕಟ್ಪಾಡಿ ಕತೆಗಳು ಮತ್ತೆಮತ್ತೆ ಕಾಣಿಸುತ್ತವೆ. ಕಷ್ಟಪಟ್ಟ ಮಹಿಳೆಯರು ಅನ್ಯರ ಕಷ್ಟಕ್ಕೆ ಬೇಗ ಮಿಡಿಯುತ್ತಾರೆ. ಅಂತಹ ಮಹಿಳೆಯರನ್ನು ಹೆಚ್ಚು ಘನತೆಯಿಂದ ಕಟ್ಪಾಡಿ ಕತೆಗಳು ಚಿತ್ರಿಸುತ್ತವೆ. ಬಡತನ ಆರ್ಥಿಕ ಕಷ್ಟ ಇರುವ ಮಹಿಳೆಯರಲ್ಲಿ ಶ್ರೀಮಂತವಾದ ಮನಸ್ಸು ಇರುವುದನ್ನ ಅವು ಕಾಣಿಸುತ್ತವೆ. ಇದು ಸಿರಿವಂತ ಮಹಿಳೆಯರಲ್ಲೂ ಕಾಣುವುದು. ಅದ್ದುವಿನ ಸಿರಿವಂತ ಗೆಳೆಯನ ತಾಯಿಯು 'ನಿನ್ನಮ್ಮನಿಗೆ ಹಬ್ಬದ ದಿನ ನಮ್ಮಲ್ಲಿಗೆ ಬರ್ಲಿಕ್ಕೆ ಹೇಳು. ಈ ಸಲದ ಝಕಾತಿನ ಅಕ್ಕಿ, ಹಣ ಎಲ್ಲ ಇದೆ ಕೊಡ್ತೇನೆ' ಎನ್ನುತ್ತಾಳೆ. ಹಲಿಮಾ ಕಷ್ಟದಲ್ಲಿದ್ದಾಳೆ ಅವಳಿಗೆ ನೆರವಾಗಬೇಕು ಎಂಬ ತಾಯ್ತನ ಕಾಸಿಮನ ತಾಯಿಯಲ್ಲಿ ಕಂಡುಬರುತ್ತದೆ. ಇಲ್ಲಿ ವರ್ಗತಾರತಮ್ಯ ಕಂಡುಬರುವುದಿಲ್ಲ. ಅಸಮಾನ ವರ್ಗಗಳ ನಡುವೆ ಸಮಾನ ಮನಸ್ಕತೆ ಕಂಡುಬರುವುದು. ವಿಚಿತ್ರವೆಂದರೆ ಕತೆಗಳೂ ನೆರೆಮನೆಯ ಪುರುಷ ಪಾತ್ರಗಳನ್ನು ಮುಖಾಮುಖಿ ಮಾಡದೆ ಇರುವುದು. ಮಹಿಳೆಯರ ಮುಖಾಮುಖಿಯನ್ನೇ ಚಿತ್ರಿಸುವುದು. ಪುರುಷವಾದವ

ಚೌಕಟ್ಟಿಗೆ ಸಿಲುಕಿ ನಲುಗಿರುವ ಮಹಿಳೆಯರು ಸಮಾನ ದುಃಖಿಗಳಾಗಿರುವುದರಿಂದ ವರ್ಗದ ತೊಡಕನ್ನು ಮೀರಿ ಪರಸ್ಪರ ನೋವನ್ನು ಹಂಚಿಕೊಳ್ಳುತ್ತವೆ. ಇಂತಹ ಸಾಮಾಜಿಕ ತಾಯ್ತನವನ್ನು ಚಿತ್ರಿಸುವಲ್ಲಿ ಕಟ್ಪಾಡಿಯವರ ಪ್ರತಿಭೆ ಹೆಚ್ಚು ತೊಡಗುತ್ತದೆ.

'ಜುಲೇಖ' ಕತೆಯ ನಾಯಕಿ ಜುಲೇಖಗೆ ಪ್ರೀತಿಕೊಡದ, ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಬಂಧಿಸಿದ ಗಂಡ ಸತ್ತೊಡನೆ, ಆಕೆಯ ಮನಸ್ಸು ಸ್ವತಂತ್ರದಿಂದ ಹಾರಾಡುತ್ತದೆ. ಆಕೆಗೆ ಕಣ್ಣೀರೇ ಬರುವುದಿಲ್ಲ. ಇದನ್ನು ಕಂಡು ಜನ ಜುಲೇಖಾಳ ಮೇಲೆ ಇಲ್ಲದ ಸಲ್ಲದ ಆರೋಪ ಹೊರಿಸುತ್ತಾರೆ. ಇದನ್ನು ಕಂಡ ಒಬ್ಬ ಮುದುಕಿ ಈ ರೀತಿ ಸಂತೈಸುತ್ತಾಳೆ. 'ಹೀಗೆ ದುಃಖವನ್ನು ನುಂಗಿಕೊಂಡಿರಬೇಡಮ್ಮ ಅತ್ತು ಹಗುರ ಮಾಡ್ಕೋ..' ಇಲ್ಲಿ ಬೇಂದ್ರೆಯವರ

"ನೀ ಹೀಂಗ ನೋಡಬ್ಯಾಡ ನನ್ನ

ನೀ ಹೀಂಗ ನೋಡಿದರ ನನ್ನ ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ..."೫

ಎಂಬ ಪದ್ಯ ನೆನಪಾಗುತ್ತದೆ. ಮಗುವನ್ನು ಕಳೆದುಕೊಂಡ ಹೆಂಡತಿ ಅತೀವ ದುಃಖದಿಂದ ಕಣ್ಣೀರು ಹಾಕದೇ ಕಣ್ತುಂಬಿಕೊಂಡಿರುತ್ತಾಳೆ. ಇದನ್ನು ಕಂಡು ದುಃಖವನ್ನು ಹಾಗೆ ಹಿಡಿದಿಟ್ಟುಕೊಳ್ಳಬೇಡ ಎಂದು ಕವನದ ನಾಯಕ ಹೆಂಡತಿಗೆ ಹೇಳಿದಂತೆ ಅಜ್ಜಿ ಜುಲೇಖಾಗೆ ಹೇಳುತ್ತಾಳೆ. ಆದರೆ ಅಜ್ಜಿ ಜುಲೇಖಳ ಮನಸ್ಥಿತಿಯನ್ನು ಅರಿತಿರುವುದಿಲ್ಲ. ಸಾಮಾನ್ಯವಾಗಿ ಗಂಡ ಸತ್ತಾಗ ಹೆಂಡತಿಯಾದವಳು ಅಳುವುದು ಸಹಜ. ದುಃಖ ಅತಿ ಹೆಚ್ಚಾದಾಗ ಕಣ್ಣೀರು ಕೂಡ ಹಿಂಗಿ ಹೋಗುವುದು. ಆದರೆ ಜುಲೇಖಳಿಗೆ ಗಂಡನನ್ನು ಕಳೆದುಕೊಂಡೆ ಎಂಬ ನೋವೇ ಇರುವುದಿಲ್ಲ. ಈ ಮೂಲಕ ಪುರುಷ ಪ್ರಧಾನದ ಕೌಟುಂಬಿಕೆ ಹಿಂಸೆ ಹೆಣ್ಣಿನ ಮೇಲೆ ಎಷ್ಟು ಅಘಾತಕಾರಿ ಪರಿಣಾಮ ಬೀರಬಲ್ಲದು ಎಂಬುದನ್ನು ಕತೆ ಸೂಚಿಸುತ್ತದೆ. ಸಾವು ಜುಲೇಖಾಳಿಗೆ ತಾಯ್ತನದ ಸಾಂತ್ವನ ನೀಡುವ ವೈರುಧ್ಯವನ್ನು ಓದುಗರ ಮುಂದಿಡುತ್ತದೆ.

'ಸಾವು ಸೃಷ್ಟಿಸಿದ ಒಂದು ಕತೆ' ಈ ಕತೆಯಲ್ಲಿ ಕೂಡ ನೆರೆಹೊರೆಯವರು ಹಲಿಮಾಳ ಕಷ್ಟಕ್ಕೆ ಮಿಡಿಯುವುದನ್ನು ಕಾಣಬಹುದು. ಪುರುಷಕೇಂದ್ರಿತ ಸಮಾಜದಲ್ಲಿ ಹೆತ್ತತಾಯಿಗೆ ಹಲವು ಕಷ್ಟಗಳಿವೆ. ಆಕೆ ಮಕ್ಕಳನ್ನು ಹೆತ್ತು ಹೊತ್ತು ಸಾಕಿ ಸಲಹಿ ದೊಡ್ಡವರನ್ನಾಗಿ ಮಾಡುತ್ತಾಳೆ. ಆದರೆ ಅದೇ ಮಕ್ಕಳು ದೊಡ್ಡವರಾದಾಗ ತಾಯಿಗೆ ಅನಾಥವಾಗಿಸುತ್ತವೆ. ಈ ಕತೆಯಲ್ಲೂ ಸಹ ತಾಯಿಯನ್ನು ಸಾಕದೆ ಮಕ್ಕಳು ಮದುವೆಯಾಗಿ ಬೇರೆ ಕಡೆ ನೆಲೆಸುತ್ತಾರೆ. ಆದರೆ ಆಕೆ ಸತ್ತಾಗ ಓಡಿಬರುತ್ತಾರೆ. ಹೆತ್ತವರ ಮೇಲೆ ಪ್ರೀತಿ ಇರದಿದ್ದರೂ ಅವರು ಕೂಡಿಟ್ಟ ಆಸ್ತಿ ಮೇಲಿನ ಪ್ರೀತಿ ಮಾತ್ರ ಅವರಿಗೆ ಕಡಿಮೆ ಆಗಿರುವುದಿಲ್ಲ. ಸತ್ತ ಮುದುಕಿಯ ಕಿವಿ ಓಲೆ ನಿಜವಾಗಿ ಸೇರಬೇಕಾದ್ದು ಕಿರಿಯ ಸೊಸೆ ವಿಧವೆಯಾದ ಹಲಿಮಾಗೆ ಎಂಬ ಕೆಲವರ ಮಾತು ಕೇಳಿದೊಡನೆ ಹಿರಿಯ

ಸೊಸೆಯರು ಸಿಡಿಮಿಡಿಗೊಳ್ಳುತ್ತಾರೆ. ನಮಗೂ ಅದರಲ್ಲಿ ಹಕ್ಕಿದೆ ಎಂದು ಮಾತಾಡುತ್ತಾರೆ. ಆಸ್ತಿಗಾಗಿ ಅನೇಕ ಜನರು ತಮ್ಮ ತಂದೆ ತಾಯಿಗಳನ್ನು ಕೊಲೆಮಾಡಿದ ಪ್ರಸಂಗಗಳು ಸಮಾಜದಲ್ಲಿವೆ. ತಂದೆಯು ಉದ್ಯೋಗದಲ್ಲಿದ್ದಾಗಲೇ ಮರಣ ಹೊಂದಿದರೆ ಆ ಉದ್ಯೋಗ ಮಗನಿಗೆ ಸಿಗುತ್ತದೆ ಎಂಬ ಆಧಾರದ ಮೇಲೆ ತಮ್ಮ ತಂದೆಯನ್ನೇ ಕೊಲೆಮಾಡಿದ ಪ್ರಸಂಗಗಳು ಸಹ ಇವೆ. ಕಟ್ಪಾಡಿಯವರ ಈ ಕತೆಯಲ್ಲೂ ಮಕ್ಕಳ ಸ್ವಾರ್ಥ ಎದ್ದುತೋರುತ್ತದೆ. ಕಟ್ಪಾಡಿ ಅವರ ಕತೆಗಳಲ್ಲಿ ಸಹನಶೀಲತೆ ತಾಯ್ತನ ಇರುವ ಮಹಿಳೆಯರ ಪಾತ್ರಗಳಷ್ಟೇ ಕಂಡುಬರುವುದಿಲ್ಲ ಸ್ವಾರ್ಥ, ಕಠೋರ, ದುಷ್ಟ, ಒರಟು ಸ್ವಭಾವದ ಸ್ತ್ರೀಯರು ಸಹ ಕಂಡುಬರುತ್ತಾರೆ. ಕಟ್ಪಾಡಿ ಅವರ ಕತೆಗಳಲ್ಲಿ ವಿವಿಧ ರೀತಿಯ ಸ್ತ್ರೀವ್ಯಕ್ತಿತ್ವದ ಆಯಾಮಗಳಿವೆ.

'ದಹನ' ಕತೆಯಲ್ಲಿ ಬರುವ ಒಬ್ಬಂಟಿ ಮುದುಕಿಯಲ್ಲಿ ಅಪಾರವಾದ ತಾಯ್ತನ ಇದೆ, ಆದರೆ ಆಕೆ ನಿರ್ಗತಿಕಳು. ಮುರುಕಲು ಗುಡಿಸಲನ್ನೆ ಬಾಡಿಗೆ ಕೊಟ್ಟವಳು. ಬಾಡಿಗೆ ಇರುವ ವ್ಯಕ್ತಿ ಆಕೆಗಿಂತ ನಿರ್ಗತಿಕ. ಇಲ್ಲಿ ಬಡತನವು ತಾಯ್ತನದ ಮೃದುತ್ವವನ್ನು ನಾಶಮಾಡುತ್ತದೆ. ಮುದುಕಿಗೆ ತಾಯಿಕರುಳೆಂಬುದು ಇದೆ. ಆದರೆ ಅವಳ ಬಡತನ ಅವಳ ಆಕ್ರೋಶಕ್ಕೆ ಕಾರಣವಾಗುತ್ತದೆ. ಆಕೆ 'ನಾಳೆ ಮರೀದೆ ಬಾಡಿಗೆ ತಂದು ಕೊಡು....' ಎನ್ನುತ್ತಾಳೆ. ಆಕೆಯಲ್ಲಿ ನಮ್ರತೆ ಮತ್ತು ಅಸಹಾಯಕತೆ ಇದೆ. ಜೊತೆಗೆ ನಿಷ್ಠುರತೆಯೂ ಇದೆ. ಹಸಿವು ಎಂಬುದು ಎಂತಹವರನ್ನು ಸಹ ನಿಕೃಷ್ಟವಾಗಿ ಮಾಡುತ್ತದೆ. ಮುದುಕಿಗೆ ತನ್ನ ಹಸಿವು ನೀಗಿಸಿಕೊಳ್ಳಲು ಬಾಡಿಗೆಯೊಂದೇ ಆಧಾರವಾಗಿರುತ್ತದೆ. ಹೀಗೆ ಕಟ್ಪಾಡಿ ಅವರ ಕತೆಗಳಲ್ಲಿ ತಾಯ್ತನದ ವಿವಿಧ ನೆಲೆಗಳನ್ನು ಚಿತ್ರಿಸುತ್ತವೆ. ಅವಗಳಲ್ಲಿ ಏಕರೂಪತೆಯಿಲ್ಲ.

ಬಡತನದಲ್ಲಿದ್ದವರಲ್ಲಿ ಕಷ್ಟಕ್ಕೆ ಬೇಗನೆ ಮರುಗುವ ತಾಯ್ತನ ಗುಣ ಹೆಚ್ಚು ಎಂಬುದಕ್ಕೆ ಕಟ್ಪಾಡಿ ಅವರ 'ಕಡಲ ತೀರದಲ್ಲಿ ಬೆಂಕಿ ಬಿದ್ದಿದ್ದ' ಉತ್ತಮ ಉದಾಹರಣೆ. ಈ ಕತೆಯಲ್ಲಿ ಕಿತ್ತು ತಿನ್ನುವ ಬಡತನದ ಕುಟುಂಬಗಳು ಇವೆ. ಅವು ಕಡಲ ಮೀನನ್ನೇ ಜೀವನಾಧಾರವಾಗಿಸಿ ಕೊಂಡು ಬದುಕುತ್ತಿವೆ. ಬರಗಾಲದಿಂದ ಕಡಲತಡಿಗೆ ಮೀನು ಬಾರದೆ ಒಂದೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ಸಾರಮ್ಮನ ಕುಟುಂಬಕ್ಕೆ ಒದಗುತ್ತದೆ. ಹೀಗಿರುವಾಗಲೂ ಅವರು ಮನೆಗೆ ಬಂದ ಮೌಲ್ವಿಗೆ ಊಟ ಹಾಕುತ್ತಾರೆ. ಈ ಮಾನವೀಯ ಅಂತಃಕರಣವನ್ನು ಈಸೂಬನಲ್ಲಿಯೂ ಕಾಣಬಹುದು. ಈಸೂಬ ಅಕ್ಕಿಯನ್ನು ತಂದು ಹೆಂಡತಿಗೆ ಕೊಡುತ್ತಾನೆ. 'ಎರಡು ಬೊಗಸೆ ಚೆನ್ನಿಗೆ ಕೊಡು. ಬೇಯ್ಸಿ ಮಗೂಗೆ ಕೊಡೋಕೆ ಹೇಳು' ಎನ್ನುತ್ತಾನೆ. ಹೆಂಡತಿ ಸಾರಮ್ಮ ಸಿಡಿಮಿಡಿಗೊಂಡರೂ 'ನಮ್ಮಕ್ಕಳಂತೆ ಅಲ್ವಾ ಅವುಗಳೂ' ಎಂದುಕೊಂಡು ಚೆನ್ನಿಗೆ ಅಕ್ಕಿ ಕೊಡುತ್ತಾಳೆ. ಚೆನ್ನಿ ಮುಖ ಅರಳಿದ್ದು ಕಂಡಾಗ ಅಕ್ಕಿ ಕೊಡಲು ಹೋದ ಅಮೀನಾಗೆ ಸಿಟ್ಟು ಮರೆತೇ

ಹೋಗುತ್ತದೆ. ಇಲ್ಲಿ ಈಸೂಬ ಮತ್ತು ಸಾರಮ್ಮ ದಂಪತಿಗಳಲ್ಲಿ ಸಾಮಾಜಿಕ ತಾಯ್ತನದ ಗುಣ ಪ್ರಕಟವಾಗುವುದನ್ನು ಸಮಾಜವಾದಿ ಮನಸ್ಸಿನ ಕಟ್ಪಾಡಿ ಶ್ರದ್ಧೆಯಿಂದ ಚಿತ್ರಿಸುತ್ತಾರೆ. ಚೆನ್ನಿ ಪದಾರ್ಥ ಕೇಳಿದಾಗ ಸಾರಮ್ಮ ಸಾರನ್ನು ಪಾತ್ರೆಗೆ ಸುರಿದು ಕೊಡುತ್ತಾಳೆ. ಹೆಣ್ಣಿನ ಉದಾರತೆ, ಸಹನಶೀಲತೆಯ ಗುಣಗಳು ಎದ್ದುತೋರುತ್ತವೆ. ಅನ್ನಕ್ಕೆ ಪರದಾಡುವ ಸ್ಥಿತಿಯಲ್ಲೂ ಪರರಿಗೆ ಮಿಡಿಯುವ ವಿಶಾಲ ಮನಸ್ಸಿನ ಪಾತ್ರಚಿತ್ರಣದ ಮೂಲಕ ಜನರಲ್ಲಿ ಪ್ರಕಟವಾಗುವ ಮಾನವೀಯ ಧೋರಣೆ ಕಟ್ಪಾಡಿ ಅವರ ಕತೆಗಳಲ್ಲಿ ವ್ಯಾಪಿಸಿಕೊಂಡಿದೆ. ಹೆಣ್ಣಾದವಳು ತನ್ನ ಕುಟುಂಬಕ್ಕೆ ಮಾತ್ರ ತಾಯಿಯಲ್ಲ, ನೆರೆಹೊರೆಯವರ ದುಃಖಕ್ಕೂ ಸ್ಪಂದಿಸುವ ತಾಯಿ. ಅವಳಲ್ಲಿರುವ ಮಾನವೀಯತೆ, ಸಹನೆ, ಸಂಯಮ, ಉದಾರತೆ, ಕರುಣೆ ಮುಂತಾದ ಗುಣಗಳು ಅವಳ ತಾಯ್ತನದ ವಿಭಿನ್ನ ಆಯಾಮಗಳಾಗಿವೆ.

೪.೩.೪. ಪುರುಷ ಪಾತ್ರಗಳಲ್ಲಿ ತಾಯ್ತನ: ತಾಯ್ತನ ಎಂಬುದು ಕೇವಲ ಜೈವಿಕವಲ್ಲ. ಅದು ಮಾನಸಿಕವಾದುದು. ತಾಯ್ತನ ಎಂಬುದು ಸ್ತ್ರೀಲೋಕಕ್ಕೆ ಸಂಬಂಧಿಸಿದ್ದು ಎಂಬ ಕಲ್ಪನೆ ಜನಪ್ರಿಯವಾಗಿದೆ. ಈ ಕಲ್ಪನೆಯನ್ನು ಮೀರಿ ಪುರುಷ ಪಾತ್ರಗಳಲ್ಲಿ ತಾಯ್ತನದ ಆಯಾಮವನ್ನು ಗುರುತಿಸಬಹುದು. ಸ್ತ್ರೀಯಂತೆಯೇ ಪುರುಷರು ಕೂಡ ನೋವಿಗೆ ಮಿಡಿಯುವ ಹೃದಯ ಉಳ್ಳವರು. ದೈಹಿಕವಾಗಿ ಪುರುಷರು ಮಹಿಳೆಯರಿಗಿಂತ ಕಠೋರತೆಯುಳ್ಳವರಿರಬಹುದು. ಆದರೆ ಅವರ ಆಲೋಚನ ಕ್ರಮ, ಬದುಕುವ ರೀತಿಗಳಲ್ಲಿ ಸಮಾಜವಾದಿ ಪ್ರಜ್ಞೆಯಿದ್ದರೆ, ಅದು ತಾಯ್ತನವಾಗುತ್ತದೆ. ಇದನ್ನು ಕಟ್ಪಾಡಿ ಅವರ ಹಲವು ಕತೆಗಳು ಧ್ವನಿಸುತ್ತವೆ. ಕಟ್ಪಾಡಿ ಅವರ 'ಬುರ್ಖಾ', 'ತೀರ್ಮಾನ', 'ದ್ವೀಪ', 'ಕ್ರೌರ್ಯ', 'ನೋಂಬು' 'ಅಜರ್ ಎಂಬ ಹುಡುಗ', 'ಕಡಲತೀರದಲ್ಲಿ ಬೆಂಕಿಬಿದ್ದಿದ್ದು', 'ನೇಣುಗಂಬದ ನೆರಳಲ್ಲಿ', 'ಮುಳ್ಳು' 'ವೈಯಕ್ತಿಕ' ಸಾವು ಸೃಷ್ಟಿಸಿದ ಒಂದು ಕತೆ, 'ಸುಲಿಗೆ' ಮತ್ತು 'ಗೋರಿಕಟ್ಟಿಕೊಂಡವರು' ಮುಂತಾದ ಕತೆಗಳಲ್ಲಿ ಪುರುಷ ಪಾತ್ರಗಳಲ್ಲಿ ತಾಯ್ತನವನ್ನು ಗುರುತಿಸಬಹುದು.

ಕಟ್ಪಾಡಿ ಅವರ ಕತೆಗಳಲ್ಲಿ ಪುರುಷ ಪಾತ್ರಗಳಲ್ಲಿ ತಾಯ್ತನದ ವಿವಿಧ ವಿನ್ಯಾಸಗಳು ಕಂಡುಬರುತ್ತವೆ. ಬಡತನದಲ್ಲಿದ್ದು ಕಷ್ಟದಲ್ಲಿರುವವರಿಗೆ ಮಿಡಿಯುವ ಪಾತ್ರಗಳು, ಶ್ರೀಮಂತಿಕೆ ಇದ್ದು ಕಷ್ಟದಲ್ಲಿರುವವರಿಗೆ ಮಿಡಿಯುವ ಪಾತ್ರಗಳು ಇವೆ. ಹಸಿವಿನಿಂದ ನರಳುವವರಿಗೆ, ಚಿಕ್ಕಮಕ್ಕಳಿಗೆ, ಸ್ತ್ರೀಯರ ಕಷ್ಟಕ್ಕೆ ಮಿಡಿಯುವಂತಹ ಹಾಗೂ ಕಷ್ಟದಲ್ಲಿದ್ದ ಪುರುಷ ಪಾತ್ರಗಳಿವೆ. 'ಬುರ್ಖಾ' ಮತ್ತು 'ತೀರ್ಮಾನ' ಕತೆಗಳಲ್ಲಿ ಬರುವ ಪುರುಷರು ತಮ್ಮ ಮತಧರ್ಮವನ್ನು ಮೀರಿ ಸ್ತ್ರೀಯರ ರಕ್ಷಣೆಗೆ ಶ್ರಮಿಸುವವರು. ಕೋಮುಗಲಭೆ ನಡೆಯುವ ಸಂದರ್ಭದಲ್ಲಿ ತಮ್ಮ ಮತಧರ್ಮದ ಗಡಿಯನ್ನು ದಾಟಿ ಎಲ್ಲ ಜನತೆಯನ್ನು ರಕ್ಷಿಸುವ, ಕ್ರೌರ್ಯ ಮಾಡುವ

ಎಲ್ಲರನ್ನೂ ಶಿಕ್ಷಿಸುವ ಕೆಲಸ ಅವರು ಮಾಡುವರು. ಕಟ್ಪಾಡಿ ಅವರ 'ಬುರ್ಖಾ' ಕತೆಯ ನಾಯಕ ಶಿವಣ್ಣನ ಪಾತ್ರ ಇದಕ್ಕೆ ಸಾಕ್ಷಿ. ಅವನು ಮಾನವೀಯತೆ ತುಂಬಿದ ವ್ಯಕ್ತಿಯಾಗಿ ಕಂಡುಬರುತ್ತಾನೆ. ಊರಿನ ಕೋಮುಗಲಭೆಗೆ ಮುಖ್ಯ ಕಾರಣ, ಐಸ್‌ಕ್ರೀಮ್ ತಿನ್ನುತ್ತಾ ರಸ್ತೆ ಬದಿಯಲ್ಲಿ ನಿಂತ ಮುಸ್ಲಿಮ್ ಹುಡುಗನ ತಲೆಯ ಟೊಪ್ಪಿಯನ್ನು ಹಾರಿಸಿ ಕುಡುಕನೊಬ್ಬ ಗೇಲಿಮಾಡಿದ್ದು. ಇದು ಅವರಿಬ್ಬರ ವೈಯಕ್ತಿಕ ಆದರೂ ಮುಂದೆ ಸಮುದಾಯಗಳ ದ್ವೇಷಕ್ಕೆ ನಾಂದಿಹಾಡುತ್ತದೆ. ಹಿಂದುಗಳು ಮುಸ್ಲಿಂ ಕೇರಿಯಲ್ಲಿ, ಮುಸ್ಲಿಮರು ಹಿಂದು ಕೇರಿಯಲ್ಲಿ ಓಡಾಡದಂತಹ ಸಂಕಷ್ಟ ತಲೆದೋರುತ್ತದೆ. ಈ ಗಲಭೆಯಲ್ಲಿ ಜೈನಾಬಿ ಮೊಮ್ಮಗಳು ಖದೀಜಾ ಸಿಲುಕಿಕೊಂಡಾಗ, ಶಿವಣ್ಣ ಮತಧರ್ಮ ನೋಡದೇ ಮಾನವೀಯ ದೃಷ್ಟಿಯಿಂದ ಆಕೆಯನ್ನು ಪಾರುಮಾಡುತ್ತಾನೆ. ಆದರೆ ಆ ಗಲಭೆಯಲ್ಲಿ ಸ್ವತಃ ಬಲಿಯಾಗುತ್ತಾನೆ. ಎರಡು ಮತಧರ್ಮಗಳ ನಡುವೆ ಸಂಘರ್ಷಕ್ಕೆ ಬದಲಾಗಿ ಸೌಹಾರ್ದ ಮನೋಭಾವ ಇರುವಂತೆ ನೋಡಿಕೊಳ್ಳುವ ನಾಗರಿಕ ಪ್ರಜ್ಞೆಯ ಪಾತ್ರಗಳಲ್ಲಿ ಕಟ್ಪಾಡಿ ವಿಶಾಲ ನೆಲೆಯ ತಾಯ್ತನವನ್ನು ಕಾಣುತ್ತಾರೆ.

ಇದೇ ರೀತಿ 'ತೀರ್ಮಾನ' ಕತೆಯಲ್ಲಿ ಬರುವ ಪರ್ಬು ತನ್ನ ಮತಧರ್ಮವನ್ನು ಮೀರಿ ಅಬ್ಬುವಿನ ತಾಯಿಯ ನೆರವಿಗೆ ಬರುವಂತಹ ಪಾತ್ರವಾಗಿದೆ. ಗಂಡನನ್ನು ಕಳೆದುಕೊಂಡ ವಿಧವೆಗೆ ಅಸಹಾಯಕಳಿಗೆ ಪರ್ಬು ಮಾನವೀಯ ನೆಲೆಯಲ್ಲಿ ನೆರವಾಗುತ್ತಾನೆ. ಮುಸ್ಲಿಂ ವಿಧವೆಗೆ ಶತ್ರುಗಳಾಗಿ ದಾಡಿಬಿಟ್ಟ ಮುಸ್ಲಿಮರೇ ನಿಂತಾಗ, ಬೇರೆಧರ್ಮದ ವ್ಯಕ್ತಿ ತೋರುವ ಸಹಾನುಭೂತಿಯನ್ನು ಚಿತ್ರಿಸುತ್ತದೆ. ದಾಡೀವಾಲನ ಕೆಟ್ಟದೃಷ್ಟಿ ಅಬ್ಬುವಿನ ತಾಯಿಯ ಮೇಲೆ ಬಿದ್ದಾಗ ಅದನ್ನು ತಡೆಯುವುದು ಪರ್ಬು. "ನಾಚಿಕೆ ಕೆಟ್ಟವ.... ಒಂಟಿ ಅಭಾಗಿನಿಯನ್ನು ಕೆಣಕಲಿಕ್ಕೆ ನಾಚಿಕೆಯಾಗೋದಿಲ್ಲ ನಿನಗೆ. ಇನ್ನೊಮ್ಮೆ ಎಲ್ಲಿಯಾದರೂ ಈ ರೀತಿ ಬಂದರೆ ಕಾಲು ಮುರ್ದಾಕ್ತೇನೆ..." ಎಂದು ಆತ ಗದರುತ್ತಾನೆ. ಅಬ್ಬುವಿನ ತಾಯಿಗೆ ಅವನು ನೀಡುವ ನೆರವಿಗೆ ಹೀನಾರ್ಥ ಕಲ್ಪಿಸಿದಾಗಷ್ಟೆ ಅವನು ದೂರಸರಿಯುತ್ತಾನೆ.ಇಲ್ಲಿ ಕತೆಗೆ ಮಾನವೀಯತೆ ಧರ್ಮಾತೀತವಾಗಿರುತ್ತದೆ; ಎಂದು ಸೂಚಿಸುವುದು ಮುಖ್ಯವಾಗಿದೆ. ಸಮಾಜದಲ್ಲಿ ಶೋಷಿಸುವ ಜನರಿರುವಂತೆ ರಕ್ಷಿಸುವ ಜನರೂ ಇರುತ್ತಾರೆ ಎಂಬುದನ್ನು ಕತೆ ಹೇಳುತ್ತದೆ. ಅಬ್ಬುವಿನ ತಾಯಿ ಮತ್ತು ಪರ್ಬು ಸಂಬಂಧದ ಚರ್ಚೆಯಾಗಿ ದಂಡ ಹಾಕುವಾಗ, ಮಸೀದಿಗೆ ಬಂದಿದ್ದ ಒಬ್ಬ ತರುಣ, ಎದ್ದುನಿಂತು "ಪಾಪ ಬಡ ಹೆಂಗಸು.... ಏನಾದರೂ ಸ್ವಲ್ಪ ರಿಯಾಯ್ತಿ ತೋರಿಸದಿದ್ರೆ ಹೇಗೆ....." ಎನ್ನುತ್ತಾನೆ. ಆದರೆ ಈ ಬಗೆಯ ತಾಯ್ತನ ತೋರುವ ಪುರುಷರ ಸಂಖ್ಯೆ ಕಡಿಮೆ. ಅವರ ತಾಯ್ತನವುಳ್ಳ ಸ್ತ್ರೀಪರವಾಗಿ ನಿಂತ ಪಾತ್ರಗಳು ಸೋಲುವ ವ್ಯವಸ್ಥೆಯಿದೆ ಎಂದು ಕತೆ ಚಿತ್ರಿಸುತ್ತದೆ.

ಇದರಂತೆ, ಲೈಂಗಿಕ ಸಂಬಂಧಗಳ ಪ್ರಶ್ನೆ ಬಂದಾಗ, ಎಲ್ಲ ತಪ್ಪಿಗೆ ಸ್ತ್ರೀ ಕಾರಣಳು ಎಂದು ಬೆರಳುಮಾಡಿ ತೋರಿಸುವ ಅಮಾನುಷ ಸಮಾಜವನ್ನು ಕತೆ ಚಿತ್ರಿಸುತ್ತದೆ. ಒಬ್ಬ ಮಹಿಳೆಯನ್ನು ಸೂಳೆಗಾರಿಕೆ ಮಾಡುತ್ತಾಳೆ ಇದು ಧರ್ಮಕ್ಕೆ ಅವಮಾನ ಎಂದು ಜಮಾತ್ ಕಮಿಟಿಗೆ ಆಕೆಯನ್ನು ಪಂಚಾಯಿತಿಗೆ ಕರೆಸುತ್ತಾರೆ. ಆಕೆ ಗಂಡನಿಲ್ಲದೇ ಹೊಟ್ಟೆ ಹೊರೆಯಲು ಬೇರೆ ದಾರಿ ಕಾಣದೇ ಈ ಕೆಲಸದಲ್ಲಿ ತೊಡಗಿದ್ದೇನೆ ಎಂದು ಅಳಲನ್ನು ತೋಡಿಕೊಳ್ಳುತ್ತಾಳೆ. ಇದನ್ನು ಲೆಕ್ಕಿಸದ ಸಭೆ ಆಕೆಯನ್ನು ಶಿಕ್ಷಿಸಲು ಪ್ರಯತ್ನಸುತ್ತಿರುತ್ತದೆ. ಆದರೆ ಆಕೆ ಪರವಾಗಿ ವಿದ್ಯಾವಂತ ಇಸ್ಮಾಲಿ ನಿಲ್ಲುತ್ತಾನೆ. 'ಊರಲ್ಲಿ ಮುಸ್ಲಿಮರೇ ಇರುವಾಗ ಹಾಜಿಮಾಳ ಕೆಟ್ಟ ವ್ಯವಹಾರದ ಗಿರಾಕಿಗಳು ಇಲ್ಲಿ ಇರಬೇಕಾಲ್ಲ. ಅವರದ್ದೇನೂ ತಪ್ಪಿಲ್ವ?' ಎಂದು ಆತ ಪ್ರಶ್ನೆ ಎತ್ತುತ್ತಾನೆ. ಆಗ ಆಕೆಯ ಜತೆ ಸಂಬಂಧ ಇಟ್ಟುಕೊಂಡವರು ತತ್ತರಿಸಿ ಹೋಗುತ್ತಾರೆ. ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀ ಶಿಕ್ಷೆ ಮಾಡುವವರು ಆ ವ್ಯಭಿಚಾರಕ್ಕೆ ಅವರೂ ಕಾರಣರು. ಅವರಿಗೆ ಏಕೆ ಶಿಕ್ಷೆಯಿಲ್ಲ? ಅವರೇಕೆ ನ್ಯಾಯಾಧೀಶರ ಸ್ಥಾನದಲ್ಲಿ ನಿಲ್ಲಬೇಕು? ಎಂಬ ಪ್ರಶ್ನೆಯನ್ನು ಹಾಲತಿ ಸೋಮಶೇಖರ್ ಅವರು ಎತ್ತುತ್ತಾರೆ. "ಅವಳು ಈಗಾಗ್ಲೆ ಪಶ್ಚಾತ್ತಾಪ ಪಡುತ್ತಿದ್ದಾಳೆ. ಅವಳ ಹೊಸ ಬದುಕಿಗೆ ಅವಕಾಶ ಕೊಡಿ. ಇದೇ ಅವಳಿಗೆ ನಾವು ನೀಡಬೇಕಾದ ತೀರ್ಮಾನ. ಅವಳಿಗೆ ಮಸೀದಿ ಫಂಡಿನಿಂದ ಸ್ವಲ್ಪ ಹಣ ಕೊಡ್ಸಿ. ಅದರಿಂದ ಅವಳು ತೆಂಗಿನ ನಾರುಕೊಂಡು, ಹಗ್ಗ ನೇಯ್ದು ಜೀವನ ಸಾಗಿಸುತ್ತಾಳೆ" ಎಂಬ ಇಸ್ಮಾಲಿಯ ಮಾತಿಗೆ ಎಲ್ಲರೂ ಒಪ್ಪುತ್ತಾರೆ. ಇಲ್ಲಿ ಇಸ್ಮಾಲಿಯಲ್ಲಿ ಕಷ್ಟದಲ್ಲಿರುವ ಹೆಣ್ಣಿಗೆ ಮಿಡಿಯುವ ವಿಶಾಲ ನೆಲೆಯ ತಾಯ್ತನ ಕಂಡುಬರುತ್ತದೆ. ಅವನ ತಾಯ್ತನ ಸಭೆಯ ಉಳಿದವರಿಗೂ ವಿಸ್ತರಣೆಯಾಗುತ್ತದೆ.

ಹೆಣ್ಣಿನ ಮೇಲೆ ದೌರ್ಜನ್ಯ ನಡೆಸುವ ಪುರುಷ ಸಮಾಜದ ಮುಖವೊಂದನ್ನು ಕಟ್ಟಾಡಿ ಅವರ 'ಕೌರ್ಯ' ಕತೆ ಚಿತ್ರಿಸುತ್ತದೆ. ಇಲ್ಲಿ ಕ್ರೌರ್ಯ ಎಸಗುವವರು ಪುರುಷರೇ ಆಗಿದ್ದಾರೆ. ಆದರೆ ಎಲ್ಲ ಪುರುಷರು ಕ್ರೂರಿಗಳಲ್ಲ. ಶಹನಾಜ್ ಎಂಬ ಹೆಣ್ಣಿಗೆ ದುಷ್ಟರಾಗಿ ಅವಳ ಪತಿ ಹಾಗೂ ಅಜ್ಜ ಕಂಡುಬಂದರೆ, ಅವಳ ಭಾವನೆ ಹಕ್ಕುಗಳ ಪರವಾಗಿ ಅವಳ ಅಣ್ಣ ನಿಲ್ಲುತ್ತಾನೆ. ತಂದೆ ಇಲ್ಲದ ತಬ್ಬಲಿ ತಂಗಿಯನ್ನು ಹೂವಿನಂತೆ ಸಾಕಿ ಮದುವೆ ಮಾಡಿಕೊಟ್ಟ ಈ ಅಣ್ಣ ಶಹನಾಜಳ ಗಂಡನಿಗೆ 'ನೀನು ಮರುಮದುವೆ ಆಗುವುದನ್ನು ಪ್ರಶ್ನಿಸುವ ಹಕ್ಕು ನನಗಿದೆ. ಹೆಣ್ಣನ್ನು ಮಾನಸಿಕವಾಗಿ ಹಿಂಸಿಸಲಿಕ್ಕೆ ನಿಮಗೆ ಹಕ್ಕಿಲ್ಲ ಎಂದು ಹೇಳುತ್ತಾನೆ. ಈ ಮಾತು ಕೇವಲ ತಂಗಿಯನ್ನು ಕುರಿತಂತಹದ್ದಾಗಿಲ್ಲ. ಇಡೀ ಸಮಾಜದ ಸ್ತ್ರೀಯನ್ನು ಕುರಿತದ್ದು. 'ಗೋಡೆಯಲ್ಲಿ ತೂಗಾಡುವ ಕತ್ತಿ ನನ್ನನ್ನೇ ನೋಡಿತು. ಒಳಗಿನಿಂದ ಕಹನಾಜ್ ಬಿಕ್ಕಿದ್ದು ಕೇಳಿಸಿತು' ಎಂಬ ಮಾತು ಕತೆಯಲ್ಲಿ ಬರುತ್ತದೆ. ತನಗೆ ಕೋಪ ಬಂದರೂ ತಂಗಿಯ ಜೀವನ ಹಾಳಾಗುವುದು ಬೇಡ ಎಂಬ ನೆಲೆಯಲ್ಲಿ ಅವನು ಭಾವನ ಮೇಲೆ ಆಕ್ರಮಣ ಮಾಡುವುದಿಲ್ಲ. ಶಹನಾಜಳ ಅಣ್ಣನ ಕಾಳಜಿಯಲ್ಲಿ ತಾಯ್ತನ ಅರಳುತ್ತದೆ.

ಇದೇ ರೀತಿ 'ನೇಣುಗಂಬದ ನೆರಳಲ್ಲಿ' ಕತೆಯಲ್ಲೂ ತಂದೆಯಿಲ್ಲದ ವಸುವನ್ನು ಪ್ರೀತಿಯಿಂದ ಸಾಕಿದ ಅಣ್ಣನಲ್ಲೂ ತಾಯ್ತನ ಅಭಿವ್ಯಕ್ತಗೊಂಡಿದೆ. ಅಣ್ಣನೊಡನೆ ಸಲಿಗೆಯಿಂದ ಮಾತಾಡುವ ತಂಗಿ ತನ್ನ ಪ್ರೀತಿಯ ವಿಷಯ ಪ್ರಸ್ತಾಪಿಸುವಲ್ಲಿ ವಿಫಲಳಾಗುತ್ತಾಳೆ. ಪುರುಷರ ಯಜಮಾನಿಕೆ ಹೆಣ್ಣನ್ನು ಅಧೀರಳನ್ನಾಗಿ ಮಾಡುತ್ತದೆ. ಸಮಾಜದಲ್ಲಿ ಪ್ರೀತಿಗೆ ಜಾತಿಯೆ ಅಡ್ಡಗೋಡೆಯಾಗಿ ನಿಲ್ಲುತ್ತದೆ. ಈ ಜಾತಿವ್ಯವಸ್ಥೆಗೆ ಹಲವಾರು ಪ್ರೇಮಿಗಳು ಬಲಿಯಾಗಿದ್ದಾರೆ ಎಂಬ ಚಿತ್ರಣವನ್ನು ಕಟ್ಪಾಡಿ ತಮ್ಮ ಕತೆಗಳಲ್ಲಿ ತಂದಿದ್ದಾರೆ. ತಂಗಿಯ ಪಾಲನೆಗಾಗಿ ತಾನು ಪ್ರೀತಿಸಿದ ರಮಾಳನ್ನೇ ಮದುವೆಯಾಗಲು ಅಣ್ಣ ನಿರಾಕರಿಸುತ್ತಾನೆ. ಅಣ್ಣನ ಮನಸ್ಸಿಗೆ ನೋವಾಗಬಾರದೆಂದು ತಂಗಿ ತನ್ನ ಪ್ರೇಮದ ವಿಚಾರವನ್ನು ಮುಚ್ಚಿಡುತ್ತಾಳೆ. ಶಿವರಾಮ ತನ್ನ ಪ್ರೀತಿಯ ಚಿಂತೆಯಲ್ಲಿ ಕೆಲಸ ಕಳೆದುಕೊಂಡು ಹುಚ್ಚನಾಗುತ್ತಾನೆ. ಇಲ್ಲಿ ಜಾತಿವ್ಯವಸ್ಥೆಯ ಸಮಾಜದಲ್ಲಿ ಮೂರು ಪ್ರೇಮಿಪಾತ್ರಗಳು ಬಲಿಯಾಗುತ್ತವೆ. ಇಲ್ಲಿ ಗಮನಿಸಬೇಕಾದುದು, ತಂಗಿಯ ಒಳಿತನ್ನೇ ಬಯಸುವ ಅಣ್ಣ ಮತ್ತು ಅಣ್ಣನ ನೆಮ್ಮದಿಯನ್ನು ಬಯಸುವ ತಂಗಿ ಇವರಿಬ್ಬರಲ್ಲೂ ಪ್ರಕಟವಾಗುವ ತಾಯ್ತನ. ವಿಶ್ವನಾಥನನ್ನು ಕ್ಷಮೆಕೇಳಲು ಬಂದ ತಂಗಿಯನ್ನು ಅಪ್ಪಿ, ತಲೆಸವರುತ್ತಾ ಅಣ್ಣ ಹೇಳುತ್ತಾನೆ. "ಹುಚ್ಚಿ ಹಾಗೆಲ್ಲ ಅನ್ನಬೇಡ. ನಿನ್ನ ಒಳಿತಿಗೋಸ್ಕರವೇ ಅಲ್ವ ನಾನಿದನ್ನೆಲ್ಲಾ ಮಾಡ್ತಿರೋದು? ಸುರೇಶ ಬಡಕುಟುಂಬದಲ್ಲಿ ಜನಿಸಿದವನಾದರೂ ಕಷ್ಟಪಟ್ಟು ಮುಂದೆ ಬಂದ ಹುಡುಗ. ಒಳ್ಳೆಯ ನೌಕರಿಯಲ್ಲಿದ್ದಾನೆ. ಅವನ ತಾಯಿ ಕೂಡಾ ಒಳ್ಳೆಯ ಹೆಂಗಸು, ನಿನ್ನನ್ನು ಸುಖವಾಗಿಟ್ಟುರುತ್ತಾನೆ ಅಂತ ನನಗೆ ದೃಢನಂಬಿಕೆ ಇದೆ. ನೀನು ಯಾವ ವಿಷಯದಲ್ಲೂ ಯೋಚಿಸಬೇಡ." ಈ ಮಾತಿನಲ್ಲಿ ಅಣ್ಣನಿಗೆ ತಂಗಿ ಬಗೆಗಿನ ಕಾಳಜಿ ವ್ಯಕ್ತಿಯಾಗಿದೆ. ಪುರುಷ ಪಾತ್ರಗಳಲ್ಲಿ ತಾಯ್ತನ ಪುಟಿಯುವ ಪರಿಯನ್ನು ಕಟ್ಪಾಡಿ ಕತೆಗಳು ಮನಮುಟ್ಟುವಂತೆ ಚಿತ್ರಿಸುತ್ತವೆ.

ಹಸಿದು ಬಂದವರಿಗೆ ಸಹಾಯ ಮಾಡುವ ಪಾತ್ರಗಳು ಕಟ್ಪಾಡಿ ಕಥಾಲೋಕದಲ್ಲಿ ಬಹಳ ಬರುತ್ತವೆ. 'ನೋಂಬು' ಕತೆಯ ಅಬ್ಬುವಿನ ತಂದೆ ಹಾಗೂ 'ಕಡಲ ತೀರದಲ್ಲಿ ಬೆಂಕಿ ಬಿದ್ದದ್ದು' ಕತೆಯ ಈಸೂಬ ಇಬ್ಬರಲ್ಲೂ ಇನ್ನೊಬ್ಬರ ಹಸಿವಿಗೆ ಮಿಡಿಯುವ ತಾಯ್ತನವಿದೆ. ನೋಂಬು ವೇಳೆಯಲ್ಲಿ ಭಿಕ್ಷೆ ಬೇಡಿ ಬಂದ ಹುಚ್ಚನಿಗೆ ಅಬ್ಬುವಿನ ತಂದೆ ಕನಿಕರದಿಂದ ಅನ್ನ ಹಾಕುವ ವಿಶಾಲ ಹೃದಯದವನಾಗಿ ಕಂಡುಬರುತ್ತಾನೆ. ಆದರೆ ಸಿರಿವಂತನಾದ ಕಾಸಿಮನ ಅಪ್ಪ ಭಿಕ್ಷುಕರನ್ನು ಮನೆ ಹತ್ತಿರ ಬರದಂತೆ ಓಡಿಸುತ್ತಾನೆ. ಈ ಎರಡು ಪಾತ್ರಗಳು ಕತೆಯಲ್ಲಿ ಮುಖಾಮುಖಿಯಾಗಿ ನಿಲ್ಲುತ್ತವೆ. ಬಡತನದ ಗಂಡಸರಲ್ಲಿ ಉದಾರ ಹೃದಯದ ತಾಯ್ತನದ ವ್ಯಕ್ತವಾದರೆ, ಶ್ರೀಮಂತರಲ್ಲಿ ಕುಬ್ಜ ಹೃದಯದ ಅನುದಾರತೆ ವ್ಯಕ್ತವಾಗುತ್ತದೆ. 'ಕಡಲತೀರದಲ್ಲಿ ಬೆಂಕಿ ಬಿದ್ದದ್ದು' ಕತೆಯಲ್ಲಿಯೂ ಕೂಡ, ಈಸೂಬ ಎಂಬ ವ್ಯಕ್ತಿ ವಿಶಾಲ ಮನಸ್ಕನಾಗಿ ಚಿತ್ರಿತಗೊಂಡಿದ್ದಾನೆ. ಸ್ವತಃ ಅನ್ನಕ್ಕೆ ಪರಿತಪಿಸುವ ಸಂದರ್ಭದಲ್ಲೇ ಇರುವ ಅನ್ನದಲ್ಲಿಯೇ ಹಂಚಿತಿನ್ನುತ್ತಾನೆ. ತಮ್ಮ ಮಕ್ಕಳಂತೆ ಪರರ ಮಕ್ಕಳು ಎಂಬ ಅವನ ಮನೋಭಾವವು ಮಾತೃತ್ವದಿಂದ ಕೂಡಿದೆ.

ಹಸಿವು ಎಂತಹ ಕೆಲಸ ಮಾಡಿಸಲು ಹಿಂಜರಿಯುವುದಿಲ್ಲ ಎಂಬುದನ್ನು 'ದಹನ' ಕತೆ ಚಿತ್ರಿಸುತ್ತದೆ. ಕಥಾನಾಯಕ ತೀವ್ರ ಹಸಿವನ್ನು ತಾಳಲಾರದೇ ಮಗುವಿಗೆ ಗೊಂಬೆಕೊಟ್ಟು ಪ್ರತಿಯಾಗಿ ಬ್ರೆಡ್ಡನ್ನು ಪಡೆದು ಹಸಿವು ನೀಗಿಸಿಕೊಳ್ಳಲು ಮುಂದಾಗುತ್ತಾನೆ. ನಂತರ ಪಶ್ಚಾತ್ತಾಪ ಪಡುತ್ತಾನೆ. ಇದೇ ರೀತಿ ಹಸಿವಿಗೆ ಮಿಡಿಯುವ ಪುರುಷ ಪಾತ್ರಗಳಲ್ಲಿನ ತಾಯ್ತನವು 'ಮುಳ್ಳು' ಕತೆಯಲ್ಲೂ ಮೂಡಿಬರುತ್ತದೆ. ಇಲ್ಲಿ ಇದು ವರ್ಗದ ಚೌಕಟ್ಟಿನಲ್ಲಿ ಬರುತ್ತದೆ. ಲಕ್ಷ್ಮಿ ಪಾತ್ರವು, ಒಡೆಯನ ಕಾಮದ ದಾಹ ಹಾಗೂ ಕುಡುಕ ಗಂಡನ ಹಣದ ನಡುವೆ ಸಿಲುಕಿಕೊಂಡವಳು ಲಕ್ಷ್ಮಿ. ಒಮ್ಮೆ ಆಕೆ ಒಡೆಯನ ಮನೆಗೆ ಅನ್ನಕಾಗಿ ಬೇಡಿ ಬರುತ್ತಾಳೆ. "ಎಷ್ಟೂಂತ ನಿನಗೆ ಕೊಡುವುದು. ಮುಂಚೆಯೆ ಐದು ಸೇರು ಅಕ್ಕಿ ಸಾಲ ಕೊಟ್ಟಿರುತ್ತೇನೆ. ನೀನು ಇಲ್ಲಿ ದಾಸ್ತಾನು ಹಾಕಿದ್ದೇವೆಂತ ಎಣಿಸಿದ್ದೀಯಾ?" ಎನ್ನುತ್ತಾಳೆ ಒಡತಿ. ಆದರೆ ಈ ದೃಶ್ಯ ಒಡೆಯನ ಕಣ್ಣಿಗೆ ಬಿದ್ದು, ಆತನಲ್ಲಿ ಸಹಾಯ ಮಾಡಬೇಕೆಂಬ ಕರುಣೆ ಉಂಟಾಗುತ್ತದೆ. ಆದರೆ ಆ ಕರುಣೆಗೆ ಆಕೆಯ ಮೇಲಿನ ವ್ಯಾಮೋಹವು ಕಾರಣವಾಗಿರುತ್ತದೆ. ಒಡೆಯನ ತಾಯ್ತನದಲ್ಲಿ ಕಾಮದ ಸ್ವಾರ್ಥವು ಅಡಗಿರುವುದನ್ನು ಕತೆ ಧ್ವನಿಸುತ್ತದೆ. ಇದೇ ರೀತಿ ಸ್ವಾರ್ಥ ಅಡಗಿದ ಪುರುಷಪಾತ್ರವು 'ಸಾವು ಸೃಷ್ಟಿಸಿದ ಒಂದು ಕತೆ'ಯಲ್ಲಿಯೂ ಕಂಡುಬರುತ್ತದೆ. ಮಕ್ಕಳು ತಾಯಿಯ ಆಸ್ತಿಗಾಗಿ ಪರಿತಪಿಸಿದರೆ, ವಿಧವೆ ಸೊಸೆ ತನ್ನ ಅತ್ತೆಯನ್ನು ಸಾಕುತ್ತಾಳೆ. ಶವಸಂಸ್ಕಾರಕ್ಕೆ ವಿಧವೆ ಸೊಸೆ ಹಲಿಮಾಳೆ ಖರ್ಚು ಮಾಡುತ್ತಾಳೆ. "ಹಲೀಮಾ ಎಷ್ಟು ಹೊತ್ತು ಹೀಗೆ ಅಳ್ತಾ ಇರ್ತೀಯಾ. ಅಮ್ಮ ಹೋದವಳು ಹೇಗೋ ಹೋದಳು. ಇನ್ನು ಅತ್ತರೆ ತಿರುಗಿ ಬರುತ್ತಾಳೇನು? ನೀನು ಅವಳ ಸೇವೆ ತುಂಬಾ ಚೆನ್ನಾಗಿ ಮಾಡಿದ್ದೀಯಾ. ಸ್ವತಃ ಅವಳ ಮಕ್ಕಳೇ ಅಷ್ಟು ಮಾಡಲಿಕ್ಕೆ ಸಾಧ್ಯವಾಗದಷ್ಟು ನಿನಗೆ ಹೇಗೆ ಅಭಿನಂದಿಸಲೋ ನನಗೆ ತಿಳಿಯುವುದಿಲ್ಲ ಎಂದು ಮಗ ಅಭಿಬುಲ್ಲಾ ಹೇಳುತ್ತಾನೆ. ಹೋಗಿ ಮಗುವಿಗೂ ಉಣ್ಣಿಸು, ನೀನು ಉಣ್ಣು. ಎಷ್ಟೊತ್ತು ಕಣ್ಣೀರಿಡ್ತಾ ಇರ್ತೀಯಾ?" ಎಂಬ ಸಮಾಧಾನದ ಮಾತು, ಅವನು ತೋರಿದ ತಾಯ್ತನದ ವರ್ಣನೆಯೂ ಆಗಿದೆ. ಮತ್ತೆ ಮೂರು ದಿನದ ಕಾರ್ಯಕ್ಕೆ ಅಜ್ಜಿಯ ಓಲೆಯನ್ನು ಕೇಳುವ ಮೂಲಕ ಅಭಿಬುಲ್ಲಾನಲ್ಲಿ ಸ್ವಾರ್ಥತೆಯನ್ನು ಕಾಣಬಹುದು.

'ಸುಲಿಗೆ' ಕತೆಯಲ್ಲಿಯೂ ಸಹ ಪುರುಷ ಪಾತ್ರದಲ್ಲಿ ತಾಯ್ತನ ಗುರುತಿಸಬಹುದು. ಆಪತ್ತಿನಲ್ಲಿ ಸಿಲುಕಿದ ಹಾವಿನ ದ್ವೇಷಕ್ಕೆ ತುತ್ತಾದ ಅನಂತ ಎಂಬ ಮುಗ್ಧ ಬಾಲಕನನ್ನು ರಕ್ಷಿಸುವ ಮೂರ್ತಿಯ ತೋಮಣ್ಣನಲ್ಲಿ ತಾಯ್ತನ ವ್ಯಕ್ತವಾಗಿದೆ. ಹಾವಿನಿಂದ ಜೀವ ರಕ್ಷಿಸಿದುದರ ಜೊತೆಗೆ ಇನ್ನೊಂದು ಹಾವಿಗೆ ಕಲ್ಲೊಡೆಯಬೇಡ ಎಂದು ತಿಳುವಳಿಕೆ ನೀಡುವಲ್ಲಿ ಸಾಮಾಜಿಕ ತಾಯ್ತನ ಅಭಿವ್ಯಕ್ತಗೊಂಡಿದೆ.

ಅನಾಥ ಶವವನ್ನು ಕಂಡು ಮರುಕ ವ್ಯಕ್ತವಾದ ಬಗೆಯನ್ನು 'ಗೋರಿಕಟ್ಟಿಕೊಂಡವರು' ಕತೆ ಚಿತ್ರಿಸುತ್ತದೆ. ಸಾಂಪ್ರದಾಯಿಕ ನಂಬಿಕೆಗಳಿಂದ ಜಡಗಟ್ಟಿದ ಜನಸಮುದಾಯ ತನ್ನ ದುಸ್ಥಿತಿಗೆ

ಕಾರಣವಾಗುತ್ತದೆ ಎಂಬುದನ್ನು ಈ ಕತೆ ನಿರೂಪಿಸುತ್ತದೆ. ಹಮೀದನೆಂಬ ಯುವಕ ತನ್ನ ಪ್ರಬಲ ವೈಚಾರಿಕ ಮನೋಭಾವದಿಂದ ಊರಿನ ಜನರ ಹೀನ ಪರಿಸ್ಥಿತಿಯಲ್ಲಿ ಸುಧಾರಿಸಲು ಪ್ರಯತ್ನಿಸುತ್ತಾನೆ. ಆದರೆ ಅವನ ಪ್ರಯತ್ನಗಳು ಭಿನ್ನ ಹಿತಾಸಕ್ತಿಗಳ ದೆಸೆಯಿಂದ ತಿರುವು ಪಡದು ಮತ್ತೆ ಮತ್ತೆ ಅಸಹಾಯಕ ಸ್ಥಿತಿಗೆ ತಲುಪುವಂತಾಗುತ್ತದೆ. ಭಿಕ್ಷೆ ಬೇಡುವ ಮುದುಕ ಅಸುನೀಗಿದ್ದರೂ ಶವಸಂಸ್ಕಾರ ಮಾಡದೇ ಮುನ್ಸಿಪಾಲಿಟಿಯವರು ಬರುವುದನ್ನೇ ಕಾಯುತ್ತಾ ಕುಳಿತ ಕ್ಷುದ್ರ ಜನತೆಯು ಒಂದೆಡೆ ಚಿತ್ರಿತಗೊಂಡಿದೆ. ಇನ್ನೊಂದೆಡೆ ಅನಾಥ ಶವವನ್ನು ನೋಡಿ ಮರುಕ ವ್ಯಕ್ತಪಡಿಸುವ ಪುರುಷ ಪಾತ್ರ ಚಿತ್ರಣಗೊಂಡಿದೆ. ತನ್ನೂರಿನ ಓರ್ವ ಮುಸ್ಲಿಮ್ ಶವಸಂಸ್ಕಾರ ಮಾಡುವ ಜನರಿಲ್ಲದೆ ಹಾಗೆ ಅನಾಥವಾಗಿ ಹೋಗುವುದು ಎಂದು ತಾನೇ ನಿಂತು ಮಸೀದಿ ಫಂಡಿನ ನೆರವಿನಿಂದ ಶವಸಂಸ್ಕಾರ ಮಾಡುತ್ತಾನೆ. ಈ ಮೂಲಕ ತನ್ನ ಊರು, ತನ್ನ ಧರ್ಮ ಮತ್ತು ಮುದುಕ ಎಂಬ ಅಭಿಮಾನದಲ್ಲಿ ತಾಯ್ತನ ವಿಸ್ತರಿಸಿಕೊಂಡಿದೆ. ಈ ಮೂಲಕ ಸಮಾಜದ ಪರಿಸ್ಥಿತಿಯನ್ನು ಕಟ್ಪಾಡಿ ಅವರು ಕತೆಯಲ್ಲಿ ಪ್ರಕಟಿಸಿದ್ದಾರೆ.

ಈ ಮೂಲಕ ಪುರುಷ ಪಾತ್ರಗಳು ತಾಯ್ತನ ಅಭಿವ್ಯಕ್ತಗೊಂಡಿರುವುದನ್ನು ಕಟ್ಪಾಡಿ ಅವರು ಚಿತ್ರಿಸಿದ್ದಾರೆ. ಇಲ್ಲಿಯೂ ಕೆಲವು ಪುರುಷರಲ್ಲಿ ಸ್ವಾರ್ಥದ ತಾಯ್ತನದ ಆಯಾಮ ಕಂಡುಬಂದರೆ ಮತ್ತೆ ಕೆಲವು ಪುರುಷರಲ್ಲಿ ನಿಷ್ಕಲ್ಮಶ ತಾಯ್ತನ ಅಭಿವ್ಯಕ್ತಗೊಂಡಿದೆ. ಈ ಮೂಲಕ ಸಮಾಜದ ಸ್ಥಿತಿಗತಿಯನ್ನು ಕಟ್ಪಾಡಿ ಅವರ ಕತೆಗಳು ಧ್ವನಿಸುತ್ತದೆ.

೪.೪. ಅಭಿವ್ಯಕ್ತಿ ಕ್ರಮ

ಕತೆಯು ರಚನೆಗೊಂಡ ಬಗೆಯನ್ನು ತಿಳಿಸುವಂತಹದ್ದೆ ಅಭಿವ್ಯಕ್ತಿ ಕ್ರಮ ಅಥವಾ ಕಥನ ಕ್ರಮ ಎಂದು ಗುರುತಿಸಬಹುದು. ಒಬ್ಬ ಕತೆಗಾರನಿಗೆ ತನ್ನ ಕತೆಯನ್ನು ಕಟ್ಟುವಾಗ ನಿಚ್ಚಳವಾಗಿ, ತೊಡಕಿಲ್ಲದೆ, ಪರಿಣಾಮಕಾರಿಯಾಗಿ ಹೇಳುವ ಹಂಬಲವಿರುತ್ತದೆ. ಹಾಗಾಗಿ ಕತೆಯನ್ನು ಕಟ್ಟುವ ಕೆಲಸದಲ್ಲಿ ಕತೆಗಾರ ತೊಡಗಿದಾಗ ವಸ್ತು, ವಿಷಯವನ್ನು, ಘಟನೆಗಳನ್ನು ವಿವರಿಸುವಾಗ ಹಾಗೂ ಸಂಭಾಷಣೆಯನ್ನು ಹೇಳುವಾಗ ಸನ್ನಿವೇಶಕ್ಕೆ ತಕ್ಕಂತೆ ಭಿನ್ನ ದಾಟಿಯಲ್ಲಿ ವಾಕ್ಯಗಳ ರಚನೆ ಮಾಡುತ್ತಾನೆ. ವಾಸ್ತವ ಘಟನೆಗಳನ್ನು ಕಲಾವಾಸ್ತವಕ್ಕೆ ಪರಿವರ್ತಿಸುವ ಗುಣ ಮುಖ್ಯವಾಗಿ ಕತೆಗಾರನಿಗಿರಬೇಕಾಗುತ್ತದೆ. ಈ ಕೆಲವು ಸಮಾಜದ ನೈಜ ಘಟನೆಗಳಿಗೆ ಕತೆಗಾರ ಸೃಜನಶೀಲತೆ ಯಿಂದ ಜೀವ ತುಂಬಬೇಕಾದರೆ ಆತನಿಗೆ ಕಥನಕ್ರಮದ, ಕಥನ ತಂತ್ರದ ಜ್ಞಾನ ಅತ್ಯಾವಶ್ಯಕ. ಕಟ್ಪಾಡಿ ಅವರ ಕತೆಗಳು ಸ್ವಗತ ಮಾದರಿ ಹಾಗೂ ನಿರೂಪಣ ಮಾದರಿಗಳಲ್ಲಿ ರಚನೆಯಾಗಿವೆ. ಕಟ್ಪಾಡಿ ಅವರ ಕಥನ ಕ್ರಮದ ವಿಶಿಷ್ಟತೆಯೆಂದರೆ ನಾಟಕೀಯತೆ, ಸೂಕ್ಷ್ಮ ವಿವರಗಳ ನಿರೂಪಣೆ, ವ್ಯಂಗ್ಯ, ವಿಷಾದ ಮತ್ತು ವಿಡಂಬನೆ ಮುಂತಾದ ಕಥನ ವಿಧಾನಗಳ ಮೂಲಕ ರೂಪಗೊಂಡಿವೆ.

ಈ ಹಿನ್ನೆಲೆಯಲ್ಲಿ ಕಟ್ಪಾಡಿ ಅವರ ಕತೆಗಳಲ್ಲಿ ತಾಯ್ತನದ ಭಾವವು ಪ್ರಕಟವಾಗುವ ವಿವಿಧ ವಿಧಾನಗಳನ್ನು ಹುಡುಕುವುದಾಗಿದೆ.

೧. ಕಟ್ಪಾಡಿ ಅವರ ಕತೆಗಳಲ್ಲಿ ಬರುವ ತಾಯ್ತನಕ್ಕೆ ಸಂಬಂಧಿಸಿದಂತೆ ನಾಟಕೀಯತೆ ಹೀಗಿದೆ.

ಅ. "ಹಸೀತದೆ, ತಿನ್ನಲಿಕೆ, ಏನಾದರೂ ಕೊಡಿ...." ಎನ್ನುವ ಸಂಜ್ಞೆ ಮಾಡುತ್ತಾ ನಿಂತಿದ್ದ. ಅಪ್ಪ ಕೂಗಿ ಹೇಳಿದ, "ಪಾಪ, ಅವ್ನಿಗೆ ಹಸೀತದೋ ಏನೋ! ಅನ್ನ ಕೇಳ್ತಾ ಇದ್ದಾನೆ. ಏನಾದ್ರೂ ಇದೆಯೇನೇ?" ಅಮ್ಮ ಒಳಗಿನಿಂದ ಅಮ್ಮನಿಗಾಗಿ ಇಟ್ಟ ಅನ್ನ ಹಾಗೆಯೇ ಇದೆ. ಅವನಿಗೆ ಕೊಡಿ" ಎಂದಳು. ಅಪ್ಪ ಅನ್ನ ತಂದು ಅವನಿಗೆ ಕೊಟ್ಟ, ಹುಚ್ಚ ಗಬಗಬನೆ ತಿನ್ನ ತೊಡಗಿದ(ನೋಂಬು).

ಕಟ್ಪಾಡಿ ಅವರ ಕತೆಗಳಲ್ಲಿ ತಾಯ್ತನ ಭಾವದಲ್ಲಿ ನಾಟಕೀಯತೆಯು ವಿಶಿಷ್ಟವಾಗಿ ಮೂಡಿಬಂದಿದೆ. ಇವರ ಕತೆಗಳಲ್ಲಿ ಅರ್ಧವಾಕ್ಯಗಳೇ ಹೆಚ್ಚಾಗಿ ಕಂಡುಬರುತ್ತವೆ. ದುಃಖದಿಂದ, ವಿನಮ್ರತೆಯಿಂದ, ಪ್ರೀತಿಯಿಂದ ಮಾತಾಡುವಾಗ ವಾಕ್ಯವನ್ನು ಪೂರ್ಣಗೊಳಿಸಿದಂತೆ ಕೆಲವು ಚುಕ್ಕೆಗಳನ್ನು ಇಡುತ್ತಾ ವಾಕ್ಯವನ್ನು ಅರ್ಧಕ್ಕೆ ಬಿಡುವಂತೆ ಚಿತ್ರಿಸಿದ್ದಾರೆ. ಆಶ್ಚರ್ಯ ಚಿನ್ಹೆ ಹಾಗೂ ಪ್ರಶ್ನಾರ್ಥಕ ಚಿನ್ಹೆಗಳನ್ನು ಬಳಸುವ ವಿಶೇಷ ರೀತಿಯ ಕಥನಕ್ರಮ ಕಟ್ಪಾಡಿ ಅವರದ್ದಾಗಿದೆ. ಕಟ್ಪಾಡಿ ಅವರ ಕತೆಗಳಲ್ಲಿ ತಾಯ್ತನದ ಭಾವ ಮಹಿಳೆಯರಲ್ಲಿ ಮಾತ್ರವಲ್ಲದೇ ಪುರುಷರಲ್ಲೂ ಇರುವುದನ್ನು ನಾಟಕೀಯಶೈಲಿಯಲ್ಲಿ ಹಿಡಿದಿಟ್ಟಿದ್ದಾರೆ. ಕನಕರದಿಂದ, ನಯವಾಗಿ, ವಿನಮ್ರತೆಯಿಂದ ಕೆಲವು ಕಡೆ ಮಾತಾಡಿದರೆ ಇನ್ನು ಕೆಲವೆಡೆ ಎತ್ತರದ ಧ್ವನಿಯಲ್ಲಿ ಪಾತ್ರಗಳು ಮಾತಾನಾಡುವ ಕಥನಕ್ರಮವನ್ನು ಕತೆಗಾರರು ತಂದಿದ್ದಾರೆ.

ಆ. "ಮುನ್ನಾ....ಮುನ್ನಾ..."

"ಏನಮ್ಮಾ..."

"ನಾಳೆ ನಿನ್ನನ್ನು ಬಿಟ್ಟು ದೂರದೂರಿಗೆ ಹೋಗಲಿದ್ದೇನೆ ಮಗಾ..."

"ಎಲ್ಲಿಗೆ ಎಮ್ಮಾ...." ಎನ್ನುತ್ತಾ ಮುನ್ನಾ ಅಮ್ಮನನ್ನು ಇನ್ನಷ್ಟು ತಬ್ಬಿಕೊಂಡ.

"ಮಂಗಳೂರಿಗೆ. ಎಷ್ಟು ವರ್ಷಗಳು ನಿನ್ನಿಂದ ದೂರವಾಗಿರಬೇಕೋ ಗೊತ್ತಿಲ್ಲ ಮಗೂ..." ಅವಳು ತನ್ನ ಕಣ್ಣಲ್ಲಿ ಹರಿಯುತ್ತಿರುವ ಕಣ್ಣೀರನ್ನು ತನ್ನ ಸೆರಗಿನ ತುದಿಯಿಂದ ಒರೆಸಿಕೊಂಡಳು.

"ನಾನೂ ನಿನ್ನೊಂದಿಗೆ ಬರುತ್ತೇನೆ"

"ಇಲ್ಲಿ ನನ್ನ ಮುದ್ದು ಮಗೂ. ನೀನಲ್ಲಿಗೆ ಬರುವಂತಿಲ್ಲ"

"ಯಾಕೆ...?"(ಹೆತ್ತತಾಯಿ).

ತಾಯಿ ಮಗನ ಸಂಭಾಷಣೆಯನ್ನು ನಾಟಕೀಯತೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಪುಟ್ಟ ಪುಟ್ಟ ವಾಕ್ಯಗಳ ಮೂಲಕ ಪುಟ್ಟ ಮಗುವಿನ ಭಾವ ಹಾಗೂ ತಾಯಿಗೆ ಮಗುವಿನ ಬಗೆಗಿನ ಪ್ರೀತಿಯನ್ನು ನಾಟಕೀಯತೆಯಲ್ಲಿ ಹಿಡಿದಿಟ್ಟಿದ್ದಾರೆ. ತಾಯಿ ಆದವಳು ದೂರವಾಗಬೇಕಾದ ಪರಿಸ್ಥಿತಿಯಲ್ಲಿ ಮಗನನ್ನು, ಪ್ರೀತಿಯಿಂದ ಮಗಾ...ಮಗೂ...ಮುದ್ದುಮಗಾ...ಎಂದು ಕರೆಯುವ ತಾಯ್ತನದ ಮಮತೆಯನ್ನು ಚಿತ್ರಿಸುವ ಕಥನ ಕ್ರಮವು ವಿಶಿಷ್ಟವಾಗಿ ಮೂಡಿಬಂದಿದೆ. ಇಲ್ಲಿ ಮಗುವಿನ ಮೂಲಕ ತಾಯಿಗೆ ಪ್ರಶ್ನೆ ಮಾಡುವಂತೆ ಕತೆಯಲ್ಲಿ ನಾಟಕೀಯನ್ನು ತಂದಿದ್ದಾರೆ. ಮುಗ್ಧ ಮಗುವಿನ ಮುಖಾಂತರ ಲೋಕವನ್ನು ಗ್ರಹಿಸುವ ಕಥನ ಕ್ರಮ ಕಟ್ಪಾಡಿ ಅವರ ಜಾಣ್ಮೆಯನ್ನು ತೋರಿಸುತ್ತದೆ. ತಾಯಿ-ಮಗನ ಹಗಲಿಕೆಯ ನೋವನ್ನು, ಮಗನಿಗೆ ತಾಯಿ ಬಗೆಗಿನ ಹಂಬಲವನ್ನು ವ್ಯಕ್ತಪಡಿಸಲು ಕತೆಗಾರರು ತಮ್ಮ ಕಥನಕ್ರಮದಲ್ಲಿ ನಾಟಕೀಯತೆಯ ಜೊತೆಗೆ ಸೂಕ್ಷ್ಮ ವಿವರಗಳನ್ನು ತಂದಿದ್ದಾರೆ.

೨. ಕಟ್ಪಾಡಿ ಅವರ ಕತೆಗಳಲ್ಲಿ ತಾಯ್ತನದ ಭಾವವ ಸೂಕ್ಷ್ಮ ವಿವರಗಳಲ್ಲಿ ಮೂಡಿಬಂದಿರುವ ಬಗೆಯನ್ನು ನೋಡಲಾಗಿದೆ.

ಅ. "ಅಬ್ಬು ಖುಷಿಯಲ್ಲಿ ಲುಂಗಿ ಎತ್ತಿ ಹಿಡಿದು ಕುಣಿಯುತ್ತಾ ನಡೆಯುತ್ತಿದ್ದ. ಅಮ್ಮ ಮೆಲ್ಲಗೆ ಅವನ ಹಿಂದೆ ಬರುತ್ತಿದ್ದಳು. ಹತ್ತಿರದ ಮನೆಯವರು ಕಿಟಕಿಯಲ್ಲಿ ಇಣುಕಿ ನೋಡುತ್ತಿದ್ದರು. ತಮಾಷೆ ನೋಡುವವರಂತೆ, ಅಬ್ಬು ಅಮ್ಮನೊಡನೆ ಏನೋಕೇಳಬೇಕೆಂದು ನೋಡಿದ. ಕಪ್ಪು ಬುರ್ಖಾದಲ್ಲಿ ಎದ್ದು ಕಾಣುವ ಅವಳ ಬೆಳ್ಳಗಿನ ಮುಖ ಮುದುಡಿತ್ತು. ಕಣ್ಣುಗಳಲ್ಲಿ ಎಂದಿನ ಲವಲವಿಕೆ ಕಂಡುಬರಲಿಲ್ಲ. ಅಬ್ಬು ತನ್ನ ನಡಿಗೆಯನ್ನು ಗಂಭೀರವಾಗಿಸಿದ."(ತೀರ್ಮಾನ).

ಕಟ್ಪಾಡಿ ಅವರು ಪುಟ್ಟ ಪುಟ್ಟ ವಾಕ್ಯಗಳ ಮೂಲಕ ಹಿರಿದಾದ ಅರ್ಥವನ್ನು ಕಟ್ಟಿಕೊಟ್ಟಿದ್ದಾರೆ. ಪುಟ್ಟಮಕ್ಕಳಿಗೆ ಹೊಸ ಬಟ್ಟೆ ಧರಿಸಿಕೊಂಡು ತಾಯಿಯ ಜೊತೆ ಹೋಗುವಾಗ ಆಗುವ ಸಂಭ್ರಮವನ್ನು ತಾಯಿಯಲ್ಲಿನ ದುಃಖದ ಭಾವವನ್ನು ಸೂಕ್ಷ್ಮ ವಿವರಗಳ ಮೂಲಕ ಕತೆಗಾರರು ಕಟ್ಟಿ ಕೊಟ್ಟಿದ್ದಾರೆ. ತಾಯಿ ಮಗನ ಪಾತ್ರಗಳ ಮೂಲಕ ಜೀವಂತಿಕೆಯನ್ನು ಹಿಡಿದಿಟ್ಟಿದ್ದಾರೆ. ಕಿಟಕಿಯಲ್ಲಿ ಕದ್ದುಮುಚ್ಚಿ ತಮಾಷೆ ನೋಡುವ ಜನತೆಯ ಚಿತ್ರಣವನ್ನು, ಸೂಕ್ಷ್ಮವಿವರಗಳಲ್ಲಿ ತಂದಿದ್ದಾರೆ. ಪುಟ್ಟ ಮಗುವಿನ ಕಣ್ಣಿನ ಮೂಲಕ ತಾಯಿಯನ್ನು ಚಿತ್ರಿಸುವುದಕ್ಕೂ ಪುಟ್ಟ ವಾಕ್ಯಕ್ಕೂ ಸಂಬಂಧವಿರುವಂತೆ ಕತೆಗಾರರ ಕಥನಕ್ರಮ ವಿಶಿಷ್ಟತೆಯನ್ನು ಹೊಂದಿದೆ.

೩. ಕಟ್ಪಾಡಿ ಅವರ ಕತೆಗಳಲ್ಲಿ ತಾಯ್ತನಕ್ಕೆ ಸಂಬಂಧಿಸಿದಂತೆ ವಿಷಾದ, ವ್ಯಂಗ್ಯ ಮತ್ತು ವಿಡಂಬನೆ ವ್ಯಕ್ತವಾದ ಬಗೆಯನ್ನು ನೋಡಲಾಗಿದೆ.

"ಅಮ್ಮ ಜಮೀಲಾಳ ತಲೆ ನೇವರಿಸಿದಳು. "ಹೆಮ್ಮಕ್ಕಳು ಎಲ್ಲಿದ್ದರೂ ಒಂದೇ ಮಗಾ... ಎಲ್ಲವನ್ನು ಸಹಿಸಿಕೊಳ್ಬೇಕು. ಆತ್ಮಹತ್ಯೆ ಪಾಪ ಅಮತ ಅಲ್ಲಾಹ ಹೇಳಿದ್ದಾನೆ...." ಎಂದಳು. ಅದ್ದು ಮತ್ತು ಕಾಸಿಮ್ ತೆಂಬೆಕಾಯಿಗಾಗಿ ಕೋಣೆ ಎಲ್ಲ ಹುಡುಕಾಡಿದರು. ಎಲ್ಲೂ ಸಿಗಲಿಲ್ಲ. ಅಮ್ಮನ ಬಳಿ ಬಂದು "ತೆಂಬೆಕಾಯಿ ಎಲ್ಲೂ ಕಾಣ್ತಾ ಇಲ್ಲಮ್ಮಾ..." ಎಂದ. ಜಮೀಲಾಕ್ಕ ಎತ್ತಲೋ ನೋಡುತ್ತಾ "ಅದನ್ನು ಒಡೆದುತಿಂದೆ ಆದ್ರೂ ಸಾಯಲಿಲ್ಲ. ಎರಡೂ ಮೂರು ಸಲ ಕಾರಿದೆ ಅಷ್ಟೆ.." ಎಂದು ಒಳನಗೆ ನಕ್ಕಳು(ನೋಂಬು).

ದುಃಖದಿಂದ ಮಾತನಾಡುವಾಗ ನಿಲ್ಲಿಸಿ ವಾಕ್ಯಪೂರ್ಣಗೊಳಿಸುವಂತೆ ಕತೆಯ ರಚನಾಕ್ರಮ ಮೂಡಿದೆ. ಎಲ್ಲವನ್ನೂ ಸಹಿಸಿಕೊಳ್ಳಬೇಕು ಎಂಬಲ್ಲಿ ಶರಣಾಗತಿಯ ಮನೋಭಾವದ ಜೊತೆಗೆ ತಾಯ್ತನದ ಭಾವವೂ ವ್ಯಕ್ತಗೊಂಡಿದೆ. ಜಮೀಲಾಳ ನಗುವಿನಲ್ಲಿ ವಿಷಾದ, ವ್ಯಂಗ್ಯ ಮತ್ತು ವಿಡಂಬನೆ ಅಡಗಿರುವಂತೆ ಕಂಡುಬಂದಿದೆ. ಮೂರ್‍ನಾಲ್ಕು ಸಲ ಕಾರಿದೆ ಅಷ್ಟೆ... ಎಂಬ ಧ್ವನಿಯಲ್ಲಿ ನೋವು, ಅತಾಶೆಯೂ ಅಡಗಿರುವಂತೆ ಚಿತ್ರಿತವಾಗಿದೆ.

ಅಡಿಟಿಪ್ಪಣಿಗಳು

೧. ಶ್ರೀಮತಿ ಎಚ್.ಎಸ್., **ಮಹಿಳಾ ಅಧ್ಯಯನ ವಿಶೇಷ ಸಂಚಿಕೆ,** ಪು.೭೩

೨. ಶರೀಫಾ ಕೆ., **ಬಂಡಾಯ ಮುಸ್ಲಿಂ ಸಂವೇದನೆ,** ಪು.೨೬

೩. ಆರೀಫಾ ರಾಜಾ, **ಜಂಗಮ ಫಕೀರನ ಜೋಳಿಗೆ,** ಪು.೭

೪. ರಂಜಾನ ದರ್ಗಾ, **ಪಚ್ಚಕುದುರೆ,** ಮುನ್ನುಡಿ

೫. ವಾಮನ ಬೇಂದ್ರೆ, **ನಾದಲೀಲೆ,** ಪು.೬೫

ಅಧ್ಯಾಯ ಐದು

ಕಟ್ಪಾಡಿ ಅವರ ಕತೆಗಳಲ್ಲಿ ಶರಣಾಗತಿ ಪಾತ್ರಗಳ ಸ್ವರೂಪ

ಅಧ್ಯಾಯ ಐದು

ಕಟ್ಪಾಡಿ ಅವರ ಕತೆಗಳಲ್ಲಿ ಶರಣಾಗತಿ ಪಾತ್ರಗಳ ಸ್ವರೂಪ

೫.೧. ಶರಣಾಗತಿಯ ತಾತ್ವಿಕ ಪರಿಕಲ್ಪನೆ

ಶರಣಾಗತಿ ಎಂಬುದು ಮೊರೆಹೋಗುವಿಕೆ, ಅಧೀನವಾಗುವಿಕೆ, ಸೋಲನ್ನು ಒಪ್ಪಿಕೊಳ್ಳುವಿಕೆ ಎಂಬರ್ಥವನ್ನು ಒಳಗೊಂಡಿದೆ. ಶರಣಾಗತಿಯಲ್ಲಿ ಎರಡು ಆಯಾಮಗಳನ್ನು ಗುರುತಿಸಬಹುದು. ೧. ವೈಯಕ್ತಿಕ ಆಯಾಮ. ಇಲ್ಲಿ ವ್ಯಕ್ತಿಗಳು ದಿಟ್ಟತನ ಇಲ್ಲದಿದ್ದಾಗ, ಇನ್ನೊಬ್ಬರ ಅಧೀನ ಮತ್ತು ಆಶ್ರಯದಲ್ಲಿ ಕೆಲಸ ಮಾಡುವ ಶರಣಾಗತ ಮನೋಭಾವ ತೋರುವರು. ೨. ಸಾಮಾಜಿಕ ಆಯಾಮ. ಇದು ಸಮುದಾಯದ ಶರಣಾಗತಿಗೆ ಸಂಬಂಧಿಸಿರುತ್ತದೆ. ಕೆಲವು ಅಪವಾದಗಳನ್ನು ಬಿಟ್ಟರೆ ವಸಾಹತುಶಾಹಿ ಆಳ್ವಿಕೆಯ ದೇಶಗಳಲ್ಲಿ ಈ ಬಗೆಯ ಸಾಮೂಹಿಕ ಶರಣಾಗತಿ ಕಂಡು ಬರುತ್ತದೆ. ಶರಣಾಗತಿಯ ಮನೋಭಾವವನ್ನು ಜನರಲ್ಲಿ ಉಂಟುಮಾಡುವುದಕ್ಕೆ ಅಧಿಕಾರಸ್ಥರು ನಿರಂತರವಾಗಿ ಪ್ರಯತ್ನ ಮಾಡುತ್ತಿರುತ್ತಾರೆ. ಪುರುಷಾಧಿಕಾರಿಗಳು ಸ್ತ್ರೀಯರನ್ನು ದೈಹಿಕವಾಗಿ ಸೋಲಿಸುವ, ದುಡಿಸಿಕೊಳ್ಳುವ ಮತ್ತು ಮಾನಸಿಕವಾಗಿ ನೀವು ದುರ್ಬಲರು ಎಂದು ನಂಬಿಸುವ ಮೂಲಕ ಶರಣಾಗತರನ್ನಾಗಿ ಮಾಡುತ್ತಾ ಬಂದಿದ್ದಾರೆ. ಮನು ತನ್ನ ಧರ್ಮಶಾಸ್ತ್ರದಲ್ಲಿ ಸ್ತ್ರೀಯು ಮಗುವಾಗಿದ್ದಾಗ ತಂದೆಯ ಆಶ್ರಯದಲ್ಲಿ ಯೌವನದಲ್ಲಿದ್ದಾಗ ಗಂಡನ ಆಶ್ರಯದಲ್ಲಿ ಮತ್ತು ವೃದ್ಧಾಪದಲ್ಲಿ ಪುತ್ರನ ಆಶ್ರಯದಲ್ಲಿ ಇರಬೇಕೆಂದು ಹೇಳುವಲ್ಲಿ ಪುರುಷ ಸಮಾಜಕ್ಕೆ ಸ್ತ್ರೀಯನ್ನು ಶರಣಾಗತಳನ್ನಾಗಿ ರೂಪಿಸುವ ತಂತ್ರವಿದೆ.

ಚರಿತ್ರೆಯಲ್ಲಿ ಎಲ್ಲ ದೇಶ, ಧರ್ಮ, ಸಮಾಜಗಳಲ್ಲೂ ವ್ಯಕ್ತಿ ಮತ್ತು ಸಮುದಾಯಗಳನ್ನು ಶರಣಾಗತರನ್ನಾಗಿ ಮಾಡುವ ಅಧಿಕಾರವಸ್ಥೆ ಕಂಡುಬರುತ್ತದೆ. ಹೀಗೆ ರೂಪಿಸಲಾದ ಶರಣಾಗತಿ ಮನೋಭಾವವು ಜನರಲ್ಲಿ ಅಥವಾ ಸಮುದಾಯದಲ್ಲಿ ಪ್ರತಿರೋಧ, ಪ್ರತಿಭಟನೆ, ಬದಲಾವಣೆ ಮಾಡುವ ತನಕ ಮುಂದುವರೆಯುತ್ತಿರುತ್ತದೆ. ಅನೇಕ ಸಲ ಶರಣಾಗತಿ ಮನೋಭಾವದಿಂದ ಹೊರಗೆ ಬಂದು ಪ್ರತಿರೋಧ ಮಾಡಿ ಸ್ವತಂತ್ರವಾಗಲು ಬೇಕಾದ ಪ್ರಜ್ಞೆಯ ಸಹಾಯ ಇಲ್ಲದಿದ್ದಾಗ

ಶರಣಾಗತಿ ಮನೋಭಾವ ಮುಂದುವರೆಯುತ್ತದೆ. ಅಂಬೇಡ್ಕರ್ ಜಾಗೃತಿ ಮೂಡಿಸುವತನಕ ದಲಿತರಿಗೆ ನಾವು ಸವರ್ಣೀಯ ಸಮಾಜದ ಮುಂದೆ ಕೀಳು ಎಂಬ ಶರಣಾಗತಿ ಮನೋಭಾವ ಇತ್ತು. ಅಂಬೇಡ್ಕರ್ ತಮ್ಮ ಚಿಂತನೆ ಹಾಗೂ ಚಳುವಳಿಗಳ ಮೂಲಕ ಒಂದು ಎಚ್ಚರದ ಪ್ರಜ್ಞೆಯನ್ನು ದಲಿತರಿಗೆ ಮೂಡಿಸಿದರು. ಆಗ ಶರಣಾಗತ ಮನೋಭಾವದಿಂದ ದಲಿತರು ಹೊರಗಡೆ ಬರಲು ಸಾಧ್ಯವಾಯಿತು. ಹಾಗೆಯೇ ಬ್ರಿಟೀಷರು ಆಳ್ವಿಕೆ ಮಾಡುವಾಗ ಭಾರತೀಯರಿಗೆ ನಾವು ಅವರನ್ನು ಓಡಿಸಲು ಆಗುವುದಿಲ್ಲ ಎಂಬ ಶರಣಾಗತಿ ಮನೋಭಾವ ಬೇರೂರಿತ್ತು. ಆಗ ಗಾಂಧೀಜಿ, ಭಗತ್‌ಸಿಂಗ್ ಮುಂತಾದವರು ತಮ್ಮ ಹೋರಾಟ ಮತ್ತು ಚಿಂತನೆಗಳ ಮೂಲಕ ಭಾರತೀಯರಲ್ಲಿ ಸ್ವಾತಂತ್ರ್ಯ ಪ್ರಜ್ಞೆಯನ್ನು ಬಿತ್ತಿದರು.

ಜಮೀನ್ದಾರಿ ಪದ್ಧತಿಯಲ್ಲಿ ಜೀತದಾಳುಗಳು ಶರಣಾಗತರಾಗಿರಬೇಕು ಎಂಬುದನ್ನು ಒಂದು ಮೌಲ್ಯವಾಗಿ ಆ ವ್ಯವಸ್ಥೆ ತುಂಬಾ ಎಚ್ಚರದಿಂದ ಕಾಯ್ದುಕೊಂಡು ಬರುತ್ತದೆ. ದೇವನೂರು ಮಹಾದೇವ ಅವರ 'ಅಮಾಸ' ಕತೆಯಲ್ಲಿ ಕುರಿಯಯ್ಯ ಸಾಕಿದ ತೆಂಗಿನಮರದಿಂದ ಗೌಡ ತೆಂಗಿನಕಾಯಿ ಕಿತ್ತುಕೊಂಡು ಹೋದರೂ ಕುರಿಯಯ್ಯ ಅಸಹಾಯಕನಾಗಿರುತ್ತಾನೆ. ಇದಕ್ಕೆ ಕಾರಣ ವ್ಯವಸ್ಥಿತವಾಗಿ ಈ ಜಮೀನ್ದಾರಿ ವ್ಯವಸ್ಥೆ ಶರಣಾಗತಿ ಮನೋಭಾವವನ್ನು ಕಾಪಾಡಿಕೊಂಡು ಬಂದಿದೆ. ತನಗೆ ಅನ್ಯಾಯವಾಗುತ್ತಿದೆ ಎಂಬ ಪ್ರಜ್ಞೆಯನ್ನು ಅದು ನಾಶಪಡಿಸಿರುತ್ತದೆ. ಚರಿತ್ರೆಯಲ್ಲಿ ಶರಣಾಗತ ಮನೋಧರ್ಮ ಮತ್ತು ಶರಣಾಗಿಸಿದವರ ಯಜಮಾನಿಕೆಗಳು ನಿರಂತರವಲ್ಲ. ಸವರ್ಣೀಯರ ಯಜಮಾನಿಕೆ ಮತ್ತು ದಲಿತರ ಶರಣಾಗತಿ, ಪುರುಷರ ಯಜಮಾನಿಕೆ ಮತ್ತು ಸ್ತ್ರೀಯರ ಶರಣಾಗತಿ, ವಸಾಹತುಶಾಹಿಗಳ ಯಜಮಾನಿಕೆ ಮತ್ತು ವಸಾಹತೀಕರಣಗೊಂಡ ಜನರ ಶರಣಾಗತಿ ಶಾಶ್ವತವಲ್ಲ. ಒಮ್ಮೆ ಆ ಶರಣಾಗತ ಸಮುದಾಯಗಳಲ್ಲಿ ಪ್ರತಿಭಟಿಸುವ ಪ್ರಜ್ಞೆ, ವಿಚಾರ, ನಾಯಕತ್ವ ಸಿಕ್ಕರೆ, ಅವು ಶರಣಾಗತಿಯಿಂದ ಹೊರಬರಲು ಪ್ರಯತ್ನಪಡುತ್ತವೆ. ಶರಣಾಗತಿಯಲ್ಲಿ ಅನೇಕ ವಿಧಗಳಿವೆ. ದೈಹಿಕ ಶರಣಾಗತಿ ಮತ್ತು ಮಾನಸಿಕ ಶರಣಾಗತಿ 'ಅಪಮಾನವನ್ನು, ಅಸಮಾನತೆಯನ್ನು ಅನುಭವಿಸುವುದಕ್ಕೂ ತಮ್ಮ ಮೇಲೆ ಇನ್ನೊಬ್ಬರು ಯಜಮಾನಿಕೆ ಮಾಡುವುದಕ್ಕೂ ಒಪ್ಪಿಗೆ ಕೊಡುವ ಮನೋಭಾವವೇ ಶರಣಾಗತಿ; ಒಬ್ಬ ಕೀಳು ಎಂದು ಒಪ್ಪಿಕೊಳ್ಳುವಲ್ಲಿ ಮತ್ತು ಇನ್ನೊಬ್ಬ ಮೇಲು ಎಂದು ಒಪ್ಪಿಕೊಳ್ಳುವಲ್ಲಿ ಇವೆರಡರಲ್ಲೂ ಶರಣಾಗತಿ ಮನೋಭಾವ ಕಂಡುಬರುತ್ತದೆ.

ಜನರನ್ನು ಅಥವಾ ಸಮುದಾಯವನ್ನು ಶರಣಾಗತರನ್ನಾಗಿ ಮಾಡುವುದರಲ್ಲಿ ಅಧಿಕಾರಸ್ಥ ಶಕ್ತಿಗಳು ನಿರಂತರವಾಗಿ ಪ್ರಯತ್ನಿಸುತ್ತಿರುತ್ತವೆ. ಶರಣಾಗತಿ ಎಲ್ಲ ಸ್ತರಗಳಲ್ಲೂ ಇರುತ್ತದೆ. ಕಿರಿಯ-ಹಿರಿಯ, ಅಧಿಕಾರಸ್ಥ-ಅಧಿಕಾರರಹಿತ ಹೀಗೆ ಪ್ರತಿಯೊಂದು ಸ್ತರದಲ್ಲಿ ಯಜಮಾನಿಕೆ

ಮತ್ತು ಶರಣಾಗತಿ ಮನೋಭಾವ ಒಟ್ಟಿಗೆ ಇರುತ್ತದೆ. ಗುಲಾಮ ಸಂಸ್ಕೃತಿಯನ್ನು ಅಧಿಕಾರಸ್ಥರು ಉದ್ದೇಶ ಪೂರ್ವಕವಾಗಿ ಹುಟ್ಟುಹಾಕಿರುತ್ತಾರೆ. ತಮ್ಮ ಅಜ್ಞಾನ ಅಸಹಾಯಕತೆಗಳಿಂದ ಶರಣಾಗತರು ಅದಕ್ಕೆ ಸಮ್ಮತಿ ಕೊಟ್ಟಿರುತ್ತಾರೆ. ಸೋತವರು ಪ್ರತಿಭಟನೆ ಮಾಡಿದಾಗ ಶೋಷಣೆ ಹಾಗೂ ದಮನ ಹೆಚ್ಚಾಗುತ್ತದೆ. ಆದರೆ ದಮನದಿಂದ ಹೊರಬರುವಾಗ, ಈ ಬಗೆಯಲ್ಲಿ ವ್ಯವಸ್ಥೆಯಲ್ಲಿ ಹಿಂಸೆಯು ಸಹಜವಾಗಿರುತ್ತದೆ. ಸಮಾನತೆಯನ್ನು ಸಾಧಿಸಿದ ಎಲ್ಲ ಸಮಾಜಗಳು ಬದಲಾವಣೆಯ ಹೊತ್ತಿನ ಈ ಹಿಂಸೆಯನ್ನು ಅನುಭವಿಸಿವೆ.

ಕೆಲವು ಸಾಹಿತ್ಯ ಕೃತಿಗಳಲ್ಲಿ, ಅದರಲ್ಲೂ ಮುಸ್ಲಿಂ ಲೇಖಕರ ಸಾಹಿತ್ಯ ಕೃತಿಗಳಲ್ಲಿ ಹೆಚ್ಚಾಗಿ ಶರಣಾಗತಿಯ ಅವಸ್ಥೆಯಿಂದ ಪ್ರತಿಭಟನೆ ವ್ಯವಸ್ಥೆಗೆ ಚಲಿಸುವ ಚಿತ್ರಣ ಕಂಡುಬರುತ್ತದೆ. ಶರಣಾಗತಿಯ ಬೇರೆ ಬೇರೆ ಆಯಾಮಗಳನ್ನು, ಸಾಹಿತ್ಯ ಕೃತಿಗಳು ಚಿತ್ರಿಸಿವೆ ಮತ್ತು ಶರಣಾಗತಿಯ ಅವಸ್ಥೆಯಿಂದ ಸ್ವತಂತ್ರ ಅವಸ್ಥೆಗೆ ಬರುವುದನ್ನು ಚಿತ್ರಿಸಿವೆ. ಮಹಿಳೆಯರ ಮೇಲಿನ ಶೋಷಣೆ ಅನಾದಿ ಕಾಲದಿಂದಲೂ ನಡೆಯುತ್ತ ಬಂದಿದೆ. ಬಹುತೇಕ ಎಲ್ಲ ಸಮಾಜಗಳಲ್ಲಿಯೂ ಅಲ್ಲಿನ ಧರ್ಮ, ಧರ್ಮಶಾಸ್ತ್ರಗಳು ಹಾಗೂ ಧಾರ್ಮಿಕ ಮುಖಂಡರು ಮಹಿಳಾ ಶೋಷಣೆಯಲ್ಲಿ ಪ್ರಧಾನ ಪಾತ್ರವಹಿಸಿದ್ದಾರೆ. ಬಹು ಹಿಂದಿನಿಂದಲೂ ಧರ್ಮಗಳ, ಅದರ ಕಟ್ಟುಪಾಡುಗಳಿಗೆ ಸಿಲುಕಿ ಮಹಿಳೆ ಜರ್ಜರಿತಳಾಗಿದ್ದಾಳೆ. ಪುರುಷನ ಆದೇಶದಂತೆ ಸ್ತ್ರೀ ನಡೆಯುತ್ತಿದ್ದಾಳೆ. ಈ ಧರ್ಮದ ಚೌಕಟ್ಟಿನೊಳಗೆ, ಕುಟುಂಬದೊಳಗೆ ಹಾಗೂ ಪುರುಷನ ದೌರ್ಜನ್ಯಕ್ಕೆ ಸ್ತ್ರೀ ಹೇಗೆ ಶರಣಾಗತಿಯಾಗಿದ್ದಾಳೆ, ಶರಣಾಗತಿಯಾಗುತ್ತಿದ್ದಾಳೆ ಎಂಬುದನ್ನು ಕನ್ನಡದ ಲೇಖಕರು ಚಿತ್ರಿಸಿದ್ದಾರೆ. ಅವರಲ್ಲಿ ಕಟ್ಪಾಡಿಯವರೂ ಸೇರಿದ್ದಾರೆ.

೫.೨. ಶರಣಾಗತಿಯ ಮಾದರಿಗಳು

ಫಕೀರ್ ಮುಹಮ್ಮದ್ ಕಟ್ಪಾಡಿಯವರ ಕತೆಗಳಲ್ಲಿ ಶರಣಾಗತ ಮಹಿಳಾ ಪಾತ್ರಗಳನ್ನು ಧಾರ್ಮಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ವಿಂಗಡಿಸಿಕೊಂಡು ಚರ್ಚಿಸಬಹುದು. ಮೇಲುನೋಟಕ್ಕೆ ಈ ಸಾಮಾಜಿಕ ಮತ್ತು ಧಾರ್ಮಿಕ ನೆಲೆಗಳು ಬೇರೆಯಾಗಿ ಕಂಡರೂ, ಆಳದಲ್ಲಿ ಅವುಗಳ ನಡುವೆ ಪರಸ್ಪರ ಸಂಬಂಧವಿದೆ.

೫.೨.೧. ಧಾರ್ಮಿಕ ಚೌಕಟ್ಟಿನಲ್ಲಿ ಶರಣಾಗತಿ: ಜಗತ್ತಿನ ಎಲ್ಲ ಸಮಾಜಗಳಲ್ಲೂ ಸ್ತ್ರೀಶೋಷಣೆಯಲ್ಲಿ ಧಾರ್ಮಿಕ ವ್ಯವಸ್ಥೆಯದು ಪ್ರಧಾನ ಪಾತ್ರವಿದೆ. ಯಾಕೆಂದರೆ ಧರ್ಮಗಳು ಪುರುಷವಾದವನ್ನು ಜಾರಿಮಾಡುವ ಆಯುಧಗಳಾಗಿವೆ. ಬಹುತೇಕ ಧಾರ್ಮಿಕ ಕಟ್ಟುಪಾಡುಗಳು ಸ್ತ್ರೀಯರಿಗಾಗಿ ರಚಿತವಾಗಿವೆ. ಸ್ತ್ರೀ ಧಾರ್ಮಿಕ ಚೌಕಟ್ಟಿನೊಳಗೆ ಬಂಧಿಯಾಗಿದ್ದಾಳೆ. ಈ ಧಾರ್ಮಿಕ ಆಚರಣೆಗಳ, ನೀತಿ ನಿಯಮಗಳನ್ನು ಪಾಲನೆ ಮಾಡುವ ನೆಪದಲ್ಲಿ ಸ್ತ್ರೀಯರನ್ನು ಶೋಷಿಸುವ ಪುರುಷ

ಸಮಾಜ ರೂಪಗೊಂಡಿದೆ. ಧಾರ್ಮಿಕ ಚೌಕಟ್ಟಿನೊಳಗಿನ ಸ್ತ್ರೀಯರ ಬದುಕಿನ ಕರಾಳ ಚಿತ್ರಣವನ್ನು ಕಟ್ಟಾಡಿ ಅವರ ಕತೆಗಳು ಸೂಕ್ಷ್ಮವಾಗಿ ಬಿಚ್ಚಿಡುತ್ತವೆ. ಈ ಕತೆಗಳ ಮೂಲಕ ಮುಸ್ಲಿಮ್ ಸಮಾಜದಲ್ಲಿನ ಸ್ತ್ರೀಯರ ಬದುಕಿನ ಕಷ್ಟವನ್ನು ಅನಾವರಣಗೊಳಿಸಲಾಗಿದೆ.

'ಕ್ರೌರ್ಯ' ಕತೆ ಧಾರ್ಮಿಕ ಅಂಧಶ್ರದ್ಧೆ ಮತ್ತು ಷರಿಯತ್ ನಿಯಮಗಳು ಮುಸ್ಲಿಮ್ ಮಹಿಳೆಯರ ಬದುಕಿಗೆ ಹೇಗೆ ಮಾರಕವಾಗಿವೆ ಎಂಬುದನ್ನು ಮನಮುಟ್ಟುವಂತೆ ಚಿತ್ರಿಸುತ್ತದೆ. ಈ ಕತೆಯ ಹೆಸರೇ ಸೂಚಿಸುವಂತೆ ಸ್ತ್ರೀಯರ ಮೇಲೆ ಕ್ರೌರ್ಯವನ್ನು ಎಸಗುವ ಪುರುಷ ಸಮಾಜ ಚಿತ್ರಣವಿಲ್ಲಿದೆ. ಸಾಂಪ್ರದಾಯಿಕ ಮನೋಧರ್ಮದ ಪುರುಷರು ಸ್ತ್ರೀಯನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳುವ ಅಮಾನವೀಯತೆ ಚಿತ್ರಣ ಇಲ್ಲಿ ಕಂಡುಬರುತ್ತದೆ. ಈ ಕತೆಯಲ್ಲಿ ಮಹಿಳೆಯೊಬ್ಬಳ ಗಂಡ, ಅಜ್ಜ ಮತ್ತು ಮೌಲ್ವಿ ಈ ಮೂವರೂ ಆಕೆಯ ಹಕ್ಕನ್ನು ಕಸಿದುಕೊಳ್ಳಲು ಯತ್ನಿಸುವರು. ಪುರುಷ ಪ್ರಧಾನ ಸಮಾಜ ಮತ್ತು ಪುರೋಹಿತಶಾಹಿ ಈ ಪ್ರಯತ್ನದಲ್ಲಿ ಒಂದುಗೂಡುತ್ತವೆ. ಕ್ರೌರ್ಯಕ್ಕೆ ಸಾಮಾನ್ಯವಾಗಿ ಪರಕೀಯರು ಬಲಿಯಾಗುತ್ತಾರೆ. ಆದರೆ ಇಲ್ಲಿ ತಮ್ಮ ಕುಟುಂಬದ ಸದಸ್ಯರೇ ಕಾರಣವಾಗುತ್ತಾರೆ. ಅಜ್ಜ ತನ್ನ ಮೊಮ್ಮಗಳಿಗೆ ಗಂಡನೇ ಮರುಮದುವೆಯಾಗುವ ದುರಾವಸ್ಥೆಯನ್ನು ಷರೀಯತ್ ಹಾಗೂ ಧರ್ಮದ ಹೆಸರಲ್ಲಿ ಸಮರ್ಥಿಸುತ್ತಾನೆ. ಅಜ್ಜನ ಕ್ರೌರ್ಯಕ್ಕೆ ಪುರುಷ ಸಮಾಜದ ಮೌಲ್ಯ ವ್ಯವಸ್ಥೆ ಕ್ರೌರ್ಯಕ್ಕೆ ಕಾರಣವಾಗಿದೆ. ಅದು ಶೋಷಣೆಗೆ ಬೆಂಬಲವನ್ನು ಧರ್ಮದಿಂದ ತೆಗೆದುಕೊಳ್ಳುತ್ತದೆ. ಈ ಮಹಿಳೆ ಮೇಲೆ ನಡೆಸುತ್ತಿರುವ ಕ್ರೌರ್ಯಕ್ಕೆ ಧಾರ್ಮಿಕ ನಿಯಮಗಳ ಆಸರೆ ಪಡೆಯುತ್ತದೆ. ಇಲ್ಲಿ ಕ್ರೌರ್ಯಕ್ಕೆ ನಿಜವಾದ ಕಾರಣ ಧಾರ್ಮಿಕ ನಿಯಮಗಳಲ್ಲ, ಅವನ್ನು ತಮ್ಮ ಪರವಾಗಿ ವ್ಯಾಖ್ಯಾನಿಸಿಕೊಳ್ಳುತ್ತಿರುವ ಪುರುಷ ಪ್ರಧಾನ ವ್ಯವಸ್ಥೆ. ಧರ್ಮದ ಹೆಸರಿನಲ್ಲಿ ಹೆಣ್ಣನ್ನು ಅಸಹಾಯಕಗೊಳಿಸಿರುವ ಈ ಹುನ್ನಾರವೇ ಆಕೆಯು ಶರಣಾಗತವಾಗಲು ಮುಖ್ಯ ಕಾರಣವಾಗಿದೆ. ಧರ್ಮದ ಪರಿಕಲ್ಪನೆಗಳನ್ನು ಪುರುಷಾವಾದಿಗಳು ಅಮಾನುಷವಾಗಿ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದನ್ನು ಈ ಕತೆ ತೋರಿಸುತ್ತದೆ. ಮಹಿಳೆಗೆ ಶಿಕ್ಷಣ ಕಡ್ಡಾಯವೆಂದು ಕುರಾನ್ ಹೇಳುತ್ತದೆ. ಆದರೆ ಮೈನೆರೆದ ಹೆಣ್ಣು ಶಾಲೆಗೆ ಹೋಗಬಾರದು ಎಂದು ಅಜ್ಜ ನಿಯಮ ಹಾಕುತ್ತಾನೆ. ಈ ಕ್ರೌರ್ಯದ ಮೂಲವನ್ನು ಈ ಕತೆ ಸ್ಪಷ್ಟವಾಗಿ ಪಾತ್ರವೊಂದರ ಮೂಲಕ ವ್ಯಾಖ್ಯಾನಿಸುತ್ತದೆ. 'ಶಹಾನಾಜಳ ವಿವಾಹೋತ್ತರ ಬದುಕಿನ ಸಂಕಟಗಳಿಗೆ ಷರೀಯತ್ತನ್ನು ದುರಪಯೋಗಪಡಿಸಿಕೊಳ್ಳುವ ಆಕೆಯ ಗಂಡ ಕಾರಣವಾಗಿದ್ದಾಳೆ. ಆತ ಇಸ್ಲಾಂ ಕಾನೂನನ್ನು ತನ್ನ ದುರ್ವರ್ತನೆಗಳಿಗೆ ಅನುಕೂಲವಾಗುವಂತೆ ವ್ಯಾಖ್ಯಾನಿಸಿ ಆಕೆಯನ್ನು ಶೋಷಣೆ ಮಾಡುತ್ತಾನೆ. ಮೂಲತಃ ದುಷ್ಟನೂ, ಅಹಂಕಾರಿಯೂ ಆದ ಆತ ಹೆಂಡತಿಯನ್ನು ಕ್ರೂರವಾಗಿ ನಡೆಸಿಕೊಳ್ಳುವುದಲ್ಲದೇ, ಎರಡನೆಯ ಮದುವೆಯಾಗಲು ಮುಂದಾಗುತ್ತಾನೆ. ಅವನ ಇಂಥ ಕೃತ್ಯಗಳಿಗೆ ಇಸ್ಲಾಂ ಕಾನೂನು ಬೆಂಬಲವಾಗಿದೆ ಎಂಬುದನ್ನು ಕತೆ

ನಿರೂಪಕ ಒಪ್ಪಿಕೊಳ್ಳುವುದಲ್ಲದೆ ಅದರ ವಿರುದ್ಧ ಮತ್ತು ಅದನ್ನು ಸಾಮಾನ್ಯ ಜನರ ಮೇಲೆ ಏರುವ ಮತಾಂಧರ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾನೆ ಎಂಬುದಾಗಿ ಮುನಿಶಾಮಪ್ಪನವರು ಗುರುತಿಸುತ್ತಾರೆ."[೧]

ಈ 'ಕ್ರೌರ್ಯ'ಕ್ಕೆ ಕಥಾನಾಯಕನ ತಾಯಿ ಮತ್ತು ತಂಗಿ ಇಬ್ಬರೂ ಬಲಿಪಶುವಾಗುತ್ತಾಳೆ. ಈ ಹಿನ್ನೆಲೆಯಲ್ಲಿ ಕಟ್ಪಾಡಿ ಕತೆಗಳಲ್ಲಿ ಪುರುಷ ಪ್ರಧಾನ ಸಮಾಜದ ಬೇರೆ ಬೇರೆ ಕ್ರೌರ್ಯದ ಮುಖಗಳನ್ನು ಮುಖಾಮುಖಿ ಮಾಡುವ ಬಹಳ ಪ್ರಧಾನ ಪಾತ್ರಗಳಾಗಿ ಬರುತ್ತವೆ. ಪುರುಷ ಮೂಲಭೂತವಾದದ ಈ ಕ್ರೌರ್ಯಕ್ಕೆ ಶರಣಾಗತಿಯಾಗುವುದು ಸ್ತ್ರೀ. ಇಲ್ಲಿ ಆಕೆ ಗಂಡ ಮರುಮದುವೆ ಆಗುವುದು ಗೊತ್ತಿದ್ದರೂ, ತಾನು ಇದಕ್ಕೆ ಬಲಿಯಾಗುತ್ತೇನೆ ಎಂದು ಗೊತ್ತಿದ್ದರೂ ಅಸಹಾಯಕಳಾಗಿ ಉಳಿಯುತ್ತಾಳೆ. ಗಂಡನನ್ನು ಬಿಟ್ಟು ಹೊರಬರದೆ, ಅವನ ಜತೆಯಲ್ಲೇ ಬಾಳುವೆ ಮಾಡಲು ನಿರ್ಧರಿಸುತ್ತಾಳೆ. ಈ ಮೂಲಕ ಕತೆ ಹೆಣ್ಣಿನ ಸಾಮಾಜಿಕ ಅಸಹಾಯಕತೆಯನ್ನು ಕತೆ ಚಿತ್ರಿಸುತ್ತದೆ.

'ಜುಲೇಖ' ಹೆಣ್ಣನ್ನೆ ಕೇಂದ್ರವಾಗಿಟ್ಟುಕೊಂಡು ರಚಿತವಾದ ಕತೆ. ಹದಿಹರೆಯದ ಜುಲೇಖಳ ಗಂಡನ ಸಾವಿನ ಚಿತ್ರಣದಿಂದ ಕತೆ ಆರಂಭವಾಗುತ್ತದೆ. ಜುಲೇಖಳ ಜೀವನದಲ್ಲಿ ಎರಡು ಘಟ್ಟಗಳು ಕಂಡುಬರುತ್ತವೆ. ಆಕೆ ಗಂಡನ ಪ್ರೀತಿಯಿಂದ ವಂಚಿತಳಾಗಿರುತ್ತಾಳೆ. ಈ ಕಾರಣಕ್ಕಾಗಿ ಗಂಡನ ಸಾವಿಗೆ ಆಕೆ ಅಳುವುದಿಲ್ಲ. "ಈ ಕತೆಯ ಕೇಂದ್ರ ಪಾತ್ರವಾದ ಜುಲೇಖಳ ಜೀವನದಲ್ಲಿ ಎರಡು ಘಟ್ಟಗಳಿದ್ದು, ಎರಡೂ ಘಟ್ಟಗಳಲ್ಲಿಯೂ ಇಬ್ಬರೂ ಪುರುಷರಿಂದ ಶೋಷಣೆಗೆ ಒಳಗಾಗುತ್ತಾಳೆ. ಜುಲೇಖಳ ಬದುಕಿನಲ್ಲಿ ಪ್ರವೇಶಿಸುವ ಇಬ್ಬರು ಪುರುಷರು ಎರಡು ರೀತಿಯ ಅತಿರೇಕಗಳಿಂದ ಆಕೆಯನ್ನು ಶೋಷಣೆ ಮಾಡುತ್ತಾರೆ"[೨] ಎಂದು ಮುನಿಶಾಮಪ್ಪ ಅವರು ಗುರುತಿಸುವರು. ಜುಲೇಖ ತನ್ನ ಇಬ್ಬರು ಪತಿಗಳಿಂದ ಶೋಷಣೆಗೆ ಒಳಗಾಗುತ್ತಾಳೆ. ಅವಳ ಮೊದಲ ಗಂಡ ಅಕ್ಬರ್ ಸಂಪ್ರದಾಯವಾದಿಯಾಗಿದ್ದು, ಹೆಣ್ಣನ್ನು ಷರೀಯತ್‌ನ ನಿಯಮಗಳ ಹಿನ್ನೆಲೆಯಲ್ಲಿಯೇ ನೋಡುತ್ತಾನೆ. ಆಕೆಯನ್ನು ಮನೆಯಲ್ಲಿ ಬಂಧನದಲ್ಲಿಡುತ್ತಾನೆ. ಜುಲೇಖಳಿಗೆ ಉಡಲು ಉಣ್ಣಲು ಕೊರತೆಯಿಲ್ಲದಿದ್ದರೂ ಮಾನಸಿಕ ನೆಮ್ಮದಿಯಿಲ್ಲ, ಸ್ವಾತಂತ್ರ್ಯವಿಲ್ಲ. ಗಂಡನೊಡನೆ ಶರಣಾಗತ ಬದುಕು ಬದುಕಿದ ಆಕೆಗೆ ಅವನ ಸಾವು ಬಿಡುಗಡೆ ಅನಿಸುತ್ತದೆ. ವಿಧವೆಯರು ಕೆಲವು ದಿನ ಮನೆಯಲ್ಲೇ ಇರುವ ಕಡ್ಡಾಯ 'ಇದ್ದತ್' ಆಚರಣೆ ಈಕೆಗೆ ಹೊಸದೆನಿಸುವುದಿಲ್ಲ. "ಜನ್ನತ್ ಮಹಲ್‌ನ ಆಳೆತ್ತರದ ಆವರಣದ ಗೋಡೆಯ ಗೇಟಿನೊಳಗೆ ಹತ್ತು ವರ್ಷಗಳ ಹಿಂದೆ ಅಕ್ಬರ್ ಅಹ್ಮದ್‌ನ ಕೈ ಹಿಡಿದು ಪ್ರವೇಶ ಮಾಡಿದ್ದು ಜುಲೇಖಳ ಕಣ್ಮುಂದೆ ನಿಂತಿತು. ಈ ಹತ್ತು ವರ್ಷಗಳು ಉಸಿರು ಹಿಡಿದುಕೊಂಡು ಈ ದೊಡ್ಡ ಮಹಲಿನೊಳಗೆ ಬದುಕಿದ ದಿನಗಳು

ಕಣ್ಮುಂದೆ ಬಂದವು" ಎಂದು ಕತೆಯು ಅವಳ ಹಿನ್ನೆಲೆಯಲ್ಲಿ ನಿರೂಪಿಸುತ್ತದೆ. ಮನೆಯು 'ಜನ್ನತ್ ಮಹಲ್' ಆಗಿದ್ದರೂ ಅವಳ ಪಾಲಿಗೆ ಅದು ದೋಜಕ್ (ನರಕ) ಆಗಿತ್ತು. ಆಕೆಯನ್ನು ಗಂಡ ನಡೆಸಿಕೊಂಡ ನೆನಪುಗಳು ಬಿಡದೆ ಕಾಡುತ್ತವೆ. "ಏಯ್ ಬಾರೇ ಇಲ್ಲಿ. ನಾನು ಬಂದು ಇಷ್ಟು ಹೊತ್ತಾದರೂ ನೀನು ಬರೋದೇ ಕಾಣ್ತಾ ಇಲ್ಲ. ನಾನೆಂದರೆ ಅಸಡ್ಡೆ ಆಗ್ಲೇ ಶುರುವಾಯ್ತೆನೆ?' ಎಂದು ಕೇಳುವ ಗಂಡ ಹೆಣ್ಣನ್ನು ಅಡಿಯಾಳನ್ನಾಗಿಸುವಲ್ಲಿ ಪರಿಣತನು. ಅವನು ಹೆಂಡತಿಗೆ ಪರದಾ ಹಾಕಿಸುತ್ತಾನೆ, ಗಾಳಿ ಬೆಳಕು ದೊರೆಯದಂತಹ ಮನೆಯಲ್ಲಿ ಕೂಡಿ ಹಾಕುತ್ತಾನೆ. ಜುಲೇಖಳಿಗೆ ಮನೆಯ ಹಿತ್ತಲಲ್ಲಿರುವ ಹಣ್ಣು ತಿನ್ನಲೂ ಸ್ವಾತಂತ್ರ್ಯ ಇರುವುದಿಲ್ಲ. ನೆರೆಹೊರೆಯವರೊಡನೆಯೂ ಅವಳ ಸಂಪರ್ಕ ನಿಷೇಧಿಸಲಾಗಿತ್ತು. ಇದು ಜುಲೇಖಳ ಶರಣಾಗತ ಬದುಕಿನ ಮೊದಲ ಘಟ್ಟ. ಬೋಳುವಾರರ 'ಆಕಾಶಕ್ಕೆ ನೀಲಿಪರದೆ ಕತೆಯಲ್ಲಿ ಮುಕುಂದಣ್ಣ "ಒಂದು ವಾರದಿಂದ ನಿನಗೆ ಹೇಳಬೇಕು ಅಂತ ಯೋಜನೆ ಮಾಡುತ್ತಾ ಇದ್ದೇನೆ, ನೀನು ಮಾಳಿಗೆಯ ಕಿಟಕಿಯ ಹತ್ತಿರ ಇಡೀ ಊರು ಕಾಣುವಂತೆ ಪ್ರದರ್ಶನಕ್ಕೆ ಕೂತುಕೊಳ್ಳುವುದು ಸರಿ ಕಾಣುವುದಿಲ್ಲ. ನೀನು ಸ್ವಲ್ಪ ಮರ್ಯಾದಿಯಾಗಿ ಬದುಕುವುದನ್ನು ಕಲಿಯಬೇಕು. ನಿಮ್ಮ ಜಾತಿಯವರು ನಿಮಗೆಲ್ಲ ಕಪ್ಪು ಬಟ್ಟೆ ಸುತ್ತಿ ಮೂಲೆಯಲ್ಲಿ ಬಚ್ಚಿಡುವುದು ಸುಮ್ಮನೇನು ಅಲ್ಲ. ಸಸಾರ ಕೊಟ್ಟರೆ ಮನೆ ಮಾಡು ಹತ್ತಿ ಬಟ್ಟೆ ಬಿಚ್ಚಿ ಕುಣಿಯಲ್ಲಿಕ್ಕೂ ಹಿಂದೆಮುಂದೆ ನೋಡುವ ಜಾತಿಯಲ್ಲ."[೩] ಇಲ್ಲಿ ಮುಬೀನಾ ಮತ್ತು ಜುಲೇಖಾ ಇಬ್ಬರ ಪರಿಸ್ಥಿತಿಯು ಒಂದೇ ಆಗಿದೆ. ಮುಕುಂದಣ್ಣ ಮುಬೀನಳಿಗೆ ಆಕಾಶ ಕಾಣದಂತೆ ನೀಲಿಪರದೆಯಂತೆ ಮುಚ್ಚುತ್ತಾನೆ. ಜುಲೇಖ ಗಂಡ ಮುಸ್ಲಿಮ್ ಆಗಿದ್ದು ನಿಯಮಗಳನ್ನು ಹಾಕುವ ಮೂಲಕ ಸ್ವತಂತ್ರ ಕಸಿದುಕೊಳ್ಳುತ್ತಾನೆ. ಆದರೆ ಮುಕುಂದಣ್ಣ ಅಂತರ್ಜಾತಿಯವನಾಗಿದ್ದು ಸ್ವತಂತ್ರಕ್ಕೆ ಧಕ್ಕೆ ತರುತ್ತಾನೆ. ಈ ಮೂಲಕ ಸಮಾಜದಲ್ಲಿ ಯಾವುದೇ ಧರ್ಮದವರಾಗಿದ್ದು, ಸ್ತ್ರೀಗೆ ಸ್ವತಂತ್ರವಿಲ್ಲ ವೆಂಬುದನ್ನು ಕತೆಗಾರರು ಚಿತ್ರಿಸಿದ್ದಾರೆ.

ಎರಡನೇ ಘಟ್ಟ ಗಂಡ ಸತ್ತನಂತರ ಆತನ ತಮ್ಮ ಮುನೀರನನ್ನು ಆಕೆ ಮದುವೆಯಾದ ಬಳಿಕ ಆರಂಭವಾಗುತ್ತದೆ. ಅಕ್ಬರನು ಸಾಂಪ್ರದಾಯವಾದಿ ನೆಲೆಯಿಂದ ಆಕೆಯನ್ನು ಶರಣಾಗತ ವಾಗಿಸಿದರೆ, ಮುನೀರನು ಆಧುನಿಕತೆ, ವೈಚಾರಿಕತೆಯ ಮೂಲಕ ಆಕೆಯನ್ನು ಅಧೀನಕ್ಕೆ ಒಳಪಡಿಸುತ್ತಾನೆ. ಮೊದಲು ಅವನು ಅಣ್ಣನಿಂದ ಹಿಂಸೆಗೊಳಗಾಗಿದ್ದ ಜುಲೇಖಳಿಗೆ ಸಂಪೂರ್ಣ ಸ್ವಾತಂತ್ರ ನೀಡುತ್ತಾನೆ. ಉದಾತ್ತ ಭಾವನೆಗಳನ್ನು ಹೊಂದಿದ ಪ್ರಗತಿಪರ ಯುವಕನಾಗಿ ಆತ ಕಂಡುಬರುತ್ತಾನೆ. ಆದರೆ ಗಂಡ ಕೊಡಬೇಕಾದ ಪ್ರೀತಿ ಮಾತ್ರ ನೀಡುವುದಿಲ್ಲ. ಅವನು ಅಣ್ಣನಂತೆಯೇ ಸ್ತ್ರೀ ಶೋಷಕ ಎಂಬುದು ಜುಲೇಖಳಿಗೆ ತಿಳಿಯುತ್ತದೆ. ಸಾರ್ವಜನಿಕವಾಗಿ ಸ್ತ್ರೀ ಸ್ವಾತಂತ್ರ್ಯ ಪರವಾಗಿ ಮಾತಾಡುವನು ಮನೆಯಲ್ಲಿ ಹೆಂಡತಿಯನ್ನು ನಿರ್ಬಂಧಿಸುತ್ತಾನೆ. 'ಮುಸ್ಲಿಮ್

ಸಮಾಜದಲ್ಲಿ ಮಹಿಳೆ' ಎಂಬ ವಿಚಾರದಲ್ಲಿ ಮಾತಾಡಿದ ಮುನೀರ್ ಕೊನೆಗೆ ಮುಸ್ಲಿಮ್ ಸಮಾಜದಲ್ಲಿ ಮಹಿಳೆಯರಿಗಿದ್ದ ಸ್ಥಾನಮಾನಗಳ ಜೀವಂತ ಉದಾಹರಣೆ ನನ್ನ ಹೆಂಡತಿ ಜುಲೇಖ ಎಂದು ಹೇಳುತ್ತಾನೆ. ತನ್ನ ಅಣ್ಣ ಅವಳನ್ನು ನಡೆಸಿಕೊಂಡು ಬಂದ ರೀತಿ ಮತ್ತು ತಾನು ಕನಿಕರಪಟ್ಟು ಅವಳಿಗೆ ಸ್ವಾತಂತ್ರ್ಯ ನೀಡಿದ ಬಗ್ಗೆ ವಿವರಿಸುತ್ತಾನೆ. ಖಾಸಗಿ ಬದುಕಿನ ವಿವರವನ್ನು ಬಹಿರಂಗಗೊಳಿಸಿದ ಗಂಡನನ್ನು ಜುಲೇಖ ವಿರೋಧಿಸಿದಾಗ "ನಾನು ಹೇಳಿದ್ದು ಸುಳ್ಳಲ್ಲ ತಾನೇ?"ಎಂದು ಆಕೆಯ ಬಾಯಿ ಮುಚ್ಚಿಸುತ್ತಾನೆ. ಆಕೆ ತಾಯಿಯಾಗುವ ಆಸೆಯನ್ನು ಸಹ ಹತ್ತಿಕ್ಕುತ್ತಾನೆ. "ಈಗ ಮುಖ್ಯವಾಗಿರೋದು ಮಗುವಲ್ಲ, ನೀನು ಹಳೆಯ ಕಾಲದ ಹೆಂಗಸರಂತೆ ಮಾತಾಡೋದು ಬಿಟ್ಟು ಹೊಸ ವಿಚಾರಗಳ ಬಗ್ಗೆ ಚಿಂತಿಸು" ಎನ್ನುತ್ತಾನೆ. ಜುಲೇಖ ನಗುತ್ತಾ "ಮತ್ಯಾಕೆ ನೀವು ನನ್ನನ್ನು ಮದುವೆಯಾದದ್ದು?"ಎಂದು ಪ್ರಶ್ನಿಸಿದಾಗ, "ಪಂಜರದೊಳಗಿನ ಪಕ್ಷಿಯನ್ನು ಹೊರಬಿಟ್ಟು ಸ್ವಾತಂತ್ರ್ಯವಾಗಿ ಹಾರಾಡುವುದನ್ನು ನೋಡುವ ಪ್ರಯೋಗ ಮಾಡಬೇಕಿತ್ತು?" ಎನ್ನುತ್ತಾನೆ. ಇಲ್ಲಿ ಹೆಂಡತಿ ಪ್ರಯೋಗದ ವಸ್ತುವಾಗುತ್ತಾಳೆ. ಇಲ್ಲಿ ವಿಶೇಷವೆಂದರೆ ಸಂಪ್ರದಾಯವಾದಿ ಅಕ್ಬರ್ ಆಧುನಿಕವಾದಿ ಮುನೀರ್ ಇಬ್ಬರೂ ಮಡದಿಯರನ್ನು ಮಾತ್ರವಲ್ಲ, ತಾಯಿಯನ್ನೂ ಮನೆಯ ಸೆರೆಮನೆಯಲ್ಲಿ ಇಟ್ಟವರು. ಒಮ್ಮೆ ಅಕ್ಬರ್ ತನ್ನ ತಾಯಿ "ನಾನೂ ಜುಲೇಖ ಜೊತೆಯಾಗಿ ಹೋಗಿ ಉರೂಸಿಗೆ ಹೋಗಿ ಝಿಯಾರತ್ ಮಾಡಿ ಬರುತ್ತೇವೆ ಮಗಾ" ಎಂದಾಗ, 'ಅದೆಂತದ್ದಮ್ಮಾ ಹೆಂಗಸರು ಉರೂಸಿಗೆ ಹೋಗೊದಾ? ಅಲ್ಲಿ ಸಾವಿರಾರು ಜನ ಗಂಡಸರು ಸೇರಿರುತ್ತಾರೆ" ಎಂದು ಹೇಳಿ ತಡೆಯುತ್ತಾನೆ. ಆಗ ಅವನ ತಾಯಿ ನೋವಿನಿಂದ ತನ್ನ ಸೊಸೆಗೆ ಹೇಳುವ ಮಾತಿದು: "ಇವನು ಎಲ್ಲ ರೀತಿಯಲ್ಲೂ ಅವನಪ್ಪನ ಪಡಿಯಚ್ಚು." ಅಂದರೆ ಮಹಿಳೆಯರಿಗೆ ಶರಣಾಗತವಾಗಿಸುವ ಪರಂಪರೆ ಅನೂಚಾನವಾಗಿ ಹಿಂದಿನಿಂದಲೂ ನಡೆದುಬಂದಿದೆ ಎಂದು ಕತೆ ಧ್ವನಿಸುತ್ತದೆ. ಈ ಹಿನ್ನೆಲೆಯಲ್ಲಿ ಅವರ ಮನೆಯು 'ಜನ್ನತ್ ಮಹಲ್' ದೊಡ್ಡ ಸೆರೆಮನೆಯಾಗಿದೆ.

"ದೈಹಿಕ ಸುಖದಿಂದಲೂ ಜುಲೇಖ ವಂಚಿತಳಾಗಿರುತ್ತಾಳೆ. ಕೇವಲ ಮನೆತನದ ಆಸ್ತಿಯ ಪಾಲು ಹೊರ ಹೋಗಬಾರದೆಂಬ ಕಾರಣಕ್ಕೆ ಮುನೀರನು ತನ್ನನ್ನು ಮದುವೆಯಾಗಿದ್ದನೆಂಬುದು ಜುಲೇಖಳಿಗೆ ಮನವರಿಕೆಯಾಗುತ್ತದೆ. ಆದ್ದರಿಂದ ಆಕೆ ಆಧುನಿಕತೆ ಮತ್ತು ಪ್ರಗತಿಪರತೆ ಹೆಸರಿನಲ್ಲಿ ನಡೆಯುವ ಶೋಷಣೆಗಿಂತ ಸಾಂಪ್ರದಾಯಿಕತೆಯ ಬಂಧನದಲ್ಲಿಯೇ ಸುಖವಿತ್ತು ಎಂದು ಯೋಚಿಸುವಂತಾಗುತ್ತದೆ. ಒಟ್ಟಿನಲ್ಲಿ ಮುಸ್ಲಿಂ ಕುಟುಂಬಗಳಲ್ಲಿ ಮಹಿಳೆಯರ ಶೋಷಣೆ ಅವ್ಯಾಹತವಾಗಿ ನಡೆಯುತ್ತದೆ ಎಂಬುದನ್ನು ಲೇಖಕರು ಈ ಕತೆಯ ಮೂಲಕ ಸ್ಪಷ್ಟಪಡಿಸಿದ್ದಾರೆ."[9]

ಶರಣಾಗತರು, ದಮನಿತರು ಒಬ್ಬರ ನೋವಿಗೆ ಒಬ್ಬರು ಮಿಡಿಯುವ ಮಾನವೀಯ ಗುಣ ಬೆಳೆಸಿಕೊಳ್ಳುವರು. ಇದು ಕತೆಯಲ್ಲಿ ಕಾಣುತ್ತದೆ. ದಮನಿತರು ಬಡವ-ಶ್ರೀಮಂತ, ಅತ್ತೆ-

ಸೊಸೆ ಎಂಬ ಬೇಧವೇಣಿಸದೆ ಪರಸ್ಪರ ಕಷ್ಟಗಳಿಗೆ ಮಿಡಿಯುವ ಸ್ತ್ರೀಪಾತ್ರಗಳು ಇಲ್ಲಿ ಬಹಳ ಇವೆ. ಶರಣಾಗತರು ತಮ್ಮ ಎದುರಾಳಿಗಳ ವಿರುದ್ಧ ಒಂದಾಗುತ್ತಾರೆ. ಆದರೆ ಹೋರಾಡುವುದಿಲ್ಲ.

ಸ್ತ್ರೀ ಶೋಷಣೆಗೆ ಧಾರ್ಮಿಕ ವ್ಯವಸ್ಥೆಯನ್ನು ತನ್ನ ಹಿತಾಸಕ್ತಿಗೆ ತಕ್ಕನಾಗಿ ಮಾರ್ಪಡಿಸಿಕೊಳ್ಳುವಲ್ಲಿ ಪುರುಷ ಸಮಾಜ ಕಾರಣವಾಗಿದೆ. ಮಹಿಳೆಯರನ್ನು ಶರಣಾಗತರಾಗಿಸುವ ಇನ್ನೊಂದು ಆಯುಧವೆಂದರೆ ವಿವಾಹ 'ವಿಚ್ಛೇದನ' ಅಥವಾ 'ತಲಾಕ್' ವ್ಯವಸ್ಥೆ. ಇದು ಶ್ರೀಮಂತ ಕುಟುಂಬಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪುರುಷರು ತಮಗಿಚ್ಚೆ ಬಂದಂತೆ ತಲಾಕ್ ನೀಡುವುದನ್ನು ಕಟ್ಟಾಡಿ ಅವರ ಕತೆಗಳು ಚಿತ್ರಿಸುತ್ತವೆ. ಮದುವೆ ಮೂಲತಃ ಇಲ್ಲಿ ಸಾಮಾಜಿಕ ಧಾರ್ಮಿಕ ಒಪ್ಪಂದವಾಗಿದ್ದು, 'ತಲಾಕ'ನ್ನು ಪತಿಯಾದವನು ಮೂರುಬಾರಿ ಹೇಳಿದರೆ ವೈವಾಹಿಕ ಸಂಬಂಧ ಮುರಿದು ಬೀಳುತ್ತದೆ. ಆತ ಮತ್ತೊಂದು ಮದುವೆಯಾಗಲು ಸ್ವಾತಂತ್ರ್ಯ ಸಿಗುತ್ತದೆ. 'ತಲಾಕ್' ಎಂಬುದನ್ನು ಮೂರು ಬಾರಿ ಹೇಳಬೇಕೆಂಬ ನಿಯಮ ಇದೆ. ಅದು ತಿಂಗಳಿಗೊಂದರಂತೆ ಮೂರು ತಿಂಗಳು ಹೇಳಬೇಕು. ಎರಡು ತಲಾಕ್ ಕೊಟ್ಟಾಗ ಗಂಡ ಹೆಂಡತಿ ನಡುವೆ ಸಾಮ್ಯತೆ, ಹೊಂದಾಣಿಕೆ ಕಂಡುಬಂದರೆ ತಲಾಕ್ ಸಿಂಧುವಾಗುವುದಿಲ್ಲ. ಹೊಂದಾಣಿಕೆ ಕಂಡುಬರದಿದ್ದರೆ ತಲಾಕ್ ನೀಡಬಹುದು. ಆದರೆ ಮುಸ್ಲಿಂ ಗಂಡಸರು ಷರೀಯತ್ ನಿಯಮಗಳನ್ನು ತಮಗೆ ಬೇಕಾದಂತೆ ಬದಲಾಯಿಸಿಕೊಂಡಿರುವರು. ಇಲ್ಲಿನ ಕತೆಗಳಲ್ಲಿ ಬರುವ ಶ್ರೀಮಂತ ಪುರುಷರು ಒಮ್ಮೆಲೆ ತಲಾಕ್ ಎಂದು ಮೂರು ಬಾರಿ ಹೇಳುತ್ತಾರೆ. ಅವರ ಈ ದುಡುಕಿಗೆ ಬಲಿಯಾಗುವುದು ಮಾತ್ರ ಸ್ತ್ರೀ. ಮೊದಲ ಗಂಡನೊಡನೆ ಮತ್ತೆ ಬಾಳಲು ಆಕೆ ಪರಪುರುಷನೊಡನೆ ಇಷ್ಟವಿರದಿದ್ದರೂ ಮದುವೆ ಆಗಿ ಒಂದು ದಿನದಮಟ್ಟಿಗಾದರೂ ಅವನೊಡನೆ ಬಾಳಿ ಅವನಿಂದ ತಲಾಕ್ ಪಡೆಯಬೇಕು. ಅದು 'ಇದ್ದತ್' ಆಚರಣೆಯಲ್ಲಿ ಗರ್ಭಿಣಿ ಆಗದಿದ್ದರೆ ಮಾತ್ರ ಗಂಡನೊಡನೆ ಬಾಳಲು ಅವಕಾಶ. ಇಂತಹ ಏಕಪಕ್ಷೀಯವಾದ ನಿಯಮಗಳು ಆಚರಣೆಗಳು ಮಹಿಳೆಯರನ್ನು ಅಸಹಾಯಕವಾಗಿಸುತ್ತವೆ. ಪುರುಷವಾದಿ ಸಮಾಜ ಮಹಿಳೆಯನ್ನು ಆಟಿಕೆ ವಸ್ತುವನ್ನಾಗಿ, ಗುಲಾಮಳನ್ನಾಗಿ ಬಳಸಿಕೊಳ್ಳುವುದನ್ನು ಕಟ್ಟಾಡಿ ಕತೆಗಳು ವಿಷಾದದಲ್ಲಿ ಚಿತ್ರಿಸುತ್ತ ಹೋಗುತ್ತವೆ.

'ರಾಬಿಯಾ', 'ಒಂದು ಹಗಲು ಒಂದು ರಾತ್ರಿ' ಹಾಗೂ 'ವೈಯಕ್ತಿಕ' ಈ ಮೂರು ಕತೆಗಳಲ್ಲಿ ಗಂಡನ ಸಿಟ್ಟಿನಿಂದ 'ತಲಾಕ್'ಗೆ ಗುರಿಯಾಗುವ ಸ್ತ್ರೀ ಪಾತ್ರಗಳಿವೆ. ಧಾರ್ಮಿಕ ನಿಯಮಗಳಿಗೆ ಪುರುಷಾಧಿಕಾರಕ್ಕೆ ಬಲಿಯಾಗಿ ಶರಣಾಗತರಾಗಿರುವ ಹಾಗೂ ಮಾನಸಿಕವಾಗಿ ಜರ್ಜರಿತರಾಗಿರುವ ಮಹಿಳೆಯರು ಇಲ್ಲಿ ಬರುತ್ತಾರೆ. 'ರಾಬಿಯಾ' ಕತೆಯಲ್ಲಿ ಬರುವ ನಾಯಕಿ ಪುರುಷನ ಅಮಾನವೀಯ ಕ್ರೌರ್ಯಕ್ಕೆ ಗುರಿಯಾಗುತ್ತಾಳೆ. ಈಕೆಯನ್ನು ಕುಟುಂಬದಲ್ಲಿನ ಸದಸ್ಯರು ದುಡಿಯುವ ಯಂತ್ರವೆಂಬಂತೆ ನೋಡುತ್ತಾರೆ. ಅವಳು ತರುವ ವರದಕ್ಷಿಣೆ, ಅವಳ

ದುಡಿಮೆ ಎಲ್ಲರಿಗೂ ಮುಖ್ಯವಾಗಿರುತ್ತದೆ. ಅತ್ತೆಯಾದವಳು ಹೆಣ್ಣನ್ನು ನೋಡಲು ಹೋದಾಗ ದನದ ವ್ಯಾಪಾರದ ಪರಿಭಾಷೆ ಬಳಸುತ್ತಾಳೆ. ಇಲ್ಲಿ ಹೆಣ್ಣಿಗೆ ಬಡತನ ಹಾಗೂ ಬಣ್ಣ ಅವಳ ಅಸ್ತಿತ್ವದ ಪ್ರಶ್ನೆಯಾಗಿ ನಿಲ್ಲುತ್ತವೆ. ಆಕೆಯ ಅಸ್ತಿತ್ವ ಭದ್ರವಾಗುವುದು ಆಕೆ ಗಂಡು ಮಗುವನ್ನು ಹೆತ್ತಾಗ. ಇಂತಹದೊಂದು ಶರಣಾಗತ ಮಹಿಳೆಯರ ದೊಡ್ಡಲೋಕವೆ ಕಟ್ಪಾಡಿಯವರಲ್ಲಿ ಅನಾವರಣಗೊಳ್ಳುತ್ತದೆ. ಹೆಣ್ಣನ್ನು ಇಡೀ ಕುಟುಂಬ ವ್ಯವಸ್ಥೆಯೆ ಸೋಲಿಸಿ ಶರಣಾಗಿಸಿದೆ. ಅವಳನ್ನು ಹೀಗೆ ಸೋಲಿಸುವಲ್ಲಿ ಪುರುಷವಾದಿ ಚಿಂತನೆಯುಳ್ಳ ಸ್ತ್ರೀಯರು ಪ್ರಮುಖ ಪಾತ್ರ ನಿರ್ವಹಿಸುತ್ತಾರೆ. 'ರಾಬಿಯಾ' ಕತೆಯಲ್ಲಿ ಅತ್ತೆ ಸೊಸೆಯರು ಇದಕ್ಕೆ ನಿದರ್ಶನ. ತಾಯಿ–ಹೆಂಡತಿಯರ ಜಗಳಕ್ಕೆ ಬೇಸತ್ತ ಶರೀಫ್ ತಾಯಿಗೆ ಸಮಾಧಾನ ಮಾಡಲಾಗದೇ ಹೆಂಡತಿಗೆ ಸಿಟ್ಟಿನಲ್ಲಿ ತಲಾಕ್ ಕೊಡುತ್ತಾನೆ. ಆದರೆ ಮತ್ತೆ ಅವಳೊಡನೆ ಬಾಳಲು ಬಯಸುತ್ತಾನೆ. ಇದೇ ವಸ್ತುವನ್ನು ಆಧರಿಸಿ ಸಾರಾ ಅಬೂಬಕರ್ ಅವರು 'ಚಂದ್ರಗಿರಿ ತೀರದಲ್ಲಿ' ಕಾದಂಬರಿ ರಚಿಸಿದರು.

ಮಹಿಳೆಯರ ವೈವಾಹಿಕ ಕೌಟುಂಬಿಕ ಸಮಸ್ಯೆಗಳನ್ನು ಬಗೆಹರಿಸುವ ಧಾರ್ಮಿಕ ನ್ಯಾಯದ ಸಭೆಯು ಸಂಪೂರ್ಣವಾಗಿ ಪುರುಷರಿಂದ ಕೂಡಿದೆ. ಆ ಸಭೆಯಲ್ಲಿ ಊರಿನ ಬೇರೆಬೇರೆ ಹಿತಾಸಕ್ತರು ಪರಸ್ಪರ ಸೋಲಿಸಲು ಮಹಿಳೆಯರ ಪ್ರಶ್ನೆಯನ್ನು ಒಂದು ನೆಪವಾಗಿಸಿಕೊಳ್ಳುವರು. ರಾಬಿಯಾ ತಲಾಕ್‌ನಿಂದ ಮುಕ್ತಿ ಪಡೆದು ಗಂಡನೊಟ್ಟಿಗೆ ಬಾಳಲು ಇದ್ದತ್ ಆಚರಣೆಗೆ ತೊಡಗಬೇಕಾಗುತ್ತದೆ. ಈ ಇದ್ದತ್ ಆಚರಣೆ ನಂತರ ಗಫೂರ್ ಮೈದುನನೊಂದಿಗೆ ವಿವಾಹ ಮಾಡಿ ತಲಾಕ್ ಪಡೆಯುವ ಉದ್ದೇಶ ತಲೆಕೆಳಗಾಗುತ್ತದೆ. ಯಾಕೆಂದರೆ ಆಕೆ ಬಸುರಿಯಾಗುತ್ತಾಳೆ. ನಿಯಮಗಳು ಕೇವಲ ಸ್ತ್ರೀಯರನ್ನು ಕುರಿತಂತೇ ರಚನೆಯಾಗಿವೆ. ಗಂಡ ಮಾಡಿದ ತಪ್ಪಿಗೆ ಹೆಂಡತಿ ಶಿಕ್ಷೆ ಅನುಭವಿಸಬೇಕಾದ ಅನಿವಾರ್ಯತೆ ಇಲ್ಲಿದೆ. 'ಒಂದು ಹಗಲು ಒಂದು ರಾತ್ರಿ' ಕತೆಯ ನಾಯಕಿ ಸಲ್ಮಾ ಕೂಡ ಗಂಡನ ಸಿಟ್ಟಿನಿಂದ ತಲಾಕ್ ಪಡೆದಿರುತ್ತಾಳೆ. ತಲಾಕ್ ಪಡೆದಾಗ ಪಂಜರದ ಪಕ್ಷಿಯಂತೆ ಖುಷಿ ಗರಿಗೆದುರುತ್ತದೆ. ಕಾರಣ ಆಕೆಗೆ ಗಂಡನ ಮನೆಯೇ ಒಂದು ಪಂಜರವೆಂಬಂತೆ ಭಾಸವಾಗಿತ್ತು. ಆದರೆ ಮುಂದೆ ತಲಾಕ್ ನಿಕಾಹ ಆಚರಣೆಗಳಿಗೆ ಸಲ್ಮಾ ಬಲಿಯಾಗುತ್ತಾಳೆ. ಅವಳ ತಂದೆಯೂ ಮಗಳು ಮತ್ತೊಂದು ರೀತಿಯ ಶೋಷಣೆ ಮಾಡುತ್ತಾನೆ. ಆತ ಮಗಳನ್ನು ಶಾಲೆಗೆ ಹೋಗುವಾಗ ಕರೆದುಕೊಂಡು ಹೋಗಿಬರಲು ಅಬ್ದುಲ್ಲಾನನ್ನು ನೇಮಿಸಿದ್ದ. ಕಾಲೇಜು ಶಿಕ್ಷಣ ಕೊಡಿಸದೆ ವಿದ್ಯಾಭ್ಯಾಸ ಮೊಟಕುಗೊಳಿಸಿದ್ದ. ತಲಾಕ್ ನೀಡಿದ ಗಂಡ ಮರುಮದುವೆ ಆಗಲು ಬಂದಾಗ, ಆಕೆಯ ಒಪ್ಪಿಗೆ ಪಡೆಯದೇ ಮನೆ ಆಳಿನೊಡನೆ ಮದುವೆ ಮಾಡಲು ಮುಂದಾಗುತ್ತಾನೆ. ಇಲ್ಲಿ ತಂದೆಯಾದವನು ತನ್ನ ಮಗಳ ಮನಸ್ಥಿತಿಯನ್ನು ಅರಿಯದ ಒರಟನಾಗಿ ಕಂಡುಬರುತ್ತಾನೆ.

ಹೆಣ್ಣನ್ನು ಸಮಾಜ ಒಂದು ಜೀವವಿಲ್ಲದ ವಸ್ತುವೆಂಬಂತೆ ಅತ್ತಿಂದಿತ್ತ ಸಾಗಿಸಲಾಗುತ್ತದೆ. ಸಲ್ಮಾಗೆ ಅಬ್ದುಲ್ಲಾ ನೀನು ಇಷ್ಟ ಪಟ್ಟವರೊಡನೆ ನಿಮ್ಮ ತಂದೆ ಮದುವೆ ಮಾಡಿಕೊಟ್ಟಿರೋದು ಎಂದು ಕೇಳಿದಾಗ ಸಲ್ಮಾ ತನ್ನ ದುಃಖವನ್ನು ಹೇಳಿಕೊಳ್ಳುತ್ತಾಳೆ: "ಪರಿಚಿತರು ತನ್ನನ್ನು ಅರ್ಥಮಾಡಿಕೊಳ್ಳುತ್ತಾರೆಂಬ ಮೂರ್ಖ ಭರವಸೆ ನನಗಾಗ ಇದ್ದುದರಿಂದಲೇ ನಾನಿಷ್ಟು ನರಳಬೇಕಾಯಿತು. ಇಲ್ಲವಾದರೆ ಹೇಗೋ ಏನೋ ಆಗುತ್ತಿತ್ತು. ನನ್ನ ತಂದೆ ನನಗೆ ವಿದ್ಯೆ ಕೊಡಿಸಬಾರದಿತ್ತು. ಸರಿ, ತಪ್ಪು, ಅನ್ಯಾಯ, ನ್ಯಾಯ, ಶೋಷಣೆ ಮುಂತಾದವುಗಳ ಬಗ್ಗೆ ನನಗೆ ತಿಳುವಳಿಕೆ ಮಾಡಬಾರದಿತ್ತು. ಇಲ್ಲವಾಗಿದ್ದರೆ ಪಕ್ಕದ ಮನೆಯ ಹಲಿಮಾಳಂತೆಯೇ ಬುರ್ಖಾ ಹಾಕಿಕೊಂಡು ಗಂಡನ ಹಿಂದೆ ಅವನ ಹೆಜ್ಜೆಯ ಗುರುತಿನ ಮೇಲೆ ನನ್ನ ಹೆಜ್ಜೆಯನ್ನು ಜಾಗ್ರತೆಯಿಂದ ಇಟ್ಟು ನಡೆಯುತ್ತಿದ್ದೆ" ಎಂದು ನುಡಿಯುತ್ತಾಳೆ. ಇಲ್ಲಿ ಸ್ತ್ರೀಯ ಶರಣಾಗತ ಮನೋಭಾವದಿಂದ ಹೊರಬರುವ ಎಚ್ಚೆತ್ತ ಪ್ರಜ್ಞೆ ಮೂಡಿಬಂದಿದೆ. ಇಲ್ಲಿ ಶರಣಾಗತಿ ಮನೋಭಾವದಿಂದ ಹೊರಬರಲು ಆಧುನಿಕ ಶಿಕ್ಷಣ ಅದು ಕೊಟ್ಟ ಆಲೋಚನಾ ಸಾಮರ್ಥ್ಯ ನೆರವಾಗಿದೆ ಎಂಬ ವಾಸ್ತವವನ್ನು ಕತೆ ಕಾಣಿಸುತ್ತದೆ. ಯಾಕೆಂದರೆ ಇಂತಹ ಶಿಕ್ಷಣವಿಲ್ಲದ ಹಾಲಿಮಾಳಂತೆ ಗಂಡನಿಗೆ ಶರಣಾಗಿ ನಡೆಯುತ್ತಿದ್ದೆ ಎಂಬ ತನ್ನ ಒಳತೋಟಿಯನ್ನು ಪ್ರಕಟಿಸುತ್ತಾಳೆ.

ಇಲ್ಲಿ ಧಾರ್ಮಿಕ ವ್ಯವಸ್ಥೆ ಹಾಗೂ ಪುರುಷಕೇಂದ್ರಿತ ಸಮಾಜ ಏನು ಮಾಡಿದರೂ ಅದನ್ನು ಸಹಿಸಿಕೊಂಡು ಹೋಗುವವರು ಅಶಿಕ್ಷಿತರು. ಆದರೆ ಶಿಕ್ಷಿತರು ತಿಳುವಳಿಕೆ ಇದ್ದರೂ ವ್ಯವಸ್ಥೆ ವಿರುದ್ಧ ಸಿಡಿದೇಳಲು ಆಗುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಸಲ್ಮಾ ಮಾತ್ರ ವ್ಯವಸ್ಥೆ ವಿರುದ್ಧ ತಿರುಗಿ ಬೀಳುತ್ತಾಳೆ. ಅದನ್ನು ಕತೆಯು ಬಹಳ ಸಂಭ್ರಮದಿಂದ ಚಿತ್ರಿಸುತ್ತದೆ. "ನನ್ನ ಗಂಡನಿಗೆ ಈಗ ಜ್ಞಾನೋದಯವಾಗಿ ನನ್ನೊಡನೆ ಬಾಳುವ ಆಸೆಯಾಗಿದೆಯಂತೆ. ಆದರೆ ನನ್ನನ್ನು ಮರುಮದುವೆ ಆಗುತ್ತಾರಂತೆ. ಅದಕ್ಕೆ ಸರಿಯಾಗಿ ಸಿಕ್ಕಿದವ ನೀನೊಬ್ಬ ಬಕರಾ. ನನ್ನಂತೆ..." ಎನ್ನುತ್ತಾಳೆ ಆಕೆ. ಇಲ್ಲಿ ಸಲ್ಮಾ ತನ್ನ ಗಂಡ ಮತ್ತು ತಂದೆಯ ಪಾಲಿಗೆ ಗೊಂಬೆಯಾಗಿರುವುದರ ಅರಿವನ್ನು ಇಟ್ಟುಕೊಂಡು ವ್ಯಂಗ್ಯವಾಗಿ ಆಡಿದ ಮಾತಿದು. ತಂದೆ ಒಂದು ಮಾತು ಕೇಳದೆ ಕೆಲಸದ ಆಳಿನೊಡನೆ ಮಗಳ ಮದುವೆ ಮಾಡುತ್ತಾನೆ. ಅಲ್ಲಿ ಮಹಿಳೆಯರು ಪ್ರಶ್ನಿಸುವುದಿಲ್ಲ. ಏನು ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿ ಸಲ್ಮಾ ಮದುವೆಗೆ ಒಪ್ಪಿದರೂ ಕೊನೆಗೆ ಸಿಡಿದೇಳುತ್ತಾಳೆ. ಆಗ ಕತೆ ಹೊಸ ತಿರುವನ್ನು ಪಡೆಯುತ್ತದೆ. ಬೊಳುವಾರು ಮಹಮ್ಮದ್ ಕುಂಞ ಅವರ 'ಅತ್ತ ಇತ್ತಗಳ ಸುತ್ತಮುತ್ತ' ಕತೆಯಲ್ಲಿಯೂ ಧಾರ್ಮಿಕ ಸಂಪ್ರದಾಯಗಳಿಂದ ನೊಂದ ಹೆಣ್ಣಿನ ಚಿತ್ರವಿದೆ. ಅವಳ ಗಂಡ ಸಲೀಂ ತಲಾಕ್ ಕೊಟ್ಟಿದ್ದರಿಂದ ಮತ್ತೆ ಅದೇ ಗಂಡನನ್ನು ವರಿಸಬೇಕಾದರೆ ಇನ್ನೊಬ್ಬನೊಂದಿಗೆ ಮದುವೆಯಾಗಿ ಮತ್ತೆ ಆತನಿಂದ ತಲಾಕ್ ಪಡೆದು ಮೊದಲಿದ್ದ ಗಂಡನೊಂದಿಗೆ ನಿಕಾಹ ಮಾಡಿಕೊಳ್ಳಬೇಕು ಎನ್ನುವುದು

ಧಾರ್ಮಿಕ ನಿಯಮ. ಆದರೆ ಈ ಷರಿಯತ್ ನಿಯಮಗಳು ಸ್ತ್ರೀ ವಿರೋಧಿಯಾಗಿರುವುದನ್ನು ಮುಸ್ಲಿಂ ವೈಚಾರಿಕ ಬರಹಗಾರರು ತುಂಬಾ ತೀವ್ರವಾಗಿ ಚಿತ್ರಿಸುತ್ತಾರೆ. ಕಟ್ಪಾಡಿಯವರ ಕತೆಯಲ್ಲಿ ಶರಣಾಗತ ಸ್ತ್ರೀ ವ್ಯವಸ್ಥೆ ವಿರುದ್ಧ ದೃಢವಾದ ಆತ್ಮವಿಶ್ವಾಸದ ಮೂಲಕ ಸಿಡಿದೇಳುತ್ತಾಳೆ. ಶರಣಾಗತಿಯಿಂದ ತಾನೇ ಮುಕ್ತಿ ಪಡೆಯುವ ಹಾದಿ ಹುಡುಕುತ್ತಾಳೆ.

ಕಟ್ಪಾಡಿ ಅವರ 'ವೈಯಕ್ತಿಕ' ಕತೆಯಲ್ಲಿ ತಂದೆಯ ಮಾತನ್ನೆ ಪಾಲಿಸುವ ಮಗಳ ಪಾತ್ರವಿದೆ. ಗಂಡನಿಗೆ ಶರಣಾಗತ ಹೆಂಡತಿಯಾಗಿದ್ದ ಆಕೆ ವಜೂ ಮಾಡಲಿಕ್ಕೆ ನೀರು ತಡವಾಗಿ ತಂದ ತಪ್ಪಿಗಾಗಿ ಗಂಡನಿಂದ ತಲಾಕ್ ಪಡೆಯುತ್ತಾಳೆ. ತಲಾಕ್ ಪಡೆದು ತೌರಿಗೆ ಹಿಂದಿರುಗಿದ ಸಕೀನಾ ಸ್ತ್ರೀವಿರೋಧಿ ಧಾರ್ಮಿಕ ನಿಯಮಾಚರಣೆಗಳಿಗೆ ಶರಣಾಗಿರುವ ಮಹಿಳೆ. ವ್ಯಂಗ್ಯವೆಂದರೆ, ಅವಳಿಗೆ ತಲಾಕ್ ಕೊಡಿಸಿದ ಮೌಲಾನ ತಲಾಕ್ ಮಹಿಳೆಗೆ ಜೀವನಾಂಶವನ್ನು ಕೊಡದಿರುವಂತೆ ಷರಿಯತ್ ಸಂರಕ್ಷಣಾ ಯಾತ್ರೆ ಮಾಡಿದವನು. ಅಷ್ಟರಲ್ಲಿ ಆತನ ಮಗಳಿಗೆ ಗಂಡ ತಲಾಕ್ ನೀಡಿ ಮನೆಯಿಂದ ಉಟ್ಟಬಟ್ಟೆಯಲ್ಲಿ ಹೊರಹಾಕುತ್ತಾನೆ. ಆಗ ಮೌಲಾನ ದಿಕ್ಕೆಟ್ಟು ಕುಳಿತುಕೊಳ್ಳುತ್ತಾನೆ. ಮಹಿಳೆಯರನ್ನು ದಮನಿಸುವವರು ತಮ್ಮ ಬುಡಕ್ಕೆ ದಮನ ಬಂದಾಗ ಮಾಡುವ ಚಡಪಡಿಕೆ ಇಲ್ಲಿ ಕಂಡುಬರುತ್ತದೆ.

'ಒಂದು ಹಗಲು ಒಂದು ರಾತ್ರಿ' ಕತೆಯಲ್ಲಿ ಸಲ್ಮಾಂ ಗೆಳತಿಯು ಆಕ್ಸಿಡೆಂಟ್‌ನಿಂದ ನರಳುವಾಗ ಗಂಡನ ಅನುಮತಿ ಪಡೆಯದೆ ಹೋಗಿದ್ದಕ್ಕೆ ತಲಾಕ್ ಪಡೆದವಳು. 'ರಾಬಿಯ' ಕತೆಯಲ್ಲಿ ಅತ್ತೆಯೊಡನೆ ಜಗಳವಾಡುವ ರಾಬಿಯ ತನ್ನ ತಪ್ಪಿಲ್ಲದಿದ್ದರೂ ಗಂಡನ ಸಿಟ್ಟಿನಿಂದ ತಲಾಕ್ ಪಡೆದವಳು. ವೈಯಕ್ತಿಕ ಕತೆಯ ಸಕೀನಾ ಕೂಡ ಗಂಡನ ಸಿಟ್ಟಿಗೆ ಗುರಿಯಾಗಿ ತಲಾಕ್ ಪಡೆದವಳು. ಈ ಮೂವರು ಗಂಡಸರ ಸಿಟ್ಟಿಗೆ ಒಳಗಾಗಿ ತಲಾಕ್ ಕೊಟ್ಟವರು. ಒಂದು ಕಡೆ ಸಾರಾ ಅಬೂಬಕ್ಕರ್ ಅವರು ಈ ಸಮಸ್ಯೆಯ ಮೇಲೆ ಬರೆಯುತ್ತ, "ಪಾಕಿಸ್ತಾನ ಸೇರಿದಂತೆ ಹಲವು ಮುಸ್ಲಿಮ ರಾಷ್ಟ್ರಗಳು ಒಂದೇ ಬಾರಿಗೆ ಮೂರು ತಲಾಕನ್ನು ಮಾನ್ಯ ಮಾಡುವುದಿಲ್ಲ. ಮುಸ್ಲಿಮರು ಈ ಪದ್ಧತಿಗೆ ಮಾನ್ಯತೆ ನೀಡುವ ಒಂದು ರಾಷ್ಟ್ರವೆಂದರೆ ಭಾರತ. ಭಾರತದಿಂದಲೂ ಅನಿಷ್ಟ ಪದ್ಧತಿಯನ್ನು ಆದಷ್ಟು ಬೇಗನೆ ಹೊರತಳ್ಳಿದರೆ ಹಗಲಿರುಳು ಕಣ್ಣೀರಿನಲ್ಲಿ ಕೈತೊಳೆಯುತ್ತಿರುವ ಹಲವಾರು ಮುಸ್ಲಿಮ್ ಸಹೋದರಿಯರ ಬದುಕಿನಲ್ಲಿ ಹೊಸ ಬೆಳಕಿನ ಕಿರಣವೊಂದನ್ನು ಹರಡಿದಂತಾಯಿತು"[೫] ಎಂದು ಹೇಳುವುದುಂಟು. ಹೆಣ್ಣನ್ನು ವಸ್ತು ಎಂಬಂತೆ ನಡೆಸಿಕೊಳ್ಳುವ ಸಮಾಜ, ಅದನ್ನು ಅರಿಯಲಾರದ ಪ್ರತಿಭಟಿಸಲಾರದ ಪಾತ್ರಗಳು ಮುಸ್ಲಿಂ ಕತೆಗಾರರಲ್ಲಿ ಬಹಳಷ್ಟಿವೆ. 'ಮುಸುಕು' ಕತೆಯ ನಾಯಕಿ ಮೈಮುನಾ ಕೂಡ ಪ್ರತಿಭಟನೆ ಮಾಡಲಾಗದೆ ಶರೀಯತ್ ನಿಯಮ ಪಾಲಿಸುವ ಶರಣಾಗತೆ. ಹೊರಗಡೆ ಹೋಗುವಾಗ

ಬುರ್ಖಾ ಹಾಕಿಕೊಂಡೆ ಹೋಗಬೇಕು, ಜೋರಾಗಿ ನಡೆಯಕೂಡದು, ಹೆಣ್ಣುಮಕ್ಕಳು ಗಂಡು ಹುಡುಗರ ಜೊತೆ ಶಾಲೆಗೆ ಹೋಗಲು ಅಲ್ಲಾಹು ನಬಿಯಾ ಅನುಮತಿ ನೀಡಿಲ್ಲ ಎಂದೆಲ್ಲ ನಿಯಮವನ್ನು ಹೇರಿದರೆ ಹೇರಿಸಿಕೊಂಡವರು. ಅಮ್ಮ ಹೇಳಿಕೊಟ್ಟ ಸೂಕ್ತಿಗಳನ್ನು ಚಾಚುತಪ್ಪದೇ ನಂಬಿದವಳು. 'ವೈಯಕ್ತಿಕ' ಕತೆಯ ಸಕೀನಾ ಕೂಡ ತಂದೆ ಹೇಳಿದಂತೆ ಅಲ್ಲಾಹ ಮತ್ತು ನಬಿಗೆ ಸರಿಯಾಗಿ ನಡೆದುಕೊಳ್ಳುವಳು. ಇಲ್ಲಿ ಇಬ್ಬರದ್ದು ಸಹ ತಾಯಿತಂದೆ ನಂಬಿದ ಧರ್ಮಾಚರಣೆಗೆ ಶರಣಾಗಿ ಬಾಳುವಂತಹ ಪಾತ್ರಗಳು.

'ಮುಸುಕು' ಕತೆಯ ಮೈಮುನಾ ಬುರ್ಖಾ ಧರಿಸುವ ಮೂಲಕ ತನ್ನ ಭಾವನೆಗಳನ್ನೇ ಕಳೆದುಕೊಳ್ಳುವಂತಾಗುತ್ತಾಳೆ. ಜನ ಮೊದಲಿನಂತೆ ಮಾತಾಡಿಸದೆ ಹೋದಾಗ ಖಿನ್ನಮನಸ್ಕಳಾಗುತ್ತಾಳೆ. ತನ್ನ ಆಸೆ ಆಕಾಂಕ್ಷೆಗಳಿಗೆ ಮುಸುಕು ಆವರಿಸಿದಂತಾಗಿ ತಳಮಳಿಸುತ್ತಾಳೆ. ಬೀಫಾತುಮ್ಮ ಹೇಳುತ್ತಾಳೆ. "ನೀನು ದೊಡ್ಡವಳಾಗಿ ಬಿಟ್ಟೆ ಮೈಮುನಾ.. ನೀನು ಮೈಲಾರರ ಮಗಳಲ್ಲವಾ... ಅಗ್ಲಿಕ್ಕೆ ನಾನು ನಿನಗಿಂತ ದೊಡ್ಡವಳು. ನಾನು ನಿನಗಿಂತ ಮೊದ್ಲು ಬುರ್ಖಾ ಹಾಕೊಂಡು ಬರ್ಬೇಕಾಗಿತ್ತು. ಬುರ್ಖಾ ಹಾಕಿದ್ರೆ ನಾವು ದುಡಿದು ಬದುಕೋದಕಾಗ್ತದಾ? ಬಿಡಿ ಕಟ್ಟುವ ಜೊತೆಗೆ ಗದ್ದೆ ಕೆಲಸಕ್ಕೆ, ಇಟ್ಟಿಗೆ ಹೊರುವುದಕ್ಕೆ ಧಣಿಗಳ ಮನೆಗೆ ಹೋಗ್ಬೇಕಲ್ಲಾ.."ಎನ್ನುತ್ತಾಳೆ. ಆಗ ಆಕೆ 'ಈ ದುನಿಯಾ ನಮಗೆ ಶಾಶ್ವತವಾ...ಸತ್ತ ನಂತರದ ಬದುಕಲ್ವಾ ಶಾಶ್ವತವಾದದ್ದು? ಅಪ್ಪ ಹೇಳ್ತಾರೆ 'ಈ ಬದುಕಿನಲ್ಲಿ ನಾವು ಸಾಧ್ಯವಾದಷ್ಟು ಅಖಿರತ್‌ಗೆ ಬೇಕಾದ್ದನ್ನು ಸಂಪಾದಿಸಬೇಕು' ಅಂತ ವರದಿ ಒಪ್ಪಿಸುತ್ತಾಳೆ. ಆಗ ಬೀಫಾತುಮ್ಮ ಆಯ್ಯೋ... ಅದೆಲ್ಲಾ ಬಿಡೇ ಮೈಮುನಾ, ನಾನು ಈ ಲೋಕದಲ್ಲೂ ಅನುಭವಿಸೋದು ನರಕವೇ... ನಾಳೆ ಸತ್ತ ನಂತರವೂ ನರಕವೇ.." ಎನ್ನುತ್ತಾಳೆ. ಇಲ್ಲಿ ಬೀಪಾತುಮ್ಮ ದುಡಿಮೆಯ ಲೋಕಕ್ಕೆ ಹೋಗಿ ಧರ್ಮದ ನಿಯಮಗಳಿಂದ ಮುಕ್ತಿ ಪಡೆದಿದ್ದಾಳೆ. ಆದರೆ ದುಡಿಯುವ ವರ್ಗಕ್ಕೆ ಸೇರದ ಮೈಮುನಾ ತಂದೆಯ ನಿಯಮಗಳನ್ನು ಪಾಲಿಸುವಾಕೆ ಧರ್ಮಕ್ಕೆ ಶರಣಾಗಿದ್ದಾಳೆ. ಪುರುಷ ನಿರ್ಮಿತ ಸಮಾಜದ ಚೌಕಟ್ಟಿಗೂ ಒಳಗಾಗಿದ್ದಾಳೆ. ಧರ್ಮಾಚರಣೆಗಳಿಗೆ, ಪುರುಷ ನಿರ್ಮಿತ ಚೌಕಟ್ಟಿಗೆ ಶರಣಾಗದೇ ಸ್ವತಂತ್ರವಾಗಿದ್ದು, ಬಡತನದಲ್ಲಿರುವ ಮಹಿಳೆ, ಸಿರಿವಂತಿಕೆಯಲ್ಲಿದ್ದು ಪಿತೃಪ್ರಧಾನ ಸಂಸ್ಕೃತಿಯ ಸ್ವಾರ್ಥ, ಮೋಸ ಹಾಗೂ ಪುರುಷ ಹಿತಾಸಕ್ತಿಗಳಿಗೆ ಬಲಿಯಾದ ಮಹಿಳೆ ಇಬ್ಬರ ಮುಖಾಮುಖಿಯಿದು. 'ತೀರ್ಮಾನ' ಕತೆಯಲ್ಲಿ ಒಬ್ಬ ವಿಧವೆ ಒಬ್ಬಂಟಿಯಾಗಿ ಬದುಕುವ ಜೀವನ ಚಿತ್ರಣವಿದೆ. ಈ ಕತೆ ತಾಯಿಕೋಳಿಯ ಸಂಕೇತದ ಮೂಲಕ ಆಕೆಯ ಅವಸ್ಥೆಯನ್ನು ಚಿತ್ರಿಸುತ್ತದೆ. ಕಟ್ಪಾಡಿ ಕತೆಗಳು ದೈನಿಕ ಬದುಕಿನ ಪರಿಸರದ ಪ್ರಾಣಿ ಪಕ್ಷಿಗಳ ಸಂಕೇತಗಳ ಮೂಲಕ ಹೆಣ್ಣಿನ ಪಾತ್ರವನ್ನು ಚಿತ್ರಿಸುತ್ತವೆ. ಮಸೀದಿಯ ಬಹಿಷ್ಕಾರಕ್ಕೆ ಬೆದರಿದ ಈ ವಿಧವೆ ತನ್ನ ಯಾವ ತಪ್ಪಿಲ್ಲದಿದ್ದರೂ ಮೌಲವಿಗಳ ತೀರ್ಮಾನಕ್ಕೆ

ಶರಣಾಗುತ್ತಾಳೆ. ಕತೆಯಲ್ಲಿ ತಾಯಿ ಕೋಳಿಯನ್ನು ಕರಿನಾಯಿಯೊಂದು ಬೆನ್ನಟ್ಟಿ ತಿಂದು ಹಾಕುತ್ತದೆ. ಈ ಸಂಕೇತದ ಮೂಲಕ ಒಬ್ಬಂಟಿ ವಿಧವೆಯನ್ನು ಕಾಮುಕ ದಾಡಿವಾಲಾನು ಲೈಂಗಿಕವಾಗಿ ಶೋಷಿಸುವ ಚಿತ್ರವನ್ನು ಕತೆ ಕೊಡುತ್ತದೆ. ಇಲ್ಲಿ ತಾಯಿ ತನ್ನ ಮಗನ ರಕ್ಷಣೆ ಮಾಡುವುದಕ್ಕಾಗಿ ತಾನೇ ಬಲಿಯಾಗುತ್ತಾಳೆ.

"ಪುರುಷ ಪ್ರಧಾನ ಸಮಾಜವು ಈ ಧರ್ಮಗಳು ಪ್ರತಿಪಾದಿಸಿದ ತತ್ವಗಳನ್ನು ಕಾರ್ಯಗತ ಗೊಳಿಸಿ ಸ್ತ್ರೀಯರನ್ನು ತಮ್ಮ ಅಧೀನದಲ್ಲಿರಿಸಿಕೊಂಡು ಅವರನ್ನು ನಿರಂತರವಾಗಿ ಶೋಷಣೆಗೆ ಒಳಪಡಿಸಿವೆ. ಪುರುಷನ ಸ್ವಾರ್ಥ ಮತ್ತು ಸ್ವ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಧರ್ಮಗಳು ಸಹಕಾರಿಯಾಗಿವೆ. ಇವುಗಳಿಗೆ ಬಲಿಪಶುವಾದವರು ಸ್ತ್ರೀಯರು ಎಂಬುದನ್ನು ಇತಿಹಾಸ ದಾಖಲಿಸಿದೆ"[೬] ಎಂದು ವಿಮರ್ಶಕರು ಹೇಳುತ್ತಾರೆ. ಈ ಮಾತಿಗೆ ಕಟ್ಪಾಡಿಯವರ ಕತೆಗಳು ಸಾಕ್ಷ್ಯದಂತಿವೆ. ಕೆಳವರ್ಗದ ವಿಧವೆಯರು ಧಾರ್ಮಿಕ ಹೆಸರಿನಲ್ಲಿ ಕಾಮುಕರ ಕೈಗೆ ಸಿಕ್ಕು ಅನುಭವಿಸುವ ವೇದನೆಗಳನ್ನು ಕಟ್ಪಾಡಿ ಕತೆಗಳು ಚಿತ್ರಿಸುತ್ತವೆ. ಧಾರ್ಮಿಕ ಕಟ್ಟುಪಾಡುಗಳಿಂದ ನಲುಗುವ ಮಹಿಳೆ ಪುರುಷ ದೌರ್ಜನ್ಯಕ್ಕೆ ಶರಣಾಗತರಾಗಿ ಬದುಕುವ ಇಲ್ಲಿನ ಚಿತ್ರಣಗಳ ಮೂಲಕ ಇಲ್ಲಿಯ ಕತೆಗಳು ಸ್ತ್ರೀಯರ ದಾರುಣ ಪರಿಸ್ಥಿತಿಯನ್ನು ದಾಖಲಿಸುತ್ತವೆ.

೫.೨.೨. ಕೌಟುಂಬಿಕ ಶರಣಾಗತಿ: ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಗೆ ಎರಡನೇ ದರ್ಜೆಯ ಸ್ಥಾನವಿದೆ. ಇಲ್ಲಿ ಸ್ತ್ರೀಯರು ಪುರುಷರಿಗೆ ಗುಲಾಮಳಂತೆ ಬದುಕಬೇಕಾದ ಪರಿಸ್ಥಿತಿ ಇರುತ್ತದೆ. ಇಂತಹ ಕುಟುಂಬಗಳಲ್ಲಿ ಯಜಮಾನನಿಗೆ ಶರಣಾಗಿ ಬದುಕುವ ಮಹಿಳೆಯರ ಪಾತ್ರಗಳು ಇಲ್ಲಿವೆ. 'ನೋಂಬು' ಕತೆಯಲ್ಲಿ ಒಂದು ಕುಟುಂಬ ಆರ್ಥಿಕವಾಗಿ ಸದೃಢವಾಗಿದ್ದರೆ, ಇನ್ನೊಂದು ಕುಟುಂಬ ಆರ್ಥಿಕ ಬಿಕ್ಕಟ್ಟಿನಲ್ಲಿದೆ. ಆದರೂ ಕೌಟುಂಬಿಕ ಜಗತ್ತಿನಲ್ಲಿ ಹೆಣ್ಣಿನ ಸ್ಥಾನಮಾನಗಳು ಬಹಳ ಭಿನ್ನವಾಗಿಲ್ಲ. ಕೆಳವರ್ಗದ ಹಲೀಮಾ ಆರ್ಥಿಕ ಕಷ್ಟಗಳನ್ನು ಎದುರಿಸಿದರೆ, ಮೇಲ್ವರ್ಗದ ಮಹಿಳೆಯರು ಸಾಮಾಜಿಕ ಸ್ವಾತಂತ್ರ್ಯದ ಕಷ್ಟ ಎದುರಿಸುತ್ತಿದ್ದಾರೆ. ಬೆಳೆದ ಹೆಣ್ಣುಮಕ್ಕಳಿಗೆ ಈ ತಾಯಂದಿರುವ ಹೇಳುವ ಬುದ್ಧಿಯ ಮಾತುಗಳು ಕಷ್ಟ ಸಹಿಸುವ ಗುಣಕ್ಕೆ ಸಂಬಂಧಿಸಿವೆ. ಇದು ಅವರ ಅನುಭವದ ಮಾತಾಗಿದೆ. "ಹೆಮ್ಮಕ್ಕಳು ಎಲ್ಲಿದ್ದರೂ ಒಂದೇ ಮಗಾ... ಎಲ್ಲವನ್ನು ಸಹಿಸಿಕೊಳ್ಬೇಕು. ಆತ್ಮಹತ್ಯೆ ಮಹಾಪಾಪ ಅಂತ ಅಲ್ಲಾಹ ಹೇಳಿದ್ದಾನೆ...", "ಮುಖ್ಯ ಹೆಣ್ಣುಮಕ್ಕಳು ಭೂಮಿ ಮೇಲೆ ಹುಟ್ಟಬಾರ್ದು...", "ಇದ್ದಷ್ಟು ದಿನ ಈ ಭೂಮಿ ಮೇಲೆ ಹೇಗಾದರೂ ಬದುಕಬೇಕಮ್ಮ" ಮುಂತಾದ ಅವರ ಮಾತುಗಳಲ್ಲಿ ಹಿಂಸೆಯನ್ನು ಎದುರಿಸುವ ಧೈರ್ಯದ ಬದಲಿಗೆ ಸಹಿಸಿಕೊಳ್ಳಬೇಕೆಂಬ ಶರಣಾಗತಿ ಮನೋಭಾವದ ತುಂಬುವಿಕೆಯಿದೆ. 'ಕ್ರೌರ್ಯ' ಕತೆಯ ತಾಯಿ ಸಹ ವ್ಯವಸ್ಥೆಗೆ ಶರಣಾಗುವ ಸ್ತ್ರೀಯಾಗಿದ್ದಾಳೆ. ತನ್ನ ಮೊಮ್ಮಗಳ ಗಂಡ

ಮರುಮದುವೆಯಾಗುವುದನ್ನು ಅಜ್ಜ 'ಗಂಡಸರು ಕೆಸರಿದ್ದಲ್ಲಿ ಕಾಲು ಹಾಕಿದ್ರೆ ನೀರಿದ್ದಲ್ಲಿ ಕಾಲು ತೊಳ್ಕೊಂಡಾರು' ಎಂಬ ಲೋಕಾರೂಢಿಯ ಮಾತಿನ ಮೂಲಕ ಸಮರ್ಥಿಸುತ್ತಾನೆ. ಆಗ ಅಜ್ಜನ ಸೊಸೆ ಮಗನಿಗೆ "ಏನ್ಮಾಡೋದು ಮಗ ನಮ್ಮದು ಹೆಣ್ಣು ಜನ್ಮ. ಒಂದು ಮಣ್ಣಿನ ಮಡಕೆ ತರ, ಒಡಿದಂತೆ ಜಾಗ್ರತೆ ಇರ್ಬೇಕು" ಎನ್ನುವಳು. ಇಲ್ಲಿ ಶರಣಾಗತಿ ಮನೋಭಾವ ಸ್ಪಷ್ಟವಾಗಿದೆ. ತನ್ನ ಹುಟ್ಟಿನ ಬಗ್ಗೆಯೇ ಕೀಳರಿಮೆ ಬೆಳೆಸಿಕೊಂಡ ಮಹಿಳೆಯರು ಶರಣಾಗುವುದು ಸುಲಭ. ಅವರು ಅಧೀನತೆಯಲ್ಲಿ ಬದುಕುವುದು ಸುಲಭ. 'ನಮ್ಮ ನಡುವಿನ ಒಂದು ಬಾಗಿಲು' ಕತೆಯಲ್ಲಿ ಗಂಡನಾದವನು ಸ್ತ್ರೀಯನ್ನು ಅನುಮಾನ ದೃಷ್ಟಿಯಿಂದ ನೋಡುತ್ತಾನೆ. ಆ ಅನುಮಾನದಿಂದ ಬಿಡುಗಡೆ ಹೊಂದಲು ಆಕೆ ತನ್ನ ಸ್ನೇಹಿತನನ್ನೆ ದೂರಮಾಡುತ್ತಾಳೆ. ಅವಳ ಬದಲಾದ ವರ್ತನೆ ಕಂಡು ಸ್ನೇಹಿತ ಸೋಜಿಗ ಪಟ್ಟಾಗ, ಅವನ ತಾಯಿ ಗಂಭೀರವಾಗಿ ಹೇಳುತ್ತಾಳೆ "ಹೆಣ್ಣಿಗೆ ಮದುವೆಯಾದ ನಂತರ ಇನ್ನೊಂದು ಜನ್ಮವಾದಂತೆ ಮಗು. ಹೆಚ್ಚಿನ ಹೆಣ್ಣು ಮಕ್ಕಳ ಬಾಳು ಹೀಗೇನೇ. ಕೆಲವೇ ಕೆಲವರು ಮಾತ್ರ ಮೊದಲಿನಂತೆಯೆ ಇರುತ್ತಾರೆ. ಇವೆಲ್ಲಾ ಅವರವರ ಕೈ ಹಿಡಿದ ಗಂಡನ ಅದೃಷ್ಟ.'

'ಸೈತಾನ್ ಹಿಡಿದ ಹೆಂಡತಿ' ಕತೆಯಲ್ಲಿ ಸಂಘರ್ಷ ಕಂಡುಬರುತ್ತದೆ. ಸಕೀನಾ ಬೇಗಂನ ಮಗಳು ಶಾಹಿನಾ ಗಾಡಿ ಓಡಿಸುವವನ ಮಗ ಸಲೀಂನನ್ನು ಇಷ್ಟಪಟ್ಟಿರುತ್ತಾಳೆ. ಆದರೆ ಅವಳ ತಾಯಿ ತೆಂಗಿನ ತೋಟ ಮಾರಿ, ಶಾಹಿನಾಳನ್ನು ಶ್ರೀಮಂತ ಹುಡುಗನಿಗೆ ಮದುವೆ ಮಾಡಿ ಕೊಡುತ್ತಾಳೆ. ಆದರೆ ಶಾಹಿನಾಗೆ ನೆಮ್ಮದಿ ಜೀವನ ಸಿಗದೆ ಆಕೆ ಕುಡುಕ ಗಂಡನಿಂದ ವೇದನೆ ಅನುಭವಿಸುತ್ತಾಳೆ. ಅನಿವಾರ್ಯ ಕಾರಣದಿಂದ ಗಂಡನ ಕುಟುಂಬ ನಡೆಸಲು ಶರಣಾಗತಳಾಗಿ ತವರಿಗೆ ಹೋಗಿ ಹಣಪಡೆದ ಬರುವ ಕರುಣಾಜನಕ ಸ್ಥಿತಿಗೆ ತಳ್ಳಲ್ಪಡುತ್ತಾಳೆ.

ಅನೇಕ ಕೌಟುಂಬಿಕ ಇಕ್ಕಟ್ಟುಗಳಲ್ಲಿ ಮಹಿಳೆಯರು ಅಸಹಾಯಕರಾಗುವ ಕತೆಗಳು ಇಲ್ಲಿ ಹೆಚ್ಚಾಗಿ ಕಂಡುಬರುತ್ತವೆ. 'ಅಕ್ಕನ ಮದುವೆ ಮತ್ತು ಆಡು' ಕತೆಯಲ್ಲಿ ಒಬ್ಬ ಸ್ತ್ರೀಯ ಕರಾಳ ಬದುಕು ಚಿತ್ರಿಸಲ್ಪಟ್ಟಿದೆ. ಅದರಲ್ಲಿ ನೋಡಲು ಸುಂದರವಾಗಿರದ ಅಮೀನಾಳ ಮದುವೆಯನ್ನು ಅವಳ ತಂಗಿ ರಜಿಯಾಳನ್ನು ವರನಿಗೆ ತೋರಿಸುವ ಮೂಲಕ ಮಾಡಲು ಕುಟುಂಬದವರು ಯತ್ನಿಸುತ್ತಾರೆ. ಆದರೆ ಅಮೀನಾ ಭಯದಿಂದ ಮದುವೆಗೆ ಒಪ್ಪುವುದಿಲ್ಲ. ಆಗ ರಜಿಯಾ "ಎಲ್ಲವನ್ನು ಅಲ್ಲಾಹು ಸರಿ ಮಾಡ್ತಾನೆ" ಎಂದು ಹೇಳುತ್ತಾಳೆ. ತಾಯಿ ಅತ್ತು ಕರೆದು ಸಮಾಧಾನ ಮಾಡುತ್ತಾಳೆ. ಇಲ್ಲಿ ಅಮೀನಾ ತಂದೆ-ತಾಯಿಯರು ಮಾಡುವ ಮೋಸದ ಮದುವೆಗೆ ಬಲಿಯಾಗುತ್ತಾಳೆ. ಕತೆ ಅವಳನ್ನು ಬಲಿಯಾಗುವ ಆಡಿನ ಸಂಕೇತದ ಮೂಲಕ ಚಿತ್ರಿಸುತ್ತದೆ. ವಿವಾಹಕ್ಕೆ, ಕುಟುಂಬ ವ್ಯವಸ್ಥೆಗೆ ಮಹಿಳೆಯರು ಶರಣಾಗುವ ನಿದರ್ಶನಗಳಿಂದ ಕತೆಗಳು

ತುಂಬಿಹೋಗಿವೆ. ಪುರುಷರು ಬಯಸುವುದು ಹೆಣ್ಣು ನೋಡಲು ಸುಂದರವಾಗಿರಬೇಕು, ದುಡಿಯುವಂತಿರಬೇಕು ಹಾಗೂ ವರದಕ್ಷಿಣೆ ತರುವಂತವಳಾಗಿರಬೇಕು. ಆದರೆ ಎಲ್ಲ ಇದ್ದು ಕಪ್ಪಾಗಿದ್ದಾಳೆ ಎಂದರೆ ಆಕೆಯ ಮದುವೆ ಕಷ್ಟಕರ. ಹೀಗಾಗಿ ತಂದೆ ತಾಯಿ ಮಕ್ಕಳ ಭಾರ ಕಡಿಮೆ ಮಾಡಿಕೊಳ್ಳಲು ಮೋಸದ ಮೂಲಕ ಮದುವೆ ಮಾಡಲು ಮುಂದಾಗುತ್ತಾರೆ. "ಇಡೀ ಕತೆ ಹುಡುಗಿಯೊಬ್ಬಳ ದಾರುಣತೆಯನ್ನು ಚಿಕ್ಕ ಹುಡುಗನೊಬ್ಬನ ಸಂವೇದನೆ ಮೂಲಕ ನಿರೂಪಿಸುತ್ತ ಜೀವಂತವಾಗಿ ಮೂಡಿಬರುತ್ತದೆ. ಇಂಥ ಕಡೆ ಮನಸ್ಸಿನ ಸೂಕ್ಷ್ಮ ವ್ಯಾಪಾರಗಳನ್ನು ಭಾಷೆಯಲ್ಲಿ ಹಿಡಿದಿಡುವ ಕಟ್ಪಾಡಿ ಅವರ ಕಥನ ಶೈಲಿ ಸಾರ್ಥಕವಾಗುವುದನ್ನು ಕಂಡುಕೊಳ್ಳ ಬಹುದಾಗಿದೆ."[೭] ಕೌಟುಂಬಿಕ ವ್ಯವಸ್ಥೆಗೆ ಸ್ತ್ರೀ ಶರಣಾಗತಳಾಗಿ ಅನಾದಿ ಕಾಲದಿಂದಲೂ ನಡೆದುಕೊಂಡು ಬರುತ್ತಿದ್ದಾಳೆ. ಪಿತೃಪ್ರಧಾನ ವ್ಯವಸ್ಥೆಯ ಈ ಕೌಟುಂಬಿಕ ಚೌಕಟ್ಟಿನೊಳಗೆ ಸ್ತ್ರೀ ಬಂಧಿಯಾಗಿದ್ದಾಳೆ. ಕುಟುಂಬ ವ್ಯವಸ್ಥೆಗೆ ಶರಣಾಗತಳಾಗಿ ಬದುಕುತ್ತಿದ್ದಾಳೆ ಎಂಬುದನ್ನು ಕಟ್ಪಾಡಿ ಅವರ ಕತೆಗಳು ಚಿತ್ರಿಸಿವೆ.

೫.೨.೩. ಬಡತನಕ್ಕೆ ಶರಣಾಗತಿ: ಕಟ್ಪಾಡಿ ಅವರ ಹಲವು ಕತೆಗಳು ಬಡತನ ಮತ್ತು ಹಸಿವಿನ ಚಿತ್ರಣವನ್ನು ಒಳಗೊಂಡಿವೆ. ತೀವ್ರ ಬಡತನದಿಂದ ವ್ಯವಸ್ಥೆಗೆ ಶರಣಾಗುವ ಸ್ತ್ರೀಪಾತ್ರ ಚಿತ್ರಣವನ್ನು ಅವು ಚಿತ್ರಿಸುತ್ತವೆ. 'ನಿಕಾಹ್' ಇದು ಹೆಸರೇ ಸೂಚಿಸುವಂತೆ ಮದುವೆಗೆ ಸಂಬಂಧಿಸಿದ ಕತೆಯಾಗಿದೆ. ಇಬ್ಬರು ಹೆಣ್ಣು ಮಕ್ಕಳನ್ನು ಹೊಂದಿದ ಹನೀಫ್‌ಸಾಹೇಬರು ಕಡು ಬಡತನದಲ್ಲಿದ್ದು ಒಂದು ಚಿಕ್ಕ ಬೀಡಾ ಅಂಗಡಿ ಇಟ್ಟುಕೊಂಡು ಮಕ್ಕಳನ್ನು ಸಾಕುವಂತಹವರು. ಮದುವೆಯ ವಯಸ್ಸಿಗೆ ಬಂದ ಹೆಣ್ಣು ಮಕ್ಕಳನ್ನು ವರದಕ್ಷಿಣೆಕೊಟ್ಟು ಮದುವೆ ಮಾಡಲಾರದ ಸ್ಥಿತಿ ಅವರದು. ಅವರಿಗೆ ಹಬೀಬುಲ್ಲಾರ ಇಚ್ಛೆ ತಿಳಿದಾಗ ಅವರ ಪ್ರಾಯ ನೋಡಿ ಸ್ವಲ್ಪ ಅಳುಕು ಉಂಟಾಗುತ್ತದೆ. ಮಗಳು ಚೆನ್ನಾಗಿರಲಿ ಎಂಬ ಭಾವ ಒಂದೆಡೆಯಾದರೆ, ಇನ್ನೊಂದೆಡೆ ತಲೆಮೇಲಿನ ಭಾರ ಕಡಿಮೆ ಆದರೆ ಸಾಕು ಎಂಬ ಮನಸ್ಥಿತಿ. ಹೆಣ್ಣನ್ನು ಒಂದು ಕಳೆದುಕೊಳ್ಳುವ ಹೊರೆಯನ್ನಾಗಿ ಭಾವಿಸುವ ಸಮಾಜದ ಪ್ರತಿನಿಧಿ ಅವರು. ಆರ್ಥಿಕವಾಗಿ ದುರ್ಬಲರಾದ ತಂದೆ-ತಾಯಿಗಳು ವರದಕ್ಷಿಣೆ ಕೊಡಲಾಗದೆ ತಮ್ಮ ಮಗಳನ್ನು ವರದಕ್ಷಿಣೆ ರಹಿತವಾಗಿ ಮದುವೆಯಾಗಲು ಮುಂದೆ ಬರುವ ಮುದುಕರಿಗೆ ಧಾರೆಯೆರೆದು ಕೊಡುವ ವಿಚಿತ್ರವಾದ ಸನ್ನಿವೇಶವನ್ನು ಕಟ್ಪಾಡಿ ಈ ಕತೆಯಲ್ಲಿ ತಂದಿದ್ದಾರೆ.

ಜನರಲ್ಲಿ ಕೆಲವರು 'ಹೆಣ್ಣು ಮಗು ಎಂದ ತಕ್ಷಣ ಯಾರಿಗಾದರು ಕೊಟ್ಟು ಕೈ ತೊಳೆದುಕೊಳ್ಳಬಹುದಾ?' ಎಂದರೆ, ಮತ್ತೆ ಕೆಲವರು "ಹೆಣ್ಣು ಹೆತ್ತವರ ಕಷ್ಟ ಹೆಣ್ಣು ಹೆತ್ತವರಿಗೆ ಗೊತ್ತು" ಎಂದು ಹೇಳುತ್ತಾರೆ. ಪರಿಸ್ಥಿತಿಗೆ ಶರಣಾಗುವ ಮನೋಭಾವದವರೇ ಹೆಚ್ಚು ಜನ ಇವರಲ್ಲಿ. ಹೆಣ್ಣು ಹೆತ್ತವರಿಗೆ ಕಷ್ಟ ತಪ್ಪಿದ್ದಲ್ಲ ಎಂಬ ಗ್ರಹಿಕೆಯುಳ್ಳ ಸಮಾಜದಲ್ಲಿ ಬೆಳೆದವಳು

ಎಂಬುದು ಯುವತಿ ನೈರೂನ್ನಿಸಾ ಬಲ್ಲಳು. ಗಂಡನಾಗಬೇಕಾದವನು "ನನ್ನ ಪ್ರಾಯ ೫೦ ವರ್ಷ. ನನಗೆ ಇದು ಮೂರನೇ ಮದುವೆ. ಇಬ್ಬರು ಹೆಂಡತಿಯರು ತೀರಿ ಹೋಗಿದ್ದಾರೆ. ಅವರಿಗೆ ಮಕ್ಕಳು ಆಗಿಲ್ಲ. ನೀನು ನನ್ನನ್ನು ಒಪ್ಪಿದರೆ ನಿನಗೆ ಯಾವ ರೀತಿಯಲ್ಲೂ ದುಃಖದ ಸೋಂಕು ತಾಗದಂತೆ ನೋಡಿಕೊಳ್ಳುತ್ತೇನೆ. ಯಾರ ಹೆದರಿಕೆಯೂ ಇಲ್ಲದೆ ನಿನ್ನ ಇಷ್ಟವನ್ನು ಹೃತ್ಪೂರ್ವಕವಾಗಿ ಹೇಳು" ಎಂದಾಗ ನೂರುನ್ನಿಸಾ "ಇನ್ ಷಾ ಅಲ್ಲಾಹ್.... ನನಗೆ ಒಪ್ಪಿಗೆ ಇದೆ..." ಎಂದು ಉತ್ತರಿಸುವಳು. ಇಲ್ಲಿ ಅವಳ ಒಪ್ಪಿಗೆಯ ಹಿಂದೆ ತನ್ನನ್ನೆ ಬಲಿಗೊಟ್ಟುಕೊಂಡು ತಂದೆಯನ್ನು ಅಸಹಾಯಕತೆಯಿಂದ ಪಾರುಮಾಡುವ ಉದ್ದೇಶವಿದೆ, ಅಸಹಾಯಕತೆಯಿದೆ. ಶರಣಾಗತಿಯಿದೆ. ಸಮಾಜದಲ್ಲಿ ಎಷ್ಟೋ ಸ್ತ್ರೀಯರ ಬಾಳು ಇದೇ ತರಹ ಆಗಿದೆ. ನೂರೂನ್ನಿಸಾ ಮುಂದೆ ಸುಖಜೀವನ ನಡೆಸಿದರೂ ಒಂದು ಮಗುವನ್ನು ಹೆತ್ತು ಮರಣ ಹೊಂದುತ್ತಾಳೆ. ನೈರೂನ್ನಿಸಾಳ ಸ್ಥಿತಿಯೇ ಖೈರೂನ್ನಿಸಾಗೂ ಒದಗುತ್ತದೆ. ಆದರೆ ಆಕೆಯ ಒಪ್ಪಿಗೆ ಕೇಳಲು ಹಬೀಬುಲ್ಲಾ ಮುಂದೆ ಬರುವುದಿಲ್ಲ. "ಕೋಳಿಯ ಅನುಮತಿ ಕೇಳಿ ಎಲ್ಲಿಯಾದರೂ ಮಸಾಲೆ ಅರೆಯುತ್ತಾರೇನು...?" ಎಂಬ ತಂದೆಯ ಮಾತು ಕೇಳಿ ಖೈರುನ್ನಿಸಾ ದುಃಖಿತಳಾಗುತ್ತಾಳೆ. ಅವಳ ಕಣ್ಣಿನಿಂದ ಇಳಿದ ಕಣ್ಣೀರು ಕಿಟಕಿಯ ಬಾಗಿಲನ್ನು ಒದ್ದೆ ಮಾಡಿತು ಎಂಬುದಾಗಿ ಕತೆಯಲ್ಲಿ ವರ್ಣಿಸಲಾಗಿದೆ. ಇಲ್ಲಿ ತನ್ನ ದುಃಖವನ್ನು ಯಾರೊಡನೆಯು ಹೇಳಿಕೊಳ್ಳಲಾಗದೆ ಶರಣಾಗತ ಪಾತ್ರವಾಗಿ ಖೈರೂನ್ನಿಸಾ ಬರುತ್ತಾಳೆ. ಈ ಕತೆಗಳಲ್ಲಿರುವ ಮುಸ್ಲಿಂ ಸಮಾಜದಲ್ಲಿ ಮದುವೆಯಾಗುವ ಗಂಡು ಆಸ್ತಿವಂತನಾಗಿದ್ದರೆ ಸಾಕು, ವಯಸ್ಸು ಮುಖ್ಯವಲ್ಲ ಎಂಬ ಧೋರಣೆಯಿದೆ. ಇಲ್ಲಿ ಹೆಣ್ಣಿನ ಒಪ್ಪಿಗೆ ಕೇಳುವುದೆ ಇಲ್ಲ. ನೈರೂನ್ನಿಸಾ ಅಸಹಾಯಕಳಾಗಿ ಮೃದುಧ್ವನಿಯಲ್ಲಿಯೇ ತನ್ನ ಇಷ್ಟವಿಲ್ಲದ ಮದುವೆಗೆ ಒಪ್ಪಿಗೆ ಸೂಚಿಸಿದರೆ, ಖೈರೂನ್ನಿಸಾ ಎತ್ತರದ ದನಿಯಲ್ಲಿ "ಆಗಬಹುದು" ಎನ್ನುವ ಮೂಲಕ ತನ್ನ ಅಸಮಾಧಾನವನ್ನು ಸೂಚಿಸುವಳು.ಇಲ್ಲಿ ಇಂತಹ ಅನೇಕ ಮಹಿಳೆಯರು ತಮ್ಮ ಆಸೆ ಆಕಾಂಕ್ಷೆಗಳನ್ನು ಬದಿಗಿಟ್ಟು ಬಡತನದ ಒತ್ತಡಕ್ಕೆ ಶರಣಾಗಿ ತಮ್ಮ ಜೀವನವನ್ನೆ ಅಂಧಕಾರದಲ್ಲಿ ಮುಳುಗಿಸಿಕೊಳ್ಳುವರು. ಇದೊಂದು ಬಗೆಯಲ್ಲಿ ಮದುವೆ ಮಹಿಳೆಯರ ಬಲಿಪೀಠದ ಹಾಗೆ ಗೋಚರವಾಗುತ್ತದೆ.

'ಎತ್ತರ' ಕತೆಯಲ್ಲಿಯೂ ಸಹ ವರದಕ್ಷಿಣೆ ಎಂಬ ಪೀಡೆಯಿಂದ ಪ್ರೀತಿಸಿದ ಹೃದಯಗಳು ದೂರ ಆಗುವ ಚಿತ್ರಣವಿದೆ. ಪ್ರೀತಿಗೆ ಸಿಲುಕಿದ್ದ ಅಝಿಮ್‌ನಿಗೆ, ಅವನ ತಾಯಿ ಹೇಳುತ್ತಾಳೆ: "ಹಸ್ಮಾ ಒಳ್ಳೆ ಹುಡುಗಿ ಹೌದು. ಆದರೆ ನಿನ್ನ ತಂದೆಗೆ ಇಷ್ಟವಿಲ್ಲ. ಅದು ಕೂಡ ನಿನ್ನ ತಂಗಿ ಇದ್ದಾಳಲ್ಲ. ಅವಳ ವಿಷಯ ಆಲೋಚನೆ ಮಾಡಿದ್ದೀಯಾ? ಮೊನ್ನೆ ಅವಳನ್ನು ನೋಡಿ ಹೋದವರು ೧೫ ಸಾವಿರ ವರದಕ್ಷಿಣೆ ಕೇಳಿದ್ದಾರಂತೆ ಎಲ್ಲಿಗೆ ಹೋಗುವುದು? ಹಸ್ಮಾ ತಂದೆ ತಾಯಿ ಇಲ್ಲದವಳು. ಅವಳ ಅಕ್ಕ, ಭಾವ ಎಷ್ಟು ವರದಕ್ಷಿಣೆ ಕೊಟ್ಟಾರು? ವರದಕ್ಷಿಣೆ ಸಿಗದಿದ್ದರೆ ನಿನ್ನ ತಂಗಿಯ ಭವಿಷ್ಯವೇನು? ಆಲೋಚಿಸು ಬೇಟಾ..." ಇಲ್ಲಿ ಸಹ ವರದಕ್ಷಿಣೆ ಸಮಸ್ಯೆಯಿಂದಾಗಿ

ತಾಯಿಯಾದವಳು ತನ್ನ ಮಗಳ ಸುಖಕ್ಕೆ ಮಗನ ಪ್ರೇಮವನ್ನು ಬಲಿಗೊಡುತ್ತಾಳೆ. ಮದುವೆ ಆದ ನಂತರ ಸಿಕ್ಕ ಹಸ್ಮಾ ಅಝಿಮಾನ ಪರಿಸ್ಥಿತಿ ನೋಡಿ "ನನ್ನಂತೆಯೇ... ಎಲ್ಲವನ್ನೂ ನುಂಗಿಕೊಂಡು ನಗ್ತಾ ಇರಬಾರದೆ? ಟೇಕ್ ಇಟ್ ಈಸೀ ಪ್ಲೀಸ್..." ಎನ್ನುವಳು. ಅವಳಿಗೂ ಪ್ರೀತಿಸಿದ ಹುಡುಗನನ್ನು ಮದುವೆ ಆಗಲು ಬಡತನದ ಸಾಮಾಜಿಕ ವ್ಯವಸ್ಥೆ ಎನ್ನುವುದು ಅವಕಾಶ ಕೊಡುವುದಿಲ್ಲ. ತನಗೆ ಆಗುತ್ತಿರುವ ನೋವನ್ನು ತಡೆದುಕೊಂಡು ಮೇಲ್ನೋಟಕ್ಕೆ ನಗೆಚೆಲ್ಲುವ ಹಸ್ಮ, ಅಝೀಮ್‌ನ ಸುಖವನ್ನೇ ಬಯಸುವವಳಾಗಿ ಚಿತ್ರಣಗೊಂಡಿದ್ದಾಳೆ.

ಸಾಮಾಜಿಕ ಏಣಿ ಶ್ರೇಣಿ ವ್ಯವಸ್ಥೆಗೆ ಪ್ರೇಮಿಗಳು ಶರಣಾಗುವ ಪಾತ್ರ ಚಿತ್ರಣಗಳನ್ನು ಕಟ್ಪಾಡಿ ಅವರ 'ಸರಕುಗಳು' ಕಾದಂಬರಿಯಲ್ಲಿಯೂ ಕಾಣಬಹುದು. ಅಲ್ಲಿ ಸಲೀಮಾ ಮನೆಯ ಕೆಲಸಕ್ಕೆ ಬರುವ ನಫೀಸಾಳನ್ನು ಇಷ್ಟಪಟ್ಟರೂ ತಂಗಿಗೆ ವರದಕ್ಷಿಣೆ ಕೊಡಲು ಆಗದ ತಂದೆ-ತಾಯಿಗಳು, ಸಲೀಮನಿಗೆ ವರದಕ್ಷಿಣೆ ಕೊಡುವ ಬೇರೊಂದು ಹುಡುಗಿಯನ್ನು ಮದುವೆಯಾಗಲು ಒತ್ತಾಯಪಡಿಸುವ ಚಿತ್ರಣವಿದೆ. ಇದೇ ರೀತಿ ಪ್ರೇಮಿಗಳು ವ್ಯವಸ್ಥೆಗೆ ಶರಣಾಗುವ ಪಾತ್ರ ಚಿತ್ರಣವನ್ನು "ನೇಣುಗಂಬದ ನೆರಳಲ್ಲಿ" ಕತೆಯಲ್ಲಿಯೂ ಕೂಡ ಗುರುತಿಸಬಹುದು. ಯಜಮಾನಿಕೆ ವ್ಯವಸ್ಥೆಯಲ್ಲಿ ಸ್ತ್ರೀ ಪುರುಷನಿಗೆ ಅಡಿಯಾಳಾಗಿ ನಡೆಯುತ್ತಾ ಬಂದಿದ್ದಾಳೆ. ಅಣ್ಣ ವಿಶ್ವನಾಥನೊಡನೆ ವಸು ತಮಾಶೆ ಮಾಡುತ್ತಾ ಇದ್ದವಳು ಮದುವೆ ವಿಚಾರ ಬಂದಾಗ ಮೌನ ವಹಿಸುತ್ತಾಳೆ. 'ನನಗೀಗಲೇ ಮದುವೆ ಬೇಡ' ಎನ್ನುತ್ತಾಳೆ. ಈ ಮಾತಿನ ಹಿಂದಿನ ಮರ್ಮವನ್ನು ಅರಿಯದ ಅಣ್ಣ ಜೋರುಮಾಡುತ್ತಾನೆ. ತಂಗಿ ಅಣ್ಣನ ಸ್ಥಿತಿ ಕಂಡು ಮದುವೆಗೆ ಒಪ್ಪುತ್ತಾಳೆ. ಮದುವೆ ಮತ್ತು ಪ್ರೀತಿ ವಿಚಾರ ಬಂದಾಗ ತಂದೆ-ತಾಯಿ-ಅಣ್ಣ ಮುಂತಾದವರ ಎದುರಿಗೆ ಹೇಳಲು ಧೈರ್ಯ ಸಾಲದವರಾಗಿ ಸ್ತ್ರೀ ಪಾತ್ರಗಳು ಚಿತ್ರಣಗೊಂಡಿವೆ. ಹೆಣ್ಣಿನ ಮನಸ್ಸಿನ ಸೂಕ್ಷ್ಮತೆಯನ್ನು ಅರಿಯದ, ನಾನು ಹೇಳಿದಂತೆ ನಡೆಯಬೇಕೆಂಬ ಮನೋಭಾವದ ಪುರುಷ ಪಾತ್ರಗಳು ಇಲ್ಲಿವೆ. ತಂಗಿಯ ಒಳಿತನ್ನೆ ಬಯಸುವವನಾದರೂ ಆಕೆಯ ಸೂಕ್ಷ್ಮತೆಯನ್ನು ಅರಿಯದ ಅಣ್ಣಂದಿರು ಇದ್ದಾರೆ. ಮಗಳ ಪ್ರೀತಿ ಗೊತ್ತಿದ್ದು ಸಹ ಜಾತಿಭೇದವನ್ನು ಗಂಭೀರವಾಗಿ ಪರಿಗಣಿಸುವ ತಾಯಂದಿರು ಇದ್ದಾರೆ. ಪ್ರೇಮಿಗಳ ಬದುಕಿಗೆ ಜಾತಿ ಮತ್ತು ಬಡತನಗಳು ಅಡ್ಡಿಯಾಗುವುದನ್ನು ಮತ್ತು ಪ್ರೇಮಿಗಳ ಬದುಕು ಕರಾಳವಾಗುವುದನ್ನು ಚಿತ್ರಿಸುವ ಮೂಲಕ ಅಮಾನುಷ ಸಮಾಜದ ಚಿತ್ರಣವನ್ನು ಕಟ್ಪಾಡಿ ಕಟ್ಟಿಕೊಡುತ್ತಾರೆ.

ಕಟ್ಪಾಡಿ ಅವರ 'ಹೆತ್ತತಾಯಿ' ಕತೆಯಲ್ಲಿ ಬಡತನದ ಕರಾಳ ಚಿತ್ರಣ ಮೂಡಿಬಂದಿದೆ. ಬಡತನದಿಂದ ತೀವ್ರ ನೋವನ್ನು ಅನುಭವಿಸುವ ಗುಲ್ಲು, ತನ್ನ ಸ್ವಾರ್ಥಕ್ಕಾಗಿ ತನ್ನ ತಂಗಿಯನ್ನು ಬಲಿಪಶುವನ್ನಾಗಿ ಮಾಡುತ್ತಾನೆ. ಮೇಲ್ನೋಟಕ್ಕೆ ತಂಗಿ ಸುಖ ಬಯಸುವವನಂತೆ ಕಂಡರೂ ಅವನಲ್ಲಿ ಸ್ವಾರ್ಥವಿದೆ. ತನ್ನ ಬಡತನ ನೀಗಿಸಲು ಸೂತ್ರದ ಬೊಂಬೆಯಂತೆ ತಂಗಿಯನ್ನು

ಕರಾರಿನ ಮದುವೆಗೆ ಒಳಪಡಿಸುತ್ತಾನೆ. ಅವನ ತಂಗಿ ಶರೀಫಾ, ತನ್ನ ಎಳೆಗೂಸನ್ನು ಅಗಲಿ, ಬಾಡಿಗೆ ತಾಯಾಗುವ ಕರಾರಿನ ಮದುವೆಗೆ ಅನಿವಾರ್ಯವಾಗಿ ಒಪ್ಪುತ್ತಾಳೆ. ಈ ಹೆಣ್ಣು ಕುಟುಂಬದ ಹೊರಗೂ ಒಳಗೂ ಶೋಷಣೆ ಅನುಭವಿಸುತ್ತಾಳೆ. ಈ ಕತೆಯಲ್ಲಿ ಬರುವ ಅಣ್ಣನಿಂದ, ಗಂಡನಿಂದ ಕೊನೆಗೆ ಹೊಟ್ಟೆಯಲ್ಲಿ ಹುಟ್ಟಿದ ಮಗುವಿನಿಂದ ಕೂಡ ಆಕೆ ನೋವಿಗೆ ಒಳಗಾಗಿ ಶರಣಾಗತ ಬಾಳು ಸಾಗಿಸುತ್ತಾಳೆ. 'ಇನ್ನು ಇಲ್ಲಿ ಎಷ್ಟು ದಿನ ಇರುತ್ತಾಳೆ...?" ಎಂಬ ತನ್ನ ಅತ್ತಿಗೆ ಮಾತು ಕೇಳಿದ ಶರೀಫಾ ಕೊನೆಗೆ ಅಸಹಾಯಕ ಸ್ಥಿತಿ ತಲುಪುತ್ತಾಳೆ. ಎಲ್ಲಾ ಕಡೆಯಿಂದಲೂ ಶೋಷಣೆಗೆ ಒಳಗಾದ ಸ್ತ್ರೀಯರು ಪ್ರೀತಿಯಿಂದ, ಸ್ವಾತಂತ್ರ್ಯದಿಂದ ಮತ್ತು ನೆಮ್ಮದಿಯಿಂದ ವಂಚಿತರಾಗಿ ಕೊನೆಗೆ ಪರಿಸ್ಥಿತಿಗೆ ಶರಣಾಗುವರು. ಹೆಣ್ಣನ್ನು ಉಪಭೋಗಿ ವಸ್ತುವನ್ನಾಗಿ ಬಳಸಿಕೊಳ್ಳುವ ಸಮಾಜದಲ್ಲಿ ಅವರಿಗೆ ಬೇರೆ ದಾರಿಯೆ ಹೊಳೆಯುವುದಿಲ್ಲ. ಸ್ತ್ರೀಯರು ಧಾರ್ಮಿಕ ಆಚರಣೆಗಳಿಗೆ, ಷರಿಯತ್‌ನ ನಿಯಮಗಳಿಗೆ, ಪುರುಷಾಧಿಕಾರಕ್ಕೆ, ಕೌಟುಂಬಿಕ ಹಿಂಸೆಗೆ ಮತ್ತು ಬಡತನಕ್ಕೆ ಸ್ತ್ರೀ ಬಹುಮುಖಿ ಆಯಾಮಗಳಲ್ಲಿ ಶರಣಾಗುವುದನ್ನು ಕಟ್ಪಾಡಿ ಕತೆಗಳು ಓದುಗರ ಮನಕರಗುವಂತೆ ಚಿತ್ರಿಸುತ್ತವೆ.

೫.೩. ಅಭಿವ್ಯಕ್ತಿ ಕ್ರಮ

೧. ಕಟ್ಪಾಡಿ ಅವರ ಕತೆಗಳಲ್ಲಿ ಮಹಿಳೆಯರ ಶರಣಾಗತಿ ಭಾವವನ್ನು ಚಿತ್ರಿಸಲು ಅನೇಕ ನಿರೂಪಣ ಕ್ರಮಗಳನ್ನು ಬಳಸುತ್ತಾರೆ. ಅವುಗಳಲ್ಲಿ ನಾಟಕೀಯ ಶೈಲಿಯು ಒಂದು.

ಅ. "ಪರ್ಬುಲೇ...ನಿಮಗೆ ಗೊತ್ತಿದೆ ನನಗೆ ಅಬ್ಬು ಎಷ್ಟು ಮುಖ್ಯಾಂತ. ನಿಮಗೆ ಈ ಮಾತು ಹೇಳಲು ಎಷ್ಟು ಕಷ್ಟ ಪಡುತ್ತಿದ್ದೇನೆಂತಲೂ ನಿಮಗೆ ಈಗಾಗಲೇ ಗೊತ್ತಿರಬಹುದು. ನೀವು ಇಷ್ಟರವರೆಗೆ ಮಾಡಿದ ಉಪಕಾರ ನಾನು ಈ ಜನ್ಮದಲ್ಲಿ ತೀರಿಸಲಾರೆ. ನೀವು... ಇನ್ನು ಇಲ್ಲಿಗೆ ಬರಬೇಡಿ ಪರ್ಬುಲೇ..."ಎಂದು ಸೆರಗನ್ನು ಬಾಯಿಗೆ ತಳ್ಳಿಕೊಂಡು ಒಳಗೆ ಹೋದಳು ('ತೀರ್ಮಾನ').

ಇಲ್ಲಿ ಅರ್ಧವಾಕ್ಯಗಳ ರಚನೆಗಳಿವೆ. ಮಹಿಳೆಯರು ತಮ್ಮ ಮಾತನ್ನು ಪೂರ್ಣಗೊಳಿಸುವಷ್ಟರಲ್ಲಿ ದುಃಖ ಬಂದುಬಿಟ್ಟಿದೆ. ತಮ್ಮ ಮಾತನ್ನು ಪೂರ್ಣವಾಗಿ ಹೇಳುವ ಶಕ್ತಿಯೂ ಅವರಿಗೆ ಇಲ್ಲ ಎಂಬಂತೆ ಈ ಮಾತುಗಳಿವೆ. ಆಕೆ ಒಲ್ಲದ ಮನಸ್ಸಿನಿಂದ ಮಾತಾಡುವ ಭಾವವಿಲ್ಲಿದೆ. ಅದರಲ್ಲಿ ಕೃತಜ್ಞತೆಯ ಮನೋಭಾವವೂ ಮೂಡಿಬಂದಿದೆ. ಅವಳ ದುಃಖದ ತೀವ್ರತೆಯನ್ನು ಹಾಗೂ ಬಂಧನದ ಸ್ಥಿತಿಯನ್ನು ಕತೆ ಅರೆಬರೆಯಾದ ಅವಳ ಮಾತುಗಳ ಮೂಲಕ ಸಮರ್ಥವಾಗಿ ಸೂಚಿಸುತ್ತದೆ.

ಆ. ಮೈಮನಾ ಪೇಟೆ ಕಡೆ ಹೋಗಲು ತಯಾರಾಗಿ ಹೊರಬಂದಾಗ ಅಪ್ಪ ಹೇಳಿದರು. "ಮೈಮುನಾ...ನೀನು ಹೊರಗೆ ಹೋಗುವಾಗಲೆಲ್ಲಾ ಇದನ್ನು ಇನ್ನು ಮುಂದೆ ತೊಟ್ಟುಕೊಂಡು ಹೋಗಬೇಕು ಮಗೂ..." ಮೈಮುನಾ 'ಸರಿ' ಎಂದು ಅಪ್ಪ ಕೊಟ್ಟ ಕಾಗದದ ಪೊಟ್ಟಣವನ್ನು ಬಿಚ್ಚಿದಳು. ಕರಿಬಣ್ಣದ ಸಿಲಿಕಿನ ಬುರ್ಖಾ. ತನ್ನ ಪ್ರೀತಿಯ ಅಪ್ಪನನ್ನು ಕೃತಜ್ಞತೆಯಿಂದ ನೋಡಿದ ಮೈಮುನಾ "ತುಂಬಾ ಚಂದ ಇದೆ ಅಲ್ವಾಮ್ಮ..." ಎಂದಳು. ಅಮ್ಮ ಬೀಡಿಯ ಕಟ್ಟುಗಳನ್ನು ಚೀಲದೊಳಗೆ ತುಂಬಿಸುತ್ತಾ "ಹೌದಮ್ಮ..."ಎಂದಳು ಮೆತ್ತಗೆ. ('ಮುಸುಕು')

ಮೇಲಿನ ಕತೆಯ ಭಾಗದಲ್ಲಿ 'ಮಗೂ...' ಎಂದು ಕರೆಯುವಲ್ಲಿ ಅಪ್ಪನ ಪ್ರೀತಿಯೂ ಅಡಗಿದೆ. ಹಾಗೆಯೇ ಅಪ್ಪನ ಪುರುಷವಾದಿ ಆಜ್ಞೆಯೂ ಕೂಡ ಪ್ರಟಕಗೊಂಡಿದೆ. ಆಕೆಯ ಮಾತಲ್ಲಿ ವಿನಮ್ರತೆಯ ಭಾವವೂ ಇದೆ. ಆದರೆ ಅದರೊಳಗೆ ಬೇರೆ ದಾರಿತೋಚದ ಅಸಹಾಯಕತೆಯೂ ಇದೆ. ಹೀಗೆ ನಾಟಕೀಯತೆಯ ಜೊತೆಗೆ ಬಾಳಿನ ವ್ಯಂಗ್ಯದ, ಮಾನವ ಸ್ವಭಾವದ ವೈಚಿತ್ರ್ಯಗಳ ಸೂಕ್ಷ್ಮವಿವರಗಳನ್ನು ತರುವ ಸೂಕ್ಷ್ಮ ಕಲೆ ಕಟ್ಪಾಡಿಯವರದಾಗಿದೆ. ಇಲ್ಲಿ ಅಪ್ಪನೊಡನೆ ಮಾತಾಡಲಾಗದೆ ನೋಟದಲ್ಲೆ ಕೃತಜ್ಞತೆ ತಿಳಿಸುವಂತೆ ಮಗಳ ಅಸಹಾಯಕತೆ, ಜೊತೆಗೆ 'ಚಂದ ಇದೆ ಅಲ್ವಾಮ್ಮ...' ಎಂಬಲ್ಲಿ ಮುಗ್ಧತೆಗಳು ಧ್ವನಿಪೂರ್ಣವಾಗಿವೆ. ಇಲ್ಲಿ ಮಗಳ ಪ್ರಶ್ನೆಗೆ ತಾಯಿ ಉತ್ತರಿಸುವಾಗ 'ಬೀಡಿ ಕಟ್ಟುಗಳನ್ನು ಚೀಲದಲ್ಲಿ ತುಂಬಿದಂತೆ ಬುರ್ಖಾ ತೊಟ್ಟುಕೊಂಡವರ ಪರಿಸ್ಥಿತಿ' ಎಂಬ ಹೋಲಿಕೆ ಕೊಡುತ್ತಾಳೆ. ತಾಯಿಯ ಮನದ ಸೂಕ್ಷ್ಮ ಭಾವವನ್ನು ಕತೆ ನಾಟಕೀಯ ಶೈಲಿಯಲ್ಲಿ ಅಭಿವ್ಯಕ್ತಿಸುತ್ತದೆ. ತನ್ನ ಮನಸ್ಸಿನ ಭಾವನೆಯನ್ನು ಹೇಳಲಾಗದೆ ದುಃಖದಿಂದ 'ಹೌದಮ್ಮ... ' ಎನ್ನುವಲ್ಲಿ ದುಃಖ ತೀವ್ರವಾಗಿ ಮಾತೇ ಬಾರದುದನ್ನು ಕತೆ ತರುತ್ತದೆ.

೨. ಕಟ್ಪಾಡಿ ಅವರ ಕತೆಗಳು ಮಹಿಳೆಯರ ಶರಣಾಗತಿ ಭಾವವನ್ನು ವ್ಯಕ್ತಮಾಡಲು, ಪರಿಸರದ ಸೂಕ್ಷ್ಮ ವಿವರಗಳನ್ನು ದಾಖಲಿಸುವ ಕಥನತಂತ್ರವು ಬಹಳ ಪರಿಣಾಮಕಾರಿಯಾಗಿ ಬಳಕೆಗೊಳ್ಳುತ್ತವೆ. ನಿದರ್ಶನಕ್ಕೆ ಈ ಕೆಳಗಿನ ಕಥಾಭಾಗವನ್ನು ನೋಡಬಹುದು:

ಅ. "ನಾನು ತಣ್ಣೀರು ಕುಡಿಯುತ್ತಿರುವಾಗ ಅಮ್ಮ ಬಾಗಿಲಿನ ಚೌಕಟ್ಟಿಗೆ ಆತುನಿಂತಳು, "ಹೋದದ್ದು ಏನಾಯ್ತು...?" ಅಂತ ಕೇಳಿದ್ಲು. ಲೋಟ ಕೆಳಗಿಡುತ್ತಾ "ಆಗೋದೆಂತಾದ್ದು ಮಣ್ಣು ಅಂವಾ ಹೇಳಿದಂತೆ ಮಾಡಿ ಬಿಟ್ಟಿದ್ದಾನೆ..." ಎಂದೆ. ಅಮ್ಮ ನಿಂತಲ್ಲೇ ಕುಸಿದು ಕೂತಳು. ತಲೆಯ ಮೇಲೆ ಕೈಹೊತ್ತು ಅವಳ ಕಣ್ಣಲ್ಲಿ ದೊಳ ದೊಳ ನೀರು. "ನೀನೀಗ ಯಾರು ಸತ್ತೂಂತ ಹೀಗೆ ಅಳ್ತಾ ಇರೋದು? ನಾನೇನು ಸತ್ತಿದ್ದೇನಾ ಕೋರ್ಟಿಗೆ ಹೋಗ್ತೇನೆ. ಅವ್ನಿಗೆ

ಬುದ್ಧಿ ಕಲಿಸದೆ ಬಿಡೋದಿಲ್ಲ..." ಎಂದೆ ಸಿಟ್ಟಾಗಿ. ಅಜ್ಜ ಒಳಗಿನಿಂದ "ಅದೆಂತಾದ್ದು ಕೋರ್ಟಿಗೆ ಹೋಗೋದು... ನಿಂಗೇನಾದ್ರೂ ಹುಚ್ಚು ಗಿಚ್ಚು ಹಿಡಿದಿದೆಯಾ ಹುಡುಗಾ...?" ಎಂದ ('ಕ್ರೌರ್ಯ').

ಇಲ್ಲಿ ಪ್ರಥಮ ಪುರುಷ ನಿರೂಪಣೆಯಲ್ಲಿ ಕತೆ ರಚನೆಗೊಂಡಿದೆ. ಕತೆಯ ನಾಯಕ ತಣ್ಣೀರು ಕುಡಿಯುತ್ತಿದ್ದರೂ ಒಳಗೆ ಅವನ ರಕ್ತ ಕುದಿಯುತ್ತಿದೆ. ಅವನ ಆಕ್ರೋಶವನ್ನು ಕತೆ ಈ ವೈರುಧ್ಯದ ಮೂಲಕ ಚಿತ್ರಿಸುತ್ತದೆ. ಇಲ್ಲಿ ಬರುವ ಬಾಗಿಲಿನ ಚೌಕಟ್ಟು ಹೆಣ್ಣನ್ನು ಮನೆಯ ಒಳಗಿಟ್ಟು ಬಂಧಿಸುವ ಚೌಕಟ್ಟು ಸಹ ಹೌದು; ಅದು ಕೌಟುಂಬಿಕ ಬಂಧನಗಳಿಂದ ಹೆಣ್ಣು ತಪ್ಪಿಸಿಕೊಂಡು ಹೋಗುವ ಜಾಗವೂ ಹೌದು. ಒಂದು ಸಾರಿ ಹೊಸಲಿನ ಆಚೆ ಹೋದವಳು ಮತ್ತೆ ಬರುವಂತಿಲ್ಲ. ಹೊಸಿಲು ಯಾವಾಗಲೂ ಹೆಣ್ಣನ್ನು ಬಂಧನದಲ್ಲಿಡುವ ಹಾಗೂ ದಾಟಿದರೆ ಬಿಡುಗಡೆ ಹೊಂದುವ ಸಾಂಕೇತಿಕ ಜಾಗವಾಗಿದೆ. ಅದರ ಮೇಲೆ ತಾಯಿ ಕುಸಿದು ಕೂತಳು ಎಂಬ ಇಲ್ಲಿನ ವಿವರವು ಅರ್ಥಪೂರ್ಣವಾಗಿದೆ. ಆಕೆಯ ದೇಹ ಶಕ್ತಿಯುತವಾಗಿದ್ದರೂ ಮನಸ್ಸಿಗಾಗಿರುವ ಆಘಾತದಿಂದ ಕುಸಿದು ಆಕೆ ತಲೆಯ ಮೇಲೆ ಕೈ ಹೊತ್ತು ಕೂರುವಳು. ಆಕೆಯ ಅಸಹಾಯಕತೆ, ದುಃಖದ ಭಾವ ಇಲ್ಲಿ ವ್ಯಕ್ತವಾಗಿದೆ. ಇಲ್ಲಿ ಅಜ್ಜನ ದೇಹ ಶಕ್ತಿಹೀನವಾಗಿದ್ದರೂ ಸಹ ಮಹಿಳಾವಿರೋಧಿಯಾದ ಅವನ ಮನೋಭಾವ ಬಲಿಷ್ಠವಾಗಿದೆ. ನಾಟಕೀಯತೆ ಮತ್ತು ಸೂಕ್ಷ್ಮ ವಿವರಗಳನ್ನು ಜೊತೆಗೆ ಕಟ್ಟಿಕೊಡುವ ಎರಡೂ ವಿಧಾನದಲ್ಲಿ ಕತೆ ಹೆಣ್ಣಿನ ಅಸಹಾಯಕತೆ, ಶರಣಾಗತಿ ಹಾಗೂ ಅಣ್ಣನಲ್ಲಿರುವ ತಾಯ್ತನವನ್ನು ಕಟ್ಟಿಕೊಡುತ್ತದೆ.

ಆ. "ಸಾಹೇಬರು ಮೌನವಾದರು. ಇವರ ಮಾತುಗಳನ್ನು ಕೇಳಿದ ಶರೀಫಾ ಮಾತ್ರ ದಂಗಾಗಿದ್ದಳು. ಅವಳಿಗೆ ಕರಾರಲ್ಲಿ ಇಂತಹದೊಂದು ಕಠಿಣವಾದ ನಿಯಮವಿತ್ತೆಂದು ತಿಳಿದಿರಲೇ ಇಲ್ಲ! ಅಂದರೆ ಸಾಹೇಬರಿಗೆ ಎರಡನೇ ಹೆಂಡತಿಯಾಗಿ ಬಂದದ್ದಲ್ಲ. ತನ್ನನ್ನು ಒಂದು ಮಗುವನ್ನು ಹೆರುವ ಯಂತ್ರವಾಗಿ ಈ ಮನೆಗೆ ಕರೆತರಲಾಗಿದೆ! ಇಲ್ಲಿ ಯಾವ ರಕ್ತಸಂಬಂಧಕ್ಕೂ ಬೆಲೆ ಇಲ್ಲವೆಂದು ಅವಳಿಗೆ ಮನವರಿಕೆಯಾಗ್ತಿಬಿಟ್ಟಿತು! ಅವಳ ತಲೆಯ ಮೇಲೆ ಕಲ್ಲು ಚಪ್ಪಡಿಯನ್ನು ಯಾರೋ ಬಡಿದಂತಾಯಿತು!"('ಹೆತ್ತತಾಯಿ').

ಇಲ್ಲಿ ಪಾತ್ರಗಳ ಮನಸ್ಥಿತಿಯನ್ನು ಸಂಕೇತಗಳ ಮೂಲಕ ನಿರೂಪಿಸುವ ಧಾಟಿಯಿದೆ. ಮದುವೆ ಕರಾರಿನ ನಿಯಮ ಕೇಳಿದೊಡನೆ ಹೆಣ್ಣಿನ ದುಃಖದ ತೀವ್ರತೆಯಲ್ಲಿ ಮಾತು ಬಾರದಿರುವ ಸನ್ನಿವೇಶವಿದೆ. ಇಲ್ಲಿನ ಆಶ್ಚರ್ಯ ಸೂಚಕ ಚಿಹ್ನೆಗಳು ಅವಳ ಕಂಗಾಲಾದ ಭಾವವನ್ನು ವ್ಯಕ್ತಗೊಳಿಸುತ್ತವೆ. ಶರೀಫಾಗೆ ಆಘಾತವಾದ ಬಗೆಯನ್ನು ಕಲ್ಲುಚಪ್ಪಡಿಯಿಂದ ತಲೆಗೆ ಬಡಿದಂತಾಗುವ ಹೋಲಿಕೆಯು ಸಾಂಕೇತಿಕವಾಗಿದೆ. ಸಾಮಾನ್ಯವಾಗಿ ಹೆಣವನ್ನು ಮುಚ್ಚುವಾಗ ಕಲ್ಲುಚಪ್ಪಡಿಗಳನ್ನು

ಇಡುತ್ತಾರೆ. ಬದುಕಿರುವಾಗಲೇ ಸಾವಿನ ಆಚರಣೆಯ ಈ ಚಿತ್ರವು ಮಹಿಳೆಯರ ಅವಸ್ಥೆಯನ್ನು ಸಮರ್ಥವಾಗಿ ಕಾಣಿಸುತ್ತದೆ.

೩. ಕಟ್ಪಾಡಿ ಅವರ ಕತೆಗಳು ವಿಷಾದ, ವ್ಯಂಗ್ಯ ಮತ್ತು ವಿಡಂಬನೆಗಳ ಮೂಲಕ ಮಹಿಳೆಯರ ಶರಣಾಗತಿಯ ಸನ್ನಿವೇಶವನ್ನು ಮೂಡಿಸುವ ಬಗೆ ಕೂಡ ವಿಶಿಷ್ಟವಾಗಿದೆ.

ಅ. "ಅಲ್ಲಾ ಬೀಪಾತುಮ್ಮ, ಈ ದುನಿಯಾ ನಮಗೆ ಶಾಶ್ವತವಾ...ಸತ್ತ ನಂತರದ ಬದುಕಲ್ವ ಶಾಶ್ವತವಾದದ್ದು? ಅಪ್ಪ ಹೇಳ್ತಾರೆ 'ಈ ಬದುಕಿನಲ್ಲಿ ನಾವು ಸಾಧ್ಯವಾದಷ್ಟು ಅಖಿರತೆಗೆ ಬೇಕಾದ್ದನ್ನು ಸಂಪಾದಿಸಬೇಕು' ಅಂತ" ಎಂದು ಮೈಮುನಾ ತನಗೆ ತಿಳಿದಿದ್ದನ್ನು ಹೇಳಿ ಅವಳನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದಳು. 'ಅಯ್ಯೋ.... ಅದೆಲ್ಲಾ ಬಿಡೇ ಮೈಮುನಾ, ನಾವು ಈ ಲೋಕದಲ್ಲೂ ಅನುಭವಿಸೋದು ನರಕವೇ.... ನಾಳೆ ಸತ್ತ ನಂತರವೂ ನರಕವೇ..." ಎಂದು ಪಾತುಮ್ಮ ಹೇಳುವಷ್ಟರಲ್ಲಿ ಅಬೂಕಾಕಾ ಬೀಡಿ ಚೀಲ ಕೊಡುವಂತೆ ಸನ್ನೆ ಮಾಡಿದರು ('ಮುಸುಕು').

ಇಲ್ಲಿ ಸಂಭಾಷಣೆಯ ನಾಟಕೀಯತೆಯಲ್ಲಿ ಮಹಿಳೆಯರ ಅಸಹಾಯಕತೆ ಮೂಡಿಬಂದಿದೆ. ಇಲ್ಲಿ ವಿಷಾದದ ಜೊತೆಗೆ ವ್ಯಂಗ್ಯವೂ ಇದೆ. ಇಲ್ಲಿಯೂ ಸಹ ಅವರ ಮಾತುಗಳು ಅರ್ಧವಾಕ್ಯಗಳಲ್ಲಿವೆ. ಮುಗ್ಧ ಮೈಮುನಾಳ ಮನಸ್ಥಿತಿಯನ್ನು 'ಸತ್ತನಂತರದ ಬದುಕಲ್ವಾ ಶಾಶ್ವತವಾದದ್ದು?' ಎಂಬ ವ್ಯಂಗ್ಯದ ಮಾತಿನ ಮೂಲಕ ಕತೆ ನಿರೂಪಿಸುತ್ತಿದೆ. ಇಹದ ಬದುಕಿನಲ್ಲಿ ಮರಣಾನಂತರದ ಬದುಕಿಗೆ ಬೇಕಾದ್ದನ್ನು ಸಂಪಾದಿಸಬೇಕು ಎಂದರೆ, ಇಹದ ಬದುಕನ್ನು ಬಲಿಗೊಡಬೇಕು ಎಂಬ ಧ್ವನಿಯಲ್ಲಿ ವ್ಯಂಗವೂ ಅಡಗಿದೆ. 'ಅಯ್ಯೋ...' ಎಂಬ ಉದ್ಗಾರವಾಚಕದಲ್ಲಿ ಮಹಿಳೆಯರ ತೀವ್ರ ದುಃಖ ಅಡಗಿದೆ. ಇಲ್ಲಿ ನಾಟಕೀಯತೆಯ ಜೊತೆಗೆ ವಿಷಾದ ತುಂಬಿದ ವ್ಯಂಗ್ಯ ಮತ್ತು ವಿಡಂಬನೆಯನ್ನು ಕತೆ ಸನ್ನಿವೇಶದ ದುರಂತ ಚಿತ್ರಣದಲ್ಲಿ ಬಳಸಿಕೊಂಡಿದೆ.

ಆ. ಜುಲೇಖ ಉರೂಸಿಗೆ ಹೋಗಲೆಂದು ಉಟ್ಟ ಒಳ್ಳೆಯ ಸೀರೆಯನ್ನು ಬಿಚ್ಚುತ್ತಿರುವಾಗ ನೊಂದುಕೊಂಡ ಅತ್ತೆ "ಇವನು ಎಲ್ಲಾ ರೀತಿಯಲ್ಲೂ ಅವನಪ್ಪನ ಪಡಿಯಚ್ಚು..." ಎಂದು ನಿಟ್ಟುಸಿರು ಬಿಟ್ಟಿದ್ದಳು. ತನ್ನ ಹಿಂದಿನ ಬದುಕಿನ ಬಗ್ಗೆ ಮಾತಾಡುತ್ತಾ 'ಜನ್ನತ್ ಮಹಲಿನೊಳಗೆ ಹೆಂಗಸರು ನಕ್ಕಿದ್ದೇ ಕಮ್ಮಿ ಅಳುತ್ತಿದ್ದದ್ದೇ ಹೆಚ್ಚು' ಎನ್ನುತ್ತಿದ್ದರು. "ಈ ಮನೆಯ ವಿಶೇಷವೆಂದರೆ, ಮದುವೆಯಾಗುವಾಗ ಕಪ್ಪು ಮೈ ಬಣ್ಣದ ಹುಡುಗಿಯರು ಇಲ್ಲಿಗೆ ಬಂದು ಬಿಳಿ ಚರ್ಮದವರಾಗುತ್ತಾರೆ. ಕಡ್ಡಿಯ ಹಾಗಿದ್ದವರು ಬೊಜ್ಜು ಬೆಳೆಸಿಕೊಳ್ಳುತ್ತಾರೆ" ಎಂದು ಜೋಕ್ ಹೇಳಿ ಜುಲೇಖಳನ್ನು ನಗಿಸುತ್ತಾ ತಾವು ವಿಷಾದ ಪಡುತ್ತಿದ್ದರು.

ಕಟ್ಪಾಡಿ ಕತೆಗಳ ವಿಶಿಷ್ಟತೆಯೆಂದರೆ, ಸೂಕ್ಷ್ಮ ವಿವರಗಳು ನಾಟಕೀಯತೆ, ವಿಷಾದ, ವ್ಯಂಗ್ಯ ಮತ್ತು ವಿಡಂಬನೆಯನ್ನು ಒಟ್ಟೊಟ್ಟಿಗೆ ಕತೆಯಲ್ಲಿ ತರುವುದು. 'ಅವನಪ್ಪನ ಪಡಿಯಚ್ಚು' ಎಂದು ತಾಯಿ ನಿಟ್ಟುಸಿರು ಬಿಡುವಲ್ಲಿ, ತನ್ನ ಅತ್ತೆಯಾಗಿದ್ದವಳ ಅವಸ್ಥೆಯು ಸಹ ಇದೇ ಆಗಿತ್ತೆಂಬ ಭಾವ ಅಭಿವ್ಯಕ್ತಗೊಂಡಿದೆ. ಈ ಮನೆಯಲ್ಲಿ ಕಪ್ಪು ಬಣ್ಣದವರು ಬಿಳಿ ಬಣ್ಣದವರಾಗುತ್ತಾರೆ ಹಾಗೂ ಕಡ್ಡಿಯ ಹಾಗಿದ್ದವರು ಬೊಜ್ಜು ಬೆಳೆಸಿಕೊಳ್ಳುತ್ತಾರೆ ಎಂದು ಹೇಳುವಲ್ಲಿ, ಮಹಿಳೆಯನ್ನು ಬಂಧನದಲ್ಲಿಡುವ ಕೌಟುಂಬಿಕ ವ್ಯವಸ್ಥೆಯ ಬಗ್ಗೆ ವ್ಯಂಗ್ಯ ಅಡಗಿದೆ. ಆ ಬಗ್ಗೆ ವಿಡಂಬನೆ ಮತ್ತು ವಿಷಾದವು ಕೂಡ ಅಡಗಿದೆ.

ಟಿಪ್ಪಣಿಗಳು

೧. ಮುನಿಶಾಮಪ್ಪ ಎ., **ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ**, ಪು.೪೩೬

೨. ಅದೇ, ಪು.೪೩೮

೩. **ಬೊಳುವಾರ ಮಹಮ್ಮದ್ ಕುಂಞ ಆಯ್ದ ಕತೆಗಳು**, ಪು.೧೨೯

೩. ಮುನಿಶಾಮಪ್ಪ ಎ., **ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ**, ಪು.೪೩೪

೫. ಸಾರಾ ಅಬೂಬಕರ್, **ಲೇಖನಗಳ ಗುಚ್ಛ**, ಪು.೭೧

೬. ಮುನಿಶಾಮಪ್ಪ ಎ., **ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ**, ಪು.೧೫೧

೭. ಆರ್ಕೆ ಮಣಿಪಾಲ, **ವಿಮರ್ಶೆಯ ಸವಾಲು**, ಪು.೨೫

ಅಧ್ಯಾಯ ಆರು

ಕಟ್ಪಾಡಿ ಅವರ ಕತೆಗಳಲ್ಲಿ
ಪ್ರತಿಭಟನಾತ್ಮಕ ಪಾತ್ರಗಳ ಸ್ವರೂಪ

ಅಧ್ಯಾಯ ಆರು

ಪ್ರತಿಭಟನಾತ್ಮಕ ಪಾತ್ರಗಳ ಸ್ವರೂಪ

೬.೧. ಪ್ರತಿಭಟನೆಯ ತಾತ್ವಿಕ ಪರಿಕಲ್ಪನೆ

ಪ್ರತಿಭಟನೆ ಎಂಬುದರಲ್ಲಿ 'ಪ್ರತಿ' ಎಂಬ ಶಬ್ದ ಇದೆ. ಪ್ರತಿ ಎಂಬ ಶಬ್ದವು ಎದುರು, ಎದುರಾಳಿ, ಬದಲಿ ಎಂಬರ್ಥವನ್ನು ಒಳಗೊಂಡಿದೆ. ಪ್ರತಿಭಟನೆಯಲ್ಲಿ ಕ್ರಿಯೆ ಮತ್ತು ಪ್ರತಿಕ್ರಿಯೆ ಎಂಬ ಆಯಾಮಗಳಿರುತ್ತವೆ. ಪ್ರತಿಭಟನೆಗೆ ಬಂಡಾಯ, ಕ್ರಾಂತಿ, ಮುಂತಾದ ಶಬ್ದಗಳಿವೆ. ಆದರೆ 'ಪ್ರತಿಭಟನೆ' ಎಂಬುದು ಬಂಡಾಯ ಮತ್ತು ಕ್ರಾಂತಿಗಳಷ್ಟು ವ್ಯಾಪಕವಾದ ಅರ್ಥವನ್ನು ಹೊಂದಿಲ್ಲ. ಅದು ತನ್ನ ಅಸಮ್ಮತಿಯನ್ನು ತೋರಿಸುವ ಕ್ರಿಯೆ ಮಾತ್ರ. ತಮ್ಮ ಬೇಸರ ಮತ್ತು ಸಿಟ್ಟನ್ನು ವ್ಯಕ್ತಪಡಿಸುವ ಒಂದು ವಿಧಾನ ಅಸಮ್ಮತಿ. ಇದು ಪ್ರಾಥಮಿಕ ಹಂತದಲ್ಲಿರುತ್ತದೆ. ಈ ಸಾಮಾನ್ಯ ಕ್ರಿಯೆ. ಉದಾಹರಣೆಗೆ ಒಂದು ಮಗು ಊಟ ಮಾಡದೆ ಹಟಮಾಡಿದಾಗ ತಾಯಿ ತೋರಿಸುವ ಸಿಟ್ಟು, ಬೇಸರ ಗಂಡ ಬೇಗನೆ ಮನೆಗೆ ಬರಲಿಲ್ಲ ಎಂದಾಗ ಹೆಂಡತಿ ತೋರಿಸುವ ಸಿಟ್ಟು, ತರಗತಿಯಲ್ಲಿ ಹೇಳಿದ್ದನ್ನು ವಿದ್ಯಾರ್ಥಿಗಳು ಓದಿಕೊಂಡು ಬರದೇ ಇದ್ದಾಗ ಅಧ್ಯಾಪಕರು ತೋರಿಸುವ ಬೇಸರ, ಸಿಟ್ಟು. ಇವೆಲ್ಲವಕ್ಕೂ ಸಹ ಒಂದು ಪ್ರತಿಭಟನೆಯ ನೆಲೆಯಿದೆ. ಆದರೆ ಇದು ಸೀಮಿತ ನೆಲೆಯ ಪ್ರತಿಕ್ರಿಯೆ. ಪ್ರತಿಭಟನೆ ಎಂಬುದು ಇಷ್ಟು ಸರಳವಾದದ್ದುಲ್ಲ. ಸಮಾಜವನ್ನು, ದೇಶವನ್ನು ಬದಲಾಯಿಸೋ ವಿಶಾಲ ಆಯಾಮವು ಅದಕ್ಕಿದೆ. ಭಾರತೀಯ ಬ್ರಿಟೀಷರ ವಿರುದ್ಧ ನೀವು ನಮ್ಮನ್ನು ಆಳಬಾರದು, ನಮ್ಮ ದೇಶವನ್ನು ಲೂಟಿ ಮಾಡಲಿಕ್ಕೆ ನೀವು ಬಂದಿರುವುದು, ನಮ್ಮನ್ನು ಪರಕೀಯರನ್ನಾಗಿ ಮಾಡಿದ್ದೀರಿ ಎಂದು ಹೇಳುವಲ್ಲಿಯೂ ಪ್ರತಿಭಟನೆ ಇತ್ತು. ಆದರೆ ಅದು ರಾಜಕೀಯ, ಸಾಮಾಜಿಕ ಬದಲಾವಣೆಗೆ ಬೇಕಾದ ಕ್ರಿಯೆಯನ್ನು ವ್ಯಕ್ತಪಡಿಸುವ ವಿಶಾಲ ನೆಲೆಯದಾಗಿತ್ತು. ದಲಿತರು ನಮಗೆ ನಿಮ್ಮ ಕೆರೆಯಲ್ಲಿ ನೀರು ಕುಡಿಯಲು ಬಿಡುವುದಿಲ್ಲ. ದೇವಸ್ಥಾನದ ಒಳಗೆ ಪ್ರವೇಶ ನಿಷೇಧಿಸಿದ್ದೀರಿ ಎಂದು ಹೇಳುವಲ್ಲಿಯೂ ಅಸಮ್ಮತಿ, ಸಿಟ್ಟುಗಳಿವೆ. ಆದರೆ ಇಲ್ಲಿ ಸಮಾಜದ ಮನೋಭಾವ ಬದಲಾಗಬೇಕು ಎಂಬ ವಿಶಾಲ ನೆಲೆಯ ಪ್ರತಿಭಟನೆ

ಕಂಡುಬರುತ್ತದೆ. ಸೀಮಿತ ನೆಲೆಯ ಪ್ರತಿಭಟನೆಗೆ ಮನಸ್ಸನ್ನು ಬದಲಾಯಿಸುವ, ವರ್ತನೆಯನ್ನು ಬದಲಾಯಿಸುವ ಕ್ರಿಯೆ ಇರುತ್ತದೆ. ಆದರೆ ವಿಶಾಲ ನೆಲೆಯ ಪ್ರತಿಭಟನೆಗೆ ದೇಶವನ್ನು ಬದಲಾಯಿಸುವ, ಸಮಾಜದ ಆಲೋಚನ ಕ್ರಮವನ್ನು ಬದಲಾಯಿಸುವ ಉದ್ದೇಶ ಇರುತ್ತದೆ. ಮಹಿಳೆಯರು ಪ್ರತಿಭಟನೆ ಮಾಡುವಾಗ ಅವರ ಉದ್ದೇಶವು, ಇಡೀ ಸಮಾಜದ ಪುರುಷ ಆಲೋಚನ ಕ್ರಮವನ್ನು ಬದಲಾಯಿಸುವ ಒಂದು ವಿಶಾಲ ನೆಲೆಯ ಆಯಾಮದಲ್ಲಿರುತ್ತದೆ. ಸವರ್ಣಿಯರ ದೌರ್ಜನ್ಯಗಳ ವಿರುದ್ಧ ಹೋರಾಡುವಾಗ ದಲಿತರ ಪ್ರತಿಭಟನೆಗೆ ವಿಶಾಲ ಆಯಾಮ ಇರುತ್ತದೆ. ಕಪ್ಪು ವರ್ಣೀಯರನ್ನು ಬಿಳಿಯ ಜನಾಂಗದವರು ವರ್ಣಬೇಧದ ಹೆಸರಲ್ಲಿ ದೌರ್ಜನ್ಯ ಮಾಡುತ್ತಿದ್ದಾಗ ನೆಲ್ಸನ್ ಮಂಡೆಲಾ ಪ್ರತಿಭಟಿಸುತ್ತಿದ್ದರು. ಈ ಪ್ರತಿಭಟನೆಗೂ ವಿಶಾಲ ನೆಲೆಯ ಆಯಾಮ ಇತ್ತು. ಮಲಾಲ ಪ್ರಕರಣದಲ್ಲಿ ಮುಸ್ಲಿಂ ಮೂಲಭೂತವಾದದ ವಿರುದ್ಧ ಮುಸಲ್ಮಾನರೇ ಪ್ರತಿಭಟನೆ ಮಾಡುವಾಗಲೂ ಇಂತಹದೊಂದು ವಿಶಾಲ ಆಯಾಮವಿತ್ತು. ಕೇವಲ ಅಸಮ್ಮತಿ, ಬೇಸರ, ಸಿಟ್ಟನ್ನು ವ್ಯಕ್ತಮಾಡುವ ಆಯಾಮದ ಪ್ರತಿಭಟನೆಗೂ ಒಟ್ಟು ಸಮಾಜ ವ್ಯವಸ್ಥೆಯನ್ನು ಬದಲಾಯಿಸುವ ಪ್ರತಿಭಟನೆಗೂ ಇರುವ ತಾತ್ವಿಕ ವ್ಯತ್ಯಾಸವಿದು. ಇಲ್ಲಿ ಪ್ರತಿಭಟನೆಯಲ್ಲಿ ಒಬ್ಬ ವ್ಯಕ್ತಿ ನಾಯಕತ್ವ ವಹಿಸಿದ್ದರೂ ಅದು ವ್ಯಕ್ತಿಯ ಮಟ್ಟದಲ್ಲಿ ನಡೆಯುತ್ತಿರುವುದಿಲ್ಲ. ಒಂದು ಸಮುದಾಯದ ಮಟ್ಟದಲ್ಲಿ ನಡೆಯುತ್ತಿರುತ್ತದೆ. ಇಲ್ಲಿ ಪ್ರತಿಭಟನೆಯ ಉದ್ದೇಶ ಒಂದು ಹೊಸ ಸಮಾಜವನ್ನು ನಿರ್ಮಾಣ ಮಾಡುವುದಾಗಿರುತ್ತದೆ.

ಸಾಮಾನ್ಯವಾಗಿ ಪ್ರತಿಭಟನೆಯಲ್ಲಿ ಎರಡು ಆಯಾಮಗಳಿರುತ್ತವೆ. ೧. ಕೆಡುವುವ ಆಯಾಮ. ೨. ಕಟ್ಟುವ ಆಯಾಮ. ಅಸಮಾನತೆ, ದೌರ್ಜನ್ಯಕ್ಕೆ, ದಮನಕ್ಕೆ, ನೋವಿಗೆ, ಕಾರಣವಾಗುವ ಎಲ್ಲ ಬಗೆಯ ಸಾಮಾಜಿಕ ರಚನಾಕ್ರಮಗಳನ್ನು ಆಲೋಚನ ಕ್ರಿಯೆಗಳನ್ನು ಭಗ್ನ ಮಾಡುವುದು ಮುರಿಯುವ ಆಯಾಮ. ಅವುಗಳ ಜಾಗತದಲ್ಲಿ ಅತ್ಯುತ್ತಮ ನಾಗರಿಕ ಸಮಾಜವನ್ನು ಕಟ್ಟುವುದು ಕಟ್ಟುವ ಆಯಾಮ. ಎಲ್ಲಾ ದೇಶದ ಸಮಾಜಗಳಲ್ಲಿ ಕೂಡ ಪ್ರತಿಭಟನೆ ಎಂಬುದು ಅಲ್ಲಿನ ದಮನಿತರಿಂದ ಹುಟ್ಟುತ್ತದೆ. ಪ್ರತಿಭಟನೆಯಲ್ಲಿ ನೋವಿಗೆ ಕಾರಣ ಆದವರು ಮಾತ್ರ ಭಾಗವಹಿಸುತ್ತಿರುವುದಿಲ್ಲ. ಆ ನೋವಿಗೆ ನೇರವಾಗಿ ಕಾರಣ ಆಗದಿದ್ದರೂ ಅದು ತಪ್ಪು ಎಂದು ಭಾವಿಸುವ ಸಂವೇದನೆ ಉಳ್ಳವ ನಾಗರಿಕರ ಭಾಗವಹಿಸುವಿಕೆಯಿಂದ ಕೂಡ ಇದು ಯಶಸ್ವಿಯಾಗುತ್ತದೆ. ಉದಾಹರಣೆಗೆ, ಮಹಿಳೆಯರ ಸ್ವಾತಂತ್ರ್ಯಕ್ಕಾಗಿ ಮಹಿಳೆಯರು ಪ್ರತಿಭಟನೆ ಮಾಡೋದು, ದಲಿತರ್ು ಅಸ್ಪೃಶ್ಯತೆ ವಿರುದ್ಧ ತಾವು ಪ್ರತಿಭಟನೆ ಮಾಡೋದು ಸಾಮಾನ್ಯ. ಆದರೆ ಬಸವಣ್ಣ ಮೇಲ್ಜಾತಿಯಲ್ಲಿ ಹುಟ್ಟಿದ್ದರೂ ದಲಿತರ ಅಸ್ಪೃಶ್ಯತೆಗೆ ಮಿಡಿಯುತ್ತಾರೆ. ಒಬ್ಬ ಬಿಳಿಯ ವ್ಯಕ್ತಿ ಕರಿಯರನ್ನು ದಮನ ಮಾಡುವ ವಿರುದ್ಧ ಹೋರಾಡುತ್ತಿರುತ್ತಾನೆ. ಮಹಿಳೆಯರ ಪರ ಪುರುಷರು ಮಿಡಿಯುತ್ತಾರೆ. ಇದು ಪ್ರತಿಭಟನೆಗೆ ಒಂದು ಸಾರ್ವಜನಿಕ ಸ್ವರೂಪ ತಂದುಕೊಡುವ ಆಯಾಮವಾಗಿದೆ.

ಪ್ರತಿಭಟನೆ ವಿವಿಧ ರೂಪದಲ್ಲಿ ಕಂಡುಬರುತ್ತದೆ. ಮೌನದ ರೂಪದಲ್ಲಿ. ಆಕ್ರೋಶ ರೂಪದಲ್ಲಿ, ಆತ್ಮಹತ್ಯೆ ರೂಪದಲ್ಲಿ ಅದು ಇರಬಲ್ಲದು. ಈ ಬಗೆಯ ನಾನಾ ಪ್ರತಿಭಟನೆ ರೂಪಗಳಿಗೆ ಕಾರಣ, ಪ್ರತಿಭಟನೆ ಮಾಡುವ ವ್ಯಕ್ತಿಗಳ ವೈಯಕ್ತಿಕ ಧೋರಣೆ ಅಲ್ಲ. ಒಟ್ಟು ಸನ್ನಿವೇಶವೇ ಆ ಪ್ರತಿಭಟನೆ ಮಾಡುವ ವಿಧಾನವನ್ನು ಅನಿವಾರ್ಯ ಮಾಡಿರುತ್ತದೆ. ಒಬ್ಬ ಮಹಿಳೆ ಗಂಡನ ವಿರುದ್ಧ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ ಎಂದರೆ ಅವಳು ದುರ್ಬಲಳು ಎಂದಲ್ಲ. ಅವುಗಳಿಗೆ ಸಹಾಯ ಮಾಡಲು ಒಂದು ಚಳುವಳಿ ಸಿಕ್ಕಿಲ್ಲ. ಅವಳಿಗೊಂದು ಬದುಕಲು ಆರ್ಥಿಕ ಭದ್ರತೆ ಇದ್ದರೆ ಹೀಗೆ ಮಾಡುತ್ತಿರಲಿಲ್ಲ ಎಂಬ ಸನ್ನಿವೇಶ ಇದಕ್ಕೆ ಕಾರಣ. ಹೀಗಾಗಿ ಸನ್ನಿವೇಶವೇ ಪ್ರತಿಭಟನೆ ಸ್ವರೂಪವನ್ನು ನಿರ್ಧರಿಸುತ್ತದೆ. ಶೋಷಣೆಗೆ ಕಾರಣ ಆದವರೆ ಪ್ರತಿಭಟನೆಯ ವಿಧಾನವನ್ನು ಹುಟ್ಟಿಸುತ್ತಾರೆ. ಈ ಪ್ರತಿಭಟನೆ ಮಾರ್ಗ ಅವರೊಳಗೆ ಹುಟ್ಟಿದ್ದು ಹೌದು; ಜೊತೆಗೆ ದಮನ ಮಾಡಿದ ಅವರ ಎದುರಾಳಿಗಳು ಸಹ ಹುಟ್ಟಿಸಿದ್ದು ಹೌದು. ಇವೆರಡೂ ಅಂಶಗಳು ಸಹ ಪ್ರತಿಭಟನೆಗೆ ಕಾರಣವಾಗುತ್ತವೆ. ಪ್ರತಿಭಟನೆಯ ವಿಧಾನವನ್ನು ರೂಪಿಸುವಲ್ಲಿ ಚಿಂತನೆ ಮತ್ತು ನಾಯಕತ್ವವು ನೆರವಾಗುತ್ತದೆ. ಪ್ರತಿಭಟನೆಯ ಮಾರ್ಗಗಳನ್ನು ರೂಪಿಸುವುದಕ್ಕೆ ಬೇರೆ ಬೇರೆ ತತ್ವಸಿದ್ಧಾಂತಗಳು ಕಾರಣವಾಗುತ್ತವೆ. ಪ್ರತಿಭಟನೆಯ ಮಾರ್ಗಗಳನ್ನು ರೂಪಿಸಲು ಬೇರೆ ಬೇರೆ ಚಳುವಳಿಗಾರರು ಮಾಡಿದ ಚಾರಿತ್ರಿಕ ಪ್ರಯೋಗಗಳು ನೆರವಾಗುತ್ತವೆ. ಇಂತಹ ಪ್ರತಿಭಟನೆಯ ವಿಭಿನ್ನ ವಿಧಾನಗಳನ್ನು ಅದರ ವಿಭಿನ್ನ ಪರಿಣಾಮಗಳನ್ನು ಸಾಹಿತ್ಯ ಕೃತಿಗಳು ಮೊದಲಿನಿಂದಲೂ ನಿರೂಪಿಸುತ್ತಾ ಬಂದಿವೆ.

೬.೨. ಪ್ರತಿಭಟನೆಯ ಮಾದರಿಗಳು

ಮಹಿಳೆಯರ ಸಾಮಾಜಿಕ, ಧಾರ್ಮಿಕ ಸ್ಥಾನಮಾನಗಳನ್ನು, ಕಟ್ಟುಕಟ್ಟಳೆಗಳನ್ನು ರೂಪಿಸುವಲ್ಲಿ ಪುರುಷರೇ ಮುಂಚೂಣಿಯಲ್ಲಿದ್ದಾರೆ. ಆದರೆ ಅವರ ದಬ್ಬಾಳಿಕೆಯನ್ನು ಸಹಿಸದ ಮಹಿಳೆಯರು ಸಹ ಸಮಾಜದಲ್ಲಿದ್ದಾರೆ. ಅವರು ತಮಗೆ ಆಗುತ್ತಿರುವ ನೋವು, ಅನ್ಯಾಯ, ಶೋಷಣೆಯ ವಿರುದ್ಧ ಕೆಲವೊಮ್ಮೆ ಸೌಮ್ಯವಾಗಿ ಪ್ರತಿಭಟಿಸಿದರೆ, ಕೆಲವೊಮ್ಮೆ ತೀವ್ರವಾಗಿ ಪ್ರತಿಭಟಿಸುವರು. ಈ ಎರಡೂ ಮಾದರಿಗಳನ್ನು ಕಟ್ಪಾಡಿ ಅವರ ಕತೆಗಳಲ್ಲಿ ಗುರುತಿಸಬಹುದಾಗಿದೆ. ಪ್ರತಿಭಟನೆಯ ಮಾದರಿಗಳಲ್ಲಿ ಎರಡು ಬಗೆಗಳಿವೆ. ಒಂದು: ಮಾತು ಮತ್ತು ಕ್ರಿಯಾರೂಪಕ್ಕೆ ಸಂಬಂಧಿಸಿದ್ದು. ಎರಡು: ಪರ್ಯಾಯ ರೂಪದ್ದು.

೬.೨.೧. ಮಾತಿನ ರೂಪದ ಪ್ರತಿಭಟನೆ: ಹೆಣ್ಣು ಸಹನಶೀಲೆ. ಆದರೆ ಅವಳು ಅದನ್ನು ಕಳೆದುಕೊಳ್ಳುವ ಹಂತಕ್ಕೆ ಹೋದರೆ ಪ್ರತಿಭಟನೆ ಆಗುತ್ತದೆ. ಆಕೆ ಶೋಷಣೆಗೆ ಕಾರಣವಾದ ವ್ಯವಸ್ಥೆಯ ವಿರುದ್ಧ ಸಿಡಿದೇಳಬಲ್ಲಳು. ತನ್ನ ಸಿಟ್ಟು, ಆಕ್ರೋಶ, ಮನದಾಳದ ನೋವನ್ನು ತಾಳಲಾರದೇ ಬಂಡಾಯದ ಧ್ವನಿ ಎತ್ತಬಲ್ಲಳು.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಬಹುಪತ್ನಿತ್ವಕ್ಕೆ ಅವಕಾಶ ಇದೆ. ಆದರೆ ಇದಕ್ಕೆ ಬಲಿಯಾಗುವವರು ಅಸಹಾಯಕರಾದ ಬಡ ಮಹಿಳೆಯರು. ಶ್ರೀಮಂತ ಮುಸ್ಲಿಮ್ ಪುರುಷರು ತಮಗೆ ಮದುವೆ ವಯಸ್ಸು ಮೀರಿದ್ದರೂ ಹದಿಹರೆಯದ ಸ್ತ್ರೀಯನ್ನು ಮದುವೆ ಆಗುವ ಸನ್ನಿವೇಶಗಳು ನಿಜ ಸಮಾಜದಲ್ಲೂ ಇವೆ. ಅಂತೆಯೇ ಮುಸ್ಲಿಂ ಬರೆಹಗಾರರು ಚಿತ್ರಿಸುವ ಸಮಾಜದಲ್ಲೂ ಇವೆ. ಇಲ್ಲಿ ಹೆಂಡತಿ ಸತ್ತರೆ ಇನ್ನೊಂದು ಮದುವೆ ಆಗುವ ಕೆಲವು ಪುರುಷರು ಕಂಡುಬಂದರೆ, ಹೆಂಡತಿ ಬದುಕಿದ್ದು ಮತ್ತೊಂದು ಮದುವೆ ಆಗಲು ಬಯಸುವ ಪುರುಷರು ಸಹ ಕಂಡುಬರುವರು. ಹೆಣ್ಣಿನ ಮನಸ್ಥಿತಿಗೆ ಬೆಲೆ ಕೊಡದ ಸಮಾಜ ಆಕೆಯನ್ನು ಕೇವಲ ಭೋಗದ ವಸ್ತುವನ್ನಾಗಿ ನೋಡುವ ಮತ್ತು ದುಡಿಯುವ ಯಂತ್ರವನ್ನಾಗಿ ನೋಡುವ ಸಮಾಜವನ್ನು ಕಟ್ಪಾಡಿ ಅವರ ಕತೆಗಳಲ್ಲಿ ನೋಡಬಹುದು. 'ನಿಕಾಹ್' ಕತೆಯಲ್ಲಿ ಬರುವ ಹನೀಫ್ ಸಾಹೇಬರಿಗೆ ಇಬ್ಬರೂ ಹೆಣ್ಣು ಮಕ್ಕಳು ಇರುತ್ತಾರೆ. ವರದಕ್ಷಿಣೆ ಕೊಟ್ಟು ಮದುವೆ ಮಾಡಲಾಗದ ಅಸಹಾಯಕತೆಯಲ್ಲಿ ಅವರು ಸಿಲುಕಿರುತ್ತಾರೆ. ಹಬೀಬುಲ್ಲಾ ಇಬ್ಬರೂ ಹೆಂಡತಿಯನ್ನು ಕಳೆದುಕೊಂಡಿರುತ್ತಾನೆ. ಅವರಿಬ್ಬರಿಗೂ ಮಕ್ಕಳಾಗದ ಕಾರಣ ಮತ್ತೆ ಮರುಮದುವೆಯಾಗಲು ಹನೀಫ ಸಾಹೇಬರ ಮಗಳನ್ನು ಕೇಳುತ್ತಾನೆ. ಹನೀಫ ಸಾಹೇಬರು ಒಂದೆಡೆ ಮಗಳಿಗೆ ವರ ಸಿಕ್ಕಿತು ಎಂದು ಸಂತೋಷವಾದರೆ ಮತ್ತೊಂದೆಡೆ ವಯಸ್ಸಿನ ಅಂತರ ನೋಡಿ ಅಳುಕು. ಜೊತೆಗೆ ನೂರುನ್ನಿಸಾಳಿಗೂ ಮದುವೆ ವಯಸ್ಸು ಮೀರುವುದು ಎಂಬ ಕಾರಣಕ್ಕೆ ಆತ ಮದುವೆಗೆ ಒಪ್ಪುತ್ತಾನೆ.

ಆದರೆ ಶರಣಾಗತ ಮನೋಭಾವದ ನೂರುನ್ನೀಸಾ ಪ್ರತಿಭಟಿಸದೆ ಒಪ್ಪುತ್ತಾಳೆ. ಅವಳು ಸತ್ತಾಗ ಅವಳ ತಂಗಿ ಖೈರುನ್ನಿಸಾ ಸುಲಭಕ್ಕೆ ಮರುಮದುವೆಗೆ ಒಪ್ಪುವುದಿಲ್ಲ. ಹಬೀಬುಲ್ಲಾ "ಅವಳು ಒಪ್ಪಲಿಕ್ಕಿಲ್ಲ ಮಾವ. ಬಲು ಚೂಟಿ ಹೆಣ್ಣು..." ಎಂದು ಅವಳ ಬಗ್ಗೆ ಶಂಕೆ ವ್ಯಕ್ತಮಾಡುತ್ತಾನೆ. "ಅದೆಲ್ಲಾ ನನಗೆ ಬಿಡಿ... ಕೋಳಿಯ ಅನುಮತಿ ಕೇಳಿ ಎಲ್ಲಿಯಾದರೂ ಮಸಾಲೆ ಅರೆಯುತ್ತಾರೆಯೇನು..." ಎಂದು ಹೇಳುವ ಹನೀಫ ಸಾಹೇಬರು ಪುರುಷವಾದಿ ಸಮಾಜದ ಪ್ರತಿನಿಧಿಯಾಗಿ ಕಂಡುಬರುತ್ತಾರೆ. ಖೈರುನ್ನಿಸಾಗೆ ಮದುವೆಯಾಗಲು ಕೇಳಿದಾಗ ಐದು ನಿಮಿಷಗಳವರೆಗೆ ನಿಶ್ಶಬ್ದವಾಗಿದ್ದ ವಾತಾವರಣವನ್ನು ಭೇದಿಸಿ ನೂರೂನ್ನಿಸಾ ಉತ್ತರಿಸುತ್ತಾಳೆ. "ಇನ್ ಷಾ ಅಲ್ಲಾಹ್... ನನ್ನ ಒಪ್ಪಿಗೆ ಇದೆ..." ಎನ್ನುತ್ತಾಳೆ. ಅವಳ ಕೆಲವು ಕಾಲದ ಮೌನವು ಸಿಡಿದು ಎತ್ತರದ ದನಿಯ ರೂಪದಲ್ಲಿ ಪ್ರತಿಭಟನೆಯಾಗುತ್ತದೆ; ಖಾಜಿ ಸಾಹೇಬರನ್ನು ದಿಟ್ಟಿಸಿ ನೋಡುವಲ್ಲಿ ಪ್ರತಿಭಟನೆಯಾಗುತ್ತದೆ. ಆಕೆ ಅಕ್ಕನಂತೆ ವ್ಯವಸ್ಥೆಗೆ ಶರಣಾಗಿರುವುದು ನಿಜವಾದರೂ ಆ ಶರಣಾಗತಿಯಲ್ಲಿ ಒಂದು ಬಗೆಯ ಪ್ರತಿಭಟನೆಯಿದೆ. ಅಸಮ್ಮತಿಯಿದೆ. ಇದನ್ನು ಕತೆ ವಿಶಿಷ್ಟ ರೀತಿಯಲ್ಲಿ ಚಿತ್ರಿಸುತ್ತದೆ. ತನ್ನ ಪ್ರತಿರೋಧ ಫಲಕಾರಿಯಾಗುವುದಿಲ್ಲ ಎಂಬ ಅರಿವಿನ ಒಳಗೇ

ಹುಟ್ಟುವ ಪ್ರತಿಭಟನೆ ಮಾದರಿಯಿದು. ಇಂತಹುದೇ ಪಾತ್ರ ಚಿತ್ರಣವನ್ನು ಸಾರಾ ಅಬೂಬಕರ್ ಅವರ 'ಒಂದು ಬದುಕಿನ ಕೆಲವು ಪುಟಗಳು' ಕತೆಯಲ್ಲೂ ನೋಡಬಹುದು. ಅಲ್ಲಿ ಬರುವ ಖದೀಜಾ, ತಂದೆಯಿಲ್ಲದ ಕಾರಣ, ಭಾವನ ಆಶ್ರಯದಲ್ಲಿ ಬದುಕುತ್ತಿರುತ್ತಾಳೆ. ಆಕೆಗೆ ತನಗೆ ಒಬ್ಬ ಮುದುಕನಿಗೆ ಕೊಟ್ಟು ಮುದವೆ ಮಾಡುವ ವಿಷಯ ತಿಳಿದು ಬರುತ್ತದೆ. ಆಕೆ ಓಡಿ ಬಂದು ನಿರೂಪಕಿಯೊಡನೆ ತನ್ನ ದುಃಖ ತೋಡಿಕೊಳ್ಳುತ್ತಾಳೆ. "ನನಗೆ ತಂದೆ ಇಲ್ಲವಲ್ಲಾ? ಈಗ ನನ್ನ ಭಾವನೆ ಮನೆ ಯಜಮಾನ. ಅವನು ಮತ್ತು ನನ್ನ ತಾಯಿ ಸೇರಿಕೊಂಡು ನನ್ನನ್ನು ಒಬ್ಬ ಮುದುಕನ ಕೊರಳಿಗೆ ಕಟ್ಟಲು ತೀರ್ಮಾನಿಸಿದ್ದಾರೆ. ನಾಳೆ ರಾತ್ರಿ ಮದುವೆ ಅದಕ್ಕೆ ನಾನೀಗ ಮನೆಯಲ್ಲಿ ತಿಳಿಸದೆ ಓಡಿ ಬಂದಿದ್ದೇನೆ. ನನಗೇನಾದರೂ ದಾರಿ ತೋರಿಸಿ. ಇನ್ನು ನಾನು ಆ ಮನೆಗೆ ಕಾಲಿಡಲಾರೆ" ಎಂದು ಅಳುತ್ತಾ ಹೇಳುತ್ತಾಳೆ.[೧]

ಆದರೆ ಕಟ್ಪಾಡಿ ಅವರ ಕಥಾನಾಯಕಿ ಖೈರುನ್ನಿಸಾ ತನಗೆ ಇಷ್ಟವಿಲ್ಲದಿದ್ದರೂ 'ಆಗಬಹುದು' ಎಂದು ಎತ್ತರದ ದನಿಯಲ್ಲಿ ಪ್ರತಿಭಟನೆಯಷ್ಟನೇ ಮಾಡುತ್ತಾಳೆ. ಸಾರಾ ಅಬೂಬಕರ್ ಅವರ ಕತೆಯ ನಾಯಕಿ ಖದೀಜಾ ಮುದುಕನನ್ನು ಮದುವೆ ಆಗಲಾರದೇ ತನ್ನ ಮನೆಯನ್ನೇ ಬಿಟ್ಟು ಬರುವ ಮೂಲಕ ಪ್ರತಿಭಟನೆ ಮಾಡುತ್ತಾಳೆ. ಆದರೆ ಕೊನೆಗೆ ತಾತ್ಕಾಲಿಕವಾಗಿ ಅಸ್ತಿತ್ವ ಸಿಕ್ಕರೂ ಕೊನೆಗೆ ತನ್ನ ಗಂಡ, ಮಗಳನ್ನು ಹಾಗೂ ತನಗಿದ್ದ ಆಸ್ತಿಯನ್ನು ಕಳೆದುಕೊಂಡು ಅನಾಥಳಾಗುತ್ತಾಳೆ. ಸ್ತ್ರೀಯಾದವಳಿಗೆ ಸಮಾಜದಲ್ಲಿ ಒಂಟಿ ಜೀವನ ಸಾಗಿಸುವುದು ಎಷ್ಟು ಕಷ್ಟಕರ ಎಂಬುದನ್ನು ಕತೆ ಸೂಚಿಸುತ್ತದೆ. ಬಡತನದ ಸ್ತ್ರೀಯರ ಗೋಳಿಗೆ ಅಂತ್ಯವೇ ಇಲ್ಲವೆಂಬಂತೆ ಹಾಗೂ ಅವರಿಗೆ ಸ್ವಾತಂತ್ರ್ಯವೇ ಇಲ್ಲದಿರುವ ಸಮಾಜದ ಪಾತ್ರ ಚಿತ್ರಣವನ್ನು ಕಟ್ಪಾಡಿ ಅವರು ಕತೆಗಳು ಕಾಣಿಸುತ್ತವೆ. ಅವರು ಇಂತಹ ಪಾತ್ರಗಳನ್ನು ತಮ್ಮ 'ಸರಕುಗಳು' ಕಾದಂಬರಿಯಲ್ಲೂ ತಂದಿದ್ದಾರೆ. ಆ ಕಾದಂಬರಿಯಲ್ಲಿ ಬರುವ ಅರಬ್ ವ್ಯಾಪಾರಿಗಳು ವ್ಯಾಪಾರಕ್ಕಾಗಿ ಬಂದ ಶ್ರೀಮಂತ ಮುದುಕರು. ಅವರು ಬಡಮುಸ್ಲಿಮ್ ಮಹಿಳೆಯರನ್ನು ಮದುವೆಯಾಗಿ ನಂತರ ಅವರನ್ನು ಬಿಟ್ಟು ಹೋಗುವವರು. ಕಾದಂಬರಿಯ ಕೊನೆಯ ಹಂತದಲ್ಲಿ ಒಂದು ಅಚಾತುರ್ಯ ಘಟನೆ ಎಲ್ಲರನ್ನು ಬೆಚ್ಚಿಬೀಳಿಸುತ್ತದೆ. ಅಲ್ಲಿ ಬರುವ ಅರಬ್ ವ್ಯಾಪಾರಿಒಬ್ಬನು ನೈರುನ್ನಿಸಾ ತನ್ನ ಮಗಳೆಂದು ಗೊತ್ತಿಲ್ಲದೇ ಮದುವೆಯಾಗಲು ಮುಂದಾದಾಗ ತಾಯಿಯಾದವಳಿಗೆ ಅದು ಗೊತ್ತಾಗುತ್ತದೆ. "ನಫೀಸಾ ಇದ್ದಕ್ಕಿದಂತೆ ಗಟ್ಟಿಯಾಗಿ ನಗತೊಡಗಿದಳು. ಜೋರಾಗಿ ಬಿದ್ದುಬಿದ್ದು ನಕ್ಕಳು. ಜುಲೇಖ ಅವಳನ್ನೇ ನೋಡುತ್ತಿರುವಾಗ ನಫೀಸಾ ನಗುತ್ತಲೇ ಹೇಳಿದಳು: "ಅಮ್ಮ ನಿಂಗೆಲ್ಲೋ ಭ್ರಾಂತಿ... ತಂದೆಯಾದರೇನಂತೆ? ನೀವೆಲ್ಲ ಮದುವೆಯಾದ ಅರಬ್ಬರಲ್ಲಿ ನಿಮ್ಮ ಅಪ್ಪಂದಿರು ಇದ್ದಿರಲಿಲ್ಲ ಅನ್ನೋ ಗ್ಯಾರೆಂಟಿಯೇನು?"[೨] ಎಂದು ಪ್ರಶ್ನಿಸುತ್ತಾಳೆ. ಇಲ್ಲಿ ನೋವು ದುಃಖದ ಜೊತೆಗೆ ತಮ್ಮನ್ನು ಸರಕು ಮಾಡಿರುವ ಸಮಾಜದ ವಿರುದ್ಧ ಪ್ರತಿಭಟನೆಯ ಧ್ವನಿ

ಕಂಡುಬರುತ್ತದೆ. ಚಿಕ್ಕಪ್ರಾಯದ ನಫೀಸಾಳನ್ನು ಹಣದ ಆಸೆಗಾಗಿ ಒಬ್ಬ ಮುದುಕನಿಗೆ ಕೊಡುವ ಮೂಲಕ ಅವಳ ಜೀವನವನ್ನೇ ನಾಶಪಡಿಸಲು ಮುಂದಾದವರಿಗೆ ಕಥಾನಾಯಕಿ ಪ್ರತಿಭಟನೆಯ ಸಣ್ಣದನಿಯ ಮೂಲಕ ಚುರುಕು ಮುಟ್ಟಿಸುತ್ತಾಳೆ. ಕಟ್ಪಾಡಿ ಅವರ ಕತೆಗಳಲ್ಲಿ ಇರುವ ಮಹಿಳಾಪರ ಧೋರಣೆ ಇಲ್ಲಿ ಸ್ಪಷ್ಟವಾಗಿದೆ. ಮಹಿಳೆಯರ ಆಸೆಯನ್ನು ಸಮಾಜದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಕಾರಣಗಳಿಂದ ಕಡೆಗಣಿಸುವುದು ಎಷ್ಟು ಸರಿ ಎಂಬ ಪ್ರಶ್ನೆಯನ್ನು ಕತೆ ಓದುಗರಲ್ಲಿ ಹುಟ್ಟಿಸುತ್ತದೆ.

ಧಾರ್ಮಿಕ ವ್ಯವಸ್ಥೆಯನ್ನು ತನಗಿಷ್ಟ ಬಂದಂತೆ ಬಳಸಿಕೊಳ್ಳುವ ಪುರುಷಪಾತ್ರಗಳು ಕಟ್ಪಾಡಿ ಕತೆಗಳಲ್ಲಿ ಬಹಳ ಇವೆ. ಇಸ್ಲಾಂ ಧರ್ಮದಲ್ಲಿರುವ ಬಹುಪತ್ನಿತ್ವತ್ವದ ಅವಕಾಶವನ್ನು ಪುರುಷರು ಸ್ವಾರ್ಥಕ್ಕೆ ಬಳಸಿಕೊಳ್ಳುವ ಹಲವಾರು ಸನ್ನಿವೇಶಗಳಿವೆ. ಆದರೆ ಅದನ್ನು ಮಹಿಳೆಯರು ಯಾರೂ ಸಮರ್ಥಿಸುವುದಿಲ್ಲ. ಕ್ರೌರ್ಯ ಕತೆಯಲ್ಲಿ ಬರುವ ಅಜ್ಜನು ತನ್ನ ಮೊಮ್ಮಗಳ ಗಂಡ ಎರಡನೇ ಮದುವೆ ಆಗಬೇಕೆಂದು ನಿರ್ಧರಿಸಿದಾಗ, "ಅವನೇನೂ 'ಷರೀಯತ್'ಗೆ ವಿರುದ್ಧವಾದದ್ದೇನೂ ಮಾಡಿಲ್ಲ" ಎಂದು ಹೇಳುತ್ತಾನೆ. ಇದಕ್ಕೆ ಅವನ ಮೊಮ್ಮಗ ವಿರೋಧಿಸುತ್ತಾನೆ. 'ಷರೀಯತ್' ಏನು ಹೇಳ್ತದೇಂತ ನಂಗೂ ಗೊತ್ತು. ಇಷ್ಟ ಬಂದಹಾಗೆಲ್ಲ ಮದುವೆಯಾಗ್ಲಿಕ್ಕೆ ಷರೀಯತ್ ಹೇಳಿಲ್ಲ. ಅದನ್ನು ಹೇಳ್ತ ಇರೋದು ನಿನ್ನಂತವ್ರು" ಎಂದು ಆತ ವಾದಿಸುತ್ತಾನೆ. ಆದರೆ ಅವನ ಪ್ರತಿಭಟನೆ ಗೆಲ್ಲುವುದಿಲ್ಲ. ಹೆಣ್ಣಿನ ನೋವಿಗೆ ಮಿಡಿಯುವ ಪಾತ್ರವಾಗಿ ಈತ ಕಂಡುಬರುತ್ತಾನೆ. ಅವನ ಮಾತಿನಲ್ಲಿ ಸ್ತ್ರೀಪರ ಕಾಳಜಿ ತೀಕ್ಷ್ಣವಾಗಿ ಮೂಡಿಬಂದಿದೆ. ಆದರೆ ಎರಡನೇ ಮದುವೆ ಆಗುವ ಅವನ ಭಾವನು ಅಹಂಕಾರ ತುಂಬಿ ತನ್ನನ್ನು ಸಮರ್ಥಿಸಿಕೊಳ್ಳುತ್ತ "ಹೌದು ನಾನು ಮದುವೆಯಾದದ್ದು ನನ್ನಿಷ್ಟ. ನೀನ್ಯಾವನೋ ನನ್ನನ್ನು ಕೇಳ್ಲಿಕ್ಕೆ? ಎರಡನೇ ಮದುವೆಯಾಗುತ್ತೇನೆ, ಮೂರನೇ ಮದುವೆಯಾಗುತ್ತೇನೆ, ನಾಲ್ಕನೆಯದಾಗುತ್ತೇನೆ ಅಲ್ಲಾಹು ಷರೀಯತ್‌ನಲ್ಲಿ ಒಪ್ಪಿಗೆ ಕೊಟ್ಟಿದ್ದಾನೆ. ಕಾರಣ ಕೊಡ್ಬೇಕಂತ ನಿಯಮವಿಲ್ಲ. ನನಗೆ ಮನಸ್ಸಾಯ್ತು ಆಗ್ತಿದ್ದೇನೆ" ಎನ್ನುತ್ತಾನೆ. ಇಲ್ಲಿ ಮಹಿಳೆಯರು ಮತ್ತು ಅವರ ಪರವಾಗಿ ನಿಲ್ಲುವ ಪುರುಷರು ನೋವುಣ್ಣುವುದಲ್ಲದೆ, ತಮ್ಮ ಪ್ರತಿಭಟನೆಯಿಂದ ಪರಿಸ್ಥಿತಿ ಬದಲಾಯಿಸಲು ಸಮರ್ಥರಾಗುವುದಿಲ್ಲ.

ಹೆಣ್ಣಿನ ಅಭಿಪ್ರಾಯ ಕೇಳದೇ ಪುರುಷನಾದವನು ತನಗಿಷ್ಟ ಬಂದಂತೆ ಮದುವೆ ಆಗುವ, ತನಗಿಷ್ಟ ಬಂದಂತೆ ತಲಾಕ್ ನೀಡುವ, ಷರೀಯತ್‌ನ ಹೆಸರಿನಲ್ಲಿ ತಮ್ಮ ಸ್ವಾರ್ಥ ಸಾಧಿಸುವ ಗಂಡಸರು ಕಟ್ಪಾಡಿ ಅವರ ಕತೆಗಳಲ್ಲಿದ್ದಾರೆ. ಒಂದು ಕತೆಯಲ್ಲಿ ಹುಡುಗಿಯ ಅಣ್ಣ ಭಾವನಿಗೆ "ಹಾಗಿದ್ದರೆ ನನ್ನ ತಂಗಿಯನ್ನು ಬಿಟ್ಟು ಬಿಡು. ತಲಾಕ್ ಕೊಟ್ಟುಬಿಡು" ಎನ್ನುತ್ತಾನೆ. ಅದಕ್ಕೆ ಪ್ರತ್ಯುತ್ತರವಾಗಿ ಭಾವ "ಸಾಧ್ಯವಿಲ್ಲ ನಾನು ಇಬ್ಬರನ್ನು ನೋಡಿಕೊಳ್ಳುತ್ತೇನೆ ನಂಗೆ ಸಾಮರ್ಥ್ಯವಿದೆ"

ಎನ್ನುತ್ತಾನೆ. ಇಲ್ಲಿ ತಂಗಿಯ ಬಗ್ಗೆ ಕಾಳಜಿ ತೋರಿಸುವ ಪುರುಷನೊಬ್ಬ ಇರುವಂತೆ, ತನಗೆ ಎರಡನೇ ಹೆಂಡತಿ ಬೇಕು ಎಂಬ ಸ್ವಾರ್ಥ ಪುರುಷನೂ ಇದ್ದಾನೆ. ಒಬ್ಬ ಸ್ತ್ರೀಯರ ಅಳಲನ್ನು ಅರಿತವನಾಗಿದ್ದರೆ, ಇನ್ನೊಬ್ಬ ಸ್ತ್ರೀಯರ ಗೋಳನ್ನು ಬಯಸುವವನಾಗಿದ್ದಾನೆ. ಅಣ್ಣ ತವರಿಗೆ ಕರೆದರೂ ಬಾರದ ತಂಗಿ 'ಬರೋದಾದ್ರೆ ಗಂಡನ ಜೊತೆ ಬರುವೆ' ಎಂದು ಹೇಳುತ್ತಾಳೆ. ಶಹನಾಜಳ ನಿರ್ಣಯದಲ್ಲಿ ಅವಳ ಪ್ರತಿಭಟನೆಯೂ ಇದೆ. ಅಸ್ತಿತ್ವದ ಪ್ರಶ್ನೆಯೂ ಅಡಗಿದೆ. ಅವನನ್ನು ತಿದ್ದುವೆನೆಂಬ ಭಾವವೂ ಇದೆ. ಅದೊಂದು ಸಹಾಯಕ ರೀತಿಯ ಛಲವಾಗಿ ಅಭಿವ್ಯಕ್ತಗೊಂಡಿದೆ. ಅವಳ ದಿಟ್ಟತನದಲ್ಲಿ ದೃಢನಿರ್ಧಾರವಿದ್ದು ಅದು ಸೌಮ್ಯವಾದ ಮಾತಿನಲ್ಲಿ ಅಭಿವ್ಯಕ್ತವಾಗಿದೆ.

ಈ ಕತೆಯ ರೀತಿಯಲ್ಲಿಯೇ ಬಾನು ಮುಷ್ತಾಕ್‌ರ 'ಒಮ್ಮೆ ಹೆಣ್ಣಾಗು ಪ್ರಭುವೆ' ಎಂಬ ಕತೆಯಲ್ಲಿ, 'ಎರಡನೆಯ ಮದುವೆ ಈಗ ಯಾಕೆ'[೩] ಎಂದು ಕಾಯಿಲೆಯಿಂದ ಆಸ್ಪತ್ರೆ ಸೇರಿದ ಕಥಾನಾಯಕಿ ಗಂಡನಿಗೆ ಕೇಳುತ್ತಾಳೆ. ಆಗ ಗಂಡ "ಇನ್ನು ಕೇಳಬೇಕೇನು?... ನಿನ್ನಿಂದ ನನಗೆ ಯಾವ ಸುಖ ಸಿಕ್ಕಿದೆ... ಮುಟ್ಟಿದಾಗಲೆಲ್ಲ ಹೆಣದಂತೆ ಬಿದ್ದುಕೊಂಡಿರ್ತಿದ್ದೆಯಲ್ಲ ಅದಕ್ಕೆ ಇನ್ನೊಂದು ಮದುವೆಯಾಗ್ತಿರೋದು"[೪] ಎಂದು ಹಾಸಿಗೆಯಿಂದ ಹೇಳಲು ಸಾಧ್ಯವಾಗದ ಬಾಣಂತಿ ಹೆಂಡತಿಯ ಮುಂದೆ ಇಂತಹ ಅಮಾನವೀಯವಾಗಿ ನುಡಿಯುತ್ತಾನೆ. ನೋವನ್ನು ಸಹಿಸಲಾರದ ನಾಯಕಿ 'ಷರೀಯತ್ ನಿಯಮ ನಿರ್ಮಿಸಿದ ದೇವರು ಸಹ ಗಂಡಸು; ಈ ಸಮಾಜ ಕೂಡ ಪುರುಷ ಪ್ರಧಾನವಾಗಿದ್ದು ಬಹುಪತ್ನಿತ್ವದ ಹೆಸರಿನಲ್ಲಿ ಸ್ತ್ರೀಯರನ್ನು ಶೋಷಿಸುತ್ತಿದೆ. ಹಾಗಾಗಿ ಒಮ್ಮೆ ಹೆಣ್ಣಾಗು ಪ್ರಭುವೇ' ಎಂದು ಬೇಡಿಕೊಳ್ಳುತ್ತಾಳೆ. ಹೆಣ್ಣಾದರೆ ಆಕೆಯ ಅಳಲು ತಿಳಿಯುತ್ತೆ ಎಂಬುದು ಆಕೆಯ ಧ್ವನಿ. ಆದರೆ ಈ ಕತೆಯ ನಾಯಕಿ ಗಂಡನಿಗೆ ಏಕೆ ಮರುಮದುವೆ ಆಗುತ್ತೀಯಾ? ಎಂದು ಪ್ರಶ್ನಿಸುವಷ್ಟು ಮಟ್ಟಿಗೆ ದಿಟ್ಟತನ ತೋರುತ್ತಾಳೆ. ಆದರೆ 'ಕ್ರೌರ್ಯ' ಕತೆಯ ಶಹನಾಜ್ ಗಂಡನನ್ನು ಇಷ್ಟೂ ಪ್ರಶ್ನಿಸದೆ ಮೌನವಹಿಸುತ್ತಾಳೆ. ಇಲ್ಲಿ ಇಬ್ಬರೂ ಸ್ತ್ರೀಯರ ಮಾನಸಿಕ ವೇದನೆಯನ್ನು ಕತೆಗಾರರು ಮನಮುಟ್ಟುವಂತೆ ಚಿತ್ರಣ ಮಾಡಿದ್ದಾರೆ. ಧಾರ್ಮಿಕ ಅಂಧಶ್ರದ್ಧೆ ಮತ್ತು ಷರೀಯತ್ ನಿಯಮಗಳು ಮಹಿಳೆಯರ ಬದುಕಿಗೆ ಹೇಗೆ ಮಾರಕವಾಗಿವೆ ಎಂಬುದನ್ನು ಇವು ನಿರೂಪಿಸುತ್ತವೆ. ಕಟ್ಪಾಡಿ ಅವರ ಕತೆಗಳಲ್ಲಿ ಶೋಷಣೆಗೆ ಒಳಗಾದ ಸ್ತ್ರೀಯರು ತಮ್ಮ ಆಕ್ರೋಶವನ್ನು ಎತ್ತರದ ಧ್ವನಿಯಲ್ಲಿ ಕೆಲವರು, ಸೌಮ್ಯವಾದ ಮಾತಿನ ಮೂಲಕ ಕೆಲವರು ಪ್ರತಿಭಟನೆ ತೋರುತ್ತಾರೆ.

ಮುಸ್ಲಿಂ ಪುರುಷ ಯಜಮಾನಿಕೆಯ ಸಮಾಜದಲ್ಲಿ ಸ್ತ್ರೀ ಪರಾವಲಂಬಿಯಾಗಿಯೇ ಕಂಡುಬರುತ್ತಾಳೆ. ಗಂಡನ ದೌರ್ಜನ್ಯ ತಡೆಯಲಾರದೆ ಆಕೆ ಪ್ರತಿಭಟಿಸುವ ಸನ್ನಿವೇಶಗಳು

ಕಟ್ಪಾಡಿ ಅವರ ಕತೆಗಳಲ್ಲಿ ಬಹಳ ಕಡಿಮೆ. ಬದಲಿಗೆ ಅವು ತಮಗೆ ಪ್ರತಿಕೂಲವಾಗಿರುವ ಸನ್ನಿವೇಶದಲ್ಲಿ ಬದುಕಲು ಸೆಣಸಾಡುವುದನ್ನು ಕತೆಗಳು ಚಿತ್ರಿಸುತವೆ. 'ಜುಲೇಖ' ಕತೆಯಲ್ಲಿ ತನ್ನ ಗಂಡನು ಬೇರೊಬ್ಬ ಹುಡುಗಿಯ ಜೊತೆ ಅತಿಯಾಗಿ ತಿರುಗಾಡುವುದು ಕಂಡು ಜುಲೇಖಗೆ ತಲೆ ಚಿಟ್ಟುಹಿಡಿದಂತಾಗುತ್ತದೆ. ಒಮ್ಮೆ ಅವರಿಬ್ಬರೂ ಕಾರಿಂದ ಇಳಿದು ಒಳಗೆ ಬಂದಾಗ ಅವಳು ಮಾಡುವ ದೊಡ್ಡ ಪ್ರತಿಭಟನೆ ಎಂದರೆ, ಆ ಹುಡುಗಿಯ ಜುಟ್ಟು ಹಿಡಿದೆಳೆದು ಮನೆಯಿಂದ ಹೊರಗೆ ದಬ್ಬುವುದು. 'ಬೇವರ್ಸಿ ಸೂಳೆ ನಾಯಿ....' ಎಂದು ಕೂಗಾಡುವುದು. ವ್ಯಂಗ್ಯವೆಂದರೆ ಅವಳ ತನ್ನ ಪ್ರತಿಭಟನೆಯನ್ನು ಗಂಡನ ವಿರುದ್ಧ ತೋರದೆ ತನ್ನಂತೆ ಇನ್ನೊಂದು ಬಲಿಪಶುವಾಗಿರುವ ಹೆಣ್ಣೊಬ್ಬಳ ವಿರುದ್ಧ ತೋರುವುದು; ಆಕೆ ಊರಿನ ಮಹಿಳಾ ಸಂಘಟನೆಯ ಕಾರ್ಯದರ್ಶಿ ಆಗಿರುವುದು. ಜುಲೇಖಳ ಗಂಡ ಮೊದಲು ಕಕ್ಕಾಬಿಕ್ಕಿಯಾಗುತ್ತಾನೆ. ಆದರೆ ನಂತರ ಕೆನ್ನೆಗೊಂದೆಟು ಕೊಟ್ಟು 'ಮರ್ಯಾದೆ ಮೂರ್ಕಾಸು ಮಾಡಿದ್ದೀಯಾ' ಎಂದು ಯದ್ವಾತದ್ವ ಹೊಡೆಯುತ್ತಾನೆ. ಆ ನೋವನ್ನೆಲ್ಲ ಸಹಿಸಿಕೊಂಡು ಜುಲೇಖ "ನಾನು ಅವಳಿಗಿಂತ ಯಾವುದರಲ್ಲಿ ಕಮ್ಮಿ ಇರುವೆ" ಎಂದು ಪ್ರಶ್ನಿಸುತ್ತಾಳೆ. "ನೀವು ಊರ ಗಂಡಸರನ್ನೆಲ್ಲ ಸ್ತ್ರೀ ಶೋಷಕರಂತೆ ಹೇಳ್ತಿರಲ್ಲ. ಈಗ ನೀವು ಮಾಡ್ತಿರೋದಾದರೂ ಏನು? ನನ್ನನ್ನು ಮೂಲೆಗೆ ಸೇರಿಸಿ ಊರ ಹುಡುಗಿಯರ ಜೊತೆ ಚೆಲ್ಲಾಟವಾಡುವುದು. ಇದೇ ಏನು ನಿಮ್ಮ ಹೋರಾಟ? ಹೆಣ್ಣಿಗೆ ಮಾನ ಗೌರವ ಕೊಡಲಾಗದ ನಿಮ್ಮ ವಿಚಾರವೇ ಪೊಳ್ಳು" ಎಂದು ಜುಲೇಖ ಕಿರುಚುತ್ತಾಳೆ. ಇಲ್ಲಿ ಜುಲೇಖ ತನಗಾದ ಅನ್ಯಾಯದ ವಿರುದ್ಧ ಅಕ್ರೋಶವಾಗಿಯೇ ಪ್ರತಿಭಟಿಸುತ್ತಾಳೆ. ಎತ್ತರ ಧ್ವನಿಯಲ್ಲಿ ಪ್ರತಿಭಟನೆ ವ್ಯಕ್ತವಾಗಿದೆ. ವೈಯಕ್ತಿಕ ನೆಲೆಯಲ್ಲಿ ಗಂಡನ ವಿರೋಧ ಪ್ರತಿಭಟನೆ ಮಾಡುತ್ತಾಳೆ. ಈ ಪ್ರತಿಭಟನೆಯ ಆಕ್ರೋಶ ಮಾತಿನ ರೂಪದ ಪ್ರತಿಭಟನೆಯಾಗಿದೆ. ಮುನೀರನು ಆಸ್ತಿಗಾಗಿ ತನ್ನನ್ನು ಮದುವೆಯಾಗಿದ್ದಾನೆಂಬುದು ಜುಲೇಖಳಿಗೆ ಮನವರಿಕೆಯಾಗುತ್ತದೆ. ಆಕೆ ಆಧುನಿಕತೆ ಮತ್ತು ಪ್ರಗತಿಯ ಹೆಸರಿನಲ್ಲಿ ನಡೆಯುವ ಶೋಷಣೆಗಿಂತ ಸಾಂಪ್ರದಾಯಿಕತೆಯ ಬಂಧನದಲ್ಲಿಯೇ ಸುಖವಿತ್ತು ಎಂದು ಯೋಚಿಸುವಂತಾಗುತ್ತದೆ. ತನ್ನ ಪ್ರತಿಭಟನೆಯ ಫಲವಾಗಿ ಆಕೆ ದೈಹಿಕ ಸುಖದಿಂದಲೂ ವಂಚಿತಳಾಗುವುದು ಒಂದು ವ್ಯಂಗ್ಯವಾಗಿದೆ. ಮಹಿಳೆಯ ಪ್ರತಿಭಟನೆ ಈ ವಿಚಿತ್ರ ಪರಿಣಾಮದ ಬಗ್ಗೆ ಮುನಿಶಾಮಪ್ಪ ಅವರು ಚರ್ಚಿಸುತ್ತಾರೆ.

ಬುರ್ಖಾ ಸ್ತ್ರೀಯರಿಗೆ ಕಂಟಕಪ್ರಾಯವೆಂಬಂತೆ ಭಾಸವಾಗುವುದನ್ನು ಕಟ್ಪಾಡಿ ಅವರ 'ಮುಸುಕು' ಮತ್ತು 'ಇಂಬಳಗಳು' ಕತೆ ಚಿತ್ರಿಸುತ್ತವೆ. 'ಇಂಬಳಗಳು' ಕತೆಯಲ್ಲಿ ಶಾಲೆಗೆ ಬುರ್ಖಾ ಹಾಕಿಕೊಂಡು ಹೋದರೆ ಪ್ರವೇಶವಿಲ್ಲವೆಂದು ಶಿಕ್ಷಕರು ಹೇಳಿದರೆ, ಮುಸ್ಲಿಮರು ಬುರ್ಖಾ ಹಾಕಿಕೊಂಡು ಹೋಗುವುದು ನಮ್ಮ ಸಂಪ್ರದಾಯವೆಂದು, ನಮ್ಮ ಧರ್ಮ ಆಚರಣೆಯನ್ನು ಯಾರು ತಡೆಯುತ್ತಿದ್ದಾರೆಂದು ಪ್ರತಿಭಟನೆ ಗಲಾಟೆ ಶುರುವಾಗುತ್ತದೆ. ಮುಸ್ಲಿಮರ ಧರ್ಮ

ಆಚರಣೆ ನಿಯಮಗಳು ಸ್ತ್ರೀಯನ್ನು ಒಂದು ರೀತಿಯ ಇಕ್ಕಟ್ಟಿಗೆ ಸಿಲುಕಿಸುವಂತಹ ಪರಿಸ್ಥಿತಿ ಉಂಟಾಗುವುದನ್ನು ಕತೆ ನಿರೂಪಿಸುತ್ತದೆ. ಶಾಬೂದ್ದೀನ್ ತನ್ನ ಮಕ್ಕಳಿಗೆ 'ಒಂದೋ ಬುರ್ಖಾ ಹಾಕಿಕೊಂಡು ಕಾಲೇಜಿಗೆ ಹೋಗಬೇಕು, ಇಲ್ಲವಾದರೆ ವಿದ್ಯಾಭ್ಯಾಸ ಇಲ್ಲಿಗೆ ಖತಂ' ಎಂದು ಎಚ್ಚರಿಸುತ್ತಾನೆ. ಇಲ್ಲಿ ತಂದೆಗೆ ಮಕ್ಕಳ ಭವಿಷ್ಯಕ್ಕಿಂತ ಧರ್ಮಾಚರಣೆ ಮುಖ್ಯವಾಗಿದೆ. ಇದನ್ನು ಸಹಿಸದ ವಿದ್ಯಾವಂತೆಯರಾದ ಶಾಬೂದ್ದೀನನ ಇಬ್ಬರೂ ಮಕ್ಕಳು "ನಿಮ್ಮ ಕಾಲದಲ್ಲಿ ಹೆಣ್ಣುಮಕ್ಕಳು ಕಲಿಯಲು ಶಾಲೆಗೆ ಹೋಗುವಾಗ ಬುರ್ಖಾ ಹಾಕ್ಕೊಂಡು ಹೋಗುತ್ತಿದ್ದರಾ? ನೀನು ಶಾಲೆಗೆ ಹೋಗುತ್ತಿರುವಾಗ ನಿನ್ನ ಜೊತೆಗೆ ಕಲಿಯುತ್ತಿದ್ದ ಮುಸ್ಲಿಮ್ ಹೆಣ್ಣುಮಕ್ಳು ಬುರ್ಖಾ ಹಾಕ್ಕೊಂಡು ಶಾಲೆಗೆ ಬರುತ್ತಿದ್ದರೇನಪ್ಪ?" ಎಂದು ಪ್ರಶ್ನಿಸುತ್ತಾರೆ. ಈ ಪ್ರಶ್ನೆಗೆ ಅಪ್ಪ ತತ್ತರಿಸಿ ಹೋಗುತ್ತಾನೆ. ಮಕ್ಕಳ ಪ್ರಶ್ನೆಯಲ್ಲಿ ಪ್ರತಿಭಟನಾತ್ಮಕ ಧ್ವನಿ ಎದ್ದು ಕಾಣುತ್ತದೆ. ತಂದೆಯಾದವನು ಶಿಕ್ಷಿತನಾಗಿದ್ದು, ಮಕ್ಕಳ ಶಿಕ್ಷಣಕ್ಕೆ ಮಕ್ಕಳ ಭವಿಷ್ಯಕ್ಕೆ ಪ್ರೋತ್ಸಾಹ ನೀಡಲು ಮುಂದಾಗದೇ ಧರ್ಮಕ್ಕೆ ಹೆಚ್ಚು ಬೆಲೆ ಕೊಡುವವನಾಗಿ ಹಾಗೂ ತನ್ನ ಗೌರವಕ್ಕೆ ಧಕ್ಕೆ ಬಾರದೆಂಬ ಮನಸ್ಸುಳ್ಳವನಾಗಿ ವರ್ತಿಸುವಾಗ, ಅವನ ಚಿಕ್ಕಮಕ್ಕಳು ತಮ್ಮ ಪ್ರಶ್ನೆಯ ಮೂಲಕ ಅವನ ಹಿಪಾಕ್ರಸಿಯನ್ನು ಬಯಲುಗೊಳಿಸುವರು.

"ಪಿತೃಸಂಸ್ಕೃತಿಯನ್ನು ಒಪ್ಪಿಕೊಳ್ಳುವ, ಪ್ರತಿಭಟಿಸುವ ಅಂಥ ವ್ಯವಸ್ಥೆಗೆ ಒಗ್ಗಿಕೊಳ್ಳುವ ಅಸಹಾಯಕತೆಯನ್ನು ಪ್ರಕಟಿಸುವ, ಇತ್ತೀಚಿನ ಸಂಶೋಧನೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ಸ್ತ್ರೀ ವ್ಯಕ್ತಿತ್ವವನ್ನು ಕನ್ನಡ ಮಹಿಳಾ ಸಾಹಿತ್ಯ ಸಂದರ್ಭದ ಚಾರಿತ್ರಿಕ ಹಿನ್ನೋಟ ಹಾಗೂ ವರ್ತಮಾನಗಳು ಒದಗಿಸುತ್ತವೆ. ಈ ಪ್ರತಿಭಟನೆಯು ಕೆಲವು ದಾರಿಗಳನ್ನು ಸೃಷ್ಟಿಸಿದ್ದು, ದೌರ್ಬಲ್ಯ ನಿರಾಶೆಗಳಿಂದ ಯಾತನೆ ಪಡುವ ಸ್ತ್ರೀ ಕಲ್ಪನೆಗಳಲ್ಲಿ ಚಲದ ಸೇಡಿನ ಗುರಿ ಸಾಧನೆಯು ತೀವ್ರತೆಯನ್ನು ಗಮನಿಸುವುದು ಕ್ವಚಿತ್ತಾಗಿ ಮಾತ್ರ."[೫]

೬.೨.೨. ಕ್ರಿಯಾ ರೂಪದ ಪ್ರತಿಭಟನೆ: ದಮನಿತರು ಮಾಡುವ ಪ್ರತಿಭಟನೆಯು ವಾಗ್ರೂಪದಲ್ಲಿರದೆ, ಅದು ಕ್ರಿಯೆಗೂ ವಿಸ್ತರಣೆ ಪಡೆಯಬಹುದು. ಶೋಷಣೆಗೆ ಒಳಗಾದವರು ಮಾತಿಗಿಂತ ಮಿಗಿಲಾದ ಕ್ರಿಯಾಶೀಲತೆ ವ್ಯಕ್ತಪಡಿಸುವ ಆಯಾಮವಿದಾಗಿದೆ.

೧. ವಸ್ತುಗಳ ಮೇಲೆ ಸಿಟ್ಟು ತೋರಿಸುವ ಮೂಲಕ ಪ್ರತಿಭಟನೆ: ಪುರುಷಜಮಾನಿಕೆಯ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀ ಅಧೀನಳಾಗಿ ಬದುಕುವಾಗ ಶೋಷಕರು ಕೇವಲ ಪುರುಷರಾಗಿರುವುದಿಲ್ಲ. ಸ್ತ್ರೀಯರೂ ಆಗಿರಬಹುದು. ಆಗ ಶೋಷಣೆಯ ವಿರುದ್ಧ ಪ್ರತಿಭಟಿಸಲಾಗದ ಮಹಿಳೆಯರ ಅಸಹಾಯಕತೆಯು ಪರೋಕ್ಷವಾಗಿ ವಸ್ತುಗಳ ಮೇಲೆ ಹರಿಯುತೊಡಗುತ್ತದೆ. ಮುಸ್ಲಿಮ್ ಧಾರ್ಮಿಕ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ಬುರ್ಖಾ ಹಾಕುವ ಪದ್ಧತಿಯು ಬಡವರು ಪಾಲಿಸುವುದಿಲ್ಲ. ಇದು ಶ್ರೀಮಂತ ಸ್ತ್ರೀಯರಲ್ಲಿ ಹೆಚ್ಚು ಕಂಡುಬರುತ್ತದೆ. ಮೈಮೂನಳಿಗೆ ಬುರ್ಖಾ ಕೇವಲ ದೇಹವನ್ನು

ಸಂಪೂರ್ಣವಾಗಿ ಮರೆಮಾಚುವುದು ಅಷ್ಟೇ ಅಲ್ಲ, ಮನಸ್ಸಿಗೂ, ಭಾವನೆಗಳಿಗೂ ಸ್ವಾತಂತ್ರ್ಯಕ್ಕೂ ಮುಸುಕು ಆವರಿಸುವಂತದ್ದಾಗಿದೆ. ಇದನ್ನು 'ಮುಸುಕು' ಕತೆಯ ಹೆಸರೆ ಸೂಚಿಸುತ್ತದೆ. ಸ್ತ್ರೀಯರನ್ನು ಉಸಿರುಕಟ್ಟಿಸುವ ಈ ಬುರ್ಖಾದಿಂದ ಅನುಭವಿಸಬೇಕಾದ ನೋವನ್ನು ಮನಕರಗುವಂತೆ ಕತೆ ಚಿತ್ರಿಸುತ್ತದೆ. ಅಪ್ಪ ಬುರ್ಖಾಪರವಾಗಿದ್ದರೆ, ಮೈಮೂನಳ ಅಮ್ಮ ಆ ಸಂಪ್ರದಾಯದ ವಿರುದ್ಧವಾಗಿದ್ದಾಳೆ. 'ಅವಳಿನ್ನು ಚಿಕ್ಕವಳಲ್ವಾ ಬರೀ ಹದಿಮೂರು ವರ್ಷ ಅವಳಿಗ್ಯಾಕೆ ಈಗ ಬುರ್ಖಾ? ತಲೆ ವಸ್ತ್ರ ಸಾಕಲ್ವ..?' ಎಂದು ಅವಳು ತಡೆಯುತ್ತಾಳೆ. ಆದರೆ ಅದಕ್ಕೆ ಪ್ರತ್ಯುತ್ತರವಾಗಿ ಅವಳ ಗಂಡ 'ಹಣವನ್ನು ಸಂರಕ್ಷಿಸಲು ಬೀಗವನ್ನು ಹಾಕಿಡಬೇಕು. ಅದರಂತೆ ಮಹಿಳೆಯ ಮಾನ ರಕ್ಷಣೆಗೆ ಪರ್ದಾ ಹಾಕಬೇಕು ಎಂದು ವಾದಿಸುವ ಸಂಪ್ರದಾಯಸ್ಥನಾಗಿ ಕಂಡು ಬರುತ್ತಾನೆ. ಇಲ್ಲಿ ಪರದಾ ಬೀಗಕ್ಕೆ ಹೋಲಿಕೆಗೊಳ್ಳುತ್ತದೆ. ಧರ್ಮಚೌಕಟ್ಟಿನ ಒಳಗೆ ಸ್ತ್ರೀಯನ್ನು ನೋಡಬೇಕೆಂದು ಹೇಳುವ ಅವನಿಗೆ ಹೆಣ್ಣಿನ ತಲ್ಲಣ ಅರ್ಥವಾಗುವುದಿಲ್ಲ. ನಮ್ಮ ಹೆಣ್ಣು ಮಕ್ಕಳನ್ನು ಅನ್ಯರು ನೋಡಬಾರದು ಎಂಬ ಕಾರಣಕ್ಕಾಗಿಯೇ ಆತ ಮಗಳನ್ನು ಮರೆಮಾಚುತ್ತಾನೆ. ಈತ ಮಸೀದಿಯಲ್ಲಿ ಕೆಲಸ ಮಾಡುವವನಾಗಿದ್ದು, ಹೆಣ್ಣುಮಕ್ಕಳು ಸ್ಕೂಲಿಗೆ ಹೋಗುವಂತಿಲ್ಲ; ಜೋರಾಗಿ ನಡೆಯುವುದು ನರಕಕ್ಕೆ ಹೋಗುವವರ ಲಕ್ಷಣ; ಬುರ್ಖಾ ಧರಿಸಿದೆ ಹೊರಗೆ ಹೋಗುವಂತಿಲ್ಲ ಮುಂತಾದ ಧಾರ್ಮಿಕ ನಿಯಮಗಳನ್ನು ಸ್ತ್ರೀಯರ ಮೇಲೆ ಹೇರುವವನು. ಅಪ್ಪ ಕೊಟ್ಟ 'ಬುರ್ಖಾ'ವನ್ನು ಇಷ್ಟಪಟ್ಟು ತೊಟ್ಟುಕೊಂಡಾಗ ಮೈಮುನಳಿಗೆ ಆಗುವ ಪರಿಣಾಮವನ್ನು ಕತೆ ವರ್ಣಿಸುತ್ತದೆ. "ಮೈತುಂಬ ಒಂದು ರೀತಿಯ ನಡುಕ... ಕತ್ತಲೆಯ ಗುಹೆಯೊಳಗೆ ಹೊಕ್ಕಂತೆ.... ಮುಖದ ವಸ್ತ್ರದ ಮೂಲಕ ನೋಡುವಾಗ ಹೊರ ಜಗತ್ತೆಲ್ಲ ಮಬ್ಬುಗತ್ತಲಿನಂತೆ ಕಂಡುಬಂದ ಕಣ್ಣನ್ನು ಮೈಮುನಾ ತೆರೆದಳು."

ಬುರ್ಖಾ ತೊಟ್ಟ ತಕ್ಷಣ ಮೈಮುನಾಗೆ ಕತ್ತಲೆಯ ಗುಹೆಯೆಂಬಂತೆ ಭಾಸವಾಗುತ್ತದೆ. ಅಮ್ಮ ಕೊಟ್ಟ ಬೀಡಿಚೀಲ ತೆಗೆದುಕೊಂಡು ಅಂಗಡಿ ಕಡೆ ಹೊರಟಾಗ ಆಕೆಗೆ ಹೊಸ ಅನುಭವವೇ ಆಗುತ್ತದೆ. ಅಂಗಡಿಯ ಕರೀಮ್ ಕಾಕಾ, ಕೆಲಸದ ಗೋಪಾಲಣ್ಣ ಇವರೆಲ್ಲರೂ ಬುರ್ಖಾ ಧರಿಸುವ ಮೊದಲು ಪ್ರೀತಿಯಿಂದ ಆತ್ಮೀಯತೆಯಿಂದ ನಗುನಗುತ್ತ ಮಾತನಾಡುತ್ತಿದ್ದವರು. ಆದರೆ ಈಗ ಮೈಮುನಾ ನಕ್ಕರೂ ನಗದೇ ಒಬ್ಬರೋ ಪ್ರತಿಕ್ರಿಯೆ ನೀಡದಿದ್ದಾಗ ಆಕೆಗೆ ಆಘಾತವಾಯಿತು. ಬುರ್ಖಾದೊಳಗಿನ ನಗು ಯಾರಿಗೂ ಗೋಚರವಾಗುವುದಿಲ್ಲ ಎಂಬ ಸತ್ಯ ಅರಿವಾಗುತ್ತದೆ. ಬುರ್ಖಾದಿಂದ ಅವರ್‍ಯಾರಿಗೂ ಮೈಮುನಾಳ ಗುರುತು ಹತ್ತುವುದಿಲ್ಲ. ಆತ್ಮೀಯವಾಗಿ ಮಾತನಾಡಿಸುತ್ತಿದ್ದವರೆಲ್ಲ ಅಪರಿಚಿತರಂತೆ ವರ್ತಿಸುತ್ತಾರೆ. 'ಹೇಗಿದ್ದಿ ಮಗು ಸೌಖ್ಯನಾ?' ಎಂದು ವಿಚಾರಿಸಿ ಹೂವು, ಹಣ್ಣು, ಕೊಡುತ್ತಿದ್ದ ಕರೀಮ್ ಕಾಕಾ, ಇಸ್ಮಾಲಿ ಕಾಕಾ ತನಗೆ ಗುರುತು ಹಿಡಿಯದಿದ್ದು ನೋಡಿ ಆಕೆ ಬೇಸರಗೊಳ್ಳುತ್ತಾಳೆ. ಅಬೂಕಾಕಾ ಗೋಪಾಲ, ಗೆಳತಿಯರಾದ

ನಳನಿ ಗ್ರೇಸಿ ಮತ್ತು ಆಡಿನ ಮರಿ ಸಹ ಆಕೆಯ ಗುರುತು ಹಿಡಿಯುವುದಿಲ್ಲ. ಬುರ್ಖಾ ಒಂದು ಜೀಗಮುದ್ರೆ ಎಂಬಂತೆ ಮರೆಮಾಚಿದ ಮುಖವನ್ನು ಯಾರು ಗುರುತು ಹಿಡಿಯಲಾಗದೆ, ಗುರುತು ಹಿಡಿದರೂ ಮನಬಿಚ್ಚಿ ಮಾತಾಡದ ಜನರನ್ನು ಕಂಡು ನೋವನ್ನು ಅನುಭವಿಸುತ್ತಾಳೆ. ತಾನು ಇಷ್ಟಪಡುವ ಆಡಿನಮರಿ ಮತ್ತು ನಾಯಿಯನ್ನು ನೋಡಲು ಹೋಗುತ್ತಾಳೆ. "ಅಯ್ಯೋ...ಈವತ್ತು ಯಾರಿಗೂ ನನ್ನ ಪರಿಚಯ ಆಗ್ತ ಇಲ್ಲಲ್ಲ... ಎನ್ನುತ್ತಾ ಬಾಳೆ ಹಣ್ಣು ತೋರಿಸಿದಾಗ ಹಣ್ಣನ್ನು ಕಂಡ ಆಡಿನ ಮರಿ ಓಡಿಬರುತ್ತದೆ. ಆದರೂ ಆಕೆ ಮೈತಡವಿದಾಗ ತಕ್ಷಣ ಕೊಸರಿಕೊಂಡು ಓಡಿ ಹೋಗುತ್ತದೆ. ಮೈಮುನಾಗೆ ತನಗರಿವಿಲ್ಲದೆ ಕಣ್ಣೀರು ತೊಟ್ಟಿಕ್ಕುತ್ತವೆ. ಗೋಪಾಲಣ್ಣನ ಮನೆಯ ನಾಯಿ ಹತ್ತಿರ ಹೋದಾಗ ಒಂದೇ ಸವನೆ ಬೊಗಳತೊಡಗುತ್ತದೆ. "ಟಾಮಿ...ಟಾಮಿ... ನಾನು ಮೈಮುನಾ..." ಎಂದು ಅವಳು ಕೊಟ್ಟ ಬಿಸ್ಕತ್ತನ್ನು ಅರ್ಧತಿಂದು ಅರ್ಧ ಬಿಡುತ್ತದೆ. ಅದು ಬುರ್ಖಾದ ಒಂದು ಕೊನೆಯನ್ನು ಕಚ್ಚಿ ಎಳೆದಾಗ "ಬಿಡೋ...ಬಿಡೋ" ಎಂದು ಕೂಗಿ ಮೈಮುನಾ ಗಾಬರಿಗೊಂಡು ಅಲ್ಲಿಂದ ಓಡತೊಡಗುತ್ತಾಳೆ. ಮೈಮುನಾ ಒಂದು ರೀತಿಯ ಮಾನಸಿಕ ಯಾತನೆಯನ್ನು ಅನುಭವಿಸುವ ಚಿತ್ರಣ ಈ ಕತೆಯಲ್ಲಿ ಮೂಡಿಬಂದಿದೆ.

ಈ ಧರ್ಮ ಆಚರಣೆಗಳು ನೀತಿ ನಿಯಮಗಳು ಸ್ತ್ರೀಗೆ ಎಷ್ಟು ಮಾರಕವಾಗಿವೆ ಎಂಬುದನ್ನು ಈ ಕತೆ ಪರೋಕ್ಷವಾಗಿ ಚಿತ್ರಿಸುತ್ತದೆ. ಮನುಷ್ಯರಿರಲಿ ಪ್ರಾಣಿಗಳು ಸಹ ಮೈಮುನಳನ್ನು ಪರಕೀಯರಂತೆ ಕಾಣುವುದು ಆಕೆಗೆ ಬೇಸರ ತರುತ್ತದೆ. ತನ್ನ ತಂದೆ ಬುರ್ಖಾಧರಿಸಲು ಹೇಳಿದಾಗ ಉತ್ಸಾಹದಿಂದ ಧರಿಸುವ ಆಕೆ, ಒಂದೇ ದಿನದ ಪರಿಣಾಮದಿಂದ ಆಘಾತಗೊಳ್ಳುತ್ತಾಳೆ. ಅದರ ವಿರುದ್ಧ ನೇರವಾಗಿ ಪ್ರತಿಭಟಿಸಲಾಗದೇ ಪರೋಕ್ಷವಾಗಿ ತನ್ನ ಅಸಹನೆ ವ್ಯಕ್ತಪಡಿಸುತ್ತಾಳೆ. ಮನೆ ಬರುವವರೆಗೂ ಹಿಂದಿರುಗಿ ನೋಡದೇ ಓಡಿ ಬಂದು ಅಂಗಳದಲ್ಲಿ ಚೀಲವನ್ನು ಕುಕ್ಕುವ ಮೂಲಕ ಪ್ರತಿಭಟನೆ ಮಾಡುತ್ತಾಳೆ. ಇಲ್ಲಿನ ಕ್ರಿಯೆಯಲ್ಲಿ ಅವಳ ವೇದನೆ ಮತ್ತು ಆಕ್ರೋಶ ಎದ್ದು ತೋರುತ್ತದೆ. ಧರ್ಮದಿಂದಾಗುವ ಅನ್ಯಾಯ ಅಸಮಾನತೆಯ ಬಗ್ಗೆ ಮೈಮುನಾಗೆ ಅಸಹನೆ ಇದೆ. ಬುರ್ಖಾ ಧರಿಸುವುದಕ್ಕೂ ಮೊದಲು ಇದ್ದ ಕುತೂಹಲ, ಧರಿಸಿದ ನಂತರ ಮಾಯವಾಗಿ ಆಕೆ ಮಾನಸಿಕವಾಗಿ ಕುಗ್ಗುತ್ತಾಳೆ. ತನ್ನ ದುರಂತಕ್ಕೆ ಕಾರಣವಾದ ತಂದೆ ಹಾಗೂ ಧಾರ್ಮಿಕ ವ್ಯವಸ್ಥೆಯ ಬಗೆಗಿನ ಅಸಹನೆ ಮತ್ತು ಆಕ್ರೋಶವನ್ನು ಚೀಲದ ಮೇಲೆ ವ್ಯಕ್ತಪಡಿಸುವ ಮೂಲಕ ಪ್ರತಿಭಟಿಸುತ್ತಾಳೆ.

೨. ಪಲಾಯನ ರೂಪದ ಪ್ರತಿಭಟನೆ: ಕಟ್ಪಾಡಿ ಅವರ ಕತೆಗಳಲ್ಲಿ ಸ್ತ್ರೀಪಾತ್ರಗಳು ಕೆಲವೊಂದು ಸ್ತ್ರೀ ಪಾತ್ರಗಳು ಸಂಕೀರ್ಣವಾಗಿವೆ. ಕೆಲವೊಂದು ಸರಳವಾಗಿವೆ. ಇಲ್ಲಿನ 'ಹೃದಯಗಳು' ಈ ಹೆಸರೆ ಸೂಚಿಸುವಂತೆ ಪ್ರೇಮ-ಪ್ರೀತಿಯ ವಸ್ತುವಿನ ಮೇಲೆ ರಚಿತವಾದ ಕತೆ. ಇಲ್ಲಿ ಮಗ ತಾಯಿ

ಪ್ರೀತಿ ಅರಸಿದರೆ ತಾಯಿಯಾದವಳು ಪರ ಪುರುಷನ ಪ್ರೀತಿ ಬಯಸುವಂತೆ ಚಿತ್ರಣಗೊಂಡಿದ್ದಾಳೆ. ಚಿಕ್ಕ ವಯಸ್ಸಿಗೆ ವಿಧವೆಯಾದ ರುಬಿಯಾ ಅಜ್ಜನ ಕಠೋರವಾದ ಬಂಧನದಿಂದ ಪ್ರೀತಿಯಿಂದ ವಂಚಿತಳಾದವಳು. ಅವಳು ಪ್ರೀತಿಗೆ ಹಾತೊರೆಯುವ ಪರಿಯನ್ನು ಕತೆ ಎಳೆಎಳೆಯಾಗಿ ಬಿಚ್ಚಿಡುತ್ತದೆ. ಸಾಮಾನ್ಯವಾಗಿ ಕಟ್ಪಾಡಿ ಅವರ ಕತೆಗಳಲ್ಲಿ ತಾಯಿ ಆದವಳು ಮಗನ ಪ್ರೀತಿಗೆ ಹಂಬಲಿಸುವ ಪಾತ್ರಗಳು ಸೃಷ್ಟಿಯಾಗಿವೆ. ಆದರೆ ಈ ಕತೆಯಲ್ಲಿ ಮಗನ ಪ್ರೀತಿಗಿಂತ ಪ್ರಿಯಕರನ ಪ್ರೀತಿಗೆ ಒತ್ತು ಕೊಡುವ ಸ್ತ್ರೀಯೊಬ್ಬಳು ಬರುತ್ತಾಳೆ. ತಾಯಿ ಸೇವೆ ಮಾಡಿದರೆ ಪುಣ್ಯಪ್ರಾಪ್ತಿ ಎಂಬ ವಿಷಯ ತಿಳಿದ ಮಗ ಅಬ್ಬಾಸ್, ಸಂಪ್ರದಾಯವಾದಿ ಅಜ್ಜ ಸತ್ತ ನಂತರ ತಾಯಿಯನ್ನು ಮನೆಗೆ ಕರೆತರುತ್ತಾನೆ. ಆಕೆಗೆ ಪ್ರಿಯಕರನನ್ನು ಬಿಟ್ಟು ಬರಲು ಮನಸ್ಸಾಗದಿದ್ದರೂ ಅನಿವಾರ್ಯವಾಗಿ ಮಗನ ಮನೆಗೆ ಬರುತ್ತಾಳೆ. ಆದರೂ ಪ್ರೇಮಿಗಳು ಒಂದಾಗಲು ಯತ್ನಿಸುತ್ತಿರುತ್ತಾರೆ. ಇಬ್ಬರ ಮಾನಸಿಕ ನರಳಾಟವನ್ನು ಕತೆ ತರುತ್ತದೆ. ಮಗ ತಾಯಿಯು ಮತ್ತೊಬ್ಬ ಪುರುಷನೊಡನೆ ಇಟ್ಟುಕೊಂಡಿರುವ ಪ್ರೇಮ ಸಹಿಸಲಾರದೇ ಸಿಡಿಮಿಡಿಗೊಳ್ಳುತ್ತಾನೆ. ಆದರೆ ಸೊಸೆ ಇವರ ಪ್ರೀತಿ ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಾಳೆ. ಮಗನ ಎದುರಿಗಾಗಲಿ ಗಂಡನ ಎದುರಿಗೆ ಅಗಲಿ ಮನದಿಚ್ಛೆಯನ್ನು ಮನಬಿಚ್ಚಿ ಹೇಳಲಾಗದೆ ನೋವನ್ನು ಅನುಭವಿಸುವ ಸ್ತ್ರೀಯಂತೆ ರುಬಿಯಾ ಇಲ್ಲಿ ಚಿತ್ರಣಗೊಂಡಿದ್ದಾಳೆ. ಒಮ್ಮೆ ಕೆಕ್ಕರಿಸಿ ಸೊಸೆ ಸಕೀನಾಳತ್ತ ನೋಡುತ್ತಾ 'ನಿಂಗೆ ಗಂಡ ಬೇಕು.. ನಂಗೆ ಬ್ಯಾಡ್ವಾ?' ಎಂದು ಪ್ರಶ್ನಿಸುತ್ತಾಳೆ. ಇಲ್ಲಿ ನೋವು ಹತಾಶೆ ಇದೆ. ಯಾವುದೇ ಸ್ತ್ರೀ ತನ್ನ ಅಳಲನ್ನು ಇನ್ನೊಬ್ಬ ಸ್ತ್ರೀಯೆದುರಿಗೆ ಹೇಳಲು ಇಷ್ಟಪಡುವಳೇ ವಿನಃ ಪುರುಷರೊಡನೆ ಹೇಳಿಕೊಳ್ಳಲು ಇಚ್ಚಿಸುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

"ರುಕಿಯಾಬಿ ಒಮ್ಮೆ ಮಗುವನ್ನು ಎತ್ತಿಕೊಂಡು ಬಾವಿಕಡೆ ಓಡುವಾಗ ಸೊಸೆ 'ಅಯ್ಯೋ... ನನ್ನ ಮಗು...' ಎಂದು ಬೊಬ್ಬೆ ಹಾಕುತ್ತಾಳೆ. ಸಕೀನಾಳ ಬೊಬ್ಬೆ ಕೇಳಿದೊಡನೆ ಬಾವಿಗೆ ಹತ್ತಿರವಾಗಿದ್ದ ಅತ್ತೆ ತಟ್ಟನೆ ನಿಂತು ತಾನು ಎತ್ತಿ ಹಿಡಿದ ಮಗುವನ್ನೊಮ್ಮೆ ದುರುಗುಟ್ಟಿ ನೋಡಿ ಮತ್ತೆ ಎದೆಗೆ ಬಾಚಿ ತಬ್ಬಿಕೊಳ್ಳುವಳು. ಇಲ್ಲಿ ರುಕಿಯಾಬಿ ಪ್ರೀತಿಗಾಗಿ ಪರಿತಪಿಸುತ್ತಾ ಪ್ರೀತಿಯ ಗಂಡನಿಂದ ಬೇರ್ಪಡಿಸಿದ ಮಗನ ವಿರುದ್ಧ ನೇರವಾಗಿ ಪ್ರತಿಭಟಿಸಲಾಗದೇ ಸೊಸೆ ಮತ್ತು ಮೊಮ್ಮಗನ ಮೂಲಕ ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ. ಇಲ್ಲಿ ಮಗುವನ್ನು ಎತ್ತಿಕೊಂಡು ಓಡಿಹೋಗುವುದು ಪಲಾಯನ ರೂಪದ ಪ್ರತಿಭಟನೆಯಾಗಿ ಕಂಡುಬರುತ್ತದೆ. ಪ್ರೀಯಕರನಿಂದ ದೂರ ಮಾಡಿದ ಮಗನ ವಿರುದ್ಧ ಆಕೆಯ ಪ್ರತಿಕ್ರಿಯೆಗಳು ನಾನಾ ಬಗೆಯಲ್ಲಿ ವ್ಯಕ್ತವಾಗುತ್ತವೆ. ಗಂಡಸರು ಮಡದಿ ಸತ್ತರೆ ಮರುಮದುವೆ ಆಗಬಹುದು. ಆದರೆ ಸ್ತ್ರೀಯಾದವಳು ಗಂಡ ಸತ್ತರೆ ಮತ್ತೊಂದು ಮದುವೆ ಆಗೋದು ತಪ್ಪೆ ಎಂಬ ಪ್ರಶ್ನೆಯನ್ನು ಕತೆ ಮುಂದಿಡುತ್ತದೆ. ಆದರೆ

ಮರುಮದುವೆ ಆದ ಸ್ತ್ರೀಯನ್ನು ಸಮಾಜ ಕೆಟ್ಟ ದೃಷ್ಟಿಯಿಂದ ನೋಡುತ್ತದೆ ಎಂಬುದನ್ನು ಕತೆ ಚಿತ್ರಿಸುತ್ತ, ಸಮಾಜದಲ್ಲಿರುವ ಪಕ್ಷಪಾತ ನಿಲುವನ್ನು ಲಿಂಗತಾರತಮ್ಯದ ನಿಲುವನ್ನು ಬಯಲುಗೊಳಿಸುತ್ತದೆ.

'ಇಂಬಳಗಳು' ಕತೆಯಲ್ಲೂ ಬುರ್ಖಾ ಹಾಕಿಕೊಂಡು ಶಾಲೆಗೆ ಹೋಗಬೇಕೆಂಬ ಅಪ್ಪನ ಕಟುನಿಯಮಕ್ಕೆ ಬೇಸತ್ತ ಶಕೀಲಾ "ನನಗೆ ಒಂದೋ ಕಲಿಯಲಿಕ್ಕೆ ಬಿಡು, ಇಲ್ಲವಾದರೆ ನಿನ್ನ ಗೌರವ ಕಾಪಾಡಿಕೊಂಡು ಮನೆಯಲ್ಲಿಯೇ ಬಿದ್ದಿರುತ್ತೇನೆ" ಎಂದು ಪ್ರತಿಭಟಿಸುತ್ತಾಳೆ. ಮರುದಿನದಿಂದ ಕಾಲೇಜಿಗೆ ಹೋಗುವುದನ್ನು ನಿಲ್ಲಿಸುತ್ತಾಳೆ. ಅಪ್ಪನ ವಿರುದ್ಧ ಪ್ರತಿಭಟನೆ ಮಾಡಿದರೂ ಅದು ಫಲಕಾರಿಯಾಗದೆ ತಾನೇ ತಂದೆಯ ಆದೇಶಕ್ಕೆ ಪುರುಷಾಧಿಕಾರಿಯ ವ್ಯವಸ್ಥೆಗೆ ಧಾರ್ಮಿಕ ಕಟ್ಟಳೆಗಳಿಗೆ ಶರಣಾಗುವಂತೆ ಮಹಿಳೆ ಚಿತ್ರಿತವಾಗಿದ್ದಾಳೆ. ಇಲ್ಲಿ ಶಕೀಲಾ ಶಾಲೆಯನ್ನು ಬಿಡುವುದು ಕ್ರಿಯಾರೂಪದ ಪ್ರತಿಭಟನೆಯಾಗಿದ್ದರೂ ಅದರ ಸ್ವರೂಪ ಮುಖಾಮುಖಿಯಾಗಿಲ್ಲ. ಪಲಾಯನ ರೂಪದ್ದಾಗಿದೆ. ಆದರೆ ಇದು ಅವಳ ದೌರ್ಬಲ್ಯವಾಗಿರದೆ, ಅವಳ ಅನಿವಾರ್ಯ ಪ್ರತಿಭಟನೆಯ ಮಾದರಿಯಾಗಿದೆ.

೩. ಆತ್ಮಹತ್ಯೆ ಮೂಲಕ ಪ್ರತಿಭಟನೆ: ಸ್ತ್ರೀಯನ್ನು ಉಪಭೋಗದ ವಸ್ತುವನ್ನಾಗಿಯೇ ನೋಡುವ ಸಮಾಜ ಮತ್ತು ಕುಟುಂಬ ವ್ಯವಸ್ಥೆಯಲ್ಲಿ, ಅವರು ಹೆಂಡತಿಯಾಗಿ, ಸೊಸೆಯಾಗಿ ಎಷ್ಟು ವರದಕ್ಷಿಣೆ ತರುತ್ತಾಳೆ ಎಂಬ ನಿರೀಕ್ಷೆಗಳು ಸಹ ಇವೆ. ವರದಕ್ಷಿಣೆ ಕೊಡಲು ತಂದೆ-ತಾಯಿಗಳು ಸಾಲ ಮಾಡುತ್ತಾರೆ. ಕೆಲವೊಮ್ಮೆ ವಯಸ್ಸಾದ ಶ್ರೀಮಂತ ಮುದುಕನಿಗೂ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡುವ ಅಸಹಾಯಕತೆ ಹಲವು ಕತೆಗಳಲ್ಲಿ ಕಂಡುಬರುತ್ತದೆ. ವರದಕ್ಷಿಣೆ ಎಂಬುದು ಕೇವಲ ಬಡವರನ್ನು ಕಾಡುವುದಷ್ಟೇ ಅಲ್ಲ ಶ್ರೀಮಂತರಿಗೂ ಕಂಟಕ ಪ್ರಾಯವಾಗಿದೆ. 'ನೋಂಬು' ಕತೆಯಲ್ಲಿ ಕಂಡುಬರುವ ಜಮೀಲಾ ನವವಿವಾಹಿತೆಯಾಗಿದ್ದು, ವರದಕ್ಷಿಣೆಗಾಗಿ ಪೀಡಿಸುವ ಗಂಡನಿಂದ ಹಿಂಸೆಗೆ ತುತ್ತಾದವಳು. ಮದುವೆಯಾದರೂ ಶ್ರೀಮಂತಿಕೆ ಇರುವ ಕಾರಣ ಗಂಡನೊಡನೆ ತಂದೆಯ ಮನೆಯಲ್ಲಿಯೇ ಆಕೆ ವಾಸವಾಗಿರುತ್ತಾಳೆ. ಮೇಲ್ನೋಟಕ್ಕೆ ನಗುವನ್ನು ತುಂಬಿಕೊಂಡಿರುವ ಜಮೀಲಾ ಮನಸ್ಸಿನಲ್ಲಿ ತೀವ್ರ ದುಃಖ ತುಂಬಿಕೊಂಡಿರುತ್ತಾಳೆ. ಶ್ರೀಮಂತಿಕೆ ಇದ್ದರೂ ನೆಮ್ಮದಿಯಿಲ್ಲದೆ ಜೀವನ ಆಕೆಯದು. ಗಂಡನ ಸೋಮಾರಿತನದ ನೋವು ಒಂದೆಡೆಯಾದರೆ ದುಡ್ಡಿಗಾಗಿ ಹಿಂಸಿಸುವ ನೋವು ಇನ್ನೊಂದೆಡೆ. ಸ್ತ್ರೀಧನ ತರಲು ಹಿಂಸೆ ಕೊಡುವ ಗಂಡನ ವಿರುದ್ಧ ನೇರವಾಗಿ ಪ್ರತಿಭಟಿಸಲಾಗದೇ ಆಕೆ ಆತ್ಮಹತ್ಯೆಯ ಮೂಲಕ ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ. ಸ್ವಂತ ತಮ್ಮ ಇದ್ದರೂ ತಮ್ಮನ ಗೆಳೆಯ ಅದ್ದುನೊಡನೆ ತೆಂಬೆಕಾಯಿ ತರಿಸಿಕೊಂಡು ತಿಂದು ಸಾಯಲು ಪ್ರಯತ್ನಿಸುತ್ತಾಳೆ. ತನ್ನ ಗಂಡನಿಗೆ ಹಣ ಜೋಡಿಸಿಕೊಡಲಾಗದೇ,

ಇತ್ತ ತಂದೆಯ ಬಳಿ ಪದೇಪದೇ ಕೈ ಚಾಚಲೂ ಆಗದೇ ಈ ವ್ಯವಸ್ಥೆಯನ್ನು ಎದುರಿಸಲಾಗದೇ ಸಾಯಲು ಬಯಸುತ್ತಾಳೆ. ಕೌಟುಂಬಿಕ ಹಿಂಸೆಗೆ ವೈಯಕ್ತಿಕ ನೆಲೆಯ ಪ್ರತಿರೋಧವನ್ನು ಹೀಗೆ ಮಾಡುವ ಸ್ತ್ರೀಯರು, ಬದಲಿಗೆ ತಮ್ಮ ಅಸಹಾಯಕತೆಯನ್ನೇ ತೋರ್ಪಡಿಸುವರು.

೬.೨.೩. ಪರ್ಯಾಯ ರೂಪದ ಪ್ರತಿಭಟನೆ: ಕೆಲವೊಮ್ಮೆ ವ್ಯವಸ್ಥೆಯ ವಿರುದ್ಧ ಕೇವಲ ಪ್ರತಿಭಟನೆ ಮಾಡುವುದಲ್ಲ, ಮುಂದುವರೆದು, ಹೊಸ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ಪರ್ಯಾಯ ಹುಡುಕಾಟವನ್ನು ಕೆಲವು ಮಹಿಳೆಯರು ಮಾಡುವರು. ಇಲ್ಲಿನ 'ಒಂದು ಹಗಲು ಒಂದು ರಾತ್ರಿ', 'ಸೈತಾನ ಹಿಡಿದ ಹೆಂಡತಿ', 'ದ್ವೀಪ' ಈ ಮೂರು ಕತೆಗಳಲ್ಲಿ ಇಂತಹ ಪರ್ಯಾಯರೂಪೀ ಪ್ರತಿಭಟನೆಯ ಅಂಶಗಳಿವೆ. 'ಒಂದು ಹಗಲು ಒಂದು ರಾತ್ರಿ' ಕತೆಯ ನಾಯಕಿ ಸಲ್ಮಾ ಶಿಕ್ಷಣ ಪಡೆದಿದ್ದರೂ, ಸ್ವಾತಂತ್ರ್ಯದಿಂದ ವಂಚಿತಳಾಗಿರುತ್ತಾಳೆ. ಅವಳ ಅಪ್ಪ ಸಂಪ್ರದಾಯ ಶರಣನು. ಮಗಳನ್ನು ಕಾಲೇಜಿಗೆ ಕಳಿಸದೇ ಮನೆಯಲ್ಲಿ ಬಂಧಿಯಾಗಿಡುವವನು. ತನ್ನ ಓರಗೆಯ ಹಿಂದೂ ಕ್ರಿಶ್ಚಿಯನ್ ಹುಡುಗಿಯರು ಅಲಂಕಾರ ಮಾಡಿಕೊಂಡು ಕಾಲೇಜಿಗೆ ಹೋಗುವುದನ್ನು ನೋಡಿ ತನ್ನನ್ನು ಅವರೊಡನೆ ಸಲ್ಮಾ ತೂಗಿ ನೋಡುತ್ತಾಳೆ. ಆಕೆಗೆ ಒಂದೆಡೆ ಅವರನ್ನು ಕಂಡು ಅಸೂಯೆ ಉಂಟಾದರೆ ಮತ್ತೊಂದೆಡೆ ತಂದೆಯ ಮೇಲೆ ಆಕ್ರೋಶವಾಗುತ್ತದೆ. ಆಕ್ರೋಶವನ್ನಾದರೂ ತಂದೆ ಎದುರಿಗೆ ವ್ಯಕ್ತಪಡಿಸದೇ ದುರ್ಬಲನಾದ ಮನೆಯ ಆಳಾದ ಅಬ್ದುಲ್ಲಾನ ಎದುರಿಗೆ ವ್ಯಕ್ತಪಡಿಸುತ್ತಾಳೆ. "ಈ ಸಂಪ್ರದಾಯಗಳೆಲ್ಲಾ ಗಂಡಸರು ಹಾಕಿದ ಸ್ವಾರ್ಥದ ಬೇಲಿ. ಹೆಣ್ಣಿಗೆ ಮಾತ್ರ ಯಾಕೆ ಈ ಕಠಿಣ ಸಂಪ್ರದಾಯ? ಗಂಡಿಗೆ ಯಾಕೆ ಇಲ್ಲ? ಹೆಣ್ಣನ್ನು ಗಂಡು ಬರೀ ಭೋಗದ ವಸ್ತುವೆಂದು ತಿಳಿದಿದ್ದರಿಂದ ಮಾತ್ರ ಹೀಗಾಗುತ್ತದೆ..." ಎಂದು ಅಬ್ದುಲ್ಲಾನೆದುರಿಗೆ ಸಲ್ಮಾ ತನ್ನ ಅಳಲನ್ನು ತೋಡಿಕೊಳ್ಳುತ್ತಾಳೆ. ಅವಳ ಈ ಪ್ರತಿಭಟನೆಯಲ್ಲಿ ಆಕೆಗೆ ಆಗಿರುವ ನೋವು ಮತ್ತು ಹತಾಶೆ ಹೊರಗೆ ಚಿಮ್ಮುತ್ತವೆ.

ಸಲ್ಮಾಳ ಗಂಡ ತಲಾಕ್ ನೀಡಲು ಬಲವಾದ ಕಾರಣವೇ ಕಂಡುಬರುವುದಿಲ್ಲ. ಆಕ್ಸಿಡೆಂಟ್ ಆಗಿದ್ದ ಗೆಳತಿ ಗೀತಾಳನ್ನು ನೋಡಲು ಗಂಡನ ಅನುಮತಿ ಇಲ್ಲದೇ ಹೋದದ್ದು ಮತ್ತು ಅವಳ ತಂದೆಗೂ ಮತ್ತು ಮಾವನಿಗೂ ಮನಸ್ತಾಪ ಇದ್ದುದು ಕಾರಣವಾಗಿ, ಮಾತಿನ ಚಕಮಕಿಯಲ್ಲಿ ಆಕೆಯ ಗಂಡ ತಲಾಕ್ ಕೊಡುತ್ತಾನೆ. ಸಿಟ್ಟಿನಲ್ಲಿ ನೀಡಿದ ತಲಾಕ್ ನಿಷ್ಕ್ರಿಯವಾಗಿರುತ್ತದೆ ಎಂಬ ಖಾಜಿಯ ಮಾತು ಕೇಳಿ ಸ್ವಲ್ಪ ಕಸಿವಿಸಿಗೊಂಡರೂ, ಆಕೆ ಪಂಜರದಿಂದ ಬಿಡುಗಡೆಗೊಂಡ ಪಕ್ಷಿಯಂತೆ ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತಾಳೆ. 'ಜುಲೇಖ' ಕತೆಯಲ್ಲಿಯೂ ಸಹ ಜುಲೇಖ ತನ್ನ ಗಂಡ ಸತ್ತಾಗ ದುಃಖ ಪಡುವ ಬದಲು ಪಂಜರದಿಂದ ಬಿಡುಗಡೆಗೊಂಡ ಹಕ್ಕಿಯಂತೆ ಖುಷಿ ಪಡುತ್ತಾಳೆ. ಗಂಡ ಮನೆಗಳ ಕರಾಳಯಾತನೆಯಿಂದ ಬಿಡುಗಡೆಗೆ ತವಕಿಸುವ

ಸ್ತ್ರೀ ಪಾತ್ರಗಳು ಕಟ್ಪಾಡಿ ಅವರ ಕತೆಗಳಲ್ಲಿ ಚಿತ್ರಿತವಾಗಿವೆ. ಸಿಟ್ಟಿನಲ್ಲಿ ತಲಾಕ್ ನೀಡಿದ ಸಲ್ಮಾಳ ಗಂಡ ತನ್ನ ತಂದೆ ಸತ್ತ ನಂತರ ಪಶ್ಚಾತ್ತಾಪ ಪಡುವ ಮೂಲಕ ಸಲ್ಮಾಳೊಡನೆ ಬಾಳು ನಡೆಸಲು ಪರಿತಪಿಸುತ್ತಾನೆ. ಇಲ್ಲಿ ಗಂಡನಾದವನು ಇಷ್ಟಬಂದಾಗ ತಲಾಕ್ ಕೊಡುವುದು, ಇಷ್ಟ ಬಂದಾಗ ತಲಾಕನ್ನು ನಿಷ್ಕ್ರಿಯಗೊಳಿಸುವುದು ಸ್ತ್ರೀಗೆ ಒಂದು ಆಘಾತಕಾರಿ ವಿಷಯವಾಗಿ ಕಂಡುಬರುತ್ತದೆ. ಸಲ್ಮಾ ಗಂಡನಿಂದ ತಲಾಕ್ ಪಡೆದು ಪಂಜರದಿಂದ ಬಿಡುಗಡೆಗೊಂಡಂತೆ ಉಲ್ಲಾಸಗೊಂಡರೂ, 'ಇದ್ದತ್' ಆಚರಣೆಯಲ್ಲಿ ಬಂಧಿತಳಾಗುತ್ತಾಳೆ. ನಂತರ ಗಂಡನನ್ನು ಮರಳಿ ಸೇರಲು ಆಕೆ ಮನೆಯ ಆಳಿನೊಡನೆ ನಿಕಾಹ್ ಆಗಬೇಕಾಗುತ್ತದೆ. ಸಲ್ಮಾಳಿಗೆ ಅಬ್ದುಲ್ಲಾನೊಡನೆ ನಡೆಯುವ ನಿಕಾಹ ಇಷ್ಟ ಆಗುವುದಿಲ್ಲ. ಅಬ್ದುಲ್ಲಾ "ಸಲ್ಮಾ..." ಎಂದಾಗ ತಲೆ ಎತ್ತಿ ನೋಡುತ್ತಾಳೆ. ಕಣ್ಣಲ್ಲಿ ನೀರು...ಗಲ್ಲಕ್ಕಿಳಿದು ಕೆಳಗೆ ತೊಟ್ಟಿಕ್ಕುತ್ತದೆ. 'ಸಲ್ಮಾ ಸಾಹುಕಾರು ಹೇಳಿದ್ದಕ್ಕೆ...' ಎಂದು ಅಬ್ದುಲ್ಲಾ ತೊದಲುತ್ತಾನೆ. ಆಗ ಸಲ್ಮಾ ಅವನನ್ನು ದಿಟ್ಟಿಸಿ ನೋಡುತ್ತಾ "ಹೌದು ಅವರು ಹೇಳಿದ್ರು ನೀನು ಒಪ್ಪಿದೆ. ನೀವೆಲ್ಲಾ ಕಟುಕರು ನನ್ನನ್ನು ಪುನಃ ನರಕಕ್ಕೆ ತಳ್ತಾ ಇದ್ದೀರಿ" ಎಂದು ಆಕೆ ಕೂಗಾಡುತ್ತಾಳೆ. ಗಂಡ ಮತ್ತು ತಂದೆಯರ ಮೇಲಿನ ಅವಳ ಸಿಟ್ಟು ಅಮಾಯಕ ಅಬ್ದುಲ್ಲಾನ ಮೇಲೆ ಹರಿಯುತ್ತದೆ. ಆಕೆ ತನ್ನನ್ನು ನಡೆಸಿಕೊಳ್ಳುವ ಸಮಾಜದ ರೀತಿಯನ್ನು ಆಕ್ರೋಶದಿಂದ ಹೀಗೆ ವ್ಯಾಖ್ಯಾನಿಸುತ್ತಾಳೆ:

"ನಾನು ಕಾಲಿಟ್ಟ ಮನೆಯಲ್ಲಿ ಸಮರಸಕ್ಕೆ ಅರ್ಥವೇನಿತ್ತು ಗೊತ್ತೇ? ದಾಸ್ಯ ಬರೇ ದೈಹಿಕ ದಾಸ್ಯ ಮಾತ್ರವಲ್ಲ, ವೈಚಾರಿಕ ವ್ಯಭಿಚಾರ ಕೂಡಾ. ಅತ್ತೆಗೆ ಬೇಕಿದುದ್ದು ಮಗನಿಗೆ ಹೆಂಡತಿಯಲ್ಲಿ ಮನೆಯ ಜವಾಬ್ದಾರಿ ಹೊರಬಲ್ಲ ಹೆಣ್ಣಾಳು. ಗಂಡನಿಗೆ ಬೇಕಿದುದು ದಾಸಿ. ಚಂದದ ಕಾಮದ ಬೊಂಬೆ. ಮಾವನಿಗೆ ಬೇಕಾದದ್ದು ವ್ಯವಹಾರದಲ್ಲಿ ನನ್ನ ಶ್ರೀಮಂತ ಅಪ್ಪನ ಬಲಿಷ್ಠ ಕೈಗಳ ಆಸರೆ. ಜೊತೆಗೆ ನನ್ನ ಹಿಂದೆ ಬರಲಿರುವ ಆಸ್ತಿ, ಹಣ, ಬಂಗಾರ."

ಈ ಪರಿಸ್ಥಿತಿ ಕೇವಲ ಸಲ್ಮಾಳದಲ್ಲ. ಇದು ಎಲ್ಲ ಧರ್ಮ ಮತ್ತು ಜಾತಿಯಲ್ಲಿರುವ ಮಹಿಳೆಯರ ವಾಸ್ತವವೇ ಆಗಿದೆ. ಸಲ್ಮಾಳ ಮೇಲೆ ಅಬ್ದುಲ್ಲಾನಿಗೆ ಪ್ರೇಮವಿದ್ದರೂ ತನ್ನ ಬಡತನದ ಸ್ಥಿತಿಯಿಂದ ಅವನ್ನು ಹೇಳಲಾರದೇ ಮರೆಮಾಚಿರುತ್ತಾನೆ. ಅಬ್ದುಲ್ಲಾನ ಗುಪ್ತಪ್ರೇಮವನ್ನು ತಿಳಿದ ಸಲ್ಮಾ, ವ್ಯವಸ್ಥೆಯ ವಿರುದ್ಧ ಕದನ ಮಾಡಲು ಸಿದ್ಧವಾಗುತ್ತಾಳೆ. "ನಾಳೆ ಅವರು ಹೇಳಿದಂತೆ ತಲಾಕ್ ಕೊಡದೆ ಗಟ್ಟಿಯಾಗಿ ನನ್ನ ಕೈ ಹಿಡಿದು ನಿಲ್ಲುವ ಶಕ್ತಿ ನಿನಗೆ ಉಂಟಾ?" ಎಂದು ಅಬ್ದುಲ್ಲಾನಿಗೆ ಪ್ರಶ್ನಿಸತ್ತಾಳೆ. ಅವಳ ಪ್ರತಿಭಟನೆಗೆ ಒಂದು ಹೊಸ ಪರ್ಯಾಯ ಆಯಾಮ ಕಂಡುಬರುತ್ತದೆ. ಹೆಣ್ಣನ್ನು ವಸ್ತುವಾಗಿ ನೋಡುವ ಅನೈತಿಕ ಆಚರಣೆಯ ವಿರುದ್ಧ ಸಲ್ಮಾ ತನ್ನ ಪ್ರೇಮದ ನೈತಿಕತೆಯ ಮೂಲಕ ಪ್ರತಿಭಟಿಸುತ್ತ, ಹೊಸಜೀವನ ರೂಪಿಸಿಕೊಳ್ಳುತ್ತಾಳೆ.

ಈ ಮೂಲಕ ಸಲ್ಮಾ ಧೀರ ಮಹಿಳೆಯಾಗಿ ಮರುಹುಟ್ಟು ಪಡೆಯುತ್ತಾಳೆ. ಈ ಕತೆಯನ್ನು ವಿಶ್ಲೇಷಿಸುತ್ತ ಆರ್ಕೆ ಮಣಿಪಾಲ ಅವರು "ನಾಯಕಿ ಜಿಡ್ಡುಗಟ್ಟಿದ ಮುಸಲ್ಮಾನ ಸಮಾಜದ ಸಂಪ್ರದಾಯವನ್ನು ಧಿಕ್ಕರಿಸಿ ಒಂದು ರಾತ್ರಿ ಮಟ್ಟಿಗೆ ಕೂಡಿರಲು ಬಂದ ತನ್ನ ಮನೆಯಾಳನ್ನೇ ಪುನರ್ ವಿವಾಹಕ್ಕೆ ಆಯ್ಕೆ ಮಾಡಿಕೊಳ್ಳುವ ನಿರ್ಧಾರಕ್ಕೆ ಬರುತ್ತಾಳೆ. ತಾನು ಮಾಡುತ್ತಿರುವುದು ಸರಿಯಾದುದು ಮತ್ತು ಯಾಕೆ ಸರಿಯಾದುದು ಎಂಬುದನ್ನು ತಿಳಿದೇ ಆಕೆ ನಿರ್ಧರಿಸಿದ್ದುಂಟು. ಮುಸ್ಲಿಮ್ ಸಮಾಜದ ದೃಷ್ಟಿಯಿಂದ ತುಂಬ ದಿಟ್ಟತನದ ಕ್ರಿಯೆಯಾಗಿದೆ"[೬] ಎಂದು ಹೇಳುತ್ತಾರೆ.

ಈ ಕತೆಯನ್ನು ಓದುವಾಗ ನೆನಪಾಗುವ ಇನ್ನೊಂದು ಕೃತಿಯೆಂದರೆ ಸಾರಾ ಅವರ 'ಚಂದ್ರಗಿರಿ ತೀರದಲ್ಲಿ'. ಜಡಗಟ್ಟಿದ ಸಮುದಾಯದಲ್ಲಿ ಬದುಕುವ ಕಾದಂಬರಿಯ ನಾಯಕಿ ನಾದಿರಾ ಕೂಡ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುತ್ತಾಳೆ. ಮಸೀದಿಗೆ ಪ್ರವೇಶ ಕೊಡದ ಮುಸ್ಲಿಮ್ ಧಾರ್ಮಿಕ ವ್ಯವಸ್ಥೆಯನ್ನು ಹಾಗೂ ಆಕೆಯ ಮೇಲೆ ಏರುವ ಧಾರ್ಮಿಕ ಕಟ್ಟಳೆಗಳನ್ನು ಆಕೆ ತಿರಸ್ಕರಿಸುತ್ತಾಳೆ. ನಾದಿರಾಳ ಪರಿಸ್ಥಿತಿ ಕೂಡಾ ಸಲ್ಮಾಳ ಪರಿಸ್ಥಿತಿಯೇ ಆಗಿದೆ. ನಾದಿರಾ ಚಂದ್ರಗಿರಿ ಕೆರೆಯಲ್ಲಿ ಬೀಳುವ ಮೂಲಕ ಆಕೆಯ ಮನಸ್ಸು ಧರ್ಮದ ನೆಪದಲ್ಲಿರುವ ಪುರುಷವಾದಿ ಮೌಲ್ಯಗಳ ವಿರುದ್ಧ ಪ್ರತಿಭಟಿಸುತ್ತದೆ. ಆಕೆ 'ನನ್ನ ಈ ಧರ್ಮದ ಪಾಪ ಧರ್ಮಕ್ಕೆ ಸೇರಲಿ' ಎಂದು ಘೋಷಿಸಿ ಮಸೀದಿಯ ಕೆರೆಗೆ ಬೀಳುವ ಮೂಲಕ ಪ್ರತಿಭಟಿಸುತ್ತಾಳೆ. ನಾದಿರಾಳ ಸಾವು ಧಾರ್ಮಿಕ ವ್ಯವಸ್ಥೆಯ ವಿರುದ್ಧದ ಪಲಾಯನ ರೂಪೀ ಪ್ರತಿಭಟನೆಯಾಗಿ ಕಂಡುಬಂದರೆ 'ಒಂದು ಹಗಲು ಒಂದು ರಾತ್ರಿ' ಕತೆಯ ನಾಯಕಿ ಸಲ್ಮಾಳ ಪ್ರತಿಭಟನೆ ಹೊಸ ಬದುಕನ್ನು ಕಟ್ಟಿಕೊಳ್ಳುವ ಮೂಲಕ ತಿರುವು ಪಡೆದುಕೊಳ್ಳುತ್ತದೆ. ಸಲ್ಮಾ ಧಾರ್ಮಿಕ ಚೌಕಟ್ಟಿನೊಳಗೆ ನಿಂತು ತನ್ನ ಅಸ್ತಿತ್ವಕ್ಕೆ ಪರ್ಯಾಯ ರೂಪ ಕಂಡುಕೊಳ್ಳುವುದು ಬಹಳ ಮಹತ್ವದ ಸಂಗತಿಯಾಗಿದೆ. ಇದನ್ನು ಕತೆ ಸಂಭ್ರಮದಿಂದ ಬಣ್ಣಿಸುತ್ತದೆ. "ಕತೆಯ ನಾಯಕಿ ಸಂಪ್ರದಾಯದ ಚೌಕಟ್ಟಿನೊಳಗೆ ನಿಂತು ಧಿಕ್ಕರಿಸುತ್ತಾಳೆ, ಮಾತ್ರವಲ್ಲ ಜಯವನ್ನೂ ಗಳಿಸುತ್ತಾಳೆ. ಈ ಕತೆಯನ್ನು ಓದಿದ ಪ್ರಭಾವದಿಂದ 'ಚಂದ್ರಗಿರಿ ತೀರದಲ್ಲಿ' ಕಾದಂಬರಿ ಬರೆದೆನೆಂದು ಖಾಸಗಿಯಾಗಿ ಸಹೋದರಿ ಸಾರಾ ಅಬೂಬಕ್ಕರ್ ಅವರು ಹೇಳಿದಾಗ ನನಗೆ ಅತೀವ ಸಂತೋಷವಾಗಿತ್ತು ಎಂದು ಸ್ವತಃ ಕಟ್ಪಾಡಿ ಅವರೇ ಹೇಳಿಕೊಂಡಿದ್ದಾರೆ."[೭] ಹೆಣ್ಣಿನ ಅಳಲಿಗೆ ಮುಸ್ಲಿಂ ಸಮುದಾಯದ ಲೇಖಕ ಮತ್ತು ಲೇಖಕಿ ಇಬ್ಬರೂ ತೋರಿರುವ ಪ್ರತಿಕ್ರಿಯೆ ವಿಶೇಷವಾಗಿದೆ.

'ಸೈತಾನ ಹಿಡಿದ ಹೆಂಡತಿ' ಎಂಬ ಕತೆಯಲ್ಲಿ ಕೂಡ ಪರ್ಯಾಯ ರೂಪದ ಪ್ರತಿಭಟನೆ ಕಂಡುಬರುತ್ತದೆ. ಒಂದು ಶ್ರೀಮಂತ ಕುಟುಂಬ ದುಡಿಮೆ ಇಲ್ಲದೇ ನಿರ್ಗತಿಕವಾದ ವಸ್ತು ಈ ಕತೆಯಲ್ಲಿದೆ. ಇಲ್ಲಿ ಶಾಬದ್ದೀನ್ ತಂದೆ ಕೂಡಿಟ್ಟ ಆಸ್ತಿಯಲ್ಲೇ ಜೀವನ ಸಾಗಿಸುವವನು; ದುಡಿಮೆ

ಮಾಡದೇ ರೇಶನ್ ಖಾಲಿ ಆದೊಡನೆ ಹೆಂಡತಿಯನ್ನು ತವರು ಮನೆಗೆ ಕಳಿಸುತ್ತಿದ್ದವನು. ತವರು ಮನೆಗೆ ಪದೇಪದೇ ಹೋಗಲು ಸಾಧ್ಯವಾಗದ ಸಾರಂಬಿ ಒಂದು ದಿನ ಸಿಡಿದೇಳುತ್ತಾಳೆ. ಇದನ್ನು ಅರಿಯದ ಗಂಡ ಮತ್ತು ಅತ್ತೆ ಈಕೆಗೆ ಸೈತಾನ ಹಿಡಿದಿದೆ ಎಂದು ತಿಳಿಯುತ್ತಾರೆ. ಹೇಳಿದ ಹಾಗೆ ಕೇಳುತ್ತಿದ್ದ ಸಾರಂಬಿ ಹೇಗಿದ್ದವಳು ಹೇಗಾಗಿ ಬಿಟ್ಟಳು ಎಂದು ಅವರು ಯೋಚಿಸುತ್ತಾರೆ. ಗಂಡನ ಮನೆಯ ಮರ್ಯಾದೆಯನ್ನು ಕಾಪಾಡುವುದಕ್ಕಾಗಿ ತವರು ಮನೆಯಿಂದ ಹಣ, ಅಕ್ಕಿ, ಮೆಣಸು, ಹುಳಿ, ಚಾಪುಡಿ ತರುತ್ತಿದ್ದವಳು. ಅವಳು ತವರಿಗೆ ಹೊರಟಳೆಂದರೆ ಮನೆಯವರಿಗೆಲ್ಲಾ ಖುಷಿ. ಅದರೆ ಸಾರಂಬಿ ಸ್ವಾವಲಂಬಿ ಬದುಕು ಇಷ್ಟಪಡುವವಳು. ಗಂಡನನ್ನು ಹೇಗಾದರೂ ಮಾಡಿ ಕೆಲಸಕ್ಕೆ ಕಳಿಸಲು ಯತ್ನಿಸಿ, ಅದು ಆಗದಿದ್ದಾಗ ತಾನು ತವರಲ್ಲಿ ಕಲಿತಿದ್ದ ಬೀಡಿ ಕಟ್ಟುವ ಕೆಲಸವನ್ನು ಇಲ್ಲೂ ಶುರು ಮಾಡಲೇ ಎಂದು ಕೇಳುತ್ತಾಳೆ. 'ಅದೆಲ್ಲಾ ಶುರು ಮಾಡಿದರೆ ಊರಿನ ಜನಗಳಿಗೆ ತಿಳಿದು ಈ ಖಾನ್‌ದಾನ್‌ನ ಇಜ್ಜತ್ತು ಉಳಿದಿತೇ...' ಎಂದು ಅತ್ತೆ ತಡೆಯುತ್ತಾಳೆ.

ಅತ್ತೆಗೆ ಹೊಟ್ಟೆ ಹಸಿವಿಗಿಂತ ಹುಸಿ ಮರ್ಯಾದೆ, ಗೌರವ, ಪ್ರತಿಷ್ಠೆ ಮೇಲಾಗಿರುತ್ತದೆ. ದುಡಿದು ತಿನ್ನಲು ಸಣ್ಣ ಕೆಲಸವೇ ಆಗಲೀ ದೊಡ್ಡ ಕೆಲಸವೇ ಆಗಲಿ ಇಲ್ಲಿ ಗೌರವದ ಪ್ರಶ್ನೆ ಬರುವುದಿಲ್ಲ. ಇಲ್ಲಿ ಒಳ್ಳೆ ಕೆಲಸ ಮಾಡಲು ಹಿಂಜರಿಯುವ ಆವಶ್ಯಕತೆ ಇರುವುದಿಲ್ಲ. ಅವರಿಗೆ ಶ್ರೀಮಂತಿಕೆ ಹಿಂದಿತ್ತು. ಆದರೆ ಈಗಿಲ್ಲ. ಹಾಗಿದ್ದಾಗ ಈಗ ದುಡಿದು ತಿನ್ನುವುದರಲ್ಲಿ ತಪ್ಪಿಲ್ಲ. ಆದರೆ ಅವರಿಗೆ ದುಡಿದು ತಿನ್ನಲು ಮರ್ಯಾದೇ ಪ್ರಶ್ನೆ ಅಡ್ಡ ಬಂದಿದೆ. ಬೇರೆಮನೆಯಿಂದ ರೇಶನ್ನು, ಬಟ್ಟೆ, ಹಣ ತರಿಸಿಕೊಳ್ಳುವುದಕ್ಕೆ ಮರ್ಯಾದೆ ಅಡ್ಡ ಬರುವುದಿಲ್ಲ. ಇಂತಹ ವಿಚಿತ್ರ ಸನ್ನಿವೇಶದಲ್ಲಿ ತೊಳಲಾಡುವ ಪಾತ್ರವಾಗಿ ಸಾರಂಬಿ ಬರುತ್ತಾಳೆ. ಆಕೆಗೆ ಅವಳ ಅಣ್ಣ ಸಮಾಧಾನ ಮಾಡುತ್ತಾ 'ನಿನ್ನ ಗಂಡನಿಗೆ ವ್ಯಾಪಾರ ಮಾಡಲು ಹೇಳು ನಾವು ಬೇಕಾದರೆ ಸಹಾಯ ಮಾಡುತ್ತೇವೆ' ಎನ್ನುತ್ತಾನೆ. ಆದರೆ ತವರಿನಿಂದ ಭಿಕ್ಷೆ ಬೇಡಲು ಬೇಸತ್ತ ಸಾರಂಬಿ ಕಡೆಗೆ ಒಂದು ನಿರ್ಧಾರಕ್ಕೆ ಬರುತ್ತಾಳೆ. ತವರಿಂದ ಬರುವಾಗ ಬೀಡಿ ಎಲೆ ನೂಲು ತರುತ್ತಾಳೆ. ಗಂಡ ಅತ್ತೆಗೆ ಮಾತಾಡದೆ ಕೋಣೆಯಲ್ಲಿ ಹೋಗಿ ಕೂರುತ್ತಾಳೆ. ಅತ್ತೆ ಮತ್ತು ಗಂಡ ಹಸಿವು ತಡೆಯಲು ಅಗದೆ ಏನಾದರೂ ಕೊಡು ಎಂದಾಗ ಸಾರಂಬಿ 'ಮಣ್ಣು ತಿನ್ನಿ...' ಎನ್ನುತ್ತಾಳೆ. ಅವಳ ಪ್ರತಿಭಟನೆ ಈಗ ಗರಿಪಡೆಯುತ್ತದೆ. 'ನಾನು ತವರಿಂದ ಭಿಕ್ಷೆ ಬೇಡಿ ತಂದದ್ದು ನಿಮಗಾಗಿ ಅಲ್ಲ. ನನ್ನ ಮಕ್ಕಳು ಸಾಯಬಾರದೆಂದು ನಿಮಗೆ ಬೇಕಿದ್ದರೆ ದುಡಿದು ಸಂಪಾದನೆ ಮಾಡಿ ತನ್ನಿ, ಅನ್ನ ಮಾಡಿ ಹಾಕ್ತೇನೆ...' ಎಂದು ಕಡಕ್ಕಾಗಿ ಉತ್ತರ ಕೊಡುತ್ತಾಳೆ. ಮಹಿಳೆಯ ಸಹನೆಗೂ ಮಿತಿ ಮೀರಿದರೆ ಪ್ರತಿಭಟನೆಗೆ ತಿರುಗುತ್ತದೆ.

ಈ ಪ್ರತಿಭಟನೆಯಲ್ಲಿ ಒಂದು ಕಟ್ಟುವ ಆಯಾಮ ಕಂಡುಬರುತ್ತದೆ. ಹಾಳಾಗಿ ಹೋಗಿರುವ ತನ್ನ ಕುಟುಂಬ ಸರಿ ಹೋಗಲಿ ಎಂಬ ಮನಸ್ಸು ಸಾರಂಬಿಯದು. ಮೊದಲಿಗೆ ಶಾಬುದ್ದೀನ್ 'ಸಾರಂಬಿಗೆ ಖಂಡಿತಾ ಸೈತಾನೇ ಹಿಡಿದಿದೆ. ಇಲ್ಲವಾದರೆ ಹಾಗೆಲ್ಲಾ ಹೇಳುವವಳೇ ಅಲ್ಲ' ಎನ್ನುತ್ತಾನೆ. ಹಸಿವು ತಡೆಯಲಾರದೆ "ಬಾಗಿಲು ತೆಗಿ ಮಾರಾಯ್ತಿ ಇಲ್ಲವಾದರೆ ಒದ್ದು ಬಡೀತೇನೆ..." ಎಂದು ಕೂಗುತ್ತಾನೆ. ಸಾರಂಬಿ ಬಾಗಿಲು ತೆರೆಯದೇ ಅವರನ್ನು ತಿದ್ದಲು ಹಟ ತೊಡುತ್ತಾಳೆ. ಕೊನೆಗೆ ಹಸಿವಿನ ತೀವ್ರತೆಯಿಂದ ದುಡಿಮೆಯ ಬೆಲೆ ಅರಿತ ಶಾಬುದ್ದೀನ್ 'ನೀನು ಹೇಳಿದಂತೆ ಕೇಳ್ತೇನೆ... ನಾಳೆಯಿಂದ ಏನಾದರೊಂದು ಕೆಲಸ ಮಾಡುವ ಅಂತ ನಿರ್ಧರಿಸಿದ್ದೇನೆ ಮಾರಾಯ್ತಿ...' ಎಂದು ಬದಲಾವಣೆ ಪಡೆಯುತ್ತಾನೆ. "ಹಾಗೆ ನಾನು ಒಳಗೆ ಸುಮ್ಮನೆ ಕೈಕಟ್ಟಿ ಕೂತಿಲ್ಲ, ತವರಿಂದ ಬರುವಾಗ ಸೊಪ್ಪು, ಎಲೆ, ಕತ್ತರಿ ತಂದಿದ್ದೇನೆ.... ಬೀಡಿ ಕಟ್ಟುತ್ತಿದ್ದೇನೆ. ನೀವೂ ಏನಾದರೂ ಕೆಲಸ ಮಾಡಿರಿ. ಇಲ್ಲವಾದರೆ ನನ್ನೊಂದಿಗೆ ಬೀಡಿ ಕಟ್ಟುವುದನ್ನು ಕಲಿಯಿರಿ, ಇಲ್ಲವಾದರೆ ಉಪವಾಸವೇ ಗತಿ. ನಾನಿನ್ನು ತವರಿಗೆ ಹೋಗಿ ಬಾಬಿಯರ ಮುಂದೆ ಭಿಕ್ಷೆ ಬೇಡಿ ಮಾನಮರ್ಯಾದೆ ಕಳೆದುಕೊಳ್ಳಲಾರೆ..." ಎಂದು ಒಳಗಿನಿಂದ ಆಕೆ ಹೇಳುತ್ತಾಳೆ. ಅವಳ ಪ್ರತಿಭಟನೆಯಲ್ಲಿ 'ನಾನು ದುಡಿಯುತ್ತಿದ್ದೇನೆ. ನನ್ನೊಡನೆ ಕೈ ಜೋಡಿಸಿ ಇಲ್ಲವಾದರೆ ಉಪವಾಸ ಇರಬೇಕಾದ ಪರಿಸ್ಥಿತಿ' ಎಂದು ಸಂದೇಶವಿದೆ. ಸಾರಂಬಿ ಉಗ್ರರೂಪ ತಾಳಿದ್ದನ್ನು ಕತೆ ಹೀಗೆ ಬಣ್ಣಿಸುತ್ತದೆ. "ತಟ್ಟನೆ ಬಾಗಿಲು ತೆರೆದು ಸಾರಂಬಿ ಹುಲಿಯಂತೆ ನುಗ್ಗಿ ಬಂದಳು, ಅವಳು ತಾನು ಕಟ್ಟಿದ ಬೀಡಿಯ ಬುಟ್ಟಿಯನ್ನು ಎತ್ತಿ ತಂದು ತಾಯಿ ಮಗನ ಮುಂದಿಟ್ಟು ಇನ್ನು ಈ ಬೀಡಿಗೆ ನೂಲು ಸುತ್ತಿಲ್ಲ, ನೀವಿಬ್ಬರೂ ಈ ಬೀಡಿಗಳಿಗೆ ನೂಲು ಸುತ್ತಿ ಇಪ್ಪತ್ತೈದು ಬೀಡಿಗಳ ಕಟ್ಟು ಮಾಡಿ" ಎಂದು ಹೇಳಿ ಅಡಿಗೆ ಮಾಡಲು ಹೋಗುತ್ತಾಳೆ. ಅವಳ ಉಗ್ರರೂಪವನ್ನು ಕಂಡ ಸೋಮಾರಿ ಗಂಡ ಅತ್ತೆಯರು ಬದಲಾವಣೆ ಹೊಂದುವರು. ಸಾರಂಬಿ ಗೆಲುವು ಸಾಧಿಸುವಳು. ಅವಳ ಹಟ ಪ್ರತಿಭಟನೆ ಅವಳ ಕುಟುಂಬವನ್ನು ಸುಧಾರಿಸುವಲ್ಲಿ ಯಶ ಸಾಧಿಸುತ್ತದೆ.

ಸಾಮಾನ್ಯವಾಗಿ ವಿಧವೆಯರು ವ್ಯಭಿಚಾರಕ್ಕೆ ಇಳಿಯಲು ಸಾಮಾಜಿಕ ಹಾಗೂ ಆರ್ಥಿಕ ಅಂಶಗಳು ಕಾರಣವಾಗಿರುತ್ತವೆ. ಗಂಡನನ್ನು ಕಳೆದುಕೊಂಡ ಕೆಲವು ವಿಧವೆಯರಿಗೆ ತನ್ನ ಜೀವನ ಸಾಗಿಸಲು ವೇಶ್ಯಾವೃತ್ತಿ ಅನಿವಾರ್ಯವಾಗಿರುತ್ತದೆ. ಸಮಾಜವೇ ವೇಶ್ಯಾವೃತ್ತಿಯನ್ನು ಸೃಷ್ಟಿಸುತ್ತದೆ. ಹೀಗೆ ಆರ್ಥಿಕ ಸಮಸ್ಯೆಯಿಂದ ಬಳಲಿದ ವಿಧವೆ ವೇಶ್ಯೆಯಾಗುವ ಪಾತ್ರವೊಂದು 'ದ್ವೀಪ' ಕತೆಯಲ್ಲಿ ಬರುತ್ತದೆ. ಹಾಜಿಮಾ ಸೂಳೆಯಾಗಿದ್ದಾಳೆ. ಇದು ಮುಸ್ಲಿಮರಿಗೆ ಅವಮಾನ ಎಂಬುದು ಅವಳ ಮೇಲಿನ ಸಮಾಜದ ದೂರು. ಅವಳನ್ನು ಕುದ್ರಿನಿಂದ ಹೊರಗಟ್ಟಬೇಕು. ಅವಳನ್ನು ಕಲ್ಲೆಸೆದು ಕೊಲ್ಲಬೇಕು. ಜಮಾತಿನಿಂದ ಹೊರಗೆ ಇಡಬೇಕೆಂದು ಏನೇನೂ ಸಲಹೆಗಳು

ಬರುತ್ತವೆ. ಹಾಜಿಮಾಳನ್ನು ಬದುಕಲು ವೇಶ್ಯಾವೃತ್ತಿ ಅನಿವಾರ್ಯವಾಗಿರುತ್ತೆ ಮಸೀದಿಯಲ್ಲಿ ಪ್ರಶ್ನೆ ಕೇಳಿದಾಗ 'ನಾನು ಈ ಕೆಲ್ಸ ಮಾಡ್ತಿರೋದು ಹೌದು. ನಂಗೆ ಗಂಡು ದಿಕ್ಕಿಲ್ಲ. ಹೊಟ್ಟೆ ತುಂಬ್ಸೋದಕ್ಕೆ ಬೇರೆ ದಾರಿ ಇಲ್ಲ' ಎನ್ನುತ್ತಾಳೆ. ಒಬ್ಬ ಹೆಣ್ಣು ಹೀಗೆ ನೇರವಾಗಿ ಹೇಳುವುದೇ ಒಂದು ಪ್ರತಿಭಟನೆ. ವೇಶ್ಯಾವೃತ್ತಿ ಅವಮಾನ ಎಂದು ಹೇಳುವ ಸಮಾಜಕ್ಕೆ, ತಲಾಕ್ ಕೊಟ್ಟು ಗಂಡನೊಡನೆ ಮತ್ತೆ ಬಾಳಲು ಒಬ್ಬನೊಡನೆ ಎರಡು ರಾತ್ರಿ ಕಳೆಯಬೇಕೆಂದು ಮಾಡಿಕೊಂಡಿರುವ ನಿಯಮ ಸೂಳೆಗಾರಿಕೆ ಅನಿಸುವುದಿಲ್ಲ. ಹಾಜಿಮಾಳ ತಪ್ಪು ಕಾಣುತ್ತದೆಯೇ ಹೊರತು, ಅವಳ ಜತೆಗೆ ಕೈ ಜೋಡಿಸಿದವರದು ತಪ್ಪು ಎಂದು ಕಂಡುಬರುವುದಿಲ್ಲ. ಹಾಜಿಮಾ ತನ್ನನ್ನು ಸೂಳೆ ಎಂದು ನೋಡುವ ವ್ಯವಸ್ಥೆಯ ವಿರುದ್ಧ ಸಿಡಿದೇಳುತ್ತಾಳೆ. ಹಜಿಮಾಳ ಪರವಾದ ಕತೆಯ ನಿರೂಪಣೆ ನಿಲ್ಲುತ್ತದೆ. ನ್ಯಾಯ ತೀರ್ಮಾನ ಮಾಡುವವರೂ ಅವಳ ವೇಶ್ಯಾವಾಟಿಕೆಗೆ ಕಾರಣರು ಎಂಬ ಅಂಶವನ್ನು ಕತೆ ಮುಂದೊಡ್ಡುತ್ತದೆ. ಆಕೆಯ ಪ್ರತಿಭಟನೆಗೆ ಬೆದರಿದ ಸಮಾಜ, ಅವಳಿಗೆ ಪರ್ಯಾಯ ಜೀವನಕ್ಕೆ ದಾರಿ ಮಾಡಿಕೊಡುತ್ತದೆ. ಪ್ರತಿಭಟನೆ ಇಲ್ಲಿ ಪರ್ಯಾ ರೂಪಿಸಿಕೊಳ್ಳುವಲ್ಲಿ ಮುಗಿಯುತ್ತದೆ.

೬.೩. ಅಭಿವ್ಯಕ್ತಿ ಕ್ರಮ

೧. ಕಟ್ಪಾಡಿ ಅವರ ಕತೆಗಳು ಪ್ರತಿಭಟನಾತ್ಮಕ ಭಾವವನ್ನು ನಾಟಕೀಯವಾದ ಧಾಟಿಯಲ್ಲಿ ಸಶಕ್ತವಾಗಿ ವ್ಯಕ್ತಮಾಡುತ್ತವೆ. 'ಸೈತಾನ ಹಿಡಿದ ಹೆಂಡತಿ' ಕತೆಯ ಸನ್ನಿವೇಶವೊಂದು ಹೀಗೆ ಬರುತ್ತದೆ:

"ಸಕೀನಾ ಬೇಗಂ ಹಸಿವಿನಿಂದ ಸೋತು ಸುಣ್ಣವಾದಳು. ಸೊಸೆಯ ಕೋಣೆಯ ಬಳಿ ಹೋಗಿ "ಬೇಟೇ...ಹೀಗೆ ಹಟ ಮಾಡಿದ್ರೆ ಹೇಗೆ...ಬೆಳಗ್ಗಿನಿಂದ ನಾವು ಏನೊಂದು ತಿಂದಿಲ್ಲ..." ಎಂದಳು. ಹೊಟ್ಟೆ ಹಸಿವೆಂದರೆ ಇಷ್ಟು ಭೀಕರವಾದದೆಂದು ಬೇಗಂ ಸಾಹೀಬಾಳಿಗೆ ಅನಿಸಿದ್ದು ಇದೇ ಮೊದಲು. ಒಳಗಿನಿಂದ ಉತ್ತರ ಬಂತು, "ಮಣ್ಣು ತಿನ್ನಿ..."

"ನೀನು ತಂದದ್ದರಲ್ಲಿ ಸ್ವಲ್ಪ ಕೊಡು ಮಾರಾಯ್ತಿ...ಹಸಿವಿನಿಂದ ಕಂಗಾಲಾಗಿದ್ದೇವೆ..." ಎಂದು ಶಾಬುದ್ದೀನ್ ಬಾಗಿಲ ಬಳಿ ಹೋಗಿ ಗೋಗರೆದ.

"ನಾನು ತವರಿಂದ ಭಿಕ್ಷೆ ಬೇಡಿ ತಂದಿದ್ದು ನಿಮಗಾಗಿ ಅಲ್ಲ. ನನ್ನ ಮಕ್ಕಳು ಸಾಯಬಾರದೆಂದು. ನಿಮಗೆ ಬೇಕಿದ್ದರೆ ದುಡಿದು ಸಂಪಾದನೆ ಮಾಡಿ ತನ್ನಿ. ಅನ್ನ ಮಾಡಿ ಹಾಕ್ತಾನೆ..." ಎಂದು ಖಡಕ್ಕಾಗಿ ಉತ್ತರ ಬಂತು ಕೋಣೆ ಒಳಗಿಂದ.

ಇಲ್ಲಿನ ನಿರೂಪಣಾ ಮಾದರಿಯಲ್ಲಿ ಮಹಿಳೆಯ ಛಲವಂತಿಕೆ ಚೆನ್ನಾಗಿ ವ್ಯಕ್ತಗೊಂಡಿದೆ. ಗಂಡ ಅತ್ತೆಯರಿಂದ ಸಾಕಾದ ಸಾರಂಬಿಯ ಮಾತಿನಲ್ಲಿ ಆಕ್ರೋಶ, ಪ್ರತಿಭಟನೆಯ ಭಾವ

ಅದ್ಭುತವಾಗಿ ನಿರೂಪಣೆಗೊಂಡಿದೆ. 'ನನ್ನ ಮಕ್ಕಳು ಸಾಯಬಾರದು' ಎಂದು ನಾನು ದುಡಿಯುತ್ತೇನೆ ಎಂಬ ಮಾತಿನಲ್ಲಿ ಅವಳ ತಾಯ್ತನದ ತೀವ್ರತೆ ಕೂಡ ಇದೆ. ಅನಿವಾರ್ಯವಾಗಿ ಗಂಡನನ್ನು ದುಡಿಮೆಗೆ ಕಳಿಸುವ ಅವಳ ಉಪಾಯ, ಸ್ವಾವಲಂಬಿಯಾಗಿ ಬದುಕಬೇಕೆಂಬ ಛಲ ಈ ನಿರೂಪಣೆಯಲ್ಲಿ ಹೊಮ್ಮುತ್ತದೆ. ಕೋಣೆಯನ್ನು ಬಿಟ್ಟು ಹೊರಬರುವುದು ಪ್ರತಿಭಟನೆಯಾಗುವ ಸನ್ನಿವೇಶಗಳು ಮಹಿಳೆಗೆ ಇವೆ. ಆದರೆ ಇಲ್ಲಿ ಕೋಣೆಯಲ್ಲಿ ತನ್ನನ್ನು ಬಂಧಿಸಿಕೊಳ್ಳುವುದು ಪ್ರತಿಭಟನೆಯ ಉಪಾಯವಾಗಿದೆ.

'ಒಂದು ರಾತ್ರಿ, ಒಂದು ಹಗಲು' ಕತೆಯಲ್ಲಿ ಸಲ್ಮಾ ಮತ್ತು ಅಬ್ದುಲ್ಲಾ ನಡುವೆ ನಡೆಯುವ ಮಾತುಕತೆಗಳ ನಾಟಕೀಯತೆಯಲ್ಲಿ ಕೂಡ ಇದೇ ಬಗೆಯ ಪ್ರತಿಭಟನೆಯ ಅಂಶಗಳಿವೆ. ಅಲ್ಲಿ ನಾಟಕೀಯತೆಯ ಜೊತೆಗೆ ಇನ್ನೂ ಅನೇಕ ಸೂಕ್ಷ್ಮ ವಿವರಗಳು ಸೇರಿಕೊಂಡಿವೆ. ಅಲ್ಲಿ ಅಪೂರ್ಣ ವಾಕ್ಯಗಳಿವೆ. 'ಸಲ್ಮಾ...' ಎಂದು ಅಬ್ದುಲ್ಲಾ ಪ್ರೀತಿ ತುಂಬಿ ಕರೆಯುತ್ತ ಉಚ್ಚಿಸುವುದು ಒಂದೇ ಪದ. ಮಾತು ಮತ್ತು ಮೌನಗಳನ್ನು ಕತೆ ಚೆನ್ನಾಗಿ ಬೆರೆಸಿ ಪರಿಣಾಮ ತರುತ್ತದೆ. ಅವಳ ಕಣ್ಣೀರಿನ ಹನಿ ಗಲ್ಲಕ್ಕಿಳಿದು ತೊಟ್ಟಿಕಿತು ಎಂಬ ವಿವರ, ಅಬ್ದುಲ್ಲಾನನ್ನು ದಿಟ್ಟಿಸಿ ನೋಡುವಲ್ಲಿರುವ ಸಿಟ್ಟು ಅಲ್ಲಿ ವ್ಯಕ್ತಗೊಂಡಿದೆ. ಮೌನದಿಂದ ಇದ್ದ ಮಹಿಳೆ ಒಮ್ಮೆಲೆ ಸಿಡಿಲೆರಗುವಂತೆ ಮಾತಾಡುವ ಸನ್ನಿವೇಶಗಳು, ಅಲ್ಲಿ ಬರುವ ನಾಟಕೀಯ ಶೈಲಿಗಳು ಕಟ್ಪಾಡಿಯವರಲ್ಲಿ ವಿಶೇಷವಾಗಿವೆ. ಧ್ವನಿಯಲ್ಲಿ ಏರಿಳಿತಗಳು ಹಾಗೂ ಅತಿ ದುಃಖ ಉಂಟಾದಾಗ ಮಾತೇ ಬಾರದ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಅವರ ಕಥನ ಕ್ರಮವಿದೆ.

೨. ಕಟ್ಪಾಡಿ ಕತೆಗಳಲ್ಲಿ ಪ್ರತಿಭಟನಾತ್ಮಕ ಭಾವವು ಸೂಕ್ಷ್ಮ ವಿವರಗಳಲ್ಲಿ ವ್ಯಕ್ತವಾಗುವ ವಿಧಾನವೂ ಪರಿಣಾಮಕಾರಿ. 'ಮುಸುಕು' ಕತೆಯಲ್ಲಿ ಬುರ್ಖಾ ಹಾಕಿದ ಹುಡುಗಿ ತನಗಾದ ಅಪಮಾನವನ್ನು ಪ್ರಕಟಿಸುವ ಬಗೆಯನ್ನು ಗಮನಿಸಬೇಕು. "ಮನೆ ತಲುಪುವವರೆಗೂ ಮೈಮನಾ ಹಿಂತಿರುಗಿ ನೋಡಲಿಲ್ಲ. ಮನೆಯ ಅಂಗಳದಲ್ಲಿ ಚೀಲಗಳನ್ನು ಕುಕ್ಕಿ ಅಲ್ಲೇ ಕೂತುಬಿಟ್ಟಳು. ಎದೆ ಜೋರಾಗಿ ಹೊಡೆಯುತ್ತಿತ್ತು. ಮೈಮನಾ ಒಂದೇ ಸಮನೆ ಅಳತೊಡಗಿದಳು." ಇಲ್ಲಿನ ಸಣ್ಣ ಪುಟ್ಟ ವಿವರಗಳ ಕಥನಕ್ರಮವು ಪ್ರತಿಭಟನಾತ್ಮಕ ಭಾವವನ್ನು ಸಮರ್ಥವಾಗಿ ಹಿಡಿದಿಡುತ್ತದೆ. ಮನೆ ತಲುಪುವುವರೆಗೂ ಹಿಂತಿರುಗಿ ನೋಡಲಿಲ್ಲ ಎಂಬಲ್ಲಿ ಅವಳಿಗೆ ಆಗಿರುವ ಆಘಾತದ ಚಿತ್ರವಿದೆ. ಇಲ್ಲಿ ಕ್ರಿಯೆಗಳ ಮೂಲಕ ಪ್ರತಿಭಟನೆ ಅಭಿವ್ಯಕ್ತಗೊಂಡಿದೆ. ಹಿಂತಿರುಗಿ ನೋಡದೇ ಇರುವುದು, ಚೀಲವನ್ನು ಕುಕ್ಕುವುದು, ಕೂತುಕೊಳ್ಳುವುದು, ಎದೆ ಬಡಿದುಕೊಳ್ಳುವುದು ಮತ್ತು ಅಳುವುದು ಈ ಐದು ಕ್ರಿಯೆಗಳಲ್ಲಿ ಪ್ರತಿಭಟನೆಯ ತೀವ್ರತೆ ವ್ಯಕ್ತವಾಗುತ್ತದೆ. ಸಣ್ಣಸಣ್ಣ ವಾಕ್ಯಗಳಲ್ಲಿ ಮನುಷ್ಯರ ಮನಸ್ಸಿನೊಳಗಿನ ತಳಮಳವನ್ನು ಕತೆ ಕಟ್ಟಿಕೊಡುತ್ತದೆ. ತನ್ನ ಮನಸ್ಸಿಗಾದ ಆಘಾತವನ್ನು

ಮಟ್ಟಹುಡುಗಿಯೊಬ್ಬಳು ಪ್ರಕಟಿಸುವ ಕ್ರಮವು, ಅವಳ ಸ್ಥಿತಿಗೆ ಕಾರಣವಾದ ವ್ಯವಸ್ಥೆಯ ಮೌಲ್ಯಮಾಪನವನ್ನೂ ಮಾಡುತ್ತದೆ.

'ಮುಳ್ಳು' ಕತೆಯಲ್ಲಿ "ಲಕ್ಷ್ಮಿ ಗುಡಿಸಿಲಿನ ಹೊರಗೆ ನಿಂತು ಒಮ್ಮೆ ಸರಾಯಿ ಅಂಗಡಿಯ ಕಡೆ ನಡೆಯುತ್ತಿದ್ದ ಗಂಡನನ್ನು ನೋಡುತ್ತಾಳೆ. ಒಮ್ಮೆ ಅವನಿಗೆ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿದ್ದ ನನ್ನನ್ನು ನೋಡುತಾಳೆ. "ಥೂ..." ಎಂದು ಕೆಕ್ಕರಿಸಿ ಉಗುಳುತ್ತಾಳೆ. ಗುಡಿಸಲಿನ ಒಳಗೆ ಹೋಗಿ ದಡಾರನೆ ಬಾಗಿಲು ಮುಚ್ಚುತ್ತಾಳೆ" ಎಂಬ ವಿವರಗಳು ಬರುತ್ತವೆ. ಇಲ್ಲಿ ಗುಡಿಸಲು ಒಳಗಿದ್ದ ಲಕ್ಷ್ಮಿ ಸೌಮ್ಯ ಸ್ವಭಾವದವಳಾಗಿ ಕಂಡು ಬಂದರೆ, ಗುಡಿಸಲು ಹೊರಗೆ ಪ್ರತಿಭಟಿಸುವಂತೆ ಕಾಣುತ್ತಾಳೆ. ಗುಡಿಸಲ ಹೊರಬಂದು ಆಕೆ ಸಿಟ್ಟು, ಆಕ್ರೋಶ ತೋರುವುದು ಇಲ್ಲಿ ಮುಖ್ಯ ಅಂಶವಾಗಿದೆ. ಅವಳ ನೋಟದಲ್ಲಿ ಗಂಡನ ನಿರ್ಲಕ್ಷ್ಯ ಹಾಗೂ ಒಡೆಯನ ನೀಚತನ ಎರಡಕ್ಕೂ ಧಿಕ್ಕಾರವಿದೆ. ಅದು 'ಥೂ....'ಎಂದು ಕೆಕ್ಕರಿಸಿ ಉಗುಳುವಲ್ಲಿ ಪ್ರಕಟವಾಗುತ್ತದೆ. ಗುಡಿಸಲ ಹೊರಗೆ ಬರುವುದು, ಒಮ್ಮೆ ಸಾರಾಯಿ ಅಂಗಡಿಯ ಕಡೆ ಹೋಗುವ ಗಂಡನನ್ನು ನೋಡುವುದು, ಇನ್ನೊಮ್ಮೆ ವಿರುದ್ಧ ದಿಕ್ಕಿನಲ್ಲಿ ಸಾಗುವ ಒಡೆಯನನ್ನು ನೋಡುವುದು, 'ಥೂ'ಎಂದು ಕೆಕ್ಕರಿಸಿ ಉಗುಳುವುದು. ಗುಡಿಸಿಲ ಒಳಗೆ ಹೋಗುವುದು, ದಡಾರನೆ ಬಾಗಿಲು ಹಾಕುವುದು- ಈ ಕ್ರಿಯಾಸರಣಿಯನ್ನು ಕತೆ ತಾಳ್ಮೆಯಿಂದ ಕಟೆದು ತೋರುತ್ತದೆ. ಅದರ ಮೂಲಕ ಸ್ತ್ರೀಯೊಬ್ಬಳ ಮನದಲ್ಲಿ ನಡೆಯುತ್ತಿರುವ ಆಂದೋಲನ ಪ್ರತಿಭಟನೆಯನ್ನು ಕಾಣಿಸುತ್ತದೆ. ಸ್ತ್ರೀ ಪ್ರತಿಭಟನೆ ಮಾಡುವಾಗ ಧೈರ್ಯ ಸಾಲದಾಗಿ ಮೌನವಹಿಸುವುದು ಇದೆ. ಕ್ರಿಯೆಯ ಮೂಲಕ ಪ್ರತಿಭಟನೆ ತೋರುವುದು ಸಹ ಇದೆ.

೩. ಕಟ್ಪಾಡಿ ಕತೆಗಳಲ್ಲಿ ಪ್ರತಿಭಟನೆ ಭಾವದಲ್ಲಿ ವಿಷಾದ, ವ್ಯಂಗ್ಯ ಮತ್ತು ವಿಡಂಬನೆಗಳು ಸಹ ಪ್ರತಿಭಟನೆಯ ಭಾವವನ್ನು ತೋರ್ಪಡಿಸುವ ವಿಧಾನಗಳಾಗಿವೆ. "ಇದು ನೀನೇ ನನಗೆ ಕೊಟ್ಟ ಬಹುಮಾನ! ನಾನಿದನ್ನು ಹೆತ್ತ ತಾಯಿಯ ಹೆಸರು ಹೇಳಿ ಅನುಭವಿಸುತ್ತೇನೆ.... ಅವರು ಕುಡಿದು ಬಂದು ಹೊಡೆಯುವ ಪೆಟ್ಟನ್ನು, ಮಾಡುವ ಅವಮಾನವನ್ನು ಎಲ್ಲವನ್ನೂ! ಸಾಧ್ಯವಾಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ. ನನ್ನ ವಿಚಾರದಲ್ಲಿ ತಲ್ವಾರ್ ಖಾನ್‌ದಾನ್‌ನ ಯಾರು ತಲೆ ಹಾಕುವ ಅಗತ್ಯವಿಲ್ಲ. ಹೆತ್ತ ತಾಯಿಯಾದ ನಿನಗೂ ಹಕ್ಕಿಲ್ಲ. ನೀನು ಬರುವ ಅಗತ್ಯವು ಇಲ್ಲ..." ಎಂದು ಅವಮಾನ ಮಾಡಿ ಕಳುಹಿಸಿದಳು' ಎಂಬ 'ಸೈತಾನ ಹಿಡಿದ ಹೆಂಡತಿ' ಕತೆಯ ಸನ್ನಿವೇಶವನ್ನು ಗಮನಿಸಬೇಕು. ಇಲ್ಲಿ ಕತೆ ಸ್ವಗತ ಮಾದರಿಯಲ್ಲಿ ರಚನೆಗೊಂಡಿದೆ. ಇಲ್ಲಿರುವ ಮಾತುಗಳಲ್ಲಿ ಹೆಣ್ಣಿನ ವಿಷಾದವಿದೆ. 'ಇದು ನೀನೇ ನನಗೆ ಕೊಟ್ಟ ಬಹುಮಾನ' ಎಂಬಲ್ಲಿ ವ್ಯಂಗ್ಯವಿದೆ. ಸಹಿಸಿಕೊಳ್ಳಲಾಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂಬ ಬೆದರಿಕೆಯಲ್ಲಿ

ಜಾಣತನವೂ ಅಸಹಾಯಕತೆಯೂ ಇದೆ. 'ನನ್ನ ಈ ಕಷ್ಟದಲ್ಲಿ ಯಾರು ತಲೆ ಹಾಕುವ ಅಗತ್ಯ ಇಲ್ಲ' ಎಂಬಲ್ಲಿ ಛಲವಿದೆ. ಹೀಗೆ ಕಟ್ಪಾಡಿ ಕತೆಗಳಲ್ಲಿ ಪ್ರತಿಭಟನಾತ್ಮಕ ಭಾವವು ನಾಟಕೀಯತೆ, ಸೂಕ್ಷ್ಮವಿವರಗಳು ಮತ್ತು ವಿಷಾದ, ವ್ಯಂಗ್ಯಗಳ ಮೂಲಕ ಸಮರ್ಥವಾಗಿ ಅಭಿವ್ಯಕ್ತವಾಗಿದೆ.

ಟಿಪ್ಪಣಿಗಳು

೧. ಸಾರಾ ಅಬೂಬಕರ, **ಸಾರಾ ಅಬೂಬಕರ ಅವರ ಸಮಗ್ರ ಕತೆಗಳು,** ಭಾಗ ೨, ಪು.೧೮೪

೨. ಫಕೀರ್ ಮುಹಮ್ಮದ್ ಕಟ್ಪಾಡಿ, **ಸರಕಗಳು ಕಾದಂಬರಿ,** ಪು.೧೧೮

೩. ಬಾನು ಮುಷ್ತಾಕ, **ಎದೆಯ ಹಣತೆ,** ಪು.೯೦

೪. ಅದೇ, ಪು.೯೦

೫. ಶ್ರೀಮತಿ ಎಚ್.ಎಸ್., **ಮಹಿಳಾ ಅಧ್ಯಯನ ಸಂಚಿಕೆ,** ಪು.೧೮೮

೬. ಮಣಿಪಾಲ ಆರ್ಕೆ, **ವಿಮರ್ಶೆಯ ಸವಾಲು,** ಪು.೨೫

೭. ಅಮರೇಶ ನುಗಡೋಣಿ(ಸಂ), **ನಾನೇಕೆ ಬರೆಯುತ್ತೇನೆ,** ಪು.೧೩೩.

ಅಧ್ಯಾಯ ಏಳು

ಫಲಿತಗಳು

ಅಧ್ಯಾಯ ಏಳು

ಫಲಿತಗಳು

೧. ಕಟ್ಪಾಡಿ ಅವರ ಕತೆಗಳಲ್ಲಿ ಅನೇಕ ಮಾದರಿಯ ದಾಂಪತ್ಯದ ಚಿತ್ರಣಗಳು ಕಂಡುಬರುತ್ತವೆ. ಅವುಗಳಲ್ಲಿ ಗಂಡ-ಹೆಂಡತಿಯರು ಅನ್ಯೋನ್ಯವಾಗಿ ಬಾಳುವ ಮಾದರಿ ಇದೆ. ಪರಸ್ಪರ ವೈಮನಸ್ಸು ಮತ್ತು ಸಂಘರ್ಷದಿಂದ ಬಾಳುವ ದಾಂಪತ್ಯದ ಮಾದರಿ ಇದೆ. ಸಿರಿವಂತಿಕೆಯಲ್ಲಿ ಬದುಕುವ ದಂಪತಿಗಳಿದ್ದಾರೆ. ಬಡತನದಲ್ಲಿ ಜೀವಿಸುವ ದಂಪತಿಗಳಿದ್ದಾರೆ. ಗಂಡನನ್ನು ಕಳೆದುಕೊಂಡು ಅವನ ನೆನಪಿನಲ್ಲಿ ಬಾಳುವ ಹೆಂಡತಿಯರು ಕಂಡುಬರುತ್ತಾರೆ. ಹಾಗೆಯೇ ಹೆಂಡತಿಯನ್ನು ಕಳೆದುಕೊಂಡು ಮರುಮದುವೆಯಾಗುವ ಗಂಡಂದಿರ ಮಾದರಿಗಳಿವೆ. ಬಹುಪತಿತ್ವ ಮತ್ತು ಬಹುಪತ್ನಿತ್ವ ಮಾದರಿಯ ದಾಂಪತ್ಯಗಳಿವೆ. ಹೀಗೆ ಹಲವು ಬಗೆಯ ದಾಂಪತ್ಯಗಳನ್ನು ಚಿತ್ರಿಸುವಾಗ ಕತೆಗಳ ಮುಖ್ಯ ಗಮನ ಇರುವುದು, ಈ ದಾಂಪತ್ಯಗಳಲ್ಲಿ ಮಹಿಳೆಯ ಪಾತ್ರ ಏನು ಎಂಬುದರ ಹುಡುಕಾಟದಲ್ಲಿ. ಈ ಬಹುರೂಪಿ ವಿನ್ಯಾಸದ ದಾಂಪತ್ಯಗಳಲ್ಲಿ ಸಾಮಾನ್ಯವಾಗಿ ಭಾರವು ಹೊಣೆಗಾರಿಕೆಯು ಮಹಿಳೆಯರದಾಗಿರುವ ಚಿತ್ರಗಳನ್ನು ಕತೆಗಳು ಕೊಡುತ್ತವೆ. ಮಕ್ಕಳಾಗದ ಕಷ್ಟಕ್ಕೆ ಮಹಿಳೆಯನ್ನು ಹೊಣೆಗಾರಳನ್ನಾಗಿ ಮಾಡುವ ಸಮಾಜದಲ್ಲಿ ಆಕೆ ತನ್ನ ಸವತಿಯನ್ನು ಸಹಿಸಿಕೊಳ್ಳಬೇಕಾಗುತ್ತದೆ. ರೋಗಿಷ್ಟ ಗಂಡನ ಅಥವಾ ಪೀಡಿಸುವ ಗಂಡನ ಸನ್ನಿವೇಶದಲ್ಲಿ ಆಕೆ ಸಹನೆಯನ್ನು ತೋರಬೇಕಾಗುತ್ತದೆ. ಬಡತನದ ಸಂದರ್ಭಗಳಲ್ಲಿ ಆಕೆ ತನ್ನ ಅವಿಶ್ರಾಂತ ಶ್ರಮದ ಮೂಲಕ ಕುಟುಂಬವನ್ನು ಸಾಕಬೇಕಾಗುತ್ತದೆ. ವಿಧವೆಯಾಗಿದ್ದಲ್ಲಿ ಆಕೆ ಸಮಾಜದ ಅಪವಾದಕ್ಕೆ ಮತ್ತು ಸಂಪ್ರದಾಯವಾದಿ ಧಾರ್ಮಿಕ ನಾಯಕರ ನಿಂದನೆಗೆ ಒಳಗಾಗಿ ಬದುಕಬೇಕಾಗುತ್ತದೆ. ಹೀಗೆ ದಾಂಪತ್ಯದ ಒಳಿತು ಮತ್ತು ಕೆಡಕುಗಳಿಗೆ ಮಹಿಳೆಯೇ ಜವಾಬ್ದಾರಿಯಾಗಿರುವ ಸಮಾಜದ ಚಿತ್ರಣವನ್ನು ಕಟ್ಪಾಡಿ ಅವರ ಕತೆಗಳು ಕಟ್ಟಿಕೊಡುತ್ತವೆ. ಈ ಅರ್ಥದಲ್ಲಿ ಕಟ್ಪಾಡಿ ಅವರ ಕತೆಗಳನ್ನು ಸ್ತ್ರೀಕೇಂದ್ರಿತ ಕತೆಗಳು ಎಂದು ಕರೆಯಬಹುದು.

೨. ಪುರುಷ ಪ್ರಧಾನ ಸಮಾಜದಲ್ಲಿ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರು ಬದುಕುತ್ತಿರುವ ಸನ್ನಿವೇಶವನ್ನು ಮತ್ತೆ ಮತ್ತೆ ಕಟ್ಪಾಡಿ ಕತೆಗಳು ತರುತ್ತವೆ. ಇಲ್ಲಿ ತಮ್ಮ ಬದುಕುವ ಹಕ್ಕನ್ನು ಚಲಾಯಿಸುವ ಮಹಿಳೆಯರ ಚಿತ್ರಣಗಳು ಇವೆ. ಹಾಗೆಯೇ ತಮಗೆ ಇಷ್ಟ ಬಂದಂತೆ ಬದುಕಲು ಸಾಧ್ಯವಿಲ್ಲದ, ಸ್ವಾತಂತ್ರ್ಯವಿಲ್ಲದ ಮಹಿಳೆಯ ಚಿತ್ರಣಗಳು ಸಹ ಇವೆ. ಪ್ರಮಾಣದಲ್ಲಿ ಇಷ್ಟ ಬಂದ ಹಾಗೆ ಬದುಕಲು ಸಾಧ್ಯವಿಲ್ಲದ ಮಹಿಳೆಯರ ಚಿತ್ರಣಗಳು ಹೆಚ್ಚಾಗಿವೆ. ಈ ಬಗೆಯ ಸಾಮಾಜಿಕ ಸ್ವಾತಂತ್ರ್ಯ ಇಲ್ಲದ ಮಹಿಳೆಯರನ್ನು ಚಿತ್ರಿಸುವಾಗ, ಕತೆಗಳು ಇದಕ್ಕೆ ಕಾರಣವಾಗಿರುವ ಧಾರ್ಮಿಕ ವ್ಯವಸ್ಥೆಯನ್ನು ಮತ್ತು ಪುರುಷಪ್ರಧಾನ ಸಮಾಜವನ್ನು ಅಪರಾಧಿ ಸ್ಥಾನದಲ್ಲಿ ತರುತ್ತವೆ. ಮಹಿಳೆಯರ ಸ್ವಾತಂತ್ರ್ಯ ಕಿತ್ತುಕೊಳ್ಳುವ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯ ವಿರುದ್ಧ ಶರಣಾಗಿರುವ ಹಾಗೂ ಹೋರಾಡುವ ಎರಡು ಬಗೆಯ ವಿನ್ಯಾಸವನ್ನು ಕತೆಗಳು ಚಿತ್ರಿಸುತ್ತವೆ. ಅನೇಕ ಸಲ ಈ ಬಗೆಯ ಹೋರಾಟದಲ್ಲಿ ಮಹಿಳೆಯರು ಸೋಲನ್ನು ಅನುಭವಿಸುತ್ತಾರೆ, ರಾಜಿಯನ್ನು ಮಾಡಿಕೊಳ್ಳುತ್ತಾರೆ ಮತ್ತು ಕೆಲವೇ ಕೆಲವು ಮಹಿಳೆಯರು ಸನ್ನಿವೇಶದಲ್ಲಿ ಗೆಲುವನ್ನು ಪಡೆಯುತ್ತಾರೆ. ಒಟ್ಟಿನಲ್ಲಿ ಸ್ವಾತಂತ್ರ್ಯವಿಲ್ಲದ ಸನ್ನಿವೇಶದಲ್ಲಿ ಮಹಿಳೆಯರು ತಮ್ಮ ಅಸ್ತಿತ್ವಕ್ಕಾಗಿ ಮಾಡುವ ಹೋರಾಟದ ಬೇರೆ ಬೇರೆ ಮಜಲುಗಳನ್ನು ಚಿತ್ರಿಸುವುದು ಕಟ್ಪಾಡಿ ಅವರ ಕತೆಗಳ ಬಹಳ ಮುಖ್ಯವಾದ ತುಡಿತವಾಗಿದೆ.

೩. ಕಟ್ಪಾಡಿ ಅವರ ಕತೆಗಳಲ್ಲಿ ಬೇರೆ ಬೇರೆ ವರ್ಗದ ಮಹಿಳೆಯರು ಕಂಡುಬರುತ್ತಾರೆ. ಮಧ್ಯಮವರ್ಗದ ಮಹಿಳೆಯರು ಕಡಿಮೆ ಸಂಖ್ಯೆಯಲ್ಲಿ ಬಂದರೆ, ಅತ್ಯಂತ ಕೆಳವರ್ಗ ಮತ್ತು ಮೇಲ್ವರ್ಗದ ಮಹಿಳೆಯರು ಹೆಚ್ಚಾಗಿ ಬರುತ್ತಾರೆ. ಮುಸ್ಲಿಮ್ ಮಹಿಳೆಯರಿಗೆ ಆಧುನಿಕ ವಿದ್ಯಾಭ್ಯಾಸ ಇಲ್ಲದಿರುವುದರಿಂದ ಮತ್ತು ಅವರು ಸಾರ್ವಜನಿಕ ಬದುಕಿನಲ್ಲಿ ನೌಕರಿ ಮಾಡಿಕೊಂಡು ಪಟ್ಟಣದಲ್ಲಿ ವಾಸಮಾಡುವ ಪ್ರಮಾಣ ಕಡಿಮೆ ಇರುವುದರಿಂದ, ಮಧ್ಯಮವರ್ಗದ ಮಹಿಳೆಯರು ಕಡಿಮೆ ಕೂಡ. ಕಟ್ಪಾಡಿ ಅವರ ಕತೆಗಳಲ್ಲಿ ವರ್ಗದ ದೃಷ್ಟಿಯಿಂದ ಶ್ರೀಮಂತ ಮಹಿಳೆಯರ ಮತ್ತು ಕೆಳವರ್ಗದ ದುಡಿಯುವ ಮಹಿಳೆಯರು ಹೆಚ್ಚಾಗಿ ಕಂಡುಬರುತ್ತಾರೆ. ಮೇಲ್ವರ್ಗದ ಮತ್ತು ಕೆಳವರ್ಗದ ಮಹಿಳೆಯರಲ್ಲಿ ಕಷ್ಟಸುಖಗಳಲ್ಲಿ ಸಮಾನತೆ ಕಂಡುಬರುತ್ತದೆ. ಬಡ ಮತ್ತು ಶ್ರೀಮಂತ ಮಹಿಳೆಯರು ಅನುಭವಿಸುವ ನೋವು ಒಂದೇ ಎಂಬಂತೆ ಕತೆಗಳು ಸೂಚಿಸುತ್ತವೆ. ವ್ಯಂಗ್ಯವೆಂದರೆ, ಕೆಳವರ್ಗದಲ್ಲಿರುವ ಬಡತನದಲ್ಲಿರುವ ಮಹಿಳೆಯರು ಅನುಭವಿಸುವ ಕೌಟುಂಬಿಕ ಹಿಂಸೆಯು ಶ್ರೀಮಂತ ಮಹಿಳೆಯರು ಅನುಭವಿಸುವ ಕೌಟುಂಬಿಕ ಹಿಂಸೆಗಿಂತ ಕಡಿಮೆ ಮಟ್ಟದಲ್ಲಿರುವುದು. ಬಡಮಹಿಳೆಯರಿಗೆ ಧಾರ್ಮಿಕ ಮತ್ತು ಸಾಮಾಜಿಕ ಹಿಂಸೆಗಳು ಕಡಿಮೆ ಇದ್ದರೆ, ಶ್ರೀಮಂತ

ಮಹಿಳೆಯರಿಗೆ ಧಾರ್ಮಿಕ ಹಿಂಸೆಗಳು ಹೆಚ್ಚಾಗಿವೆ. ಮಹಿಳೆ ಮೇಲ್ವರ್ಗಕ್ಕೆ ಸೇರಿದರೆ ಅವಳಿಗೆ ಸಂಕಟ ಮತ್ತು ಸಮಸ್ಯೆಗಳು ಕಡಿಮೆ ಎಂಬ ಜನಪ್ರಿಯ ಗ್ರಹಿಕೆಯನ್ನು ಕಟ್ಪಾಡಿ ಕತೆಗಳು ಮುರಿದು ಹಾಕುತ್ತವೆ. ಹೆಣ್ಣು ಶ್ರೀಮಂತಳಾಗಿದ್ದರೂ ಹೆಣ್ಣು ಎಂಬ ಕಾರಣಕ್ಕಾಗಿ ಸಾಮಾಜಿಕ ಮತ್ತು ಧಾರ್ಮಿಕ ಹಿಂಸೆ ನಡೆಯುತ್ತಿರುತ್ತದೆ. ಈ ಹಿಂಸೆಯ ವಿರುದ್ಧ ಓದುಗರ ಮನಸ್ಸಿನಲ್ಲಿ ಒಂದು ಬಗೆಯ ಪ್ರತಿರೋಧದ ಭಾವನೆಯು ಬರುವಂತೆ ಕತೆಗಳು ಚಿತ್ರಿಸುತ್ತವೆ.

೪. ಕಟ್ಪಾಡಿ ಅವರ ಕತೆಗಳಲ್ಲಿ ಬರುವ ಮಹಿಳಾ ಪಾತ್ರಗಳಲ್ಲಿ ಬಹಳ ಪ್ರಧಾನವಾದವು ತಾಯಂದಿರ ಪಾತ್ರಗಳು. ಈ ತಾಯಂದಿರು ತಮ್ಮ ಮಕ್ಕಳನ್ನು ಸಾಕುವ ಬೇರೆ ಬೇರೆ ವಿಧಾನಗಳನ್ನು ಕತೆಗಳು ಕಟ್ಟಿಕೊಡುತ್ತವೆ. ಮಕ್ಕಳ ಹಸಿವನ್ನು ನೀಗಿಸುವ ಕೆಲಸವನ್ನು ಕೆಲವು ತಾಯಂದಿರು ಮಾಡಿದರೆ, ಮದುವೆಯಾದ ಮಕ್ಕಳು ಪಡುವ ಸಂಕಟಗಳನ್ನು ನಿವಾರಿಸಲು ಕೆಲವು ತಾಯಂದಿರು ಹೋರಾಟ ಮಾಡುತ್ತಾರೆ. ಹಸಿವು ಮತ್ತು ಕೌಟುಂಬಿಕ ಕಷ್ಟಗಳನ್ನು ಮುಖಾಮುಖಿ ಮಾಡುವುದರಲ್ಲಿ ತಾಯಂದಿರ ತಾಯ್ತನವು ಹೆಚ್ಚು ಪ್ರಕಟವಾಗುತ್ತವೆ. ವಿಶೇಷವೆಂದರೆ ಈ ಸಮಸ್ಯೆಗಳಿಗೆ ಕಾರಣವಾಗಿರುವುದು, ಸಾಮಾಜಿಕ ಅಸಮಾನ ವ್ಯವಸ್ಥೆ ಮತ್ತು ಪುರುಷ ಪ್ರಧಾನ ವ್ಯವಸ್ಥೆ. ಇಂತಹ ಸನ್ನಿವೇಶದಲ್ಲಿ ತಾಯಂದಿರು ಮಕ್ಕಳ ಉಳಿವಿಗಾಗಿ, ಒಳಿತಿಗಾಗಿ ನಿರಂತರ ಹೋರಾಟ ಮಾಡುವುದನ್ನು ಕತೆಗಳು ಕಾಣಿಸುತ್ತವೆ. ತಮ್ಮ ಸಂಸಾರವನ್ನು ಸರಿಪಡಿಸಲು, ತಮ್ಮ ಮಕ್ಕಳನ್ನು ಒಂದು ಹಾದಿಗೆ ತರಲು, ಅವರಿಗೆ ಬಂದ ಸಂಕಟ ನಿವಾರಣೆ ಮಾಡಲು ತಾಯಂದಿರು ಪಡುವ ಕಷ್ಟವು, ಸ್ವಾತಂತ್ರ್ಯದ ಹೋರಾಟದ ಹಾಗೆ ಕಾಣುತ್ತದೆ. ಈ ಅರ್ಥದಲ್ಲಿ ಕಟ್ಪಾಡಿ ಅವರ ಕತೆಗಳನ್ನು ತಾಯಂದಿರ ಅಳಲನ್ನು ಕುರಿತ ಕತೆಗಳೆಂದು ಕರೆಯಬಹುದು.

೫. ಕಟ್ಪಾಡಿ ಅವರು ಮಹಿಳೆಯರ ಶ್ರಮ ಮತ್ತು ಹೋರಾಟ, ಮಹಿಳೆಯರು ತೋರಿಸುವ ಜಾಣ್ಮೆ ಇತ್ಯಾದಿಗಳನ್ನು ಶ್ರದ್ಧೆಯಿಂದ ಚಿತ್ರಿಸುತ್ತಾರೆ. ಮಹಿಳೆಯರು ತೋರಿಸುವ ಈ ಜಾಣ್ಮೆ, ಕ್ರಿಯಾಶೀಲತೆ, ಪಡುವ ಸಂಕಟ, ಕಷ್ಟ ಇತ್ಯಾದಿಗಳೆಲ್ಲ ಕಾರಣವಾಗಿರುವುದು ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ. ಈ ಹಿನ್ನೆಲೆಯಲ್ಲಿ ಮಹಿಳೆಯರಲ್ಲಿ ಹೋರಾಟ ಗುಣ, ಜಾಣ್ತನ, ಸಹನಶೀಲತೆ, ತ್ಯಾಗಮನೋಭಾವ, ಕಾಳಜಿ ಮುಂತಾದ ಜೀವನ ಮೌಲ್ಯಗಳು ಪ್ರಕಟವಾಗುತ್ತವೆ. ಹೀಗೆ ಪ್ರಕಟವಾಗಲು ಹಲವಾರು ಕಾರಣಗಳು ನೆಪವಾಗಿ ಒದಗಿಬರುತ್ತವೆ. ಅವುಗಳಲ್ಲಿ ಬಹಳ ಮುಖ್ಯವಾದವು ಮಕ್ಕಳು. ಕಟ್ಪಾಡಿ ಕತೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಕ್ಕಳ ಪಾತ್ರಗಳು ಬರುತ್ತವೆ. ಈ ಮಕ್ಕಳ ಪಾತ್ರಗಳ ಮೂಲಕ ಹೋರಾಟ, ಸೆಣಸಾಟ ಅವರ ಕ್ರಿಯಾಶೀಲತೆಯನ್ನು ಅವರು ಚಿತ್ರಿಸುತ್ತಾರೆ. ಮಕ್ಕಳ

ಕಣ್ಣಿನ ಮೂಲಕ ಮಹಿಳೆಯರ ಕ್ರಿಯಶೀಲತೆಯನ್ನು ಕಾಣಿಸುವ ಒಂದು ವಿನ್ಯಾಸವನ್ನು ಕತೆಗಳು ಹೊಂದಿವೆ. ಕಟ್ಪಾಡಿ ಅವರ ಕತೆಗಳು ಮಕ್ಕಳಿಂದ ತುಂಬಿದ್ದರೂ ಕೂಡ ಮಹಿಳೆಯರ ಲೋಕವನ್ನೇ ಚಿತ್ರಿಸುವುದು ಮುಖ್ಯವಾದ ಉದ್ದೇಶವಾಗಿದೆ.

೬. ಕಟ್ಪಾಡಿ ಅವರ ಕತೆಗಳು ಮುಖ್ಯವಾಗಿ ಎರಡು ಬಗೆಯ ನಿರೂಪಣಾ ಕ್ರಮದಿಂದ ಬೆಳೆಯುತ್ತವೆ. ಒಂದು ಪಾತ್ರಗಳ ನಡುವಿನ ಸಂಭಾಷಣೆಯ ಮೂಲಕ. ಎರಡು– ಕತೆಗಾರರೇ ನಿರೂಪಣೆ ಮೂಲಕ ಆ ಸನ್ನಿವೇಶವನ್ನು ಚಿತ್ರಣ ಮಾಡುವುದರ ಮೂಲಕ. ನಿರೂಪಣೆ ಮತ್ತು ಸಂಭಾಷಣೆಗಳ ಮೂಲಕ ಬೆಳೆಯುವ ಈ ಕಥನಕ್ರಮದಲ್ಲಿ ಬಹಳ ಮುಖ್ಯವಾದುದು, ಮಹಿಳೆಯರು ಜೀವನದ ಸನ್ನಿವೇಶವನ್ನು ಎದುರಿಸಲು ಆಡುವ ಮಾತುಗಳಲ್ಲಿ ಹತಾಶೆ, ಧೈರ್ಯ, ಅಸಹಾಯಕತೆ, ಶ್ರದ್ಧೆ ಮತ್ತು ವಾತ್ಸಲ್ಯ ಕಂಡುಬರುವುದು. ಹೀಗೆ ಕತೆಗಳಲ್ಲಿ ಮಹಿಳೆಯರ ಸಂಭಾಷಣೆಗಳು ಅವರ ವ್ಯಕ್ತಿತ್ವದ ಬೇರೆ ಬೇರೆ ಆಯಾಮಗಳನ್ನು ಚಿತ್ರಿಸುವ ವಿನ್ಯಾಸ ಹೊಂದಿವೆ. ಕತೆಗಳಲ್ಲಿ ಮಹಿಳೆಯರು ಆಡುವ ಮಾತುಗಳು ಆ ಕತೆಯ ಜೀವಾಳವನ್ನು ಸಹ ರೂಪಿಸುತ್ತವೆ. ಸ್ವಾರಸ್ಯಕರವೆಂದರೆ, ಅನೇಕ ಕಡೆ ಮಹಿಳೆಯರು ಮೌನವನ್ನು ವಹಿಸುತ್ತಾರೆ. ಆ ಮೌನಕ್ಕೆ ಮಾತಿಗಿಂತಲೂ ಮಹತ್ವದ ಧ್ವನಿ ಇರುವಂತಿದೆ. ಅತ್ಯಂತ ಕಡಿಮೆ ಮಾತಿನಲ್ಲಿ ಅತ್ಯಂತ ಧ್ವನಿಪೂರ್ಣವಾದ ಮಾತುಕತೆಗಳು ಇಲ್ಲಿ ಬರುತ್ತವೆ. ಆದರೆ ಮೌನವೂ ಮಹಿಳೆಯ ಒಳಧ್ವನಿಯಾಗಿ ಬರುವ ಸನ್ನಿವೇಶಗಳು ತುಂಬಾ ಕಡಿಮೆ ಇದ್ದರೂ ಅವು ಮಹತ್ವವಾಗಿವೆ.

೭. ಭಾರತದಲ್ಲಿ ಸಾಮಾನ್ಯವಾಗಿ ಮಹಿಳೆಯರು ಆಧುನಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಅವರ ಶಿಕ್ಷಣದ ಬಗ್ಗೆ ಸಾಂಪ್ರದಾಯಿಕ ಸಮಾಜ ಅಷ್ಟು ಗಮನ ಕೊಡುವುದಿಲ್ಲ. ಹಾಗಾಗಿ ಮಹಿಳೆಯರಲ್ಲಿ ಅನಕ್ಷರಸ್ಥರ ಪ್ರಮಾಣ ಹೆಚ್ಚಾಗಿದೆ. ಮಹಿಳೆಯರಿಗೆ ಜೈವಿಕ ಕಾರಣಗಳಿಂದ ಅವರ ಸಾರ್ವಜನಿಕ ಬದುಕು ಕಡಿಮೆಗೊಳ್ಳುವ ಸನ್ನಿವೇಶವಿದೆ. ಆದರೆ ನಿಜವಾದ ಕಾರಣ ಸಾಮಾಜಿಕವಾದುದು. ಮಹಿಳೆಯರಿಗೆ ಶಿಕ್ಷಣ ಏಕೆ ಬೇಕು, ಅವರು ಮಾಡುವುದು ಮನೆಕೆಲಸ ಎಂಬ ಪುರುಷ ಪ್ರಧಾನ ಧೋರಣೆಯಿಂದಲೇ ಅವರಿಗೆ ಶಿಕ್ಷಣ ಸಿಕ್ಕಿಲ್ಲ. ಮುಸ್ಲಿಮ್ ಸಮುದಾಯದಲ್ಲಿ ಈ ಬಗೆಯ ಮಹಿಳೆ ಅನಕ್ಷರತೆ ಹೆಚ್ಚು ಪ್ರಮಾಣದಲ್ಲಿದೆ. ಅಂತಹ ಒಂದು ಸಮುದಾಯವನ್ನು ಆಧಾರವಾಗಿಟ್ಟುಕೊಂಡು ಕಟ್ಪಾಡಿ ಅವರ ಕತೆಗಳು ಸೃಷ್ಟಿಯಾಗಿವೆ. ಅಲ್ಲಿ ಬರುವ ಮಹಿಳಾ ಪಾತ್ರಗಳು ಬೇರೆಬೇರೆ ಬಗೆಯ ಸಮಸ್ಯೆ ಎದುರಿಸುತ್ತವೆ. ಅವುಗಳಲ್ಲಿ ಶಿಕ್ಷಣವನ್ನು ಪಡೆಯುವ ಸಮಸ್ಯೆಯೂ ಒಂದು. ಸಾಮಾನ್ಯವಾಗಿ ಅವರಿಗೆ ಧಾರ್ಮಿಕ ಶಿಕ್ಷಣವನ್ನು ಮದ್ರಾಸಗಳಲ್ಲಿ ಕೊಡಲಾಗುತ್ತದೆ. ಆದರೆ ಸಾರ್ವಜನಿಕ ಬದುಕಿಗೆ ಹೋಗಲು ಸಾಧ್ಯತೆ ಇರುವ ಆಧುನಿಕ ಶಿಕ್ಷಣವನ್ನು ಕೊಡಲು ನಿರಾಕರಿಸಲಾಗುತ್ತದೆ.

ಇಂತಹ ಶಿಕ್ಷಣದ ನಿರಾಕರಣೆಗೆ ಒಳಗಾಗಿರುವ ಹಲವಾರು ಪಾತ್ರಗಳು ಇಲ್ಲಿ ಬರುತ್ತವೆ. ವ್ಯಂಗ್ಯವೆಂದರೆ ಸ್ವಂತ ಕುಟುಂಬದ ಮಹಿಳೆಗೆ ಶಿಕ್ಷಣವನ್ನು ನಿರಾಕರಿಸುವ ಕೆಲಸದಲ್ಲಿ ಪುರುಷರೇ ಹೆಚ್ಚು ಆಸಕ್ತಿ ವಹಿಸುವುದು. ಇಂತಹದೊಂದು ಸನ್ನಿವೇಶದಲ್ಲಿ, ಶಿಕ್ಷಣ ಪಡೆಯಲು ಹೋರಾಡುವ, ಪಡೆಯಲಾಗದೇ ಸೋಲುವ ಮತ್ತು ಪರಿತಾಪ ಪಡುವ ಹಲವಾರು ಪಾತ್ರಗಳನ್ನು ಕತೆಗಳು ಚಿತ್ರಿಸುತ್ತವೆ. ಶಿಕ್ಷಣವು ಬಿಡುಗಡೆಯ ಸಾಧನವಾಗಿ ಚಿತ್ರಣಗೊಂಡಿದೆ. ಮಹಿಳೆಯರಿಗೆ ಶಿಕ್ಷಣ ಕೊಡಬೇಕೆಂದು ಬಯಸುವ ಪುರುಷರು ಕತೆಗಳಲ್ಲಿ ಬರುವರು. ಇವರು ಸಾಮಾನ್ಯವಾಗಿ ಆಧುನಿಕ ತಲೆಮಾರಿಗೆ ಸೇರಿದವರಾಗಿ ಕಂಡುಬರುವರು. ಸಂಪ್ರದಾಯವಾದಿಗಳು ಹಾಗೂ ಹಿರಿಯ ತಲೆಮಾರಿನ ಗಂಡಸರು ಮಹಿಳೆಯರಿಗೆ ಶಿಕ್ಷಣ ಕೊಡಲು ವಿರೋಧಿಸುತ್ತಾರೆ. ಶಿಕ್ಷಣ ಕೊಟ್ಟರೂ ತಮ್ಮ ಸ್ವಾರ್ಥಕ್ಕಾಗಿ ತಮ್ಮನ್ನು ತಾವು ಸುಧಾರಣವಾದಿ ಎಂದು ಬಿಂಬಿಸಲು ಶಿಕ್ಷಣ ಕೊಡುತ್ತಾರೆ. ಹೀಗಾಗಿ ಮಹಿಳೆಯರ ಬಂಧನ ಮತ್ತು ಬಿಡುಗಡೆಯಲ್ಲಿ ಶಿಕ್ಷಣ ಒಂದು ಸಾಧನವಾಗಿ ಬಳಕೆಯಾಗುವುದನ್ನು ಈ ಕತೆಗಳು ಚಿತ್ರಿಸುತ್ತವೆ. ಕಟ್ಪಾಡಿ ಕತೆಗಳಲ್ಲಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುವ ಬಗ್ಗೆ ಆಳವಾದ ವೇದನೆ ಇರುವುದನ್ನು ಕಾಣಬಹುದು.

೮. ಕಟ್ಪಾಡಿ ಅವರ ಕತೆಗಳಲ್ಲಿ ಮಾನಸಿಕವಾಗಿ ಅಸ್ವಸ್ಥರಾದಂತಹ ಮಹಿಳಾ ಪಾತ್ರಗಳು ಕಂಡುಬರುತ್ತವೆ. ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ಆಸೆ ಆಕಾಂಕ್ಷೆಗಳಿರುತ್ತವೆ. ಅವು ಈಡೇರದಿದ್ದಾಗ ಚಡಪಡಿಕೆ ಶುರುವಾಗುತ್ತದೆ. ಇಲ್ಲಿನ ಅನೇಕ ಸ್ತ್ರೀಪಾತ್ರಗಳಲ್ಲಿ ಕೆಲವರು ಮನೋರೋಗಿಗಳಂತೆ ವರ್ತಿಸಿದರೆ, ಕೆಲವು ಮನೋರೋಗಿಗಳಂತೆ ನಟನೆ ಮಾಡುವವರಂತೆ ಕಂಡುಬರುತ್ತಾರೆ. ತಮಗಿಷ್ಟದ ಬದುಕನ್ನು ಬದುಕಲು ಧೈರ್ಯವಿಲ್ಲದೆ, ತಮಗೆ ಪ್ರತಿಕೂಲವಾಗಿರುವ ಸಮಾಜವನ್ನು ಎದುರಿಸಲಾಗದೇ ಕೆಲವು ಮನೋರೋಗಿಗಳಾಗಿ ರೂಪಾಂತರ ಹೊಂದುವರು. ಇಂತಹ ಮಹಿಳೆಯರನ್ನು ಕಂಡ ಜನ ಸೈತಾನ ಹಿಡಿದಿದೆ ಎಂದು ಭಾವಿಸುವರು. ಸಮಾಜದಲ್ಲಿ ಮಾನಸಿಕ ಅಸ್ವಸ್ಥರಲ್ಲಿ ಮಹಿಳೆಯರೇ ಹೆಚ್ಚಾಗಿ ಕಂಡುಬರುತ್ತಾರೆ ಯಾಕೆಂಬ ಪ್ರಶ್ನೆಯನ್ನು ಈ ಕತೆಗಳು ಹುಟ್ಟಿಸುತ್ತವೆ. ಹುಚ್ಚಿನ ಹಿಂದಿನ ಸಾಮಾಜಿಕ ಕಾರಣ ಅರಿಯದ ಅರಿತರೂ ನಿವಾರಿಸದ ಜನ, ಔಷಧೋಪಚಾರಕ್ಕೆ ಅಥವಾ ದೇವರಿಗೆ ಮೊರೆ ಹೋಗುವರು. ಇಂತಹ ಮೌಢ್ಯಗಳು ಅವು ಮಹಿಳೆಯರಿಗೆ ಕೊಡುವ ಹಿಂಸೆಗಳು ಕಟ್ಪಾಡಿ ಅವರ ಕತೆಗಳಲ್ಲಿ ಬರುತ್ತವೆ. ಮಹಿಳೆಯರ ಮನೋಇಚ್ಛೆಯನ್ನು ಅರಿತು ಅವು ಈಡೇರಿಸುವ ಸಮಾಜ ಮಾತ್ರ ನಿಜವಾದ ಔಷಧಿ ಎಂಬ ಸಾಮಾಜಿಕ ಧ್ವನಿಯನ್ನು ಕಟ್ಪಾಡಿ ಅವರು ತಮ್ಮ ಕತೆಗಳ ಮೂಲಕ ಕೊಡುತ್ತಾರೆ.

೯. ಕಟ್ಪಾಡಿ ಅವರ ಹಲವು ಕತೆಗಳಲ್ಲಿ ಮಹಿಳೆಯರು ತಮ್ಮ ಅಜ್ಜನಿಂದ, ತಂದೆಯಿಂದ ಹಾಗೂ ಗಂಡನಿಂದ ಶೋಷಣೆಗೆ ಒಳಗಾಗುವ ಸನ್ನಿವೇಶಗಳಿವೆ. ಜೊತೆಗೆ ಅವರು ಧಾರ್ಮಿಕ ನೀತಿನಿಯಮಗಳಿಂದಲೂ ಶೋಷಣೆಗೆ ಒಳಗಾಗಿದ್ದಾರೆ. ಪುರುಷರ ಅಡಿಯಾಳೆಂಬಂತೆ ವರ್ತಿಸುವ ಮಹಿಳೆಯರ ಪಾತ್ರಗಳು ಕಟ್ಪಾಡಿ ಅವರ ಕತೆಗಳಲ್ಲಿ ಬರುತ್ತವೆ. ಕೆಲವು ಸ್ತ್ರೀಯರು ಶೋಷಣೆಯನ್ನು ಸಹಿಸಿಕೊಂಡು ಹೋಗುವವರಾಗಿದ್ದಾರೆ. ಕೆಲವರು ತಮಗಾದ ನೋವನ್ನು ಪರರ ಎದುರಿಗೆ ಹೇಳಿಕೊಳ್ಳುವವರೂ ಇದ್ದಾರೆ. ಈ ನೋವು ಮತ್ತು ಶೋಷಣೆಗೆ ಒಳಗಾದ ಸ್ತ್ರೀಯರಿಗೆ ಸಾಂತ್ವನ ಹೇಳುವ ಮಹಿಳೆಯರು ಸಹ ಇಲ್ಲಿದ್ದಾರೆ. ಕೆಲವು ಸ್ತ್ರೀಯರು ಮಾತ್ರ ಶೋಷಣೆಯನ್ನು ಸಹಿಸದೇ ಶೋಷಕರ ವಿರುದ್ಧ ಪ್ರತಿಭಟಿಸುವವರಂತೆ ಚಿತ್ರಣಗೊಂಡಿದ್ದಾರೆ. ಆ ಪ್ರತಿಭಟನೆಯು ತೀವ್ರ ಆಕ್ರೋಶ, ಸಿಟ್ಟಿನಿಂದ ಕೂಡಿದೆ. ಕೆಲವು ಮಹಿಳೆಯರು ಸಿಡಿದೇಳುವ ಮೂಲಕ ಪ್ರತಿಭಟನೆ ಮಾಡಿದರೆ, ಕೆಲವರು ವಸ್ತುಗಳ ಮೇಲೆ ತಮ್ಮ ಸಿಟ್ಟನ್ನು ವ್ಯಕ್ತಪಡಿಸುತ್ತಾರೆ. ಇನ್ನೂ ಕೆಲವು ಮಹಿಳೆಯರು ಮೌನವಾಗಿಯೇ ಪ್ರತಿಭಟನೆ ಮಾಡುವರು. ಹೀಗೆ ಕಟ್ಪಾಡಿ ಅವರ ಕತೆಗಳು ಮಹಿಳೆಯರ ಬಹುರೂಪಿಯಾದ ಪ್ರತಿಭಟನೆ ಮತ್ತು ಶರಣಾಗತಿಯ ಮಾದರಿಗಳನ್ನು ಚಿತ್ರಿಸುತ್ತವೆ.

೧೦. ಮೇಲ್ವರ್ಗ ಹಾಗೂ ಕೆಳವರ್ಗಗಳ ಬೇಧವಿಲ್ಲದೆ ಪರಸ್ಪರರ ಕಷ್ಟಕ್ಕೆ ಒದಗಿಬರುವ ಮಹಿಳೆಯರು ಕಟ್ಪಾಡಿ ಅವರ ಕತೆಗಳಲ್ಲಿ ಕಂಡುಬರುತ್ತಾರೆ. ಹೆಣ್ಣಾದವಳು ಮೇಲ್ವರ್ಗದವಳಾಗಿರಲಿ ಕೆಳವರ್ಗದವಳಾಗಿರಲಿ, ಕಷ್ಟ ಆಕೆಗೆ ಕಟ್ಟಿಟ್ಟ ಬುತ್ತಿ ಎಂಬಂತಹ ಸಮಾಜವನ್ನು ಈ ಕತೆಗಳು ತರುತ್ತವೆ. ಕೌಟುಂಬಿಕ ಸಮಸ್ಯೆಯಲ್ಲಿ ಸಿಲುಕಿದ ಮಹಿಳೆಯರಿಗೆ ಸಾಂತ್ವನ ಹೇಳುವ ಮಹಿಳೆಯರು ಬಹಳ ಇದ್ದಾರೆ. ಹಸಿವನ್ನು ನೀಗಿಸಿಕೊಳ್ಳಲಾರದ ಸ್ಥಿತಿಯಲ್ಲಿರುವವರಿಗೆ, ಇರುವ ಆಹಾರದಲ್ಲಿ ಹಂಚಿ ತಿನ್ನುವ ವಿಶಾಲಮನೋಭಾವದ ಮಹಿಳೆಯರು ಇದ್ದಾರೆ. ಮಹಿಳೆಯರು ಬೇರೆ ಬೇರೆ ವರ್ಗ ಜಾತಿಗಳಿಗೆ ಸೇರಿದ್ದರೂ ಬದುಕಿನಲ್ಲಿ ಕಷ್ಟಗಳು ಅವರನ್ನು ಒಂದುಗೂಡಿಸುತ್ತವೆ. ಅವರಲ್ಲಿ ಮಾನವೀಯವಾಗಿ ಕೊಡುಕೊಳುವ ಸಹಕಾರ ಪ್ರಜ್ಞೆಯನ್ನು ಹುಟ್ಟಿಸುತ್ತವೆ. ಈ ನೆಲೆಯಲ್ಲಿ ಮಹಿಳೆಯರು ತಮ್ಮ ಜಾತಿ, ಧರ್ಮ, ವರ್ಗಗಳ ಗಡಿಗೆರೆಯನ್ನು ದಾಟಿ ಕೇವಲ ಮನುಷ್ಯರಾಗಿ ವರ್ತಿಸುವುದನ್ನು ಕಟ್ಪಾಡಿಯವರ ಕತೆಗಳು ಕಾಣಿಸುತ್ತವೆ. ಇದನ್ನು ಸ್ತ್ರೀಲೋಕದೊಳಗಿನ ನಿತ್ಯ ಬದುಕಿನಲ್ಲಿರುವ ಸಮಾಜವಾದಿ ಪ್ರಜ್ಞೆ ಎಂದು ಕರೆಯಬಹುದು.

೧೧. ಕಟ್ಪಾಡಿಯವರ ಕತೆಗಳಲ್ಲಿ ಮಹಿಳೆಯರೊಳಗೇ ನಡೆಯುವ ಸಂಘರ್ಷದ ಚಿತ್ರಗಳಿವೆ. ಅತ್ತೆ ಸೊಸೆಯಂದಿರಲ್ಲಿ ಕೆಲವೆಡೆ ಹೊಂದಾಣಿಕೆ ಕಂಡುಬಂದರೆ, ಮತ್ತೆ ಕೆಲವೆಡೆ ಅವರು

ಜಗಳಗಂಟಿಯರಾಗಿ ಚಿತ್ರಿತವಾಗಿದ್ದಾರೆ. ಹೆಚ್ಚಿನ ಕಡೆ ಅವರು ತಾಯಿಮಗಳಂತೆ ಹೊಂದಾಣಿಕೆಯ ಜೀವನ ನಡೆಸುವರು. ಈ ಸಾಮರಸ್ಯದಲ್ಲಿ ಇಬ್ಬರ ನೋವು ಒಂದೇ ಎಂಬಂತೆ ನಿರೂಪಿತವಾಗಿದೆ. ಮಹಿಳೆಗೆ ಶತ್ರು ಮಹಿಳೆಯೇ ಎಂಬ ಪುರುಷವಾದ ಸೃಷ್ಟಿಸಿರುವ ಜನಪ್ರಿಯ ಗ್ರಹಿಕೆಯನ್ನು ಒಡೆಯುವ ರೀತಿಯಲ್ಲಿ ಇವರ ಸಂಬಂಧವಿದೆ. ಬದುಕಿನ ಕಷ್ಟಗಳು ಮಹಿಳೆಯರನ್ನು ಅವರ ವೈಯಕ್ತಿಕ ಮತ್ತು ಕೌಟುಂಬಿಕ ವೈಮನಸ್ಸಿನ ಆಚೆ ಒಂದಾಗಿಸಬಲ್ಲವು. ಸಮಾನಶತ್ರುವಾಗಿರುವ ವ್ಯವಸ್ಥೆ ಕೂಡ ಅವರ ನಡುವಿನ ಭಿನ್ನಾಭಿಪ್ರಾಯವನ್ನು ಕಡಿಮೆಗೊಳಿಸಬಲ್ಲದು ಎಂಬ ಸಾಮಾಜಿಕ ಸತ್ಯವನ್ನು ಕಟ್ಪಾಡಿ ಅವರ ಕತೆಗಳು ಶೋಧಿಸುತ್ತವೆ.

೧೨. ಕಟ್ಪಾಡಿ ಅವರ ಕತೆಗಳಲ್ಲಿ ವಿಧವೆಯರ ಅನೇಕ ಪಾತ್ರಗಳು ಬರುತ್ತವೆ. ವಿಧವೆಯರ ಬಾಳು ಕಷ್ಟಕರವಾಗಿರುವ ಬಗೆಯನ್ನು ಈ ಕತೆಗಳಲ್ಲಿನ ವಿವರಗಳಲ್ಲಿ ಕಟ್ಟಿಕೊಡುತ್ತವೆ. ಮುಸ್ಲಿಂ ಸಮುದಾಯದಲ್ಲಿ ವಿಧವಾ ಪದ್ಧತಿಯು ಹಿಂದೂ ಮೇಲ್ಜಾತಿಗಳಲ್ಲಿ ಇರುವಂತೆ ಶಾಪಗ್ರಸ್ತ ಸ್ಥಿತಿಯಲ್ಲ. ಅಲ್ಲಿ ವಿಧವೆಯರಿಗೆ ಮರುಮದುವೆಯು ಧಾರ್ಮಿಕವಾಗಿ ಒಪ್ಪಿತವಾಗಿದೆ. ಸ್ವತಃ ಮಹಮ್ಮದ್ ಪೈಗಂಬರರೇ ವಿಧವೆಯನ್ನು ಮದುವೆಯಾದ್ದರಿಂದ ಈ ಪದ್ಧತಿಗೊಂದು ಚಾರಿತ್ರಿಕ ಹಿನ್ನೆಲೆಯೂ ಇದೆ. ಆದರೂ ಭಾರತದಂತಹ ಮುಸ್ಲಿಮರಲ್ಲಿ ವಿಧವೆಯರ ಸಮಸ್ಯೆ ಸಾಕಷ್ಟು ದಾರುಣವಾಗಿದೆ. ಇದಕ್ಕೆ ಕಾರಣ ಪಿತೃಪ್ರಧಾನ ವ್ಯವಸ್ಥೆ ಸಮಾಜದ ಮೌಲ್ಯಗಳನ್ನು ಭಾರತದ ಮುಸ್ಲಿಮ್ ಸಮುದಾಯದ ಸ್ವೀಕಾರ ಮಾಡಿರುವುದು. ಈ ಹಿನ್ನೆಲೆಯಲ್ಲಿ ಕಟ್ಪಾಡಿ ಅವರ ಕತೆಗಳು ವಿಧವೆಯರ 'ಹಾಸುಂಡು ಬೀಸಿ ಒಗೆದಂತ'ಹ ಬಾಳಿನ ಬೇರೆ ಬೇರೆ ಆಯಾಮಗಳನ್ನು ಚಿತ್ರಿಸುತ್ತವೆ. ವಿಧವೆಯರ ಪಾಲಿಗೆ ಮುಸ್ಲಿಮ್ ಪುರೋಹಿತಶಾಹಿ ಮತ್ತು ಪುರುಷವಾದಿ ಸಮಾಜ ಅಮಾನುಷವಾಗಿದೆ ಎಂಬುದನ್ನು ಕತೆಗಳು ಕಾಣಿಸುತ್ತವೆ.

೧೩. ಕಟ್ಪಾಡಿ ಅವರ ಕತೆಗಳು ಮಹಿಳಾ ಪಾತ್ರಗಳು ಬಹುರೂಪಿಯಾಗಿವೆ. ಇಲ್ಲಿ ಬೇರೆ ಬೇರೆ ವಯಸ್ಸಿನ, ಬೇರೆ ಬೇರೆ ಅಂತಸ್ಥಿನ, ಬೇರೆ ಬೇರೆ ಮನೋಭಾವ, ಬೇರೆ ಬೇರೆ ವರ್ಗದ ಮಹಿಳೆಯರು, ಗೃಹಿಣಿಯರು, ದುಡಿಮೆಗಾರರು, ವಿಲಾಸದ ಬದುಕಿನಲ್ಲಿ ಬದುಕುತ್ತಿರುವವರು, ಪ್ರತಿಭಟನೆ ಮಾಡುವಂತವರು ಹೀಗೆ ಕರಾವಳಿಯ ಮುಸ್ಲಿಮ್ ಸಮುದಾಯದ ಬಹುರೂಪಿ ಮಹಿಳಾ ಪಾತ್ರಗಳನ್ನು ಇವರ ಕತೆಗಳು ಓದುಗರಿಗೆ ದರ್ಶನ ಮಾಡಿಸುತ್ತವೆ. ಸಮಾಜದಲ್ಲಿ ಮುಸ್ಲಿಮ್ ಮಹಿಳೆಯರು ಹಲವು ವಿಧದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ಕಟ್ಪಾಡಿ ಅವರ ಕತೆಗಳು ನಿರೂಪಿಸುತ್ತವೆ. ಧರ್ಮದ

ಹೆಸರಿನಲ್ಲಿ ಸಮಾಜದಲ್ಲಿ ನಡೆಯುತ್ತಿರುವ ಹಲವು ಕ್ರೌರ್ಯಗಳನ್ನು ಅವು ಕಟ್ಟಿಕೊಡುತ್ತವೆ. ತಲಾಕ್, ಇದ್ದತ್, ಬಹುಪತ್ನಿತ್ವ ಹಾಗೂ ಬುರ್ಖಾ ಪದ್ಧತಿಯಿಂದ ನಲುಗುವ ಸ್ತ್ರೀಯರು ಇಲ್ಲಿದ್ದಾರೆ. ಷರೀಯತ್ ಕಾನೂನನ್ನು ಪುರುಷರು ತಮ್ಮ ಸ್ವಾರ್ಥಕ್ಕೆ ತಕ್ಕಂತೆ ವ್ಯಾಖ್ಯಾನಿಸುವ ಮೂಲಕ ಸ್ತ್ರೀಯರ ಹಕ್ಕುಗಳನ್ನು ಕಸಿದುಕೊಳ್ಳುವುದನ್ನು ಕತೆಗಳು ಕಾಣಿಸುತ್ತವೆ. ಅದರಲ್ಲೂ ಈ ತಲಾಕ್ ನಿಯಮವು ಸ್ತ್ರೀಯರಿಗೆ ಒಂದು ಶಾಪವೆಂಬಂತೆ ಚಿತ್ರಿತವಾಗಿದೆ. ಈ ತಲಾಕ್‌ನಿಂದ ಸ್ತ್ರೀಯರ ಬಾಳು ಸಂಕಟಕ್ಕೆ ಸಿಲುಕಿ ಅಸ್ತಿತ್ವವೇ ಇಲ್ಲದಂತಾಗುತ್ತದೆ. ತಲಾಕ್‌ಗೆ ಒಳಗಾದ ಸ್ತ್ರೀ ಮತ್ತೆ ಅದೇ ಗಂಡನನ್ನು ಮರುಮದುವೆ ಆಗಬೇಕಾದರೆ ಸ್ತ್ರೀಯಾದವಳು ಮರುಜನ್ಮವೆತ್ತು ಬರುವಂತಹ ಸಂಕಷ್ಟಕ್ಕೆ ಸಿಲುಕಿದವಳಾಗಿ ಚಿತ್ರಿತವಾಗಿದ್ದಾಳೆ. ಹಾಗೆಯೇ ಬಹುಪತ್ನಿತ್ವವು ಕೂಡ ಮಹಿಳೆಯರಿಗೆ ಶಾಪವೆಂಬಂತೆ ಪರಿಗಣಿಸಲಾಗಿದೆ.

೧೪. ಕಟ್ಪಾಡಿ ಅವರ ಕತೆಗಳ ವಿಶಿಷ್ಟತೆ ಎಂದರೆ, ಮಹಿಳೆಯರ ಸಾಮಾಜಿಕ ಸ್ಥಾನಮಾನವನ್ನು ಕುರಿತು ಸಮಾಜದಲ್ಲಿರುವ ಗ್ರಹಿಕೆಯನ್ನು ಬೇರೆ ಬೇರೆ ಸಂಕೇತ, ಉಪಮೆ ಮತ್ತು ರೂಪಕಗಳ ಮೂಲಕ ವ್ಯಕ್ತಪಡಿಸುವುದು. ಇದರಲ್ಲಿ ನಾಲ್ಕು ಮಾದರಿಗಳಿವೆ. ಮೊದಲನೆಯ ಮಾದರಿಯಲ್ಲಿ ಸೂತ್ರದ ಗೊಂಬೆ ಮತ್ತು ಕೆಸುವಿನ ಗಿಡಕ್ಕೆ ಹಗ್ಗ ಕಟ್ಟುವುದು ಮುಂತಾದ ಚಿತ್ರಗಳು ಬರುತ್ತವೆ. ಮಹಿಳೆ ಪುರುಷರ ಸೂತ್ರಕ್ಕೆ ಆಡುವ ಗೊಂಬೆಯಂತಿರಬೇಕು. ಪ್ರಾಯದ ಹೆಣ್ಣನ್ನು ಮನೆಲಿರಿಸಿಕೊಳ್ಳುವುದು ಎಂದರೆ, ಕೆಸುವಿನ ಗಿಡಕ್ಕೆ ಹಗ್ಗ ಕಟ್ಟಿದಂತೆ ಎಂಬ ಗ್ರಹಿಕೆಗಳ ಮೂಲಕ ಮಹಿಳೆಯನ್ನು ಕುರಿತು ಪುರುಷ ಪ್ರಧಾನ ಧೋರಣೆ ಸಮಾಜದಲ್ಲಿ ದಟ್ಟವಾಗಿರುವುದನ್ನು ಕತೆಗಳು ನಿರೂಪಿಸುತ್ತವೆ. ಎರಡನೆಯದಾಗಿ ಕತೆಯ ನಿರೂಪಣೆಯು ಮಹಿಳೆಯ ಅವಸ್ಥೆಯನ್ನು ಚಿತ್ರಿಸುವುದು. ತಾಯಿ ಕೋಳಿಯೊಂದು ಬೀದಿ ನಾಯಿಗೆ ಬಲಿಯಾಗುವ ಚಿತ್ರ ಇಂತಹದು. ಈ ಮೂಲಕ ಸಾಂಪ್ರದಾಯಿಕ ಧಾರ್ಮಿಕ ವ್ಯವಸ್ಥೆಯನ್ನು ಭಕ್ಷ ಪ್ರಾಣಿಯನ್ನಾಗಿಯೂ ಅಸಹಾಯಕ ಮಹಿಳೆಯರನ್ನು ಬಲಿಪಶುವಾದ ಕೋಳಿಯನ್ನಾಗಿ ಕತೆ ಕಾಣಿಸುತ್ತದೆ. ಮೂರನೆಯದಾಗಿ ಮಹಿಳೆಯರು ತಮ್ಮನ್ನು ತಾವು ಚಿತ್ರಿಸಿಕೊಳ್ಳುವ ವಿಧಾನ. ಉದಾದಹರಣೆಗೆ, ತೀರ ಅಸಹಾಯಕ ಗಳಿಗೆಯಲ್ಲಿ ಮಹಿಳೆಯರು ತಮ್ಮನ್ನು ಮಣ್ಣಿನ ಮಡಕೆಗೆ ಹೋಲಿಸುವುದು. ನಾಲ್ಕನೆಯದು ಮಕ್ಕಳು ತಮ್ಮ ತಾಯಂದಿರನ್ನು, ಅಕ್ಕಂದಿರನ್ನು ಕುರಿತು ಬಳಸುವ ಚಿತ್ರಗಳು. ತಾಯಿಯನ್ನು ಉಪ್ಪಿನ ರುಚಿಗೆ ಹೋಲಿಸುವ ಚಿತ್ರಣ, ಅಕ್ಕನು ಮದುವೆಯಾಗಿ ಗಂಡನ ಮನೆಗೆ ಹೋಗುವುದನ್ನು ಆಡಿನ ಬಲಿಗೆ ಹೋಲಿಸುವ ಚಿತ್ರಣ ಇತ್ಯಾದಿ. ಹೀಗೆ ಹೆಣ್ಣಿನ ಪಾತ್ರಗಳನ್ನು ಚಿತ್ರಿಸುವಾಗ ಕಟ್ಪಾಡಿ ಅವರ ಕತೆಗಳು ಸಾಮಾಜಿಕ ಪರಿಸರದಲ್ಲಿರುವ ಗಾದೆ, ನುಡಿಗಟ್ಟು, ಸಂಕೇತ ಇವುಗಳನ್ನು ದುಡಿಸಿಕೊಳ್ಳುತ್ತವೆ ಮತ್ತು ಅವುಗಳಲ್ಲಿ ಮಹಿಳೆಯರನ್ನು ಕುರಿತು ಇರುವ ಧೋರಣೆಗಳನ್ನು ಬಿಚ್ಚಿಡುತ್ತವೆ.

೧೫. ಒಬ್ಬ ಪ್ರತಿಭಾವಂತ ಕತೆಗಾರರಾದ ಫಕೀರ್ ಮುಹಮ್ಮದ್ ಕಟ್ಪಾಡಿಯವರು ಚಳುವಳಿಗಳಿಂದ ಬಂದವರು. ಅವರ ಅನುಭವ ಕೋಶದಲ್ಲಿ ಜನಸಂಸ್ಕೃತಿಯ ಹಾಡು, ಕತೆ, ನಾಟಕಗಳ, ಲೋಕಗಳು ಅಡಗಿವೆ. ಇದನ್ನು ಅವರು ತಮ್ಮ ಕತೆಗಳ ಪಾತ್ರಚಿತ್ರಣಗಳಲ್ಲಿ ಒಂದು ಶಕ್ತಿಯಾಗಿ ದುಡಿಸಿಕೊಳ್ಳುತ್ತಾರೆ. ಹೀಗಾಗಿ ಅವರ ಕತೆಗಳು ಮಹಿಳಾ ಪಾತ್ರಗಳನ್ನು ಚಿತ್ರಿಸುವಾಗ, ನಾಟಕೀಯ ಸಂಭಾಷಣೆ, ವಿಷಾದ, ವ್ಯಂಗ್ಯ ಮತ್ತು ವಿಡಂಬನೆ ಮುಂತಾದ ಕಥನ ವಿಧಾನಗಳನ್ನು ಬಳಸುತ್ತವೆ. ಈ ಮೂಲಕ ಮಹಿಳೆಯರ ಮನೋಲೋಕದ ವಿವಿಧ ಭಾವಭಂಗಿಗಳನ್ನು ಹಿಡಿದುಕೊಡುತ್ತವೆ.

೧೬. ಕಟ್ಪಾಡಿ ಅವರ ಬಹಳಷ್ಟು ಕತೆಗಳ ಶೀರ್ಷಿಕೆಗಳು ಮಹಿಳೆಯರ ಹೆಸರನ್ನು ಉಳ್ಳವಾಗಿವೆ ಅಥವಾ ಅವರು ಅನುಭವಿಸುವ ಕಷ್ಟ ಮತ್ತು ತೋರುವ ಪ್ರತಿಭಟನೆಯನ್ನು ಸಾಂಕೇತಿಕವಾಗಿ ಸೂಚಿಸುವಂತವಾಗಿವೆ. ಈ ಮೂಲಕ ಕಟ್ಪಾಡಿ ಅವರ ಕತೆಗಳ ಪ್ರಧಾನ ವಸ್ತು ಮಹಿಳಾ ಜಗತ್ತಿಗೆ ಸಂಬಂಧಿಸಿದ್ದಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಕನ್ನಡದಲ್ಲಿ ಈ ಪ್ರವೃತ್ತಿ ವೈದೇಹಿ, ನಾಗವೇಣಿ, ಬಾನುಮುಷ್ತಾಕ್, ಸಾರಾ ಅಬೂಬಕರ್ ಮುಂತಾದ ಕತೆಗಾರ್ತಿಯರಲ್ಲೂ ಕಾಣುತ್ತದೆ. 'ಇಂದಿರಾಬಾಯಿ' 'ವಾಗ್ದೇವಿ' 'ಮಲೆಗಳಲ್ಲಿ ಮದುಮಗಳು' 'ಕಾನೂರು ಹೆಗ್ಗಡಿತಿ' 'ಗಂಗವ್ವ ಮತ್ತು ಗಂಗಾಮಾಯಿ' 'ಕುಸುಮಬಾಲೆ' 'ಒಡಲಾಳ' ಮುಂತಾದ ಕಾದಂಬರಿಗಳಲ್ಲೂ ಇದೇ ವಸ್ತುವಿನ್ಯಾಸ ಕಾಣುತ್ತೇವೆ. ಕಟ್ಪಾಡಿ ಅವರ ಕತೆಗಳಿಗೆ ಮಹಿಳೆಯರ ಲೋಕದ ಜೀವಂತಿಕೆಯ ಹುಡುಕಾಟ ಮುಖ್ಯ ಉದ್ದೇಶವಾಗಿದೆ. ಮಹಿಳೆಯರ ಸಂವೇದನೆಗಳನ್ನು, ದುಃಖದುಮ್ಮಾನಗಳನ್ನು, ತಲ್ಲಣಗಳನ್ನು ಹಾಗೂ ಆಲೋಚನೆಗಳನ್ನು ಕೇವಲ ಮಹಿಳೆಯರು ಬರೆಯುವ ಬರವಣಿಗೆ ಮಾತ್ರ ಚಿತ್ರಿಸುತ್ತಿಲ್ಲ. ಮಹಿಳಾ ಸಂವೇದನೆ ಸೂಕ್ಷ್ಮತೆಯುಳ್ಳ ಪುರುಷ ಲೇಖಕರಲ್ಲೂ ಇರಲು ಸಾಧ್ಯವಿದೆ. ಕಟ್ಪಾಡಿ ಅವರ ಕತೆಗಳಲ್ಲಿ ಮಹಿಳಾ ಸಂವೇದನೆಯಿದೆ. ಜೈವಿಕವಾಗಿ ಲೇಖಕರು ಮಹಿಳೆ ಅಲ್ಲದಿದ್ದರೂ ಮಹಿಳಾ ಸಂವೇದನೆಯುಳ್ಳ ಬರಹಗಳನ್ನು ಬರೆಯಬಹುದು ಎಂಬುದಕ್ಕೆ ಕಟ್ಪಾಡಿ ಅವರ ಬರವಣಿಗೆಯೇ ಸಾಕ್ಷಿಯಾಗಿದೆ. ಅವರ ಕತೆಗಳಿಗೆ ಅಪಾರ ದಮನದ ಸನ್ನಿವೇಶದಲ್ಲಿಯೂ ಮಹಿಳಾಲೋಕ ಪ್ರಕಟಿಸುವ ಚೈತನ್ಯಶೀಲತೆ, ಸೃಜನಶೀಲತೆ ಶೋಧಿಸುವುದು ತುಂಬಾ ಆಸಕ್ತಿಯ ವಿಚಾರವಾಗಿದೆ. ಸಮಾಜವಾದಿ ಮನಸ್ಸಿನ, ಸಾಮಾಜಿಕ ಸಮಾನತೆಯಲ್ಲಿ ನಂಬಿಕೆ ಇಟ್ಟಿರುವ ಲಿಂಗತಾರತಮ್ಯದ ಬಗ್ಗೆ ಅರಿವುಳ್ಳ ಲೇಖಕರು ಮಾತ್ರ ಈ ಬಗೆಯಲ್ಲಿ ಸ್ತ್ರೀ ಚೈತನ್ಯದ ಶೋಧವನ್ನು ಮಾಡಬಲ್ಲರು.

ಮೂಲ ಆಕರ

೧. ಫಕೀರ್ ಮುಹಮ್ಮದ್ ಕಟ್ಪಾಡಿ, **ನೋಂಬು,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೮

೨. ಫಕೀರ್ ಮುಹಮ್ಮದ್ ಕಟ್ಪಾಡಿ, **ಗೋರಿ ಕಟ್ಟಿಕೊಂಡವರು,** ಲಹರಿ ಪ್ರಕಾಶನ, ಉಡುಪಿ, ೧೯೮೧

೩. ಫಕೀರ್ ಮುಹಮ್ಮದ್ ಕಟ್ಪಾಡಿ, **ಸರಕುಗಳು,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೮೯

೪. ಫಕೀರ್ ಮುಹಮ್ಮದ್ ಕಟ್ಪಾಡಿ, **ದಜ್ಜಾಲ,** ಸಿ.ವಿ.ಜಿ.ಪಬ್ಲಿಕೇಶನ್, ಬೆಂಗಳೂರು, ೨೦೦೧

೫. ಫಕೀರ್ ಮುಹಮ್ಮದ್ ಕಟ್ಪಾಡಿ, **ಅತ್ತರ ಹಾಜಿಕಾ ಮತ್ತು ಇತರ ಕತೆಗಳು,** ಸ್ವಾಗತ ಸಮಿತಿ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ, ೨೦೦೭

೬. ಫಕೀರ್ ಮುಹಮ್ಮದ್ ಕಟ್ಪಾಡಿ, **ಪಚ್ಚಕುದುರೆ,** ಅಂಕಿತ ಪುಸ್ತಕ, ಬೆಂಗಳೂರು, ೨೦೧೨

೭. ಫಕೀರ್ ಮುಹಮ್ಮದ್ ಕಟ್ಪಾಡಿ, **ಕಡವು ಮನೆ,** ಗೀತಾಂಜಲಿ ಪ್ರಕಾಶನ, ಶಿವಮೊಗ್ಗ ೨೦೧೩

೮. ಬೊ ಳುವಾರು ಮಹಮ್ಮದ್ ಕುಂಞಿ, **ಆಯ್ದ ಕಥೆಗಳು,** ಕಾಮಧೇನು ಪ್ರಕಾಶನ, ಬೆಂಗಳೂರು, ೨೦೦೫

೯. ಸಾರಾ ಅಬೂಬಕರ್, **ಸಾರಾ ಅಬೂಬಕರ ಅವರ ಸಮಗ್ರ ಕತೆಗಳು,** ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಗುಲಬರ್ಗಾ, ೨೦೧೧

ಪರಾಮರ್ಶನ ಆಕರ

೧. ಅಮರೇಶ ನುಗಡೋಣಿ, **ನಾನೇಕೆ ಬರೆಯುತ್ತೇನೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೨. ಅಶೋಕ ಟಿ.ಪಿ., **ಒಂದು ನೂರು ಸಣ್ಣಕತೆಗಳ ವಿಶ್ಲೇಷಣೆ,** ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೩

೩. ಆರೀಫ್ ರಾಜಾ, **ಜಂಗಮ ಫಕೀರನ ಜೋಳಿಗೆ,** ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೦೯

೪. ಕರೀಗೌಡ ಬೀಚನಹಳ್ಳಿ, **ಶತಮಾನದ ಸಣ್ಣಕತೆಗಳ ಸಮೀಕ್ಷೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩

೫. ಕೋದಂಡರಾಮ ಎನ್.ಕೆ., **ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ,** ರೂಪ ಪ್ರಕಾಶನ, ಮೈಸೂರು, ೨೦೦೮

೬ ಜವರಯ್ಯ ಮ.ನ., **ದಲಿತ ಬಂಡಾಯ ಸಾಹಿತ್ಯ ಸಿದ್ಧಾಂತದ ನೆಲೆಗಳು,** ಬಹುಜನ ಮಾಧ್ಯಮ ಕೇಂದ್ರ, ಮೈಸೂರು, ೨೦೦೮

೭ ಬಾನು ಮುಷ್ತಾಕ್, **ಎದೆಯ ಹಣತೆ,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪

೮. ಮಣಿಪಾಲ ಆರ್.ಕೆ., **ವಿಮರ್ಶೆಯ ಸವಾಲು,** ಸಂವಾದ ಪ್ರಕಾಶನ, ಮಣಿಪಾಲ, ೨೦೦೬

೯. ಮುನಿಶಾಮಪ್ಪ ಎ., **ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ,** ಕಾಲ ಪ್ರಕಾಶನ, ಬೆಂಗಳೂರು, ೨೦೦೯

೧೦. ವಾಮನ ಬೇಂದ್ರೆ, **ನಾದಲೀಲೆ,** ಶ್ರೀಮಾತಾ ಪ್ರಕಾಶನ, ಹುಬ್ಬಳ್ಳಿ, ೧೯೩೮

೧೧. ಶರೀಫಾ ಕೆ., **ಬಂಡಾಯ ಮುಸ್ಲಿಂ ಸಂವೇದನೆ,** ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು, ೨೦೦೪

೧೨. ಶ್ರೀಮತಿ ಎಚ್.ಎಸ್.(ಸಂ), **ಮಹಿಳಾ ಅಧ್ಯಯನ ವಿಶೇಷ ಸಂಚಿಕೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೩. ಸಾರಾ ಅಬೂಬಕರ್, **ಲೇಖನ ಗುಚ್ಛ,** ಚಂದ್ರಗಿರಿ ಪ್ರಕಾಶನ, ಮಂಗಳೂರು, ೧೯೯೭